ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜೂಲನ್ ಗೋಸ್ವಾಮಿ 'ದ್ವಿಶತಕ'

ಭಾರತ ಮಹಿಳಾ ಕ್ರಿಕೆಟ್ ತಂಡದ ಬೌಲರ್ ಜೂಲನ್ ಗೋಸ್ವಾಮಿ 200 ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್ ಪಂದ್ಯಗಳನ್ನು ಆಡಿದರು. ಈ ಸಾಧನೆ ಮಾಡಿದ ವಿಶ್ವದ ಎರಡನೇ ಆಟಗಾರ್ತಿಯಾದರು

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.,

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ ನಿ., ಬೆಂಗಳೂರು ಮತ್ತು
ಸಹಕಾರ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ



ಸಹಕಾರ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ

ದಿನಾಂಕ : 20-03-2022 ನೇ ಭಾನುವಾರ ಸಮಯ : ಬೆಳಗ್ಗೆ 11.00 ಗಂಟೆಗೆ

ಸ್ಥಳ : ಗಣೇಶ ಮೈದಾನ, 1ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು.

ಕಾರ್ಯಕ್ರಮದ ಉದ್ಘಾಟನೆ ಮತ್ತು
"ಸಹಕಾರ ರತ್ನ"
ಪ್ರಶಸ್ತಿ ಪ್ರದಾನ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಸಹಕಾರ ಇಲಾಖೆಯ ಗುರಿ ಮತ್ತು ಸಾಧನೆಗಳು

- 2021-22ನೇ ಸಾಲಿನಲ್ಲಿ 30.25 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 19,370 ಕೋಟಿ ರೂ.ಗಳ ಅಲ್ಪಾವಧಿ ಕೃಷಿ ಸಾಲ ವಿತರಣೆ ಗುರಿ ಹೊಂದಿದ್ದು 22.73 ಲಕ್ಷ ರೈತರಿಗೆ ರೂ.15,931 ಕೋಟಿಗಳ ಅಲ್ಪಾವಧಿ ಸಾಲ ವಿತರಿಸಿದೆ ಹಾಗೂ 59,856 ಸಾವಿರ ರೈತರಿಗೆ ರೂ. 1,440 ಕೋಟಿಗಳ ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲ ವಿತರಣೆ ಗುರಿ ಹೊಂದಿದ್ದು 35,666 ರೈತರಿಗೆ ರೂ.1082 ಕೋಟಿಗಳ ಕೃಷಿ ಸಾಲ ವಿತರಣೆ ಮಾಡಲಾಗಿದೆ.
- ಬಡ್ಡಿ ಸಹಾಯಧನಕ್ಕಾಗಿ ಆಯವ್ಯಯದಲ್ಲಿ ರಾಜ್ಯ ಸರ್ಕಾರ 1023 ಕೋಟಿ ರೂ.ಗಳ ಅವಕಾಶ ಕಲ್ಪಿಸಿದೆ, ಹಾಗೂ 1007 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
- 2022-23 ನೇ ಸಾಲಿನಲ್ಲಿ ಒಟ್ಟು 33 ಲಕ್ಷ ರೈತರಿಗೆ 24,000 ಕೋಟಿ ರೂ.ಗಳ ಕೃಷಿ ಸಾಲವನ್ನು ವಿತರಿಸುವ ಗುರಿ ಹೊಂದಿದೆ, 3 ಲಕ್ಷ ಹೊಸ ರೈತರಿಗೆ ಸಾಲ ವಿತರಿಸುವ ಉದ್ದೇಶದಡಿ ಬಡ್ಡಿ ಸಹಾಯಧನಕ್ಕಾಗಿ ರೂ. 1090 ಕೋಟಿ ಆಯವ್ಯಯದಲ್ಲಿ ಮೀಸಲಿರಿಸಿದೆ.
- ಶೂನ್ಯ ಬಡ್ಡಿದರದಲ್ಲಿ ಪ್ರಸಕ್ತ ಸಾಲಿನಲ್ಲಿ 22,237 ಸ್ತ್ರೀಶಕ್ತಿ/ಸ್ವಸಹಾಯ ಗುಂಪುಗಳಿಗೆ ರೂ.835 ಕೋಟಿಗಳ ಸಾಲ ವಿತರಣೆ ಮಾಡಲಾಗಿದೆ.
- ಸಾಲ ಮನ್ನಾ ಯೋಜನೆಯಡಿ ಒಟ್ಟು 17.06 ಲಕ್ಷ ರೈತರಿಗೆ 7987 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದ್ದು, ಈ ಪೈಕಿ ನಮ್ಮ ಸರ್ಕಾರದ ಅವಧಿಯಲ್ಲಿ ರೂ. 5387 ಕೋಟಿ ಬಿಡುಗಡೆ ಮಾಡಲಾಗಿದೆ.
- **"ಅಗ್ರಿ ಇನ್‌ಫ್ರಾ ಫಂಡ್"** ಯೋಜನೆಯಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು "ಬಹುಪಯೋಗಿ ಸೇವಾ ಕೇಂದ್ರ"ಗಳಾಗಿ ಪರಿವರ್ತನೆಗೊಳಿಸಲು, ಒಟ್ಟು 885 ಪ್ಯಾಕ್ಸ್ ಗಳಿಗೆ ರೂ. 307 ಕೋಟಿ ನಬಾರ್ಡ್ ಮೂಲಕ ನೀಡಿದ್ದು, 636 ಸಹಕಾರ ಸಂಘಗಳಿಗೆ ರೂ. 101 ಕೋಟಿ ಬಿಡುಗಡೆ ಮಾಡಿದೆ.
- ಕೇಂದ್ರ ಸರ್ಕಾರವು "**Special Liquidity Facility**"ಅಡಿಯಲ್ಲಿ 1400 ಕೋಟಿ ರೂ.ಗಳನ್ನು ನಬಾರ್ಡ್ ಮೂಲಕ ಡಿಸಿಸಿ ಬ್ಯಾಂಕುಗಳಿಗೆ ಬಿಡುಗಡೆ ಮಾಡಲಾಗಿದೆ.
- ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಕೃಷಿ ಮಾರುಕಟ್ಟೆ ಸಹಕಾರ ಸಂಘಗಳು ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ತಮ್ಮ ಗೋದಾಮುಗಳಲ್ಲಿ ಶೇಖರಣೆ ಮಾಡಿ ವಿತರಿಸುವ ಅಡಮಾನ ಸಾಲಕ್ಕೆ ರಾಜ್ಯ ಸರ್ಕಾರದಿಂದ ಶೇ.4 ರ ಬಡ್ಡಿ ಸಹಾಯಧನವನ್ನು ನೀಡಲಾಗುತ್ತಿದ್ದು, ಈವರೆಗೆ 18958 ರೈತರಿಗೆ ರೂ.306 ಕೋಟಿಗಳ ಸಾಲ ವಿತರಣೆ ಮಾಡಿದೆ.
- ರೈತರು ಉತ್ಪಾದಿಸಿದ ಕೃಷಿ ಉತ್ಪನ್ನಗಳನ್ನು ಪ್ಯಾಕ್ಸ್, ಟಿ.ಎ.ಪಿ.ಸಿ.ಎಂ.ಎಸ್. ಸಂಸ್ಥೆಗಳು ಹೊಂದಿರುವ ಗೋದಾಮುಗಳಲ್ಲಿ ಸಂಗ್ರಹಿಸಲು ರೈತರು ಪಾವತಿಸುವ ಸಂಗ್ರಹಣಾ ಶುಲ್ಕದಲ್ಲಿ ಶೇ.25 ರಷ್ಟು ರಿಯಾಯಿತಿ ನೀಡಲಾಗುತ್ತಿದೆ.
- **"ಬಡವರ ಬಂಧು"** ಯೋಜನೆಯಡಿ 10,958 ಬೀದಿ ಬದಿ ವ್ಯಾಪಾರಿಗಳಿಗೆ ವಿತರಿಸಲಾಗಿದ್ದ ಸಾಲ ರೂ. 7.56 ಕೋಟಿಗಳನ್ನು ಮನ್ನಾ ಮಾಡಲಾಗಿದೆ.
- ರಾಜ್ಯದಲ್ಲಿ 262 ಪಟ್ಟಣ ಸಹಕಾರ ಬ್ಯಾಂಕುಗಳಿದ್ದು 1,122 ಶಾಖೆಗಳ ಮೂಲಕ ಒಟ್ಟು 25,43,121 ಸದಸ್ಯರನ್ನು ಹೊಂದಿದ್ದು ರೂ.1633 ಕೋಟಿ ಷೇರು ಬಂಡವಾಳ, ರೂ.52,994 ಕೋಟಿ ದುಡಿಯುವ ಬಂಡವಾಳ ಮತ್ತು ರೂ. 45,580 ಕೋಟಿ ಠೇವಣಿ ಹೊಂದಿವೆ.
- ರಾಜ್ಯದಲ್ಲಿ ಒಟ್ಟು 4284 ಕೃಷಿಯೇತರ ಪತ್ತಿನ ಸಹಕಾರ ಸಂಘಗಳು 1,441 ಶಾಖೆಗಳನ್ನು ಹೊಂದಿದ್ದು 41,46,469 ಸದಸ್ಯರಿಂದ ರೂ. 21,557 ಕೋಟಿಗಳ ಷೇರು ಬಂಡವಾಳ ರೂ.1,60,447 ಕೋಟಿ ದುಡಿಯುವ ಬಂಡವಾಳ, ಮತ್ತು ರೂ. 1,34,338 ಕೋಟಿ ಠೇವಣಿಯನ್ನು ಹೊಂದಿವೆ.
- ಕೇಂದ್ರ ಪುರಸ್ಕೃತ ಯೋಜನೆಯಡಿ ರಾಜ್ಯದ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ರೂ. 256 ಕೋಟಿ ವೆಚ್ಚದಲ್ಲಿ ಏಕರೂಪದ ತಂತ್ರಾಂಶ ಬಳಸಿ ಗಣಕೀರಣಗೊಳಿಸಲಾಗುತ್ತಿದೆ.
- ರೈತರ ಆರೋಗ್ಯ ರಕ್ಷಣೆಗಾಗಿ **"ಯಶಸ್ವಿನಿ"** ಯೋಜನೆಯನ್ನು ಪುನರ್ ಅನುಷ್ಠಾನಗೊಳಿಸಲಾಗುತ್ತಿದೆ, ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದಿಂದ 300 ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಅವಕಾಶ ಮಾಡಲಾಗಿದೆ ಈ ಯೋಜನೆಗೆ ರೂ.100 ಕೋಟಿಗಳನ್ನು ರೈತ ಸದಸ್ಯರಿಂದ ವಾರ್ಷಿಕ ವಂತಿಕೆಯಾಗಿ ಸಂಗ್ರಹಿಸುವ ಗುರಿ ಹೊಂದಿದೆ.
- ಸರ್ಕಾರವು ಹಾಲು ಉತ್ಪಾದಕರಿಗೆ ಸಾಲ ಸೌಲಭ್ಯ ನೀಡಲು **"ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್"** ಸ್ಥಾಪಿಸಲು ಉದ್ದೇಶಿಸಲಾಗಿದೆ. ಸದರಿ ಬ್ಯಾಂಕಿಗೆ ಹಾಲು ಉತ್ಪಾದಕರ ಸಹಕಾರ ಸಂಘಗಳು, ಜಿಲ್ಲಾ ಹಾಲು ಒಕ್ಕೂಟಗಳು ಮತ್ತು ಕರ್ನಾಟಕ ಹಾಲು ಮಹಾಮಂಡಳ (ಕೆ.ಎಂ.ಎಫ್) ಜಂಟಿಯಾಗಿ 260 ಕೋಟಿ ರೂ. ಮತ್ತು ರಾಜ್ಯ ಸರ್ಕಾರವು 100 ಕೋಟಿ ರೂ.ಗಳ ಷೇರು ಬಂಡವಾಳ ಒದಗಿಸಲಿದೆ.
- ರಾಜ್ಯ ಸರ್ಕಾರ ರೈತರಿಗೆ ಪ್ರತಿ ಲೀಟರ್ ಹಾಲಿಗೆ ರೂ.5/- ಪ್ರೋತ್ಸಾಹಧನ ನೀಡುತ್ತಿದ್ದು, 2021-22ನೇ ಸಾಲಿನಲ್ಲಿ ರೂ.1,250 ಕೋಟಿಗಳನ್ನು ನೀಡಿದೆ, 2022-23 ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ರೂ.1,450 ಕೋಟಿಗಳನ್ನು ನೀಡಲು ಉದ್ದೇಶಿಸಿದೆ.
- ರಾಜ್ಯದ ಸ್ಥಳೀಯ ಗೋ-ತಳಿಗಳನ್ನು ಸಂರಕ್ಷಿಸಲು / ಹೆಚ್ಚಿಸಲು ಕೆ.ಎಂ.ಎಫ್ ಮೂಲಕ 2000 ಗೋ-ತಳಿಗಳನ್ನು ರೈತರಿಗೆ ಹಂಚಿಕೆಗೆ ಕ್ರಮವಿಡಲಾಗಿದೆ.
- 2022-23 ಆಯವ್ಯಯದಲ್ಲಿ ಕ್ಷೀರ ಭಾಗ್ಯ ಯೋಜನೆಯಡಿ 1 ರಿಂದ 10ನೇ ತರಗತಿವರೆಗಿನ ಶಾಲಾ ಮಕ್ಕಳಿಗೆ ರೂ. 650 ಕೋಟಿ ಹಾಗೂ ಅಂಗನವಾಡಿಗಳಿಗೆ 562 ಕೋಟಿ ರೂ. ಗಳನ್ನು ಹಂಚಿಕೆ ಮಾಡಲಾಗಿದೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಶಿಕ್ಷಣ - ತರಬೇತಿ - ಪ್ರಚಾರದ ಹೊಣೆ

- ಸಹಕಾರ ಕ್ಷೇತ್ರವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಸಹಕಾರ ಕ್ಷೇತ್ರದ ಸದಸ್ಯರಿಗೆ, ಪದಾಧಿಕಾರಿಗಳಿಗೆ ಹಾಗೂ ಅಧಿಕಾರಿ ವರ್ಗಕ್ಕೆ ಶಿಕ್ಷಣ, ತರಬೇತಿ ನೀಡುವುದೇ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಮೂಲ ಉದ್ದೇಶಗಳು.
- ಕ್ಲಸ್ಟರ್ ಮಾದರಿ ಮೂಲಕ ಪರಿಣಾಮಕಾರಿ **ಸದಸ್ಯ ಶಿಕ್ಷಣ.**
- ಪ್ರತಿವರ್ಷ ಸರಾಸರಿ 500 ಕಾರ್ಯಕ್ರಮಗಳು - 40 ಸಾವಿರ ಜನರಿಗೆ ಪ್ರಯೋಜನ.
- ಕೋವಿಡ್ ಕಾರಣಗಳಿಂದ 447 ವೆಬಿನಾರ್ ಮೂಲಕ ತರಬೇತಿ ನೀಡಲಾಗಿದೆ.
- ಯುವಜನರು, ಮಹಿಳೆಯರು, ಅಬಲ ವರ್ಗದ ಸದಸ್ಯರಿಗೆ ಶಿಕ್ಷಣ ಮತ್ತು ತರಬೇತಿ ನೀಡಲಾಗುತ್ತಿದೆ.
- ಸಹಕಾರ ಚರ್ಚಾ-ಪ್ರಬಂಧ ಸ್ಪರ್ಧೆ ಮೂಲಕ ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ 'ಸಹಕಾರ' ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವುದು.
- **8 ಸಹಕಾರ ತರಬೇತಿ ಕೇಂದ್ರಗಳು :** ಹೈಟೆಕ್ ಮಾದರಿಯಲ್ಲಿ ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ರೆಗ್ಯೂಲರ್ ತರಬೇತಿ ಲಭ್ಯ, ವಾರ್ಷಿಕ ಸಾವಿರ ಜನರಿಗೆ ತರಬೇತಿ ನೀಡಿಕೆ ಹಾಗೂ ಸಹಕಾರ ಸಂಸ್ಥೆಗಳ ಸಿಬ್ಬಂದಿಗಳಿಗೆ ದೂರಶಿಕ್ಷಣ, ಸಹಕಾರ ತರಬೇತಿ ಮೂಲಕ ಪ್ರತಿವರ್ಷ 3 ಸಾವಿರ ಸಿಬ್ಬಂದಿಗಳಿಗೆ ಪ್ರಯೋಜನ.
- **ಸಹಕಾರ ವಾರಪತ್ರಿಕೆ :** ಕಳೆದ 53 ವರ್ಷಗಳಿಂದ ಸಹಕಾರ ಕ್ಷೇತ್ರದ ಬಗ್ಗೆ ವ್ಯಾಪಕ ಪ್ರಚಾರ-ಸಹಕಾರಿಗಳಲ್ಲಿ ಅರಿವು ಮೂಡಿಸಲಾಗುತ್ತಿದೆ. 16 ಸಾವಿರ ಪ್ರಸಾರ ಹೊಂದಿದೆ. ಅಂದಾಜು ಎರಡು ಲಕ್ಷ ಓದುಗರಿದ್ದಾರೆ.
- ಸಹಕಾರ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಸಹಕಾರಿಗಳಿಗೆ ಪ್ರತಿ ವರ್ಷ **'ಸಹಕಾರ ರತ್ನ'** ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಸರ್ವರಿಗೂ ಸುಸ್ವಾಗತ

ಪ್ರಕಟಣೆ : ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

ಮಾಸ್ಕ್ ಧರಿಸಿ ವ್ಯಕ್ತಿಗತ ಅಂತರ ಕಾಪಾಡಿ ಆರೋಗ್ಯದಿಂದಿರಿ

ವಿಶೇಷ ಸೇನಾ ಕಾರ್ಯಾಚರಣೆಯಲ್ಲಿ ಮೊದಲ ಬಾರಿಗೆ ಖಂಡಾಂತರ ಹೈಪರ್‌ಸಾನಿಕ್ ಕ್ಷಿಪಣಿ ಪ್ರಯೋಗ

ಉಕ್ರೇನ್‌ನ ಶಸ್ತ್ರಾಗಾರ ಧ್ವಂಸಗೊಳಿಸಿದ ರಷ್ಯಾ

ಲಂಡನ್, ಮಾಸ್ಕೊ(ಎಪಿ/ರಾಯಿಟರ್ಸ್): ಉಕ್ರೇನ್ ಅನ್ನು ಶತಾಯಗತಾಯ ಆಕ್ರಮಿಸಿಕೊಳ್ಳಲೇಬೇಕೆಂದು ಜಿದ್ದಿಗೆ ಬಿದ್ದಿರುವ ರಷ್ಯಾ, ಉಕ್ರೇನ್ ನೆಲದಲ್ಲಿ ನಡೆಸುತ್ತಿರುವ ವಿಶೇಷ ಮಿಲಿಟರಿ ಕಾರ್ಯಾಚರಣೆ ಶನಿವಾರ 24ನೇ ದಿನಕ್ಕೆ ಕಾಲಿಟ್ಟಿದೆ. ರಷ್ಯಾ ತನ್ನ ಬತ್ತಳಿಕೆಯಲ್ಲಿರುವ ಅತ್ಯಾಧುನಿಕ 'ಕಿಂಜಾಲ್' ಹೈಪರ್‌ಸಾನಿಕ್ ಕ್ಷಿಪಣಿಯನ್ನು ಇದೇ ಮೊದಲ ಬಾರಿಗೆ ಉಕ್ರೇನ್ ಮೇಲೆ ಶುಕ್ರವಾರ ರಾತ್ರಿ ಪ್ರಯೋಗಿಸಿದೆ.

ಉಕ್ರೇನ್‌ನ ಇವಾನೋ-ಫ್ರಾಂಕಿವ್ಸ್ಕ್ ಪ್ರದೇಶದ ಡೆಲ್ಯಾಟಿನ್ ಗ್ರಾಮದಲ್ಲಿ ನೆಲಮಾಳಿಗೆ ಗೋದಾಮಿನಲ್ಲಿ ಉಕ್ರೇನ್ ಸೇನೆ ಭಾರಿ ಪ್ರಮಾಣದಲ್ಲಿ ಸಂಗ್ರಹಿಸಿಟ್ಟಿದ್ದ ಕ್ಷಿಪಣಿಗಳು ಮತ್ತು ವಾಯುದಾಳಿಯ ಶಸ್ತ್ರಾಸ್ತ್ರಗಳನ್ನು ವಾಯು ಖಂಡಾಂತರ ಕಿಂಜಾಲ್ ಕ್ಷಿಪಣಿಯು ಧ್ವಂಸಗೊಳಿಸಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ. ಈ ಕ್ಷಿಪಣಿ ಮಾಡಿರುವ ಹಾನಿಯ ಅಂದಾಜು, ಸಾವು–ನೋವಿನ ಲೆಕ್ಕ ಸದ್ಯಕ್ಕೆ ಸಿಕ್ಕಿಲ್ಲ.

ನ್ಯಾಟೊ ಸದಸ್ಯ ರಾಷ್ಟ್ರ ರೊಮೇನಿಯಾದ ಜತೆಗೆ ಇವಾನೋ-ಫ್ರಾಂಕಿವ್ಸ್ಕ್ ಪ್ರದೇಶ 50 ಕಿ.ಮೀ ಉದ್ದಕ್ಕೂ ಗಡಿ ಹಂಚಿಕೊಂಡಿದೆ. ಈ ಪ್ರದೇಶದ ಹೊರವಲಯದ ಪರ್ವತಗಳ ತಪ್ಪಲಿನ ಡೆಲ್ಯಾಟಿನ್ ಹಳ್ಳಿಯಲ್ಲಿ ಉಕ್ರೇನ್‌ನ ಶಸ್ತ್ರಾಗಾರವಿತ್ತು.

ರಷ್ಯಾದ ಪಡೆಗಳು ಶನಿವಾರ ಬಾಸ್ಷನ್ ಕರಾವಳಿ ಕ್ಷಿಪಣಿ ವ್ಯವಸ್ಥೆ ಬಳಸಿಕೊಂಡು, ಉಕ್ರೇನ್ ಬಂದರು ನಗರ ಒಡೆಸಾ ಬಳಿಯ ಮಿಲಿಟರಿ ರೇಡಿಯೊ ಮತ್ತು ವಿಚಕ್ಷಣ ಕೇಂದ್ರಗಳನ್ನೂ ಧ್ವಂಸಗೊಳಿಸಿವೆ. ರಷ್ಯಾ ಪಡೆಗಳು ಆಯಕಟ್ಟಿನ ದಕ್ಷಿಣ ಬಂದರು ನಗರ ಮರಿಯುಪೋಲ್ ಪ್ರವೇಶಿಸಲು ಉಕ್ರೇನ್‌ನ ರಕ್ಷಣಾ ಕೋಟೆಯನ್ನು ನಾಶಪಡಿಸಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯದ ವಕ್ತಾರ ಐಗೋರ್ ಕೊನಾಶೆಂಕೋವ್ ತಿಳಿಸಿದರು.

'ಶತ್ರುಗಳು ನಮ್ಮ ಶಸ್ತ್ರಾಗಾರಗಳನ್ನು ಗುರಿಯಾಗಿಸಿಕೊಂಡಿದ್ದಾರೆ. ಆದರೆ, ಯಾವ ಪ್ರಕಾರದ ಕ್ಷಿಪಣಿಯಿಂದ ದಾಳಿ ನಡೆದಿದೆ ಎನ್ನುವ ಮಾಹಿತಿ ಇಲ್ಲ. ಯುದ್ಧಸಾಮಗ್ರಿಗಳು ಸ್ಫೋಟಗೊಂಡಿದ್ದು, ಶಸ್ತ್ರಾಗಾರ ನಾಶವಾಗಿದೆ. ರಷ್ಯಾ ತನ್ನ ಎಲ್ಲ ಕ್ಷಿಪಣಿಗಳನ್ನು ನಮ್ಮ ವಿರುದ್ಧ ಬಳಸುತ್ತಿದೆ' ಎಂದು ಉಕ್ರೇನ್ ವಾಯುಪಡೆಯ ವಕ್ತಾರ ಯುರಿ ಇಗ್ನಾಟ್ ತಿಳಿಸಿದರು.

ಉಕ್ರೇನ್‌ನ ಮೈಕೊಲೈವ್‌ನಲ್ಲಿ ರಷ್ಯಾ ಪಡೆಗಳು ನಡೆಸಿದ ವೈಮಾನಿಕ ಮತ್ತು ರಾಕೆಟ್ ದಾಳಿಯಿಂದ ಮಿಲಿಟರಿ ತರಬೇತಿ ಶಾಲೆ ಧ್ವಂಸಗೊಂಡಿದ್ದು, ಶನಿವಾರ ಉಕ್ರೇನ್ ಯೋಧರು ರಕ್ಷಣಾ ಕಾರ್ಯಾಚರಣೆ ನಡೆಸಿದರು —ಎಎಫ್‌ಪಿ ಚಿತ್ರ

ಏನಿದು ಕಿಂಜಾಲ್ ಕ್ಷಿಪಣಿ?

ಶಬ್ದಕ್ಕಿಂತ 10 ಪಟ್ಟು ವೇಗವಾಗಿ ಚಲಿಸುವ ಖಂಡಾಂತರ 'ಕಿಂಜಾಲ್' ಕ್ಷಿಪಣಿಯನ್ನು ರಷ್ಯಾ ತನ್ನ ಬತ್ತಳಿಕೆಯ ಬ್ರಹ್ಮಾಸ್ತ್ರವೆಂದೇ ಪರಿಗಣಿಸಿದೆ. ವಾಯು ರಕ್ಷಣಾ ವ್ಯವಸ್ಥೆಗಳನ್ನು ಭೇದಿಸಿ ದಾಳಿ ನಡೆಸುವ ಸಾಮರ್ಥ್ಯ ಇದಕ್ಕಿದೆ. ಈ ಕ್ಷಿಪಣಿಯನ್ನು ಮೊದಲ ಬಾರಿಗೆ ಯುದ್ಧಭೂಮಿಯಲ್ಲಿ ಬಳಸಲಾಗಿದೆ ಎಂದು ರಷ್ಯಾ ಹೇಳಿರುವುದಾಗಿ ಅಲ್ಲಿನ ಸರ್ಕಾರಿ ಸುದ್ದಿ ಸಂಸ್ಥೆ 'ರಿಯಾ ನೊವೊಸ್ತಿ' ಮಾಡಿದೆ.

2018ರಲ್ಲಿ ಕಿಂಜಾಲ್ ಹೈಪರ್‌ಸಾನಿಕ್ ಕ್ಷಿಪಣಿಯನ್ನು ವ್ಲಾಡಿಮಿರ್ ಪುಟಿನ್ ಅನಾವರಣಗೊಳಿಸಿದ್ದರು. ಆಗ ರಾಷ್ಟ್ರ ಉದ್ದೇಶಿಸಿ ಭಾಷಣ ಮಾಡಿದ್ದ ಅವರು 'ಹೈಪರ್‌ಸಾನಿಕ್ ಖಂಡಾಂತರ ಕ್ಷಿಪಣಿಗಳನ್ನು ಒಳಗೊಂಡ ಕಿಂಜಾಲ್ ವಾಯುಕ್ಷಿಪಣಿ ವ್ಯವಸ್ಥೆಯು ದೇಶದ 'ಐಡಿಯಲ್ ವೆಪನ್' ಎಂದು ಬಣ್ಣಿಸಿದ್ದರು.

'ತನ್ನ ಸುಧಾರಿತ ಶಸ್ತ್ರಾಸ್ತ್ರಗಳ ಬಗ್ಗೆ ರಷ್ಯಾ ಹೆಮ್ಮೆಪಡುತ್ತದೆ. ಹೈಪರ್ ಸಾನಿಕ್ ಕ್ಷಿಪಣಿಗಳಲ್ಲಿ ರಷ್ಯಾ ಜಾಗತಿಕ ನಾಯಕ ಆಗಿದೆ. ಈ ಕ್ಷಿಪಣಿಯ ವೇಗ, ಚಾಕಚಕ್ಯತೆಯನ್ನೂ ಊಹಿಸಲು ಅಸಾಧ್ಯ. ಈ ಕ್ಷಿಪಣಿಯನ್ನು ಶತ್ರುಗಳಿಗೆ ಪತ್ತೆಹಚ್ಚಲು ಮತ್ತು ಪ್ರತಿಬಂಧಿಸಲು ಕಷ್ಟ' ಎಂದು ಅವರು ವರ್ಣಿಸಿದ್ದರು.

ಫೆ.24ರಂದು ಉಕ್ರೇನ್ ಮೇಲೆ ವಿಶೇಷ ಮಿಲಿಟರಿ ಕಾರ್ಯಾಚರಣೆಗೆ ರಷ್ಯಾ ಸೇನಾಪಡೆಗಳನ್ನು ಕಳುಹಿಸಿದ ನಂತರ, ಹೈಪರ್‌ಸಾನಿಕ್ ಕಿಂಜಾಲ್ ಕ್ಷಿಪಣಿ ವ್ಯವಸ್ಥೆ ನಿಯೋಜಿಸಿರುವುದು ಇದೇ ಮೊದಲು ಎಂದು ರಷ್ಯಾದ 'ಇಂಟರ್‌ಫ್ಯಾಕ್ಸ್' ಸುದ್ದಿ ಸಂಸ್ಥೆ ಕೂಡ ಹೇಳಿದೆ.

ಉಕ್ರೇನ್ ರಕ್ಷಣೆ: ನವ ಜೋಡಿಗಳಿಗೆ ಯುದ್ಧ ತರಬೇತಿ

ಒಡೆಸಾ(ರಾಯಿಟರ್ಸ್): ಪ್ರೀತಿ, ಪ್ರೇಮ ಎಂದು ಮೈಮರೆಯುವ ಬದಲು ಹಲವು ನವ ಜೋಡಿಗಳು ಉಕ್ರೇನ್ ಮೇಲೆ ದಂಡೆತ್ತಿ ಬಂದಿರುವ ರಷ್ಯಾ ವಿರುದ್ಧದ ಹೋರಾಟಕ್ಕೆ ಪಣ ತೊಟ್ಟಿವೆ. ಇದೇ ಕಾರಣಕ್ಕೆ ಉಕ್ರೇನ್‌ನ ಒಡೆಸಾದಲ್ಲಿರುವ ತರಬೇತಿ ಕೇಂದ್ರದಲ್ಲಿ ಹಲವು ನವ ಜೋಡಿಗಳು ಸೇರಿದಂತೆ ಹಲವರು ಯುದ್ಧ ತರಬೇತಿ ಪಡೆಯುತ್ತಿದ್ದಾರೆ.

ರಷ್ಯಾ ಪಡೆಗಳಿಂದ ದೇಶದ ರಕ್ಷಣೆಗಾಗಿ ದೇಶದ ಅರ್ಧಕ್ಕಿಂತ ಹೆಚ್ಚು ಆಮದು ಮತ್ತು ರಫ್ತು ವ್ಯವಹಾರಗಳನ್ನು ನಿರ್ವಹಿಸುವ ಒಡೆಸಾದಲ್ಲಿ ಯುವ ಜನತೆಗೆ ಯುದ್ಧ ತರಬೇತಿ ಕೇಂದ್ರ ಆರಂಭಿಸಲಾಗಿದೆ. ಈ ಕೇಂದ್ರದಲ್ಲಿ ಪ್ರತಿ ದಿನ 80-150 ಮಂದಿಗೆ ಯುದ್ಧ ಕೌಶಲ ತರಬೇತಿ ನೀಡಲಾಗುತ್ತಿದೆ. ಈ ಕೇಂದ್ರದಲ್ಲಿ ನವ ಜೋಡಿ ಸೇರಿದಂತೆ ಹಲವು ಯುವಕರು ತರಬೇತಿ ಪಡೆಯುತ್ತಿದ್ದಾರೆ.

ಉಕ್ರೇನ್ ಮೇಲೆ ರಷ್ಯಾ ದಾಳಿ ಆರಂಭಿಸಿ 3 ವಾರಗಳೇ ಕಳೆದಿವೆ. ಉಕ್ರೇನ್ ಪಡೆಗಳು ಮತ್ತು ನಾಗರಿಕರ ಪ್ರತಿದಾಳಿಯ ಪರಿಣಾಮ ರಾಜಧಾನಿ ಕೀವ್ ಮತ್ತು ಒಡೆಸಾ ಸೇರಿದಂತೆ ಪ್ರಮುಖ ನಗರಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ರಷ್ಯಾ ಹೆಣಗಾಡುತ್ತಿದೆ.

ರಷ್ಯಾ ದೊಡ್ಡ ಬೆಲೆ ತೆರಲಿದೆ: ಎಚ್ಚರಿಕೆ

ಕೀವ್: ಉಕ್ರೇನ್ ವಿರುದ್ಧದ ಸಂಘರ್ಷಕ್ಕಾಗಿ ರಷ್ಯಾ ದೊಡ್ಡ ಬೆಲೆ ತೆರಲಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಎಚ್ಚರಿಸಿದ್ದಾರೆ.

ರಾಷ್ಟ್ರ ಉದ್ದೇಶಿಸಿ ಮಾತನಾಡಿದ ಝೆಲೆನ್‌ಸ್ಕಿ, ಕಳೆದ 25 ವರ್ಷಗಳಲ್ಲಿ ರಷ್ಯಾ ಸಾಧಿಸಿದ ಎಲ್ಲವನ್ನೂ ಅವರು ಕಳೆದುಕೊಳ್ಳುತ್ತಾರೆ ಎಂದು ಹೇಳಿದ್ದಾರೆ.

'ರಷ್ಯಾ ಉಗಮವಾದ 90ರ ದಶಕದ ದುರಂತಕ್ಕೆ ಮರಳಲಿದೆ. ಇದು ರಷ್ಯಾದ ಪತನ, ನೋವಿನ ಪತನ. ಅದನ್ನು ಅವರು ಅನುಭವಿಸುತ್ತಾರೆ' ಎಂದು ಹೇಳಿದ್ದಾರೆ.

ಈ ನಡುವೆ 'ರಷ್ಯಾದೊಂದಿಗಿನ ಮಾತುಕತೆಯಲ್ಲಿ ಉಕ್ರೇನ್ ನಿಲುವಿನಲ್ಲಿ ಯಾವುದೇ ಬದಲಾವಣೆಯಿಲ್ಲ' ಎಂದು ಅಧ್ಯಕ್ಷರ ಕಚೇರಿಯ ಸಲಹೆಗಾರ ಮೈಖೈಲೊ ಪೊಡೊಲ್ಯಾಕ್ ಹೇಳಿದ್ದಾರೆ.

ಶಾಂತಿಮಾತುಕತೆಗೆ ಆಹ್ವಾನ: ರಷ್ಯಾದ ಕಿಂಜಾಲ್ ಕ್ಷಿಪಣಿ ದಾಳಿಯ ಬೆನ್ನಲ್ಲೇ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ಯುದ್ಧ ನಿಲ್ಲಿಸಿ, ಶಾಂತಿ ಮಾತುಕತೆಗೆ ಬರುವಂತೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಶನಿವಾರ ಒತ್ತಾಯಿಸಿದರು.

'ಇದು ಮಾತುಕತೆಗೆ ಸಮಯ. ರಷ್ಯಾದ ಯುದ್ಧಕೋರರು ನಡೆಸುತ್ತಿರುವ ಆಕ್ರಮಣವನ್ನು ತಕ್ಷಣ ಕೊನೆಗೊಳಿಸಬೇಕು' ಎಂದು ಅವರು ಒತ್ತಾಯಿಸಿದರು. 'ಉಕ್ರೇನ್‌ನ ಪ್ರಾದೇಶಿಕ ಸಮಗ್ರತೆ ಮತ್ತು ಸೊಬಗನ್ನು ಪುನರುಜ್ಜೀವನಗೊಳಿಸಲು ಪರಸ್ಪರ ಭೇಟಿಯಾಗುವ, ಮಾತುಕತೆ ನಡೆಸುವ ಸಮಯವಿದು. ಇಲ್ಲದಿದ್ದರೆ, ರಷ್ಯಾಕ್ಕೆ ಆಗುವ ಹಾನಿಯನ್ನು ಹಲವು ತಲೆಮಾರುಗಳು ಕಳೆದರೂ ಸರಿಪಡಿಸಲು ಸಾಧ್ಯವಾಗದು' ಎಂದು ಝೆಲೆನ್‌ಸ್ಕಿ ಫೇಸ್‌ಬುಕ್ ಮೂಲಕ ಎಚ್ಚರಿಕೆ ಕೊಟ್ಟಿದ್ದಾರೆ.

ಶೆಲ್ ದಾಳಿ: 9 ಮಂದಿ ಸಾವು

ಲುವಿವ್ (ರಾಯಿಟರ್ಸ್/ಎಪಿ): ದಕ್ಷಿಣ ಉಕ್ರೇನ್‌ನ ಝುಪೊರಿಝಿಯಾ ನಗರದ ಉಪನಗರಗಳ ಮೇಲೆ ಶುಕ್ರವಾರ ರಾತ್ರಿ ರಷ್ಯಾ ಪಡೆಗಳು ನಡೆಸಿರುವ ಶೆಲ್ ದಾಳಿಯಲ್ಲಿ ಒಂಬತ್ತು ಜನರು ಸಾವನ್ನಪ್ಪಿದ್ದಾರೆ. 17 ಜನರು ಗಾಯಗೊಂಡಿದ್ದಾರೆ ಎಂದು ನಗರದ ಉಪ ಮೇಯರ್ ಅನಾಟೊಲಿ ಕುರ್ಟೀವ್ ಶನಿವಾರ ತಿಳಿಸಿದ್ದಾರೆ.

ಝು ಪೊ ರಿ ಝಿ ಯಾ ದ ಲ್ಲಿ 38 ಗಂಟೆಗಳ ಕರ್ಫ್ಯೂ ಘೋಷಿಸಲಾಗಿದೆ. ರಷ್ಯಾದ ಪಡೆಗಳು ಫಿರಂಗಿ, ಟ್ಯಾಂಕ್‌ಗಳು, ಹೆಲಿಕಾಪ್ಟರ್‌ಗಳು ಮತ್ತು ರಾಕೆಟ್‌ಗಳಿಂದ ದಾಳಿ ಮಾಡುತ್ತಿವೆ ಎಂದು ಕುರ್ತೀವ್ ತಿಳಿಸಿದ್ದಾರೆ.

12ಕ್ಕೂ ಹೆಚ್ಚು ಯೋಧರ ಸಾವು: ರಷ್ಯಾದ ಪಡೆಗಳು ಶುಕ್ರವಾರ ಮೈಕೊಲೈವ್ ನಗರದಲ್ಲಿ ಸೇನಾ ಬ್ರಿಗೇಡ್ ಪ್ರಧಾನ ಕಚೇರಿಯ ಮೇಲೆ ವೈಮಾನಿಕ ದಾಳಿ ನಡೆಸಿದ್ದು, 12ಕ್ಕೂ ಹೆಚ್ಚು ಯೋಧರು ಮೃತಪಟ್ಟಿದ್ದಾರೆ. ಘಟನೆಯಲ್ಲಿ ಬದುಕುಳಿದಿರುವ ಯೋಧ ಯೆವ್‌ಗೆನ್ ಈ ಕಚೇರಿಯಲ್ಲಿ 200 ಮಂದಿ ಇದ್ದವು ಎಂದಿದ್ದಾರೆ. ಬದುಕುಳಿದವರ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಸ್ಥಳದಲ್ಲಿ ನೂರಾರು ಯೋಧರ ಶವಗಳು ಬಿದ್ದಿವೆ ಎಂದು ಸೇನಾ ವಕ್ತಾರೆ ತಿಳಿಸಿದ್ದಾರೆ.

7 ಮಂದಿ ಸಾವು: ರಾಜಧಾನಿ ಕೀವ್ ನಗರದ ಮಕರಿವ್ ಮೇಲೆ ರಷ್ಯಾ ಪಡೆಗಳು ಶುಕ್ರವಾರ ನಡೆಸಿದ ಫಿರಂಗಿ ದಾಳಿಗೆ ಏಳು ಜನರು ಮೃತಪಟ್ಟಿದ್ದು, ಗಾಯಗೊಂಡಿರುವ ಐವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸ್ಥಳೀಯ ಪೊಲೀಸರು ಶನಿವಾರ ತಿಳಿಸಿದ್ದಾರೆ. ಆದರೆ, ಇದನ್ನು ಅಲ್ಲಗಳೆದಿರುವ ರಷ್ಯಾ, ನಾಗರಿಕರ ಮೇಲೆ ದಾಳಿ ನಡೆಸಿಲ್ಲ ಎಂದಿದೆ.

ಯುರೋಪಿನ ಅತಿ ದೊಡ್ಡ ಉಕ್ಕಿನ ಸ್ಥಾವರ ನಾಶ: ಮರಿಯುಪೋಲ್‌ಗೆ ಮುತ್ತಿಗೆ ಹಾಕಿರುವ ರಷ್ಯಾ ಪಡೆಗಳು ಯುರೋಪಿನ ಅತಿದೊಡ್ಡ ಉಕ್ಕಿನ ಸ್ಥಾವರ 'ಅಜೋವ್‌ಸ್ಟಾಲ್' ಮೇಲೆ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಉಕ್ರೇನ್ ಪಡೆಗಳೊಂದಿಗೆ ಭೀಕರ ಕಾಳಗ ನಡೆಸಿದ್ದು, ಉಕ್ಕಿನ ಸ್ಥಾವರವನ್ನು ನಾಶಪಡಿಸಿವೆ.

24ನೇ ದಿನದ ಬೆಳವಣಿಗೆಗಳು

- ಕ್ರಿಮಿಯಾ ಸಮೀಪದ ಕೆರ್ಸಾನ್ ಹೊರವಲಯದಲ್ಲಿ ರಷ್ಯಾದ ಲೆಫ್ಟಿನೆಂಟ್ ಜನರಲ್ ಆಂಡ್ರೈ ಮೊರ್ಡ್‌ವಿಕೆವ್ ಹತ್ಯೆ. ಈವರೆಗೆ ಉಕ್ರೇನ್ ಸೈನಿಕರಿಂದ ಹತರಾದ ರಷ್ಯಾದ ಉನ್ನತ ಸೇನಾಧಿಕಾರಿಗಳಲ್ಲಿ ಇವರು ಐದನೇಯವರು
- ಕೀವ್‌ನ ಪೂರ್ವಕ್ಕೆ ಸುಮಾರು 30 ಕಿಲೋಮೀಟರ್‌ವರೆಗೂ ಉಕ್ರೇನ್ ಸೈನಿಕರು ತೋರುತ್ತಿರುವ ತೀವ್ರ ಪ್ರತಿರೋಧದಿಂದ ರಷ್ಯಾ ಪಡೆಗಳ ಆಕ್ರಮಣ ಸ್ಥಗಿತಗೊಂಡಿದೆ– ಅಮೆರಿಕದ ಅಧಿಕಾರಿಯೊಬ್ಬರ ಹೇಳಿಕೆ
- ರಷ್ಯಾವು ತನ್ನ ಮುಂಚೂಣಿ ಪಡೆಗಳಿಗೆ ಆಹಾರ ಮತ್ತು ಇಂಧನ ಒದಗಿಸಲು ಹೆಣಗಾಡುತ್ತಿದೆ. ಆಹಾರ–ಇಂಧನ ಪೂರೈಕೆ ಮಾರ್ಗಗಳ ಮೇಲೆ ಉಕ್ರೇನ್ ನಿರಂತರ ದಾಳಿ ನಡೆಸುತ್ತಿದೆ – ಬ್ರಿಟನ್ ರಕ್ಷಣಾ ಸಚಿವಾಲಯದ ಹೇಳಿಕೆ
- ರಷ್ಯಾ ಆಕ್ರಮಣದಿಂದಾಗಿ ಉಕ್ರೇನ್‌ನಲ್ಲಿ ಈವರೆಗೆ 112 ಮಕ್ಕಳು ಮೃತಪಟ್ಟಿದ್ದಾರೆ. 140ಕ್ಕೂ ಹೆಚ್ಚು ಮಕ್ಕಳು ಗಾಯಗೊಂಡಿದ್ದಾರೆ. ಒಂದೂವರೆ ಲಕ್ಷ ಮಕ್ಕಳು ಉಕ್ರೇನ್ ತೊರೆದಿದ್ದಾರೆ– ವಿಶ್ವಸಂಸ್ಥೆಯ ಮಕ್ಕಳ ಏಜೆನ್ಸಿ
- ಉಕ್ರೇನ್‌ನಲ್ಲಿ 65 ಲಕ್ಷ ಜನರು ನಿರಾಶ್ರಿತರಾಗಿದ್ದಾರೆ. ಈಗಾಗಲೇ 32 ಲಕ್ಷ ಜನರು ದೇಶ ತೊರೆದಿದ್ದಾರೆ
- ರಷ್ಯಾ ಪಡೆಗಳು ಉಕ್ರೇನ್‌ನ ಅತಿದೊಡ್ಡ ನಗರಗಳ ಸುತ್ತ ನಿರ್ಬಂಧ ವಿಧಿಸಿ, ನಾಗರಿಕರಿಗೆ ಅಗತ್ಯ ವಸ್ತುಗಳನ್ನು ಪೂರೈಕೆಯಾಗದಂತೆ ತಡೆದು 'ಮಾನವೀಯ ದುರಂತ' ಸೃಷ್ಟಿಸಿವೆ– ಝೆಲೆನ್‌ಸ್ಕಿ ಆರೋಪ
- ಮಾಸ್ಕೊದಲ್ಲಿ ನಡೆದ ರಾಷ್ಟ್ರಭಕ್ತಿಯ ಬೃಹತ್ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ರಷ್ಯಾದ ಮಿಲಿಟರಿಯನ್ನು ಪ್ರಶಂಸಿಸಿದರು
- ಉಕ್ರೇನ್ ನೆಲದಲ್ಲಿ ಸ್ಫೋಟಿಸದೆ ಬಿದ್ದಿರುವ ಬಾಂಬು, ಮದ್ದುಗುಂಡುಗಳ ನಿಷ್ಕ್ರಿಯಕ್ಕೆ ವರ್ಷಗಳೇ ಬೇಕು – ಆಂತರಿಕ ಸಚಿವ ಡೆನಿಸ್ ಮೊನಾಸ್ಟಿಯುಸ್ಕೈ
- ಲುಹಾನ್‌ಸ್ಕ್, ಕೀವ್, ಮರಿಯುಪೋಲ್ ನಗರ ಸೇರಿದಂತೆ ಪ್ರಮುಖ ನಗರಗಳಲ್ಲಿ 10 ಮಾನವೀಯ ಕಾರಿಡಾರ್ ತೆರೆಯಲು ರಷ್ಯಾ ಮತ್ತು ಉಕ್ರೇನ್ ಸಮ್ಮತಿ. ಕೆರ್ಸಾನ್‌ನಲ್ಲಿ ಮಾನವೀಯ ನೆರವು ಕಲ್ಪಿಸುವ ಯೋಜನೆ ಪ್ರಕಟಿಸಿದ ಉಕ್ರೇನ್ ಉಪ ಪ್ರಧಾನಿ ಇರೆನಾ ವೆರೆಸ್‌ಚುಕ್
- ಎಸ್ಟೋನಿಯಾ, ಲಾಟ್ವಿಯಾ ಮತ್ತು ಲಿಥುವೇನಿಯಾ, ರಷ್ಯಾದ 10 ರಾಜತಾಂತ್ರಿಕರನ್ನು ಹೊರಹಾಕುವುದಾಗಿ ಘೋಷಿಸಿವೆ

'ನ್ಯಾಟೊ ಪೂರ್ವಕ್ಕೆ ಕಾಲಿಡಬಾರದು'

ಬೀಜಿಂಗ್ (ಎಪಿ): ನ್ಯಾಟೊ ಪೂರ್ವಕ್ಕೆ ಕಾಲಿಡುವುದಿಲ್ಲವೆಂದು ನೀಡಿರುವ ವಾಗ್ದಾನಕ್ಕೆ ಬದ್ಧವಾಗಿರಬೇಕು ಎಂದು ಚೀನಾ ಶನಿವಾರ ಹೇಳಿದೆ.

ರಷ್ಯಾದ ವಾದ ಪುಷ್ಟೀಕರಿಸಿರುವ ಚೀನಾದ ರಾಯಭಾರಿ, 'ನ್ಯಾಟೊದ ಮತ್ತಷ್ಟು ಮುಂದೆ ಹೋದರೆ, ಅದು ಮಾಸ್ಕೊದ ಹೊರವಲಯದ ಸಮೀಪಕ್ಕೆ ಬಂದು ನಿಲ್ಲಲಿದೆ. ಆಗ ನ್ಯಾಟೊದ ಕ್ಷಿಪಣಿಗಳು ಕ್ರೆಮ್ಲಿನ್‌ಗೆ ಕೇವಲ ಏಳು ಅಥವಾ ಎಂಟು ನಿಮಿಷಗಳಲ್ಲಿ ಬಂದು ಬೀಳಲಿವೆ' ಎಂದು ಅಭಿಪ್ರಾಯಪಟ್ಟರು.

ಚೀನಾದ ಉಪ ವಿದೇಶಾಂಗ ಸಚಿವ ಲೆ ಯುಚೆಂಗ್, ಉಕ್ರೇನ್ ಆಕ್ರಮಣದ ನಂತರ ರಷ್ಯಾದ ಮೇಲೆ ಹೇರಿರುವ ನಿರ್ಬಂಧಗಳನ್ನು ಟೀಕಿಸಿದರು.

'ಶೀತಲ ಸಮರದ ಮನಸ್ಥಿತಿ ಮತ್ತು ಅಧಿಕಾರ ರಾಜಕಾರಣವೇ ಉಕ್ರೇನ್‌ನಲ್ಲಿನ ಯುದ್ಧಕ್ಕೆ ಮೂಲ ಕಾರಣ. ಪ್ರಮುಖ ದೇಶವನ್ನು, ಅದರಲ್ಲೂ ಅಣುಶಕ್ತ ದೇಶವನ್ನು ಮೂಲೆಗುಂಪಾಗಿಸುವ ಆಲೋಚನೆ ತುಂಬಾ ಭಯಾನಕ ಪರಿಣಾಮ ಉಂಟುಮಾಡಲಿದೆ' ಎಂದು ಎಚ್ಚರಿಸಿದರು.

ರಷ್ಯನ್ನರ ಖಾತೆ ಸ್ಥಗಿತಕ್ಕೆ ಸ್ವಿಸ್ ಸರ್ಕಾರಕ್ಕೆ ಝೆಲೆನ್‌ಸ್ಕಿ ಮನವಿ

ಬರ್ಲಿನ್, ಸ್ವಿಟ್ಜರ್‌ಲೆಂಡ್ (ಎಪಿ): ರಷ್ಯಾದ ಎಲ್ಲ ಶ್ರೀಮಂತರ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸುವಂತೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಸ್ವಿಸ್ ಸರ್ಕಾರವನ್ನು ಕೋರಿದ್ದಾರೆ.

ಉಕ್ರೇನ್ ಮೇಲೆ ರಷ್ಯಾದ ಆಕ್ರಮಣವನ್ನು ವಿರೋಧಿಸಿ ಬರ್ನ್‌ನಲ್ಲಿ ಪ್ರತಿಭಟನಕಾರರನ್ನು ಉದ್ದೇಶಿಸಿ ಶನಿವಾರ ವರ್ಚುವಲ್ ಮೂಲಕ ಮಾತನಾಡಿದ ಝೆಲೆನ್‌ಸ್ಕಿ, 'ನಿಮ್ಮ ಬ್ಯಾಂಕ್‌ಗಳಲ್ಲಿ ಈ ಯುದ್ಧಕ್ಕೆ ಉತ್ತೇಜನ ನೀಡಿರುವ ಜನರ ಹಣವಿದೆ. ಆದ್ದರಿಂದ ಅವರ ಖಾತೆಗಳನ್ನು ಸ್ಥಗಿತಗೊಳಿಸಿದರೆ, ರಷ್ಯಾ ವಿರುದ್ಧ ಹೋರಾಡಲು ಸಹಾಯ ಮಾಡಿದಂತಾಗುತ್ತದೆ' ಎಂದು ಹೇಳಿದ್ದಾರೆ ಎಂದು ಸ್ವಿಸ್‌ನ ಎಸ್‌ಆರ್‌ಎಫ್ ಪ್ರಸಾರ ಸಂಸ್ಥೆ ವರದಿ ಮಾಡಿದೆ.

ಭಗವದ್ಗೀತೆ ಸೇರ್ಪಡೆ ಧಾರ್ಮಿಕ ಚಿಂತನೆಯಲ್ಲ: ಶಿಕ್ಷಣ ಸಚಿವ

ಪ್ರಜಾವಾಣಿ ವಾರ್ತೆ



ಬಿ.ಸಿ.ನಾಗೇಶ್

ಕಾರವಾರ: 'ಪಠ್ಯದಲ್ಲಿ ಭಗವದ್ಗೀತೆಯ ಸೇರ್ಪಡೆ ವಿಷಯವು ಧಾರ್ಮಿಕ ಚಿಂತನೆಯಲ್ಲ' ಎಂದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು, 'ಶಿಕ್ಷಣದಲ್ಲಿ ನೈತಿಕ ಶಿಕ್ಷಣದ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಗೋಕರ್ಣದ ವಿಷ್ಣುಗುಪ್ತ ವಿಶ್ವವಿದ್ಯಾಪೀಠಕ್ಕೆ ಶನಿವಾರ ಭೇಟಿ ನೀಡಿ ಮಾತನಾಡಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ನಾವೆಲ್ಲ ಶಾಲೆಗೆ ಹೋಗುವಾಗನೈತಿಕ ಶಿಕ್ಷಣದ ತರಗತಿಗಳು ಇರುತ್ತಿದ್ದವು. ಆದರೆ, ಅವುಗಳನ್ನು ಯಾಕೆ ರದ್ದು ಮಾಡಿದರೋ ಗೊತ್ತಿಲ್ಲ. ಮುಖ್ಯಮಂತ್ರಿ ಜೊತೆ ಚರ್ಚಿಸಿ ಆ ತರಗತಿಗಳನ್ನು ಆರಂಭಿಸುತ್ತೇವೆ. ನೈತಿಕ ಶಿಕ್ಷಣದಲ್ಲಿ ಏನೇನು ಅಂಶಗಳಿರಬೇಕು ಎಂಬುದರ ಕುರಿತು ಶಿಕ್ಷಣ ತಜ್ಞರ ಸಲಹೆಯಂತೆ ಮುಂದುವರಿಯುತ್ತೇವೆ' ಎಂದು ಪ್ರತಿಕ್ರಿಯಿಸಿದರು.

'ಹಿಜಾಬ್ ಕುರಿತು ಹೈಕೋರ್ಟ್ ತೀರ್ಪಿನ ಬಳಿಕವೂ ಶಾಲಾ ಕಾಲೇಜಿಗೆ ಬಾರದಿರುವ ವಿದ್ಯಾರ್ಥಿನಿಯರನ್ನು, ಶಾಲೆಗೆ ಬರಲೇ ಬೇಕು ಎಂದು ಅವರ ಅಧಿಕಾರ ಕಿತ್ತುಕೊಳ್ಳಲು ಸಾಧ್ಯವಿಲ್ಲ. ಶೇ 99.99ರಷ್ಟು ಮಕ್ಕಳು ಶಾಲೆಗೆ ಹಾಜರಾಗುತ್ತಿದ್ದಾರೆ. ಉಳಿದವರನ್ನೂ ಕರೆದುಕೊಂಡು ಬರುವ ಪ್ರಯತ್ನ ಮಾಡಲಾಗುತ್ತದೆ. ಹಾಗೆಂದು, ಬಲವಂತವಾಗಿ ಕರೆದುಕೊಂಡು ಬರುವುದಿಲ್ಲ' ಎಂದು ತಿಳಿಸಿದರು.

'ಮದರಸಾಗಳಲ್ಲಿ ಶಿಕ್ಷಣ ಪದ್ಧತಿ ಜಾರಿಗೆ ಪ್ರಯತ್ನ'

'ಮದರಸಾಗಳನ್ನು ಶಿಕ್ಷಣ ಪದ್ಧತಿಯಲ್ಲಿ ತರುವ ಪ್ರಯತ್ನ ಮಾಡುತ್ತೇವೆ. ಆದರೆ, ಈ ಬಗ್ಗೆ ಸದ್ಯಕ್ಕೆ ಯಾವ ಯೋಚನೆಯೂ ಇಲ್ಲ' ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದ್ದಾರೆ.

'ಅಲ್ಪಸಂಖ್ಯಾತ ಸಮುದಾಯದ ಮಕ್ಕಳು, ಮದರಸಾ ಶಿಕ್ಷಣದಿಂದಾಗಿ ಇವತ್ತಿನ ಶಿಕ್ಷಣ ಪದ್ಧತಿಯಿಂದ ದೂರ ಇರಬಾರದು. ಅವರೂ ನಮ್ಮ ಇತರ ಎಲ್ಲ ಮಕ್ಕಳಂತೆ ಈಗಿನ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾವಂತರಾಗಿ ಸಮಾಜದಲ್ಲಿ ಮುಂದೆ ಬರಬೇಕು. ಈ ಕಾರಣದಿಂದ ಮುಂದಿನ ದಿನಗಳಲ್ಲಿ ಈ ಬಗ್ಗೆ ಯೋಚಿಸುತ್ತೇವೆ' ಎಂದು ತಿಳಿಸಿದರು.

'ಇಂದಿನ ಶಿಕ್ಷಣ ಪದ್ಧತಿಯ ಅಗತ್ಯದ ಬಗ್ಗೆ ಅಲ್ಪಸಂಖ್ಯಾತ ಸಮುದಾಯದ ನಾಯಕರ ಗಮನಕ್ಕೂ ಬಂದಿದೆ. ಮದರಸಾಕ್ಕೆ ಸೇರುವವರ ಸಂಖ್ಯೆ ಕಡಿಮೆಯಾಗಿದ್ದು, ಶಾಲೆಗಳಿಗೆ ಸೇರುವವರ ಸಂಖ್ಯೆ ಹೆಚ್ಚಾಗಿದೆ. ಇವತ್ತಿನ ಪ್ರಪಂಚದಲ್ಲಿ ಬದುಕಲು ಈ ಶಿಕ್ಷಣ ಪದ್ಧತಿ ಅಗತ್ಯ' ಎಂದು ಪ್ರತಿಪಾದಿಸಿದರು.

'ಸರ್ಕಾರದ ಚಿಂತನೆ – ಕೊರೊನಾಗಿಂತ ಅಪಾಯಕಾರಿ'

ತನ್ವೀರ್ ಸೇಠ್

ಮೈಸೂರು: 'ರಾಜ್ಯ ಸರ್ಕಾರವು ಶಾಲಾ ಪಠ್ಯಪುಸ್ತಕದಲ್ಲಿ ಭಗವದ್ಗೀತೆ ಅಳವಡಿಸಲು ಚಿಂತಿಸಿರುವುದು ಮಹಾಮಾರಿ ಕೊರೊನಾಗಿಂತಲೂ ಅಪಾಯಕಾರಿಯಾದ ಬೆಳವಣಿಗೆ' ಎಂದು ಶಾಸಕ ತನ್ವೀರ್ ಸೇಠ್ ಕಿಡಿಕಾರಿದರು.

ಶನಿವಾರ ಇಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಕ್ಕಳ ಕಲಿಕೆಗೆ ಹೆಚ್ಚಿನ ಆದ್ಯತೆ ಕೊಡುವ ಬದಲು ಅವರ ಮನಸ್ಸನ್ನು ಕಲ್ಮಶಗೊಳಿಸಲು ಮುಂದಾಗಿರುವುದು ನೋವಿನ ವಿಚಾರ' ಎಂದರು.

'ಭಗವದ್ಗೀತೆಯಿಂದ ಹೊಟ್ಟೆ ತುಂಬುತ್ತದೆಯೇ'

ಕುಮಾರಸ್ವಾಮಿ

ರಾಮನಗರ: ಶಾಲೆಗಳಲ್ಲಿ ಭಗವದ್ಗೀತೆ ಪಾಠ ಮಾಡುವುದರಿಂದ ಜನರ ಹೊಟ್ಟೆ ತುಂಬುತ್ತದೆಯೇ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ ಕುಮಾರಸ್ವಾಮಿ ಚನ್ನಪಟ್ಟಣದಲ್ಲಿ ಪ್ರಶ್ನಿಸಿದ್ದಾರೆ. ಅಧಿಕಾರಕ್ಕಾಗಿ ಅಮಾಯಕರನ್ನು ಭಾವನಾತ್ಮಕವಾಗಿ ದಾರಿ ತಪ್ಪಿಸುತ್ತಿದ್ದಾರೆ. ಇದಕ್ಕೂ ಒಂದು ಅಂತಿಮ ಎಂಬುದು ಇರುತ್ತದೆ. ಯಾವುದೂ ಶಾಶ್ವತ ಅಲ್ಲ ಎಂದರು.

ಭಗವದ್ಗೀತೆಯಲ್ಲಿ ನೀತಿಪಾಠ: ಸಂಸದ

ಪ್ರತಾಪ ಸಿಂಹ

ಮಡಿಕೇರಿ: 'ಭಗವದ್ಗೀತೆ ಧಾರ್ಮಿಕ ಗ್ರಂಥವಲ್ಲ. ಅದರಲ್ಲಿ ನೀತಿಪಾಠ ಹಾಗೂ ನೈತಿಕ ವಿಚಾರಗಳಿದ್ದು, ಪಠ್ಯ ಪುಸ್ತಕಗಳಲ್ಲಿ ಸೇರಿಸುವುದು ಸೂಕ್ತವಾಗಿದೆ' ಎಂದು ಸಂಸದ ಪ್ರತಾಪ ಸಿಂಹ ಇಲ್ಲಿ ಪ್ರತಿಪಾದಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಸರಿ, ತಪ್ಪುಗಳ ಕುರಿತು ಭಗವದ್ಗೀತೆಯಲ್ಲಿ ತಿಳಿಸಲಾಗಿದೆ. ಕುರಾನ್, ಬೈಬಲ್ ಧಾರ್ಮಿಕ ಗ್ರಂಥಗಳು. ಭಗವದ್ಗೀತೆ ಧರ್ಮದ ಬಗ್ಗೆ ತಿಳಿಸುವುದಿಲ್ಲ. ಇದನ್ನು ಬೇರೆ ಗ್ರಂಥಗಳಂತೆ ನೋಡಲು ಹೋಗುವುದು ಬೇಡ' ಎಂದರು.

ಹಿಜಾಬ್: ಮೇಲ್ಮನವಿಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಜಾಬ್ ಕುರಿತ ರಾಜ್ಯ ಹೈಕೋರ್ಟ್‌ನ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗುವುದಾಗಿ ಹೇಳಿರುವ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ (ಎಐಎಂಪಿಎಲ್‌ಬಿ)ಯು, ಸಂಯಮದಿಂದ ಇರುವಂತೆ ಮುಸ್ಲಿಂ ಸಮುದಾಯದ ಜನತೆಗೆ ಸಲಹೆ ನೀಡಿದೆ.

ಇಸ್ಲಾಮಿಕ್ ಪರಿಸರ ಹಾಗೂ ಗುಣಮಟ್ಟದ ಶಿಕ್ಷಣದ ಸೌಲಭ್ಯ ಹೊಂದಿರುವ ಹೆಣ್ಣು ಮಕ್ಕಳ ಅಧಿಕ ಸಂಖ್ಯೆಯ ಶಾಲೆಗಳನ್ನು ಆರಂಭಿಸಲು ಶಿಕ್ಷಣ ತಜ್ಞರು, ವಿದ್ವಾಂಸರು, ಬುದ್ಧಿಜೀವಿಗಳು, ಹೂಡಿಕೆದಾರರು ಮತ್ತು ಉದ್ಯಮಿಗಳನ್ನು ಕೋರಿರುವ ಮಂಡಳಿಯು, ಖಾಸಗಿ ಶಿಕ್ಷಣ ಸಂಸ್ಥೆಗಳೊಂದಿಗೆ ಸಭೆ ನಡೆಸಿ, -ವಿದ್ಯಾರ್ಥಿನಿಯರಿಗಾಗಿ 8ನೇ ತರಗತಿಯಿಂದ ಪ್ರತ್ಯೇಕ ತರಗತಿಗಳನ್ನು ಆರಂಭಿಸುವಂತೆ ಸಮುದಾಯದ ಜನತೆ ಒತ್ತಾಯಿಸಬೇಕು ಎಂದು ಸೂಚಿಸಿದೆ.

ಯಾವುದೇ ರಾಜ್ಯ ಸರ್ಕಾರ ಹಿಜಾಬ್ ನಿಷೇಧಿಸಿ ಆದೇಶ ಹೊರಡಿಸಿದಲ್ಲಿ ಕಾನೂನನ್ನು ಕೈಗೆತ್ತಿಕೊಳ್ಳದೆ, ಶಾಂತ ರೀತಿಯಲ್ಲಿ ಪ್ರತಿಭಟಿಸುವಂತೆ ಮಂಡಳಿ ತಿಳಿಸಿದೆ.

ನ್ಯಾಯಾಧೀಶರ ವಜಾಕ್ಕೆ ಆಗ್ರಹ: ನಾಳೆ ಧರಣಿ

ಬೆಂಗಳೂರು: 'ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅಗೌರವ ತೋರಿದ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರನ್ನು ವಜಾಗೊಳಿಸುವಂತೆ ಆಗ್ರಹಿಸಿ ಸೋಮವಾರ (ಮಾರ್ಚ್ 21) ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ಹಮ್ಮಿಕೊಳ್ಳಲಾಗಿದೆ' ಎಂದು ಭಾರತೀಯ ದಲಿತ ಸಂಘರ್ಷ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಎಚ್.ಪ್ರಕಾಶ್ ಬೀರಾವರ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಅಂಬೇಡ್ಕರ್ ರಚಿಸಿರುವ ಸಂವಿಧಾನದಡಿಯೇ ಮೀಸಲಾತಿ ಪಡೆದಿರುವ ದಲಿತ ಸಮುದಾಯದ ಯಾವೊಬ್ಬ ಚುನಾಯಿತ ಪ್ರತಿನಿಧಿಯೂ ಸದನದಲ್ಲಿ ಈ ಬಗ್ಗೆ ದನಿ ಎತ್ತದಿರುವುದು ನಾಚಿಕೆಗೇಡಿನ ಸಂಗತಿ' ಎಂದರು.

'ಭಗವದ್ಗೀತೆ ಪಠ್ಯದಲ್ಲಿ ಸೇರ್ಪಡೆಗೆ ವಿರೋಧ ಸಲ್ಲ'

ಪ್ರಲ್ಹಾದ ಜೋಶಿ

ಹುಬ್ಬಳ್ಳಿ: 'ಭಗವದ್ಗೀತೆಯನ್ನು ಪಠ್ಯದಲ್ಲಿ ಸೇರ್ಪಡೆ ಮಾಡುವುದರಲ್ಲಿ ತಪ್ಪೇನು ಇಲ್ಲ. ಇದಕ್ಕೆ ಯಾರೂ ವಿರೋಧ ವ್ಯಕ್ತಪಡಿಸಬಾರದು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮನವಿ ಮಾಡಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈ ವಿಚಾರದಲ್ಲಿ ಜಾತಿವಾದಿಗಳು, ಹುಸಿ ಜಾತ್ಯತೀತವಾದಿಗಳು ವಾದ ಮಾಡಬಾರದು. ಎಲ್ಲರೂ ಈ ನಿರ್ಧಾರ ಸ್ವಾಗತಿಸಬೇಕು' ಎಂದು ಅವರು ಹೇಳಿದರು.

'ಸಮಾಜದಲ್ಲಿ ಈಚೆಗೆ ನೈತಿಕ ಶಿಕ್ಷಣ ಕಡಿಮೆ ಆಗುತ್ತಿದೆ. ನಮ್ಮ ಮಕ್ಕಳಿಗೆ ನೈತಿಕತೆ, ಇತಿಹಾಸ ಹಾಗೂ ಧರ್ಮದ ಬೋಧನೆ ಆಗಬೇಕಿದೆ. ಪಠ್ಯದಲ್ಲಿ ಭಗವದ್ಗೀತೆ ಸೇರಿಸುವುದರಿಂದ ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ ಲಭಿಸಲಿದೆ' ಎಂದರು.

ಭಗವದ್ಗೀತೆ ಸೇರ್ಪಡೆಗೆ ವಿರೋಧವಿಲ್ಲ: ಖಾದರ್

ಯು.ಟಿ. ಖಾದರ್

ಬಳ್ಳಾರಿ: 'ಶಾಲಾ ಪಠ್ಯದಲ್ಲಿ ಭಗವದ್ಗೀತೆಯ ಅಂಶಗಳನ್ನು ಸೇರ್ಪಡೆ ಮಾಡುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಎಲ್ಲ ಧರ್ಮಗಳಲ್ಲಿರುವ ಒಳ್ಳೆಯ ಅಂಶಗಳನ್ನೂ ಸೇರಿಸಿ ಮಕ್ಕಳಿಗೆ ಮೌಲಿಕ ಶಿಕ್ಷಣ ಕೊಡಲಿ' ಎಂದು ಕಾಂಗ್ರೆಸ್ ನಾಯಕ, ಶಾಸಕ ಯು.ಟಿ. ಖಾದರ್ ಸಲಹೆ ಮಾಡಿದರು.

ಬಳ್ಳಾರಿ ಮೇಯರ್ ಉಪ ಮೇಯರ್ ಚುನಾವಣೆಗೆ ಕಾಂಗ್ರೆಸ್ ಪಕ್ಷದ ವೀಕ್ಷಕರಾಗಿ ಬಂದಿದ್ದ ಖಾದರ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. 'ಪಠ್ಯದಲ್ಲಿ ಭಗವದ್ಗೀತೆ ಅಷ್ಟೇ ಅಲ್ಲ, ವಚನ ಸಾಹಿತ್ಯ, ನಾರಾಯಣಗುರು ಅವರ ಚಿಂತನೆ, ಕೋಟಿ ಚನ್ನಯ್ಯನವರ ವಿಚಾರ ಸೇರಿದಂತೆ ಎಲ್ಲ ಧರ್ಮಗಳ ಉತ್ತಮ ಅಂಶಗಳನ್ನು ಸೇರಿಸಿ ಮಕ್ಕಳ ವ್ಯಕ್ತಿತ್ವ ವಿಕಸನಗೊಳಿಸಲಿ' ಎಂದರು.

ಕೇಸರೀಕರಣವಾದರೆ ತಪ್ಪೇನು: ನಾಯ್ಡು ಪ್ರಶ್ನೆ

ಎಂ. ವೆಂಕಯ್ಯ ನಾಯ್ಡು

ಹರಿದ್ವಾರ (ಪಿಟಿಐ): 'ಸರ್ಕಾರವು ಶಿಕ್ಷಣವನ್ನು ಕೇಸರೀಕರಣ ಮಾಡುತ್ತಿದೆ ಎಂದು ಆರೋಪಿಸಲಾಗುತ್ತಿದೆ. ಆದರೆ, ಕೇಸರಿಯಲ್ಲಿ ಏನು ತಪ್ಪಿದೆ' ಎಂದು ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಅವರು ಶನಿವಾರ ಪ್ರಶ್ನಿಸಿದ್ದು, ಮೆಕಾಲೆ ಶಿಕ್ಷಣ ವ್ಯವಸ್ಥೆಯನ್ನು ದೇಶದಿಂದ ಸಂಪೂರ್ಣವಾಗಿ ತಿರಸ್ಕರಿಸಬೇಕು ಎಂದು ಕರೆ ನೀಡಿದರು.

ಇಲ್ಲಿನ ದೇವ ಸಂಸ್ಕೃತಿ ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ವಸಾಹತುಶಾಹಿ ಮನೋಭಾವದಿಂದ ಭಾರತೀಯರು ಹೊರಬರಬೇಕು. ನಾವು ಭಾರತೀಯರು ಎಂದು ಹೇಳಿಕೊಳ್ಳಲು ಹೆಮ್ಮೆಪಡಬೇಕು' ಎಂದರು.

'ಭಾರತದ ಹೊಸ ಶಿಕ್ಷಣ ನೀತಿಯಿಂದ ಮಾತೃಭಾಷೆಗಳಿಗೆ ಹೆಚ್ಚಿನ ಆದ್ಯತೆ ಸಿಗಲಿದೆ. ಮೆಕಾಲೆ ಶಿಕ್ಷಣ ಪದ್ಧತಿಯನ್ನು ತಿರಸ್ಕರಿಸಬೇಕು. ಅದು ವಿದೇಶಿ ಭಾಷೆಯನ್ನು ದೇಶದಲ್ಲಿ ಶಿಕ್ಷಣ ಮಾಧ್ಯಮವನ್ನಾಗಿ ಹೇರಿದೆ. ಅಲ್ಲದೇ, ಶಿಕ್ಷಣವನ್ನು ಗಣ್ಯರಿಗೆ ಮಾತ್ರ ಸೀಮಿತಗೊಳಿಸಿದೆ' ಎಂದು ನಾಯ್ಡು ಅವರು ಹೇಳಿದರು.

ಕೋಕಿಲಾ ರಮೇಶ್ ಜೈನ್ ಭಗೀರಥ ಪ್ರಯತ್ನ

ಮಾರುಕಟ್ಟೆಗೆ ಮರಳಿದ ಗುಬ್ಬಚ್ಚಿ ಚಿಲಿಪಿಲಿ

• ಕೆ.ಎಸ್.ಗಿರೀಶ

ಮೈಸೂರು: ಈಚೆಗೆ ಕಣ್ಣಿಗೆ ಬೀಳುವುದೇ ಅಪರೂಪ ಎನಿಸುತ್ತಿರುವ ಗುಬ್ಬಿಗಳನ್ನು ಮರಳಿ ನಾಡಿಗೆ ತರಲು ಇಲ್ಲೊಬ್ಬ ಮಹಿಳೆ ಅನೇಕ ವರ್ಷಗಳಿಂದ ಸದ್ದಿಲ್ಲದೆ ಪ್ರಯತ್ನಿಸುತ್ತಿದ್ದಾರೆ.

ಕೋಕಿಲಾ ರಮೇಶ್ ಜೈನ್ ಇಲ್ಲಿನ ದೇವರಾಜ ಮಾರುಕಟ್ಟೆಯಲ್ಲಿ ಮತ್ತೆ ಗುಬ್ಬಿಗಳ ಕಲರವ ಕೇಳಿ ಬರುವಂತೆ ಮಾಡುವಲ್ಲಿ ಸಫಲರಾಗಿರುವ ಮಹಿಳೆ.

ದೇವರಾಜ ಮಾರುಕಟ್ಟೆಯಲ್ಲಿ ಗುಬ್ಬಿಗಳು ಕಣ್ಮರೆಯಾಗಿದ್ದವು. ಇದನ್ನು ಗಮನಿಸಿದ ಕೋಕಿಲಾ, ತಾವೇ ವಿಶಿಷ್ಟವಾಗಿ ವಿನ್ಯಾಸಗೊಳಿಸಿದ ಗುಬ್ಬಿಗೂಡುಗಳನ್ನು ಉಚಿತವಾಗಿ ಅಂಗಡಿಗಳ ಮಾಲೀಕರಿಗೆ ವಿತರಿಸಿದರು. ನಿತ್ಯ ಒಂದು ತಟ್ಟೆಯಲ್ಲಿ ಧಾನ್ಯ ಹಾಕುವಂತೆ ವರ್ತಕರಲ್ಲಿ ಮನವಿ ಮಾಡಿದರು. ತಾವೇ ಉಚಿತವಾಗಿ ಧಾನ್ಯ ವಿತರಿಸಿದರು. ಇದರ ಫಲವಾಗಿ ಮಾರುಕಟ್ಟೆಯಲ್ಲಿ ಗುಬ್ಬಿಗಳ ಚಿಲಿಪಿಲಿ ಮತ್ತೆ ಕೇಳುವಂತಾಗಿದೆ.

'ಹಲವು ಗೂಡುಗಳನ್ನು ಕೋಕಿಲಾ ಮೇಡಂ ತಂದು ಕೊಟ್ಟರು. ಯಾರಲ್ಲೂ ತನ್ನ ಹೆಸರು ಹೇಳಬೇಡ ಎಂಬುದಾಗಿ ವಿನಂತಿಸಿಕೊಂಡರು. ಅವರು ತಂದು ಕೊಟ್ಟ ಗೂಡುಗಳನ್ನು ಬಾಗಿಲಿನಲ್ಲಿ ಕಟ್ಟಿದೆವು. ಹಲವು ಮರಿಗಳು ಈಗ ಇಲ್ಲಿ ವಾಸ ಮಾಡುತ್ತಿವೆ. ಇದಕ್ಕೂ ಮುಂಚೆ ಇಲ್ಲಿ ಗುಬ್ಬಿಗಳೇ ಇರಲಿಲ್ಲ' ಎಂದು ಮಾರುಕಟ್ಟೆಯ ಹೂವಿನ ವ್ಯಾಪಾರಿ ಮೊಹಮ್ಮದ್ ಅಜ್ಗರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಇಂದು ವಿಶ್ವ ಗುಬ್ಬಚ್ಚಿ ದಿನ

ಮೈಸೂರಿನ ದೇವರಾಜ ಮಾರುಕಟ್ಟೆಯಲ್ಲಿ ಕೋಕಿಲಾ ರಮೇಶ್ ಜೈನ್ ಅಳವಡಿಸಿದ ಗೂಡಿನಲ್ಲಿ ಗುಬ್ಬಿಗಳು ವಾಸಿಸುತ್ತಿರುವುದು

ಮತ್ತೊಬ್ಬ ವ್ಯಾಪಾರಿ ಮೊಯಿಬ್ ಅಹಮ್ಮದ್, 'ನಮಗೆ ಮಾತ್ರವಲ್ಲ; ಹತ್ತಾರು ಅಂಗಡಿಗಳಿಗೆ ಗೂಡುಗಳನ್ನು ಹಾಗೂ ಧಾನ್ಯವನ್ನು ನೀಡಿದ್ದರು. ಆದರೆ, ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಯಾರೂ ಸರಿಯಾಗಿ ನಿರ್ವಹಣೆ ಮಾಡಲಿಲ್ಲ. ಈಗ ಒಂದಿಷ್ಟು ಅಂಗಡಿಗಳಲ್ಲಿ ಕೋಕಿಲಾ ನೀಡಿರುವ ಗೂಡುಗಳಲ್ಲಿ ಗುಬ್ಬಿಗಳು ವಾಸಿಸುತ್ತಿವೆ. ಅವುಗಳ ಚಿಲಿಪಿಲಿ ಶಬ್ದ ನಮಗೂ ಹಿತ ಎನಿಸುತ್ತಿದೆ' ಎಂದರು.

ದಿಲ್ ಕುಶ್ ಕೊಠಾರಿ, ಸವಿತಾ ನಾಗಭೂಷಣ್ ಹಾಗೂ ಇತರರು ನನ್ನ ಈ ಕಾರ್ಯಕ್ಕೆ ಸಹಕಾರ ನೀಡುತ್ತಿದ್ದಾರೆ

ಕೋಕಿಲಾ ರಮೇಶ್ ಜೈನ್

ಗುಬ್ಬಿ ಸಂರಕ್ಷಕಿ

ಗೃಹಿಣಿಯಾಗಿರುವ ಕೋಕಿಲಾ 2019ರಿಂದಲೂ ನಿರಂತರವಾಗಿ ಗುಬ್ಬಿಗಾಗಿ ಕೆಲಸ ಮಾಡುತ್ತಿದ್ದಾರೆ. ಪ್ರತಿ ವರ್ಷ ಗುಬ್ಬಚ್ಚಿ ದಿನದಂದು ನಗರದ ವಿವಿಧ ಭಾಗಗಳಲ್ಲಿ 500ಕ್ಕೂ ಅಧಿಕ ಗುಬ್ಬಿಗೂಡುಗಳನ್ನು ಉಚಿತವಾಗಿ ವಿತರಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಕೋಕಿಲಾ, 'ನಾನು ಈ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿಕೊಳ್ಳುವುದು ತೀರಾ ಸಂಕೋಚ ತರಿಸುತ್ತದೆ. ಕೆಲವೊಂದು ಗೂಡುಗಳನ್ನು ನನ್ನ ಪರಿಕಲ್ಪನೆಯಂತೆ ವಿನ್ಯಾಸ ಮಾಡಿಸಿದ್ದೇನೆ. ಸಾವಿರಾರು ರೂಪಾಯಿ ಕೊಟ್ಟು ಗುಜರಾತ್‌ನಿಂದ ಕೆಲವೊಂದನ್ನು ತರಿಸಿದ್ದೇನೆ. ಮತ್ತೆ ನಗರದೆಲ್ಲೆಡೆ ಗುಬ್ಬಚ್ಚಿಗಳ ಕಲರವ ಕೇಳಬೇಕು ಎನ್ನುವುದೊಂದೇ ನನ್ನಾಸೆ' ಎಂದರು.

'ಗುಬ್ಬಿಯನ್ನು ಹಿಡಿದು ತರಬಾರದು. ಗೂಡು ಕಟ್ಟಲು ಬೇಕಾದ ಜಾಗ ಕಲ್ಪಿಸಿದಾಗ ತಾವಾಗಿಯೇ ಬರುತ್ತವೆ' ಎಂದು ನುಡಿಯುತ್ತಾರೆ.

ಪಕ್ಷಿಗಳ ನೀರಿಗಾಗಿ ಬೊಂಬಿನ ಬಟ್ಟಲು

ಬೇಸಿಗೆಯಲ್ಲಿ ಉಷ್ಣಾಂಶ ಏರುತ್ತಿರುವ ಈ ಸಮಯದಲ್ಲಿ ಕೋಕಿಲಾ, ಜೀವ್‌ದಯಾ ಜೈನ್ ಚಾರಿಟಿ ಸಂಘಟನೆಯೊಂದಿಗೆ ಕೈಜೋಡಿಸಿ ಬೊಂಬಿನಿಂದ ಮಾಡಿದ ಬಟ್ಟಲುಗಳನ್ನು ಮೈಸೂರಿನ ಎಂ.ಜಿ.ರಸ್ತೆ ಹಾಗೂ ಸುತ್ತಲಿನ ಉದ್ಯಾನಗಳ ಮರಗಳಿಗೆ ತಂತಿಯಿಂದ ಕಟ್ಟಿದ್ದಾರೆ. ನಿತ್ಯ ನೀರು ಹಾಕಿ ಪಕ್ಷಿಗಳು, ಅಳಿಲುಗಳ ದಾಹ ತಣಿಸಬೇಕು ಎಂದು ವಾಯುವಿಹಾರಿಗಳಲ್ಲಿ ಮನವಿ ಮಾಡಿದ್ದಾರೆ.

ದಿನವಿಡೀ ಜಾಗೃತಿ ಇಂದು

ವಿಶ್ವ ಗುಬ್ಬಚ್ಚಿ ದಿನದ ಅಂಗವಾಗಿ ಮಾರ್ಚ್ 20ರಂದು ಕೋಕಿಲಾ, ಪೀಪಲ್ಸ್ ಫಾರ್ ಎನಿಮಲ್ಸ್ ಸಂಸ್ಥೆಯ ಜತೆ ಸೇರಿ ದಿನವಿಡೀ ಗುಬ್ಬಚ್ಚಿ ಉಳಿಸುವ ಅಭಿಯಾನ ಕೈಗೊಳ್ಳಲಿದ್ದಾರೆ.

ಕಾರಂಜಿ ಕೆರೆಯ ವಾಹನ ನಿಲುಗಡೆ ತಾಣದ ಬಳಿ ಬೆಳಿಗ್ಗೆ 10 ಗಂಟೆಗೆ, ಎಂಆರ್‌ಸಿ ಕಣ್ಣಿನ ಆಸ್ಪತ್ರೆ ಬಳಿ ಸಂಜೆ 4 ಗಂಟೆಗೆ ಜಾಗೃತಿ ಮೂಡಿಸಲಿದ್ದಾರೆ. ಜತೆಗೆ, ಪರಿಸರ ಉಳಿವಿಗಾಗಿ ಹೋರಾಡುವ ಸಂಘಟನೆಗಳಿಗೆ ಉಚಿತವಾಗಿ ಬೊಂಬಿನ ಬಟ್ಟಲು ವಿತರಿಸಲಿದ್ದಾರೆ.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಸ್ವಾತಂತ್ರ್ಯೋತ್ತರ ಭಾರತ ಕಾಶ್ಮೀರದ ಪಂಡಿತರದ್ದಷ್ಟೇ ಅಲ್ಲ, ದಲಿತರು, ದಮನಿತರ ನರಮೇಧಗಳಿಗೂ ಸಾಕ್ಷಿಯಾಗಿದೆ. ಅಂತಹ ದುರಂತ ಘಟನೆಗಳ ಮೇಲೊಂದು ಹೊರಳುನೋಟ

ಆಘಾಡಿಗೆ ಒವೈಸಿ ಪಕ್ಷ: ಪ್ರಸ್ತಾವ ತಿರಸ್ಕಾರ 6

ಆರು ಒಪ್ಪಂದಗಳಿಗೆ ಜಪಾನ್–ಭಾರತ ಸಹಿ

‘ಗಂಗಾ ಕಲ್ಯಾಣದಲ್ಲಿ ₹ 130 ಕೋಟಿ ಅಕ್ರಮ’ 5

‘ಭಾರತದಲ್ಲಿ ₹3.2 ಲಕ್ಷ ಕೋಟಿ ಹೂಡಿಕೆ’ 7



ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್: ಫೈನಲ್‌ಗೆ ಲಕ್ಷ್ಯ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್ ಫೈನಲ್‌ಗೆ ಲಗ್ಗೆಯಿಟ್ಟರು. 7

ಬಸ್ ಪಲ್ಟಿ: ಆರು ಮಂದಿ ಸಾವು

ಪಾವಗಡ (ತುಮಕೂರು): ತಾಲ್ಲೂಕಿನ ಪಳವಳ್ಳಿ ಕಟ್ಟೆ ಬಳಿ ಶನಿವಾರ ಬೆಳಿಗ್ಗೆ ಚಾಲಕನ ನಿಯಂತ್ರಣ ತಪ್ಪಿ ಖಾಸಗಿ ಬಸ್ ಉರುಳಿ ಬಿದ್ದು ಮೂವರು ವಿದ್ಯಾರ್ಥಿಗಳು ಸೇರಿದಂತೆ ಆರು ಜನರು ಮೃತಪಟ್ಟಿದ್ದಾರೆ. 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಾತ್ರಿ ವಿದ್ಯುತ್; ಕೃಷಿಗೆ ಕಂಟಕ

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ವೇಳೆ 7 ತಾಸು ತಡೆರಹಿತ ವಿದ್ಯುತ್ ಸರಬರಾಜು ಮಾಡಲು ಸರ್ಕಾರದ ಸೂಚನೆ ಇದ್ದರೂ, ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಆದೇಶ ಅನುಷ್ಠಾನ ಸಾಧ್ಯವಾಗಿಲ್ಲ. ಇದರಿಂದ ಲಕ್ಷಾಂತರ ಹೆಕ್ಟೇರ್ ತೋಟಗಳು, ಕೃಷಿ ಬೆಳೆಗಳು ಒಣಗುತ್ತಿವೆ. ವಿದ್ಯುತ್‌ಗಾಗಿ ಹಗಲು–ರಾತ್ರಿ ಕಾಯುತ್ತಾ ನಿದ್ದೆಗೆಡುತ್ತಿರುವ ರೈತರು ಹೈರಾಣಾಗಿದ್ದಾರೆ.

ರಾಜ್ಯದಲ್ಲಿರುವ 191 ಲಕ್ಷ ಹೆಕ್ಟೇರ್ ಭೂಪ್ರದೇಶದಲ್ಲಿ ಶೇ 65ರಷ್ಟು ಕೃಷಿ ಜಮೀನಿದೆ. ಮಳೆ ಆಶ್ರಿತ ಒಣಭೂಮಿ ರೈತರು ಬಾವಿ, ಬೋರ್‌ವೆಲ್‌ಗಳ ಮೂಲಕ ನೀರಿನ ವ್ಯವಸ್ಥೆ ಮಾಡಿಕೊಂಡು ತೋಟಗಳು, ಇತರೆ ಕೃಷಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ರಾಜ್ಯದಲ್ಲಿ ಅಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದ ನಾಲ್ಕು ಲಕ್ಷಕ್ಕೂ ಹೆಚ್ಚು ಪಂಪ್‌ಸೆಟ್‌ಗಳಿವೆ. ಬಹುತೇಕ ಜಿಲ್ಲೆಗಳಲ್ಲಿ ಈ ಪಂಪ್‌ಸೆಟ್‌ಗಳಿಗೆ ಎರಡು, ಮೂರು ತಾಸು ತ್ರೀಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ರಾತ್ರಿ ಸಮಯದಲ್ಲೇ ಹೆಚ್ಚಾಗಿ ವಿದ್ಯುತ್ ನೀಡುವ ಕಾರಣ ರೈತರು ನಿದ್ದೆಗೆಟ್ಟು ಜಮೀನುಗಳಿಗೆ ನೀರು ಹರಿಸಬೇಕಿದೆ. ರಾತ್ರಿ ವೇಳೆ ಹೊಲ, ತೋಟಗಳಿಗೆ ಹೋದ ಹಲವು ರೈತರು ವಿಷಜಂತುಗಳ ಕಡಿತಕ್ಕೆ ಒಳಗಾಗಿ ಜೀವ ಕಳೆದುಕೊಂಡಿರುವ ನಿದರ್ಶನಗಳಿವೆ.

ಹೊಸ ತಂತ್ರಜ್ಞಾನಕ್ಕೆ ಬದಲಾಗದ ನಿಗಮಗಳು: ಇಂದಿಗೂ ವಿದ್ಯುತ್ ಸರಬರಾಜು ವಿಧಾನ ಹಳೆಯ ವ್ಯವಸ್ಥೆಯಲ್ಲೇ ಇದೆ. ಅಗತ್ಯ ಇರುವಷ್ಟು ವಿದ್ಯುತ್ ಪರಿವರ್ತಕ ಕೇಂದ್ರಗಳು ಇಲ್ಲ. ವಿದ್ಯುತ್ ಸರಬರಾಜು ಮಾರ್ಗಗಳು ಉನ್ನತೀಕರಣಗೊಂಡಿಲ್ಲ. ಆಯಾ ಸ್ಥಳಗಳಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯುತ್ ಪಡೆ ಸಾಧನಗಳು, ಮಾರ್ಗ ಬದಲಾವಣೆಯ ಸಾಮಗ್ರಿಗಳನ್ನು ಅಳವಡಿಸಿಲ್ಲ. ಒಂದು ಮಾರ್ಗದಲ್ಲಿ ವಿದ್ಯುತ್ ಸಮಸ್ಯೆ ತಲೆ ತೋರಿದರೆ ಇಂದಿಗೂ 20ಕ್ಕೂ ಹೆಚ್ಚು ಹಳ್ಳಿಗಳ ವ್ಯಾಪ್ತಿಯ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ. ಹಳೆಯ ಕಾಲದ ವೈರ್‌ಗಳಲ್ಲೇ ಸರಬರಾಜು ಸಾಗಿದೆ.

ಒಳನೋಟ

ಹಗಲಲ್ಲಿ ಕೃಷಿಗೆ ವಿದ್ಯುತ್ ಇಲ್ಲ

ಪ್ರತಿಕ್ರಿಯಿಸಿ: 9606038256

feedback@prajavani.co.in



ರಾಜ್ಯದಲ್ಲಿ ಹಲವು ಮೂಲಗಳಿಂದ ಸಾಕಷ್ಟು ವಿದ್ಯುತ್ ಉತ್ಪಾದನೆ ಆದರೂ ಲಾಭದಾಯಕವಲ್ಲ ಎನ್ನುವ ಕಾರಣಕ್ಕೆ ಕೃಷಿ ಕ್ಷೇತ್ರ ಕಡೆಗಣಿಸಲಾಗಿದೆ. ಮಧ್ಯರಾತ್ರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಡುವುದರಿಂದ ರೈತರ ಪ್ರಾಣಕ್ಕೆ ಅಪಾಯ. ಸರ್ಕಾರ ತಕ್ಷಣ ಸ್ಪಂದಿಸಬೇಕು.

ಎಚ್.ಆರ್.ಬಸವರಾಜಪ್ಪ, ಗೌರವಾಧ್ಯಕ್ಷರು, ರಾಜ್ಯ ರೈತ ಸಂಘ.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ತುಂಗಾ ನದಿಯಲ್ಲಿ ಅಳವಡಿಸಿರುವ ತ್ರೀಪೇಸ್ ಸಾಮರ್ಥ್ಯದ ಮೋಟರ್

ಉಚಿತ ವಿದ್ಯುತ್ ಎಂಬ ರಾಜಕೀಯ ಪ್ರಹಸನ

ರಾಜ್ಯದಲ್ಲಿ ಆಳ್ವಿಕೆ ನಡೆಸಿದ ಬಹುತೇಕ ಸರ್ಕಾರಗಳು ರೈತರ ಓಲೈಕೆಗಾಗಿ ಹಲವು ಜನಪ್ರಿಯ ಯೋಜನೆಗಳನ್ನು ಜಾರಿಗೆ ತಂದಿವೆ. ಅವುಗಳಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪ್ರಹಸನವೂ ಒಂದು.

ಒಣಭೂಮಿ ಕೃಷಿಯಲ್ಲಿ ಕೃಷಿ ಪಂಪ್‌ಸೆಟ್‌ಗಳ ಬಳಕೆ ಕಡಿಮೆ ಇದ್ದ ಕಾಲದಲ್ಲಿ ವಿದ್ಯುತ್ ಕಳವು ಪ್ರಕರಣಗಳು ವರದಿಯಾಗುತ್ತಿದ್ದವು. ವಿದ್ಯುತ್ ಕಳವು ಪ್ರಕರಣಗಳಲ್ಲಿ ಕೃಷಿಗಾಗಿ ಮಾಡುತ್ತಿದ್ದ ಕಳವು ಶೇ 24ರಷ್ಟಿತ್ತು. 1980ರಲ್ಲಿ ಆರ್. ಗುಂಡೂರಾವ್ ಅವರು ಮುಖ್ಯಮಂತ್ರಿಯಾದ ನಂತರ ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಘೋಷಿಸಿದರು. 1998ರಲ್ಲಿ ಅಳವಡಿಸಿದ್ದ ಲಕ್ಷಾಂತರ ಮೀಟರ್‌ಗಳನ್ನು ಕಿತ್ತು ಕೆಇಬಿಗೆ ಹಿಂದಿರುಗಿಸಲಾಗಿತ್ತು. ಅಂದು 5 ಸಾವಿರಕ್ಕೂ ಹೆಚ್ಚು ರೈತರ ಮೇಲೆ ಪ್ರಕರಣ ದಾಖಲಿಸಲಾಗಿತ್ತು. ನಂತರ 1990–92ರಲ್ಲಿ ಎಸ್.ಬಂಗಾರಪ್ಪ ಅವರು 10 ಎಚ್‌ಪಿವರೆಗೂ ಉಚಿತ ವಿದ್ಯುತ್ ನೀಡಿದರು. ಜೆ.ಎಚ್.ಪಟೇಲ್, ಕುಮಾರಸ್ವಾಮಿ, ಯಡಿಯೂರಪ್ಪ, ಸಿದ್ದರಾಮಯ್ಯ ಅವರೂ ಯೋಜನೆ ಮುಂದುವರಿಸಿದರು.

ವಿದ್ಯುತ್ ಕಾಯ್ದೆಗೆ ತಿದ್ದುಪಡಿ ಪ್ರಸ್ತಾವ ಸದ್ಯ ಸಂಸತ್‌ನಲ್ಲಿದೆ. ತಿದ್ದುಪಡಿ ತಂದರೆ ಕೃಷಿ ಪಂಪ್‌ಸೆಟ್‌ಗಳಿಗೂ ಸ್ಮಾರ್ಟ್ ಮೀಟರ್ ಅಳವಡಿಸಲು ಅವಕಾಶ ದೊರೆಯಲಿದೆ. ದೇಶದಾದ್ಯಂತ ರೈತರು ತಿದ್ದುಪಡಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಇದು ವಿದ್ಯುತ್ ಖಾಸಗೀಕರಣದ ಹುನ್ನಾರ ಎಂದು ರೈತರು ದೂರಿದ್ದಾರೆ.

‘ಲೋಪಕ್ಕೆ ಹೊಣೆಗಾರಿಕೆ ನಿಗದಿ’

‘ರೈತರ ಪಂಪ್ ಸೆಟ್ ಗಳಿಗೆ ತ್ರಿಫೇಸ್ ವಿದ್ಯುತ್ ನೀಡಿಕೆ ವಿಚಾರಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಅಧಿಕಾರಿಗಳ ಜತೆಗೆ ಚರ್ಚೆ ನಡೆಸಲಾಗಿದ್ದು, ಲೋಪಕ್ಕೆ ಹೊಣೆಗಾರಿಕೆ ನಿಗದಿ ಮಾಡಿದ್ದೇವೆ. ಬೇಸಿಗೆಯಲ್ಲಿ ಮೂರು ತಿಂಗಳು ಕಾಲ ರೈತರಿಗೆ ವಿದ್ಯುತ್ ಪೂರೈಕೆಯಲ್ಲಿ ಯಾವುದೇ ತೊಂದರೆಯಾಗಬಾರದೆಂಬುದು ನಮ್ಮ ಸರಕಾರದ ಆಶಯ. ತಾಂತ್ರಿಕ ದೋಷಗಳಿಂದ ಕೆಲವೆಡೆ ಕಂಡು ಬರುತ್ತಿರುವ



ದೋಷಗಳನ್ನು ಸರಿಪಡಿಸುವುದಕ್ಕೆ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು’ ಎಂದು ಇಂಧನ ಸಚಿವ ವಿ.ಸುನೀಲ್ ಕುಮಾರ್ ಹೇಳಿದ್ದಾರೆ.

ವಿದ್ಯುತ್ ಪರಿವರ್ತಕಗಳ ಬದಲಾವಣೆಯಲ್ಲಿ ಅಧಿಕಾರಿಗಳು ಲಂಚದ ಬೇಡಿಕೆ ಇಟ್ಟರೆ ಅದನ್ನು ಯಾವುದೇ ಕಾರಣಕ್ಕೂ ಸಹಿಸುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನೆ

ಪಠ್ಯದಲ್ಲಿ ಭಗವದ್ಗೀತೆ: ತಪ್ಪೇನು?

ಪ್ರಜಾವಾಣಿ ವಾರ್ತೆ

ಯಾದಗಿರಿ: ‘ಶಾಲಾ ಪಠ್ಯದಲ್ಲಿ ಭಗವದ್ಗೀತೆ ಅಳವಡಿಸಿದರೆ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಹೆಚ್ಚಿ, ನೈತಿಕತೆ ಬೆಳೆಯುತ್ತದೆ. ಗುಜರಾತ್ ರಾಜ್ಯದಂತೆ ನಮ್ಮಲ್ಲಿಯೂ ಭಗವದ್ಗೀತೆ ಬೋಧಿಸಿದರೆ ತಪ್ಪೇನಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.



‘ಗುಜರಾತ್‌ನ ಪಠ್ಯದಲ್ಲಿ ಭಗವದ್ಗೀತೆ ಅಳವಡಿಸಲಾಗಿದೆ. ಭಗವದ್ಗೀತೆ ಬೋಧನೆಯಿಂದ ಮಕ್ಕಳಿಗೆ ಅನುಕೂಲವಾಗಲಿದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಅವರಲ್ಲಿ ನೈತಿಕತೆ ಬೆಳೆಸುವ ಅಗತ್ಯವಿದೆ. ಹೀಗಾಗಿಯೇ ಈ ವಿಚಾರದಲ್ಲಿ ಅನಗತ್ಯವಾಗಿ ಗೊಂದಲ ಉಂಟು ಮಾಡಬಾರದು’ ಎಂದು ಸುರಪುರ ತಾಲ್ಲೂಕಿನ ದೇವತ್ಕಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು.

‘ಕರ್ನಾಟಕದ ಶಾಲಾ ಪಠ್ಯದಲ್ಲಿಯೂ ಭಗವದ್ಗೀತೆ ಅಳವಡಿಸಲು ಶಿಕ್ಷಣ ಇಲಾಖೆ ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿದೆ. ಇಲಾಖೆ ಮೊದಲು ವರದಿ ನೀಡಲಿ. ನಾನು ಸೂಕ್ತ ನಿರ್ಧಾರ ಕೈಗೊಳ್ಳುತ್ತೇನೆ’ ಎಂದ ಅವರು, ‘ಮಕ್ಕಳ ವ್ಯಕ್ತಿತ್ವ ವಿಕಸನವೇ ಸರ್ಕಾರದ ಮುಖ್ಯ ಗುರಿ. ಆ ನಿಟ್ಟಿನಲ್ಲಿ ಸೂಕ್ತ ಹೆಜ್ಜೆ ಇಡುತ್ತೇವೆ’ ಎಂದರು.

‘ಭಗವದ್ಗೀತೆ ಅಳವಡಿಸಿದರೆ ಮಾತ್ರ ಮಕ್ಕಳಲ್ಲಿ ನೈತಿಕತೆ ಬೆಳೆಯುತ್ತದೆಯೇ? ಈಗ ನೈತಿಕ ಶಿಕ್ಷಣ ಸಿಗುತ್ತಿಲ್ಲವೇ’ ಎಂಬ ಪ್ರಶ್ನೆಗೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗರಂ ಆದ ಪ್ರಸಂಗ ನಡೆಯಿತು.

‘ಗುಣಮಟ್ಟದ ಶಿಕ್ಷಣ ನೀಡಲಿ’

ಮಂಗಳೂರು: ‘ಭಗವದ್ಗೀತೆಯ ವಿರೋಧಿ ನಾನಲ್ಲ. ಭಗವದ್ಗೀತೆ, ಕುರಾನ್, ಬೈಬಲ್ ಯಾವುದನ್ನು ಬೇಕಾದರೂ ಶಾಲೆಯಲ್ಲಿ ಹೇಳಿಕೊಡಲಿ. ಆದರೆ ಮಕ್ಕಳಿಗೆ ನೈತಿಕ ಮತ್ತು ಗುಣಮಟ್ಟದ ಶಿಕ್ಷಣ ಸಿಗಬೇಕು. ಸಂವಿಧಾನದ ವಿರುದ್ಧವಾಗಿ ನಡೆದುಕೊಳ್ಳುವ ಶಿಕ್ಷಣ ನೀಡಬಾರದು’ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಮ್ಮಲ್ಲಿ ಸಾಫ್ಟ್ ಅಥವಾ ಹಾರ್ಡ್ ಹಿಂದುತ್ವ ಎಂಬುದಿಲ್ಲ. ನಾವು ಹಿಂದೂ ಧರ್ಮದಲ್ಲಿ ನಂಬಿಕೆ ಇಟ್ಟವರು. ಸಂವಿಧಾನ ಎಲ್ಲ ಧರ್ಮಗಳಿಗೆ ಸಮಾನ ಗೌರವ ನೀಡಿದೆ. ಸಂವಿಧಾನದ ಪ್ರಕಾರವೇ ನಾವು ನಡೆದುಕೊಳ್ಳುತ್ತೇವೆ’ ಎಂದರು.

ಹಿಜಾಬ್: ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ವಿಚಾರವಾಗಿ ತೀರ್ಪು ನೀಡಿರುವ ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆ ಹಾಕಿದ ಆರೋಪದ ಮೇಲೆ ತಮಿಳುನಾಡಿನ ಮುಸ್ಲಿಂ ಮುಖಂಡರೊಬ್ಬರ ವಿರುದ್ಧ ಇಲ್ಲಿನ ವಿಧಾನಸೌಧ ಠಾಣೆಯಲ್ಲಿ ಶನಿವಾರ ಎಫ್‌ಐಆರ್ ದಾಖಲಾಗಿದೆ.

‘ವಕೀಲರಾದ ಸುಧಾ ದೂರು ನೀಡಿದ್ದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ತಮಿಳುನಾಡಿನ ‘ತೌಹೀದ್ ಜಮಾತ್ (ಟಿ.ಎನ್.ಟಿ.ಜೆ)’ ಎಂಬ ಮುಸ್ಲಿಂ ಸಂಘಟನೆ ಮುಖಂಡ ಆರ್. ರಹಮತ್–ಉಲ್ಲಾ ಮಾರ್ಚ್ 17ರಂದು ಮಧುರೈನಲ್ಲಿ ನಡೆದ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆಯೊಡ್ಡಿ ಭಾಷಣ ಮಾಡಿದ್ದರು. ಅದೇ ವಿಡಿಯೊವನ್ನು ಪ್ರಕರಣದ ಪುರಾವೆಯನ್ನಾಗಿ ಪರಿಗಣಿಸಲಾಗಿದೆ’ ಎಂದೂ ತಿಳಿಸಿದರು.

‘ತಮಿಳು ಭಾಷೆಯಲ್ಲಿ ಮಾತನಾಡಿದ್ದ ರಹಮತ್–ಉಲ್ಲಾ, ‘ಹಿಜಾಬ್ ತೀರ್ಪಿನ ಕಾರಣಕ್ಕಾಗಿ ನ್ಯಾಯಮೂರ್ತಿಗಳ ಕೊಲೆಯಾದರೆ, ಅವರ ಸಾವಿಗೆ ಅವರೇ ಕಾರಣರಾಗುತ್ತಾರೆ. ನರೇಂದ್ರ ಮೋದಿ, ಅಮಿತ್ ಶಾ, ಯೋಗಿ ಆದಿತ್ಯನಾಥ ಯಾರೇ ಬಂದರೂ ನಾವು ಹೆದರುವುದಿಲ್ಲ. ಅಲ್ಲಾಹುಗೆ ಮಾತ್ರ ಹೆದರುವುದು. ನಮ್ಮ ತಾಳ್ಮೆ ಪರೀಕ್ಷಿಸಬೇಡಿ. ತಾಳ್ಮೆ ಕಳೆದುಕೊಂಡರೆ ನೀವು ಉಳಿಯುವುದಿಲ್ಲ’ ಎಂದಿದ್ದಾನೆ’ ಎಂದು ಪೊಲೀಸ್ ಅಧಿಕಾರಿ ವಿವರಿಸಿದರು.

ತಮಿಳುನಾಡು ಪೊಲೀಸರಿಗೆ ಮಾಹಿತಿ: ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ನಗರ ಪೊಲೀಸರು, ತಮಿಳುನಾಡು ಪೊಲೀಸರನ್ನು ಸಂಪರ್ಕಿಸಿ ಮಾಹಿತಿ ಹಂಚಿಕೊಂಡಿದ್ದಾರೆ.

‘ಮಧುರೈನಲ್ಲಿ ನಡೆದಿರುವ ಸಮಾವೇಶದ ಭಾಷಣದ ವಿಡಿಯೊ ಎಲ್ಲೆಡೆ ಹರಿದಾಡುತ್ತಿದೆ. ಈ ಬಗ್ಗೆ ಹೈಕೋರ್ಟ್‌ನ ಅಧಿಕಾರಿಗಳು ಸಹ ಗಮನಕ್ಕೆ ತಂದಿದ್ದಾರೆ. ಮುಂದಿನ ಕ್ರಮದ ಬಗ್ಗೆ ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಲಾಗುತ್ತಿದೆ’ ಎಂದು ಅಧಿಕಾರಿ ಹೇಳಿದರು.

ಸೃಜನಾತ್ಮಕ ದೃಶ್ಯೀಕರಣ. ಹಾರ್ಲಿಕ್ಸ್ ದೈನಂದಿನ ಆಹಾರದ ಭಾಗವಾಗಿ ಸೇವಿಸಬೇಕಾದ ಪೌಷ್ಟಿಕ ಪಾನೀಯವಾಗಿದೆ.

ಪ್ರಾಧ್ಯಾಪಕರ ನೇಮಕ ಪರೀಕ್ಷೆ ದೋಷಗಳದ್ದೇ ‘ವೈಭವ’

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಯ ಕನ್ನಡ ವಿಷಯದ ಪ್ರಶ್ನೆಪತ್ರಿಕೆಯಲ್ಲಿ ಕವಿ ಕೆ.ಎಸ್.ನರಸಿಂಹಸ್ವಾಮಿ ಅವರ ಹೆಸರನ್ನು ‘ನರಸಿಂಹವರ್ಮ’, ವಿಮರ್ಶಕ ಓ.ಎಲ್.ನಾಗಭೂಷಣ ಸ್ವಾಮಿ ಅವರ ‘ವಿಮರ್ಶೆಯ ಪರಿಭಾಷೆ’ ಪುಸ್ತಕವನ್ನು ‘ನರಿಭಾಷೆ’ ಎಂದು ಉಲ್ಲೇಖಿಸಿದ ಪ್ರಮಾದ ನಡೆದಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮಾರ್ಚ್ 12ರಿಂದ ಈ ಪರೀಕ್ಷೆ ನಡೆಸಿತ್ತು. ಕನ್ನಡವನ್ನೇ ಅಪಹಾಸ್ಯಕ್ಕೆ ಗುರಿ ಮಾಡುವಂತಹ ತಪ್ಪುಗಳು, ಲೇಖಕರ ಹೆಸರಿನ ತಿರುಚುವಿಕೆ ಹಾಗೂ ಕೆಲವು ಕವಿತೆಗಳ ಶೀರ್ಷಿಕೆಗಳನ್ನೇ ಬದಲಿಸಲಾಗಿದೆ. ಅಕ್ಷರದೋಷಗಳಂತೂ ಪ್ರಾಧಿಕಾರವನ್ನು ನಗೆಪಾಟಲಿಗೆ ದೂಡುವಂತಹ ಸ್ಥಿತಿಗೆ ತಂದೊಡ್ಡಿವೆ ಎಂದು ಅಭ್ಯರ್ಥಿಗಳು ಹಂಗಿಸಿದ್ದಾರೆ.

ಉದಾಹರಣೆಗೆ ‘ಎ4’ ಸರಣಿಯ ಪ್ರಶ್ನೆಪತ್ರಿಕೆಯಲ್ಲಿ ಎಚ್.ಎಲ್.ನಾಗೇಗೌಡರ ‘ಪದವವೆ ನಮ್ಮ ಎದೆಯಲ್ಲಿ’ ಕೃತಿ ಹೆಸರನ್ನು ‘ಪದವಿವೆ ನನ್ನ ಎದೆಯಲ್ಲಿ’ ಎಂದು ಮಾಡಲಾಗಿದೆ.

‘ಪ್ರಶ್ನೆ ಸಂಖ್ಯೆ 18ರಲ್ಲಿ ನೀಡಿರುವ ಆಯ್ಕೆಗಳಲ್ಲಿ ‘ವಿಮರ್ಶೆಯ ನರಿಭಾಷೆ’ ಎಂದಾಗಿದೆ. ‘ನರಿಭಾಷೆಯ ಶೀರ್ಷಿಕೆಯುಳ್ಳ ಪುಸ್ತಕವನ್ನು ಪರಿಚಯಿಸಿದ್ದಕ್ಕೆ ಪ್ರಾಧಿಕಾರಕ್ಕೆ ಧನ್ಯವಾದಗಳು’ ಎಂದು ವ್ಯಂಗ್ಯವಾಡಿರುವ ಶಿವಮೊಗ್ಗ ಜಿಲ್ಲೆಯ ಸಿದ್ದಿಪುರದ ಡಾ. ಎಂ.ರವಿ,‘ ಪ್ರಾಧಿಕಾರವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ದೆಹಲಿಯ ಜೆಎನ್‌ಯು ಕನ್ನಡ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪುರುಷೋತ್ತಮ ಬಿಳಿಮಲೆ ಅವರು ತಮ್ಮ ಫೇಸ್‌ಬುಕ್ ಪುಟದಲ್ಲಿ ಪ್ರಶ್ನೆಪತ್ರಿಕೆಯಲ್ಲಿನ ತಪ್ಪುಗಳನ್ನು ಪ್ರಶ್ನಿಸಿದ್ದಾರೆ.

‘ವಿಮರ್ಶೆಯ ನರಿಭಾಷೆ ಅಂತ ಇದೆ. ಹೀಗೊಂದು ಪುಸ್ತಕ ಬಂದಿದೆಯಾ? (ಓಎಲ್‌ಎನ್ ಅವರ ವಿಮರ್ಶೆಯ ಪರಿಭಾಷೆ ನನ್ನಲ್ಲಿದೆ). ಹಾಗೆಯೇ ಇನ್ನೊಂದು ಪ್ರಶ್ನೆಯಲ್ಲಿ ಕೆ.ಎಸ್.ನರಸಿಂಹವರ್ಮ ಅಂತಿದೆ. ಆದರೆ, ಇದು ಕೆ.ಎಸ್. ನರಸಿಂಹ ಸ್ವಾಮಿ ಆಗಬೇಕು ತಾನೇ? ಪರೀಕ್ಷೆ ನಡೆಸುವವರೇ ಹೀಗಾದರೆ ಉಳಿದವರ ಪಾಡೇನು’ ಎಂದು ಬರೆದಿದ್ದಾರೆ.

ಕನ್ನಡ ಹೊರತುಪಡಿಸಿ ಯಾವುದೇ ವಿಷಯಗಳ ಬಗ್ಗೆ ದೂರುಗಳು ಬಂದಿಲ್ಲ. ವ್ಯವಸ್ಥಿತವಾಗಿ ಪರೀಕ್ಷೆ ನಡೆಸಲಾಗಿದೆ. ಕನ್ನಡ ಪ್ರಶ್ನೆಪತ್ರಿಕೆ ಬಗ್ಗೆ ಪರಿಶೀಲಿಸಲಾಗುವುದು. ಯಾವ ಸರಣಿಯ ಪ್ರಶ್ನೆಪತ್ರಿಕೆಯಲ್ಲಿ ಎಷ್ಟು ಪ್ರಮಾಣದಲ್ಲಿ ದೋಷಗಳಿವೆ ಎನ್ನುವುದನ್ನು ಪರಿಶೀಲಿಸಲಾಗುವುದು.

ಎಸ್. ರಮ್ಯಾ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ

ದೋಷಗಳ ಸರಮಾಲೆ

- ಪ್ರಶ್ನೆ ಸಂಖ್ಯೆ 19ರಲ್ಲಿ ಕೆ.ವಿ. ತಿರುಮಲೇಶ ಅವರ ವಿಮರ್ಶಾ ಕೃತಿ ‘ಸಮ್ಮುಖ’, ‘ಸರ್ಮುಖ’ ಎಂದಾಗಿದೆ.
- ‘ಚಾವುಂಡರಾಯ ಪುರಾಣ’ವನ್ನು ಪ್ರಶ್ನೆ ಸಂಖ್ಯೆ 53ರಲ್ಲಿ ‘ಚಾಮುಂಡ ರಾಯ ಪುರಾಣ’ ಎಂದು ಉಲ್ಲೇಖಿಸಲಾಗಿದೆ.
- ಪ್ರಶ್ನೆ ಸಂಖ್ಯೆ 63ರಲ್ಲಿ ಕವಿ ಕೆ.ಎಸ್. ನಿಸಾರ್ ಅಹಮ್ಮದ್ ಹೆಸರನ್ನು ಕೆ.ಸ್.ನಿಸಾರ್ ಅಹಮ್ಮದ್ ಎಂದು ಬರೆಯಲಾಗಿದೆ.
- ಪ್ರಶ್ನೆ ಸಂಖ್ಯೆ 121ರಲ್ಲಿ ಜಾನಪದ ಸಂಶೋಧಕ ಜೀ.ಶಂ. ಪರಮಶಿವಯ್ಯನವರ ಹೆಸರು ‘ಜೀ.ಕಂ. ಪರಮಶಿವಯ್ಯ’ ಎಂದಾಗಿದೆ.
- ಪ್ರಶ್ನೆ ಸಂಖ್ಯೆ 74ರಲ್ಲಿ ರಾಘವೇಂದ್ರ ಖಾಸನೀಸ ಬದಲು ನಾಘವೇಂದ್ರ ಖಾಸನೀಸ್ ಎಂದಾಗಿದೆ.

ಪ್ರಜಾವಾಣಿ ವಿಶೇಷ

ಕೈವಾರ ಯೋಗಿ ನಾರೇಯಣ ಗುರುಗಳ ಜಯಂತಿ ಕಾರ್ಯಕ್ರಮದಲ್ಲಿ ಕರ್ನಾಟಕ ಬಲಿಜ ಸಂಘದ ಸಹಕಾರ್ಯದರ್ಶಿ ಕೆ.ಅಂಜಿನಪ್ಪ, ಮುಖಂಡರಾದ ದೊಡ್ಡವೆಂಕಟಪ್ಪ, ರಾಮಚಂದ್ರಪ್ಪ, ಡಿ.ಸುಬ್ಬರಾಯಪ್ಪ, ಆರ್ ಶ್ರೀನಿವಾಸ್, ಎಸ್. ಎಲ್.ಎನ್. ಗೋವಿಂದರಾಜು ಇದ್ದರು

'ಬಲಿಜ ಜನಾಂಗಕ್ಕೆ 2ಎ ಮೀಸಲಾತಿ ಕಲ್ಪಿಸಿ'

ಕೆ.ಆರ್.ಪುರ: ಬಲಿಜ ಜನಾಂಗಕ್ಕೆ ಹಿಂದುಳಿದ ವರ್ಗಗಳ '2ಎ' ಪ್ರವರ್ಗದಡಿ ಮೀಸಲಾತಿ ಕಲ್ಪಿಸಬೇಕು ಎಂದು ಕರ್ನಾಟಕ ಬಲಿಜ ಸಂಘದ ಸಹಕಾರ್ಯದರ್ಶಿ ಕೆ. ಅಂಜಿನಪ್ಪ ಒತ್ತಾಯಿಸಿದರು.

ಕೆ.ಆರ್.ಪುರ ಸಮೀಪದ ರಾಂಪುರ ಗ್ರಾಮದಲ್ಲಿ ಆಯೋಜಿಸಿದ್ದ ಕೈವಾರ ಯೋಗಿ ನಾರೇಯಣ ಗುರುಗಳ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮೀಸಲಾತಿ ಮೂಲಕ ಸಮುದಾಯದ ಜನತೆಗೆ ಶಿಕ್ಷಣ ಮತ್ತು ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕು. ಇದರಿಂದ, ಮುಂದಿನ ಪೀಳಿಗೆಗೆ ಅನುಕೂಲ ಮಾಡಬೇಕು' ಎಂದು ಕೋರಿದರು.

'ಸಂಘಟನೆಯ ಕೊರತೆ ನೀಗಿಸಿಕೊಂಡು ಬಲಿಜ ಜನಾಂಗ ಒಕ್ಕೊರಲಿನ ಹೋರಾಟ ನಡೆಸುವ ಮೂಲಕ ಸರ್ಕಾರದಿಂದ ಅಗತ್ಯ ಸವಲತ್ತು ಪಡೆಯಬೇಕಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಬಲಿಜ ಸಂಘ ಹೋರಾಟದ ರೂಪುರೇಷೆಗಳನ್ನು ಚರ್ಚಿಸಲಿದೆ. 2ಎ ಪ್ರವರ್ಗದಲ್ಲಿದ್ದ ನಮ್ಮ ಜನಾಂಗವನ್ನು ಈ ಹಿಂದೆ 3ಎ ವರ್ಗಕ್ಕೆ ಸೇರಿಸಿದ್ದರಿಂದ ಸಾಮಾಜಿಕ ಬೆಳವಣಿಗೆಗೆ ಕುಂಠಿತವಾಗಿದೆ' ಎಂದು ಹೇಳಿದರು.

'ಹಿಂದುಳಿದ ವರ್ಗವಾಗಿ ಬಲಿಜ ಸಮುದಾಯ ಕೈವಾರ ತಾತಯ್ಯ ಅವರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ಬೆಳೆಯಬೇಕಿದೆ. ಎಲ್ಲ ಸಮುದಾಯಗಳೊಂದಿಗೆ ಬೆರೆತು ಬಾಳಬೇಕು' ಎಂದು ಕರೆ ನೀಡಿದರು.

ಬೆಂಗಳೂರು ವಿ.ವಿ ಕುಲಪತಿ ಹುದ್ದೆಗೆ ನೇಮಕ ರದ್ದುಗೊಳಿಸಿದ ಹೈಕೋರ್ಟ್

ರಾಜ್ಯಪಾಲರ ನಿರ್ದೇಶನಕ್ಕಾಗಿ ಕಾಯುತ್ತಿರುವೆ: ವೇಣುಗೋಪಾಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಪಾಲರ ನಿರ್ದೇಶನಕ್ಕಾಗಿ ಕಾಯುತ್ತಿದ್ದೇನೆ. ತಾಂತ್ರಿಕವಾಗಿ ಈಗ ನಾನು ಯಾವುದೇ ಅಧಿಕಾರ ಹೊಂದಿಲ್ಲ. ನಾನು ಏನೂ ತಪ್ಪು ಮಾಡಿಲ್ಲ. ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇನೆ...'

ವೇಣುಗೋಪಾಲ್

ಹೈಕೋರ್ಟ್ ವಿಭಾಗೀಯ ಪೀಠ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ನೇಮಕಗೊಂಡಿರುವುದನ್ನು ರದ್ದುಪಡಿಸಿರುವುದಕ್ಕೆ ಡಾ.ಕೆ.ಆರ್. ವೇಣುಗೋಪಾಲ್ ಅವರ ಪ್ರತಿಕ್ರಿಯೆ ಇದು.

'ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುತ್ತೇನೆ. ನ್ಯಾಯಾಲಯ ತಡೆಯಾಜ್ಞೆ ನೀಡಿದರೆ ಮುಂದುವರಿಯುತ್ತೇನೆ. ಇಲ್ಲದಿದ್ದರೆ ಇಲ್ಲ. ವಾಸ್ತವವಾಗಿ ರಾಜ್ಯಪಾಲರ ನೇಮಕಾತಿ ಆದೇಶವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಹೀಗಾಗಿ, ರಾಜ್ಯಪಾಲರ ಆದೇಶಕ್ಕಾಗಿ ಕಾಯುತ್ತಿದ್ದೇನೆ.

ತಕ್ಷಣವೇ ಅಧಿಕಾರ ತ್ಯಜಿಸಲಿ: ಸಿಂಡಿಕೇಟ್ ಸದಸ್ಯರ ಆಗ್ರಹ

'ಕುಲಪತಿ ಹುದ್ದೆಯಿಂದ ಡಾ.ಕೆ.ಆರ್. ವೇಣುಗೋಪಾಲ್ ತಕ್ಷಣವೇ ಅಧಿಕಾರ ತ್ಯಜಿಸಬೇಕು. ಇವರೇ ಅಧಿಕಾರದಲ್ಲಿ ಮುಂದುವರಿದರೆ ಸಂಪೂರ್ಣ ಆಡಳಿತ ಸ್ಥಗಿತವಾಗುತ್ತದೆ' ಎಂದು ಸಿಂಡಿಕೇಟ್ ಸದಸ್ಯ ಡಾ.ಎಚ್. ಸುಧಾಕರ್ ಒತ್ತಾಯಿಸಿದ್ದಾರೆ.

'ನೇಮಕಾತಿಯನ್ನೇ ನ್ಯಾಯಾಲಯ ರದ್ದುಪಡಿಸಿರುವಾಗ ರಾಜ್ಯಪಾಲರ ನಿರ್ದೇಶನಕ್ಕಾಗಿ ಕಾಯುವ ಅಗತ್ಯ ಇಲ್ಲ. ಇವರೇಕೆ ಅಲ್ಲಿ ಮುಂದುವರಿಯಬೇಕು. ನ್ಯಾಯಾಲಯದ ಆದೇಶವನ್ನೇ ಧಿಕ್ಕರಿಸಿದಂತೆ ಆಗುವುದಿಲ್ಲವೇ? ಎಲ್ಲರಿಗೂ ಮಾದರಿಯಾಗಬೇಕಾದವರು ಕಾನೂನು ಪಾಲಿಸದಿದ್ದರೆ ಹೇಗೆ' ಎಂದು ಪ್ರಶ್ನಿಸಿದ್ದಾರೆ.

ಹಿರಿಯ ಡೀನ್‌ಗೆ ಅಧಿಕಾರ

ರಾಜ್ಯಪಾಲರು ಒಂದು ವೇಳೆ ಕುಲಪತಿ ಹುದ್ದೆ ತ್ಯಜಿಸುವಂತೆ ನಿರ್ದೇಶನ ನೀಡಿದರೆ ವಿಶ್ವವಿದ್ಯಾಲಯದ ಹಿರಿಯ ಡೀನ್‌ಗೆ ಅಧಿಕಾರ ಹಸ್ತಾಂತರಿಸಬೇಕಾಗುತ್ತದೆ ಎಂದು ವಿಶ್ವವಿದ್ಯಾಲಯದ ಮೂಲಗಳು ತಿಳಿಸಿವೆ.

'ನೈತಿಕತೆ ಮತ್ತು ಕಾನೂನಾತ್ಮಕ ದೃಷ್ಟಿಯಿಂದಲೂ ವೇಣುಗೋಪಾಲ್ ಅವರು ಕುಲಪತಿ ಹುದ್ದೆಯಲ್ಲಿ ಮುಂದುವರಿಯಬಾರದು. ಹೈಕೋರ್ಟ್ ಆದೇಶ ಬಂದ ಮೇಲೆ ಒಂದು ಕ್ಷಣವೂ ಅಧಿಕಾರದಲ್ಲಿ ಇರಬಾರದಿತ್ತು. ರಜೆ ಮೇಲೆ ಹೋಗಬೇಕಾಗಿತ್ತು' ಎಂದು ಅಭಿಪ್ರಾಯ ಪಟ್ಟಿದ್ದಾರೆ.

ರಾಜ್ಯಪಾಲರು ಸೂಚಿಸುವ ವ್ಯಕ್ತಿಗೆ ಅಧಿಕಾರ ಹಸ್ತಾಂತರ ಮಾಡುತ್ತೇನೆ. ರಾಜ್ಯಪಾಲರು ಸದ್ಯಕ್ಕೆ ಬೆಂಗಳೂರಿನಲ್ಲಿ ಇಲ್ಲ. ಅವರು ಬಂದ ತಕ್ಷಣ ಭೇಟಿ ಮಾಡುತ್ತೇನೆ' ಎಂದರು.

'ವಿದ್ಯಾರ್ಥಿ ದೆಸೆಯಿಂದಲೂ ಇಲ್ಲಿಯವರೆಗೆ ಸುಮಾರು 48 ವರ್ಷಗಳ ಕಾಲ ವಿಶ್ವವಿದ್ಯಾಲಯದ ಜತೆ ಸಂಬಂಧ ಹೊಂದಿದ್ದೇನೆ. ಅರ್ಹತೆ ಆಧಾರದ ಮೇಲೆ ಈ ಹುದ್ದೆಗೆ ಬಂದಿದ್ದೇನೆ. ಈ ರೀತಿಯ ಕಷ್ಟಗಳನ್ನು ಜೀವನದಲ್ಲಿ ಹಲವು ಬಾರಿ ಎದುರಿಸಿದ್ದೇನೆ. ಕಷ್ಟಗಳು ಬಂದಾಗ ಒಳ್ಳೆಯ ವ್ಯಕ್ತಿಗಳೇ ನನಗೆ ಬೆಂಬಲ ನೀಡಿದ್ದಾರೆ. ನಾನು ಯಾರಿಗೂ ತೊಂದರೆ ಕೊಟ್ಟಿಲ್ಲ. ತೊಂದರೆ ಕೊಟ್ಟವರಿಗೂ ಒಳ್ಳೆಯದನ್ನೇ ಮಾಡಿದ್ದೇನೆ. ಪ್ರತಿಯೊಂದು ಹುದ್ದೆಯಲ್ಲಿದ್ದಾಗಲೂ ಸಂಕಷ್ಟಗಳು ಬಂದಿವೆ. ವಿವಿಧ ಹುದ್ದೆಗಳನ್ನು ನಿರ್ವಹಿಸಿದಾಗ ಹಲವು ಬಾರಿ ಅಮಾನತುಗೊಳಿಸಲಾಗಿದೆ. ಇಂತಹ ಹಲವಾರು ಸವಾಲುಗಳನ್ನು ಎದುರಿಸಿದ್ದೇನೆ' ಎಂದರು.

'ಹೈಕೋರ್ಟ್ ಆದೇಶದ ಬಳಿಕ ನಾನು ಯಾವುದೇ ಕಡತಕ್ಕೆ ಸಹಿ ಮಾಡಿಲ್ಲ. 40 ವರ್ಷಗಳಿಂದ ನಾನು ಯಾವುದೇ ನಿಯಮಗಳನ್ನು ಉಲ್ಲಂಘಿಸಿಲ್ಲ. ಮುಂದೆಯೂ ಉಲ್ಲಂಘಿಸುವುದಿಲ್ಲ. ನಾನು ಪಾರದರ್ಶಕವಾಗಿ ಕಾರ್ಯನಿರ್ವಹಿಸಿದ್ದೇನೆ' ಎಂದು ಅವರು ತಿಳಿಸಿದರು.

ಸುದ್ದಿ 2 ನಿಮಿಷ

ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆ: ವಕೀಲರ ಸಂಘ ಖಂಡನೆ

ಬೆಂಗಳೂರು: 'ಹಿಜಾಬ್ ಕುರಿತಂತೆ ತೀರ್ಪು ಪ್ರಕಟಿಸಿದ ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆ ಒಡ್ಡಿರುವ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು' ಎಂದು ಬೆಂಗಳೂರು ವಕೀಲರ ಸಂಘ (ಎಎಬಿ) ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಈ ಕುರಿತಂತೆ ಮಾಧ್ಯಮಗಳಿಗೆ ಹೇಳಿಕೆ ಬಿಡುಗಡೆ ಮಾಡಿರುವ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, 'ಮಧುರೈನ ಕೆಲ ವ್ಯಕ್ತಿಗಳು ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಬೆದರಿಕೆ ಹಾಕಿರುವುದನ್ನು ಬೆಂಗಳೂರು ವಕೀಲರ ಸಂಘ ತೀವ್ರವಾಗಿ ಖಂಡಿಸುತ್ತದೆ' ಎಂದು ಹೇಳಿದ್ದಾರೆ.

'ನ್ಯಾಯಾಂಗದ ಘನತೆಯನ್ನು ಎತ್ತಿಹಿಡಿಯಲು ಸರ್ಕಾರ ಕೂಡಲೇ ಆರೋಪಿಗಳನ್ನು ಬಂಧಿಸಿ ಅಗತ್ಯ ಕಾನೂನು ಕ್ರಮ ಜರುಗಿಸಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

'ಬಡತನ ನಿವಾರಣೆ- ಬಹು ಆಯಾಮದ ಕ್ರಮ ಅಗತ್ಯ'

ಬೆಂಗಳೂರು: 'ಅರಿವಿನ ಕೊರತೆ, ಸಾಮಾಜಿಕ ಅನಿಷ್ಟಗಳೂ ಬಡತನ. ಹೀಗಾಗಿ, ಆರ್ಥಿಕ ಬಡತನದ ಜತೆಗೆ ಇಂತಹ ಬಡತನಗಳನ್ನೂ ನಿವಾರಣೆ ಮಾಡಲು ಬಹು ಆಯಾಮಗಳನ್ನು ಒಳಗೊಂಡ ಕಾರ್ಯಕ್ರಮದ ಅಗತ್ಯವಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ದಿ ನಡ್ಜ್ ಫೌಂಡೇಷನ್ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 'ದಿ ನಡ್ಜ್ ಇನ್‌ಸ್ಟಿಟ್ಯೂಟ್' ಉದ್ಘಾಟಿಸಿ, ಅವರು ಮಾತನಾಡಿದರು.

'ಸಮಾಜದಲ್ಲಿ ಉನ್ನತಿ ಸಾಧಿಸಿದ ಪ್ರತಿಯೊಬ್ಬರೂ ಸಮಾಜಕ್ಕೆ ತಮ್ಮ ಕೊಡುಗೆ ನೀಡುವ ಅಗತ್ಯವಿದೆ. ಆಗ ಅವಕಾಶ ವಂಚಿತರಾದ ಇನ್ನಷ್ಟು ಜನರ ಉನ್ನತಿ ಸಾಧ್ಯ' ಎಂದು ಹೇಳಿದರು.

ಉನ್ನತ ಶಿಕ್ಷಣ, ಐಟಿ–ಬಿಟಿ ಹಾಗೂ ಕೌಶಲ ಅಭಿವೃದ್ಧಿ ಸಚಿವ ಸಿ.ಎನ್. ಅಶ್ವತ್ಥನಾರಾಯಣ, 'ರಾಜ್ಯ ಸರ್ಕಾರವು ಯುವಕರು ಹಾಗೂ ಮಹಿಳೆಯರಲ್ಲಿ ಉದ್ಯಮಶೀಲತೆ ಅಭಿವೃದ್ಧಿಗೆ ಆದ್ಯತೆ ನೀಡಿದೆ' ಎಂದು ತಿಳಿಸಿದರು.

ಏ.21ಕ್ಕೆ ರೈತರ ಸಮಾವೇಶ

ಬೆಂಗಳೂರು: 'ರೈತ ವಿರೋಧಿ ಕಾಯ್ದೆಗಳ ಜಾರಿಗೆ ಮುಂದಾಗಿರುವ ರಾಜ್ಯ ಸರ್ಕಾರದ ನಿಲುವು ಖಂಡಿಸಿ ಏಪ್ರಿಲ್ 21ರಂದು ಬಸವನಗುಡಿಯ ನ್ಯಾಷನಲ್ ಮೈದಾನದಲ್ಲಿ ರೈತರ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ' ಎಂದು ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಹೇಳಿದರು.

ಕೋಡಿಹಳ್ಳಿ ಚಂದ್ರಶೇಖರ್

ಸುದ್ದಿಗೋಷ್ಠಿಯಲ್ಲಿ ಇಲ್ಲಿ ಶನಿವಾರ ಮಾತನಾಡಿದ ಅವರು, 'ಸರ್ಕಾರ ಗೋಹತ್ಯೆ ನಿಷೇಧ ಎಂದು ಭಾವನಾತ್ಮಕವಾಗಿ ಹೇಳುತ್ತಾ ಹೈನುಗಾರಿಕೆಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಾಟ ಮಾಡಲು ಹೊರಟಿದೆ' ಎಂದು ಆರೋಪಿಸಿದರು.

'ದೇಶದಲ್ಲಿ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ಹಾಗೂ ಕನಿಷ್ಠ ಬೆಂಬಲ ಬೆಲೆ ನೀಡಲು ಸಾಧ್ಯವಾಗಿಲ್ಲ. ಉದ್ಯೋಗ ಸೃಷ್ಟಿಯೇ ಇಲ್ಲದಿದ್ದಾಗ ನಿರುದ್ಯೋಗಿಗಳ ಗತಿ ಏನು' ಎಂದು ಪ್ರಶ್ನಿಸಿದರು.

'ರಾಜ್ಯದಲ್ಲಿರುವ ಭ್ರಷ್ಟ ಪಕ್ಷಗಳು ರೈತರಿಗೆ ಹಾಗೂ ಸಾರ್ವಜನಿಕರಿಗೆ ಮಾರಕವಾಗಿವೆ. ರೈತರನ್ನು ಕೃಷಿಯಿಂದ ಹೊರದಬ್ಬಲು ಸರ್ಕಾರ ಉದ್ದೇಶಪೂರ್ವಕವಾಗಿ ಮುಂದಾಗಿರುವ ಬಗ್ಗೆ ಪ್ರತಿರೋಧ ವ್ಯಕ್ತಪಡಿಸುತ್ತಿದ್ದರೂ ತನ್ನಿಷ್ಟದಂತೆ ನಡೆದುಕೊಳ್ಳುತ್ತಿದೆ. ಈ ನೀತಿಗೆಟ್ಟ ರಾಜಕೀಯ ಪಕ್ಷಗಳಿಗೆ ಪರ್ಯಾಯ ರಾಜಕಾರಣ ಪ್ರಾರಂಭಿಸುವ ತೀರ್ಮಾನವನ್ನು ಸಮಾವೇಶದಲ್ಲಿ ಕೈಗೊಳ್ಳಲಿದ್ದೇವೆ. ಸಮಾವೇಶದಲ್ಲಿ 50 ಸಾವಿರಕ್ಕೂ ಹೆಚ್ಚು ಮಂದಿ ಸೇರಲಿದ್ದಾರೆ' ಎಂದು ಹೇಳಿದರು.

21ರಂದು ಕೃತಕ ಕಾಲು ಜೋಡಣೆ ಶಿಬಿರ

ಬೆಂಗಳೂರು: ರೋಟರಿ ಬೆಂಗಳೂರು ಪೀಣ್ಯ ಮತ್ತು ಜೈಪುರದ ಭಗವಾನ್ ಮಹಾವೀರ ವಿಕಲಾಂಗ ಸಹಾಯತಾ ಸಮಿತಿ ವತಿಯಿಂದ ಇದೇ 21ರಂದು ಮಧ್ಯಾಹ್ನ 3.45ಕ್ಕೆ 24ನೇ ವಾರ್ಷಿಕ ಮೆಗಾ ಕೃತಕ ಕಾಲು ವಿತರಣೆ ಶಿಬಿರ ಹಮ್ಮಿಕೊಳ್ಳಲಾಗಿದೆ.

ಶಿವಾಜಿ ನಗರ ಬಸ್ ನಿಲ್ದಾಣ ಬಳಿಯ ಭಗವಾನ್ ಮಹಾವೀರ ರಸ್ತೆಯ ಎಸ್.ಎಸ್.ಬಿ.ಎಸ್. ಜೈನ್ ಸಂಘ ಟ್ರಸ್ಟ್‌ನ ಗಣೇಶ್ ಬಾಗ್‌ನಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ: 9845455050

ಮೆಟ್ರೊ ರೈಲಿಗೆ ಕಲ್ಲು ತೂರಾಟ: ತಡೆಗೋಡೆ ಎತ್ತರಿಸಲು ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲಿಸುವ ಮೆಟ್ರೊ ರೈಲಿಗೆ ಕೆಲವೆಡೆ ಕಿಡಿಗೇಡಿಗಳು ಕಲ್ಲು ತೂರುತ್ತಿದ್ದು, ಇದನ್ನು ತಡೆಯಲು ತಡೆಗೋಡೆಗಳ ಎತ್ತರವನ್ನು ಇನ್ನಷ್ಟು ಹೆಚ್ಚಿಸಲು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಮುಂದಾಗಿದೆ.

ಎತ್ತರಿಸಿದ ರೈಲು ಮಾರ್ಗದಿಂದ ನೆಲದೊಳಗಿನ ಮಾರ್ಗಕ್ಕೆ ಇಳಿಯುವ ಜಾಗದಲ್ಲಿ ನೆಲ ಮಟ್ಟಕ್ಕೆ ರೈಲುಗಳ ಬರುತ್ತವೆ. ಅದೇ ಜಾಗದಲ್ಲಿ ಈ ರೀತಿಯ ಪ್ರಕರಣಗಳು ಹೆಚ್ಚಾಗುತ್ತಿವೆ. ಸಂಪಿಗೆ ರಸ್ತೆ ಮತ್ತು ಮಾಗಡಿ ರಸ್ತೆಯಲ್ಲಿ ವರ್ಷದಲ್ಲಿ ನಾಲ್ಕರಿಂದ ಐದು ಬಾರಿ ಈ ರೀತಿಯ ಪ್ರಕರಣಗಳು ನಡೆದಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ತಡೆಗೋಡೆಗಳ ಬಳಿ ಕಿಡಿಗೇಡಿಗಳು ಅವಿತು ಕುಳಿತು ಕಲ್ಲು ತೂರಿ ಪರಾರಿಯಾಗುತ್ತಿದ್ದಾರೆ. ಈ ರೀತಿ ನೆಲ ಮಟ್ಟಕ್ಕೆ ರೈಲು ಬರುವ ಜಾಗಕ್ಕೆ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅಲ್ಲದೇ ತಡೆಗೋಡೆಗಳನ್ನು ಎತ್ತರಿಸುವ ಕೆಲಸವನ್ನೂ ಮಾಡಲಾಗುತ್ತಿದೆ' ಎಂದು ಹೇಳಿದರು.

ಕಲ್ಲು ತೂರಿದಾಗ ಗಾಜುಗಳು ಪುಡಿಯಾಗಿ ರೈಲಿನೊಳಕ್ಕೆ ಕಲ್ಲು ಬಂದಿಲ್ಲ. ಗುಣಮಟ್ಟದ ಗಾಜುಗಳನ್ನು ಅಳವಡಿಸಿರುವುದರಿಂದ ಹೊರಭಾಗದಲ್ಲಿ ಸ್ವಲ್ಪ ಸೀಳು ಬಿಟ್ಟಿವೆ. ಟ್ರಿಪ್ ಮುಗಿಸಿ ಡಿಪೊಗೆ ಹೋದ ಕೂಡಲೇ ಗಾಜುಗಳನ್ನು ಬದಲಿಸಲಾಗುತ್ತಿದೆ ಎಂದರು.

ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಈಗ ಕಿಡಿಗೇಡಿಗಳು ಕಲ್ಲು ತೂರಲು ಅವಕಾಶ ಇಲ್ಲ. ಪ್ರಯಾಣಿಕರು ಯಾವುದೇ ಆತಂಕ ಪಡಬೇಕಿಲ್ಲ ಎಂದು ಅವರು ತಿಳಿಸಿದರು.

ಬಿಸಿಲಿನ ತಾಪಕ್ಕೆ ತಂಪೆರೆದ ಮಳೆ

ಬೆಂಗಳೂರು: ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದ ರಾಜ್ಯದ ಹಲವೆಡೆ ಮಳೆ ಸುರಿಯುತ್ತಿದ್ದು, ನಗರದಲ್ಲೂ ಬಹುತೇಕ ಪ್ರದೇಶಗಳಲ್ಲಿ ಶನಿವಾರ ಉತ್ತಮ ಮಳೆ ಆಯಿತು.

ಬೇಸಿಗೆ ಆರಂಭವಾಗುತ್ತಿದ್ದಂತೆ ನಗರದಲ್ಲಿ ಬಿಸಿಲಿನ ತಾಪ ಹೆಚ್ಚುತ್ತಿದೆ. ಕೆಲದಿನಗಳಿಂದ ನಗರದ ಜನರು ಬಿಸಿಲಿನ ಬೇಗೆಯಿಂದ ತತ್ತರಿಸಿದ್ದರು. ಶನಿವಾರ ಸುರಿದ ಮಳೆ ನಗರಕ್ಕೆ ತಂಪೆರೆಯಿತು. ಅದರಲ್ಲೇ ವಾಹನಗಳು ಸಂಚರಿಸಿದ ದೃಶ್ಯಗಳು ಕಂಡು ಬಂದವು. ವಿಜಯನಗರ, ರಾಜಾಜಿನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಕಾಟನ್‌ಪೇಟೆ, ವಿಧಾನಸೌಧ ಸುತ್ತಮುತ್ತ, ಮಲ್ಲೇಶ್ವರ, ನಂದಿನಿಲೇಔಟ್, ಯಶವಂತಪುರ, ಸದಾಶಿವನಗರ, ಬಸವನಗುಡಿ, ಗಿರಿನಗರ, ಜೆ.ಪಿ.ನಗರ ಹಾಗೂ ಇತರೆಡೆ ಮಳೆ ಸುರಿಯಿತು.

'ಬೆಂಗಳೂರು ಸೇರಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಂದಿನ ಎರಡು– ಮೂರು ದಿನ ಮಳೆಯಾಗುವ ಸಾಧ್ಯತೆ ಇದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬೆಂಕಿ ಅವಘಡ: ಬೇಕರಿ ಮಾಲೀಕನಿಗೆ ಗಾಯ

ಬೆಂಗಳೂರು: ಗಂಗೊಂಡನಹಳ್ಳಿ ಬಳಿಯ ಬೇಕರಿಯೊಂದರಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಬೆಂಕಿ ಅವಘಡ ಸಂಭವಿಸಿದ್ದು, ಬೇಕರಿ ಮಾಲೀಕ ಮೊಹಮ್ಮದ್ (64) ಗಾಯಗೊಂಡಿದ್ದಾರೆ.

'ಶನಿವಾರ ಬೆಳಿಗ್ಗೆ ಅಡುಗೆ ಅನಿಲ ಸಿಲಿಂಡರ್ ಒಲೆ ಮೇಲೆ ಚಹಾ ಮಾಡಲು ಆರಂಭಿಸಿದಾಗ ಈ ಅವಘಡ ಸಂಭವಿಸಿದೆ. ಗಾಯಾಳುವನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ. ಈ ಬಗ್ಗೆ ತನಿಖೆ ನಡೆಸಲಾಗಿದೆ' ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

JOCKEY

FACTORY SECONDS UPTO 50% OFF*

INNERWEAR | LEISUREWEAR | ACTIVEWEAR | KIDSWEAR | SOCKS

• 10 am to 8 pm • Open All Days • Master/Visa Card Accepted

* T & C apply

Venues in Bangalore

- West Of Chord Road: Sri Vidyaranya Prarthana Mandira, (Sri Avani Sringeri Shankar Mutt) Mahalaxmipuram, Next To Anupama English School - 560 086
- Kundalahalli Gate: S K R Convention Hall, #68, Thubarahalli, Varthur Main Road - 560 066
- Malleswaram: The Canara Union, No.42, 8th Main, Canara Union Road - 560 003
- Jayanagar: Premachandra Kalyana Mahal, T.Mariyappa Road, 2nd Block, (Near Ashoka Pillar) - 560 011
- Rajarajeswari Nagar: Vasavi Mahal Kalyana Mantapa, No.606, Next To Reliance Digital, Ideal Homes I Phase - 560 098
- Vijay Nagar: Five O Gallery, No.50, 17th Cross, M.C. Road, Near Vijay Nagar Bus Stop - 560 040
- Infantry Road: Safina Plaza, No.84/85 - 560 001
- Bannerghatta Road: Santhome Parish Church Hall, Hulimavu, Near Meenakshi Mall - 560 076
- Banashankari: Sri Hari Kalyana Mantap, 30th Main, Banshankari, B.S.K. 3rd Stage, Near K.I.M.S. - 560 085
- Koramangala: Apoorva International, #35A, Raheja Arcade, Opp Star Box - 560 095
- Basavanagudi: Amolak Apparels, #104, Bull Temple Road, Near Ramakrishna Ashram - 560 019

Org. by: Surya Agency Pvt. Ltd.

ಪುರಸಭಾ ಕಾರ್ಯಾಲಯ, ಅತ್ತಿಬೆಲೆ

ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ದೂ.ಸಂ.:080–27821501. | ಇ–ಮೇಲ್: itstaff_ulb_attibele@yahoo.com ವೆಬ್‌ಸೈಟ್: www.attibeletown.mrc.gov.in

ಸಂ.: ಪುಕಾಅ/ಕಂಶಾ/ಇತರೆ–02/2021–22 ದಿನಾಂಕ: 16.03.2022

ಹರಾಜು ಇಸ್ತಿಹಾರ್

ಈ ಮೂಲಕ ಸಮಸ್ತ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ, 2022–23ನೇ ಸಾಲಿನ (ಆರ್ಥಿಕ ವರ್ಷಕ್ಕೆ) ಅತ್ತಿಬೆಲೆ ಪುರಸಭೆಗೆ ಸೇರಿದ ಈ ಕೆಳಕಂಡ ಬಾಬ್ತುಗಳನ್ನು ಪುರಸಭೆಯ ಅಧ್ಯಕ್ಷರ ತೀರ್ಮಾನದಂತೆ ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗಳಿಂದ ಪುರಸಭಾ ಕಾರ್ಯಾಲಯದ ಸಭಾಂಗಣದಲ್ಲಿ **ದಿನಾಂಕ: 30.03.2022ರ ಬುಧವಾರ ಬೆಳಗ್ಗೆ 11:00 ಗಂಟೆಗೆ** ಬಹಿರಂಗ ಹರಾಜು ಮೂಲಕ ವಿಲೇಪಡಿಸಲಾಗುವುದು, ಇಚ್ಛೆಯುಳ್ಳವರು ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿ ಹರಾಜಿನ ಷರತ್ತುಗಳಿಗೆ ಒಳಪಟ್ಟು ಛಡ ಸವಾಲು ನೀಡುವ ಮೂಲಕ ಪಡೆಯುವುದು.

1) ಸಂತೆ ನೆಲವಳಿ ಸುಂಕ ವಸೂಲಿ ಮಾಡುವ ಹಕ್ಕು: ಹರಾಜು ಡೆಪಾಸಿಟ್ ಮೊತ್ತ: ರೂ. **50,000/–**. 2) ತಾಂತ್ರಿಕ ಶಾಖೆ, ಆರೋಗ್ಯ ಶಾಖೆ ಮತ್ತು ಕಛೇರಿಯಲ್ಲಿನ ಅನುಪಯುಕ್ತ ವಸ್ತುಗಳ ಹರಾಜು: **ರೂ. 10,000/–**.

ಷರತ್ತುಗಳು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿ ಕೆಲಸದ ವೇಳೆಯಲ್ಲಿ ಕಂದಾಯ ಶಾಖೆಯಿಂದ ಪಡೆಯಬಹುದಾಗಿದೆ.

ಸಹಿ/– (ಚಂದನ) ಅಧ್ಯಕ್ಷರು | ಸಹಿ/– (ಜಯಲಕ್ಷ್ಮೀ) ಉಪಾಧ್ಯಕ್ಷರು | ಸಹಿ/– (ಎನ್. ತಿಮ್ಮಾರೆಡ್ಡಿ) ಸ್ಥಾಯಿ ಸಮಿತಿ ಅಧ್ಯಕ್ಷರು | ಸಹಿ/– (ಶ್ವೇತಬಾಯಿ) ಮುಖ್ಯಾಧಿಕಾರಿ, ಶ್ರೇಣಿ–1

ವಾಸಾಸಂಇ/ಬೆಂ.ನ./ಜಿಎ/3836/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂ:ಬೆಂಅಪ್ರಾ/ನಯೋಸ/CLU-76/2053/2021–22 ದಿನಾಂಕ:18.03.2022

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ಅಡಿಯಲ್ಲಿ) ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕಣ್ಣೂರು ಗ್ರಾಮದ ಸರ್ವೆ ನಂ.116/7ರಲ್ಲಿನ 0 ಎಕರೆ-20.08 ಗುಂಟೆ ವಿಸ್ತೀರ್ಣದ ಜಮೀನನ್ನು ಕೃಷಿ ಉಪಯೋಗದಿಂದ ವಸತಿ ಉಪಯೋಗಕ್ಕಾಗಿ ಕೆಟಿಸಿಪಿ ಕಾಯ್ದೆ 1961ರ ಕಲಂ 14(ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಕೋರಿ ಶ್ರೀಮತಿ.ಔರ ಚೆರಿಯನ್ ಕೋಂ ಚೆರಿಯನ್ ಸೆಬಾಸ್ಟಿಯನ್‌ರವರು ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಪಡೆದು ಈ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆಯುತ್ತದೆ. ವಸತಿ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಮತ್ತು ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು ಹಾಗೂ ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂದು ಪ್ರಸ್ತಾವನೆಯಲ್ಲಿ ಸಾರ್ವಜನಿಕ ಹಿತಾಸಕ್ತಿ ಅಂಶ ಒಳಗೊಂಡಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14–ಎ ರನ್ವಯ, ಸದರಿ ಭೂ ಉಪಯೋಗ ಬದಲಾವಣೆ ಕುರಿತಂತೆ ಯಾರಿಂದಲಾದರೂ ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆಯ ದಿನಾಂಕದಿಂದ **15 ದಿವಸಗಳೊಳಗಾಗಿ** ಆಕ್ಷೇಪಣೆಗಳನ್ನು ಲಿಖಿತವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜಕ ಸದಸ್ಯರವರಿಗೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. 15 ದಿನಗಳ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳಿಗೆ ಮಾನ್ಯತೆ ನೀಡಲಾಗುವುದಿಲ್ಲ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

BDA/PRO/CLU/71/2021-22

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಬೆಂಗಳೂರು–560 083. ಫೋನ್: 080-29755405 | ಇ–ಮೇಲ್: dcfbnp83@gmail.com

ಸಂ.: ಎ3/ಸೋಲಾರ್ ಟೆಂಡರ್/ವಿವ–11/2021–22 ದಿನಾಂಕ: 16.03.2022

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2021–22ನೇ ಸಾಲಿನಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಅರಣ್ಯ ಪ್ರದೇಶದ ಗಡಿಯಲ್ಲಿ ಸೋಲಾರ್ ತಂತಿ ಬೇಲಿ ನಿರ್ಮಿಸಲು ಅಂಗೀಕೃತ ಸಂಸ್ಥೆಗಳಿಂದ ಅಥವಾ ಸೋಲಾರ್ ತಂತಿ ಬೇಲಿ ನಿರ್ಮಿಸುವುದು ಬಗ್ಗೆ ಅನುಭವ ಹೊಂದಿರುವವರ ಅಥವಾ ಅಂಗೀಕೃತ ಸಂಸ್ಥೆಗಳ ವಿತರಕರಿಂದ ಮಾತ್ರ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮೂಲಕ ಟೆಂಡರನ್ನು ಎರಡನೇ ಬಾರಿ ಆಹ್ವಾನಿಸಲಾಗಿದೆ.

Scheme: 2406-02-110-0-23-CSS Project Elephant-139-Major Works ವನ್ಯಜೀವಿ ವಲಯ: Kodigehalli Wildlife Range. ಕಾಮಗಾರಿಯ ವಿವರ: Erection Commissioning & Maintenance of Solar Tentacle Fencing/Hanging Fencing (Including Maintenance of solar Tentacle Fencing for 5 years). ಕೆಲಸದ ಸ್ಥಳ (ಕಿ.ಮೀ): Hunasanahalli Ghat (2.0), Chikkondanahalli kere to Chikkondanahalli Arch gate (1.0), Chikkondanahalli Arch to Neralahatti kodi (1.0), Keralalusandra bande to Sombegowda Thotada Hadi (0.47). ಅಂದಾಜು ಮೊತ್ತ : ಕನಿಷ್ಠ ರೂ. 2.35 ಲಕ್ಷ ದಿಂದ ಗರಿಷ್ಠ 10 ಲಕ್ಷ. ಇ.ಎಂ.ಡಿ ಮೊಬಲಗು 2.5%: ಕನಿಷ್ಠ ರೂ. 6,000/– ದಿಂದ ಗರಿಷ್ಠ ರೂ. 25,000/–. 1) ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 24.03.2022 ಪೂರ್ವಾಹ್ನ 11:00 ಗಂಟೆಯವರೆಗೆ.** ಅ) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 25.03.2022 ರಂದು ಬೆಳಗ್ಗೆ 11:30 ಗಂಟೆ.** ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಆ) ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 25.03.2022 ರಂದು ಅಪರಾಹ್ನ 4:00 ಗಂಟೆ.**

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,

ವಾಸಾಸಂಇ/ಬೆಂ.ನ./ಜಿಎ/3824/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/10/2022

ದಿನಾಂಕ : 16–03–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ದಂಡು – ವೈಟ್‌ಫೀಲ್ಡ್ ಕ್ವಾಡ್ರುಪ್ಲಿಂಗ್ : ಬೆಂಗಳೂರು ದಂಡು (ಹೊರತುಪಡಿಸಿ) – ಬೈಯಪ್ಪನಹಳ್ಳಿ (ಹೊರತುಪಡಿಸಿ) ನಿಲ್ದಾಣಗಳ ನಡುವೆ ಹೊಸ ನಿಲ್ದಾಣ ಕಟ್ಟಡಗಳು, ಗೂಮ್ಟಿಗಳು, ಪ್ಲ್ಯಾಟ್‌ಫಾರಂ, ಪಿಎಫ್ ಶೆಲ್ಟರ್‌ಗಳು, ಮೇಲ್ಸೇತುವೆಯ ನಿರ್ಮಾಣ. (ಟೆಂಡರ್ ಉಲ್ಲೇಖ ಸಂ. ಬಿಎನ್‌ಸಿ–ಡಬ್ಲ್ಯುಎಫ್‌ಡಿ/06)	ರೂ. 23,96,07,746/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 06–04–2022 ರಂದು 15.00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/469/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22

S.W.Railways SWRRLY SWRRLY

ಶ್ರೀ ಚರಣ್ ಬ್ಯಾಂಕ್

SREE CHARAN BANK

SREE CHARAN SOUHARDHA CO-OPERATIVE BANK LTD.

Head Office : #87/1, H B Samaja Road, Basavangudi, Bengaluru 560004.

Ph : 080-26676837, e-mail : scscb.helpdesk@sreecharanbank.com

Web. www.sreecharanbank.com

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರರಾದ

ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು

ಹಾಗೂ

ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ

ದಿವ್ಯಾನುಗ್ರಹದೊಂದಿಗೆ

ನಮ್ಮ ಬ್ಯಾಂಕಿನ ಜಯನಗರ ಶಾಖೆಯ ನೂತನ ಕಾರ್ಯಕ್ಷೇತ್ರದ ಉದ್ಘಾಟನಾ ಸಮಾರಂಭ

ಶಾಖೆಯ ನೂತನ ಕಾರ್ಯಕ್ಷೇತ್ರದ ಉದ್ಘಾಟನೆಯು ದಿನಾಂಕ 21ನೇ ಮಾರ್ಚ್ 2022 ಸೋಮವಾರದಂದು ಬೆಳಿಗ್ಗೆ 9:30 ಗಂಟೆಗೆ ನೆರವೇರಲಿದೆ.

ಸ್ಥಳ : 797, "ಅನ್ನಪೂರ್ಣ", 10ನೇ ಮುಖ್ಯ ರಸ್ತೆ, 35ನೇ ಅಡ್ಡ ರಸ್ತೆ, 4ನೇ ಬ್ಲಾಕ್ ಜಯನಗರ, ಬೆಂಗಳೂರು–560 011

ಉದ್ಘಾಟನೆ :

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ

ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ

ತಾವುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಪ್ರಾರ್ಥನೆ.

ತಮಗೆ ಹಾರ್ದಿಕ ಸ್ವಾಗತವನ್ನುಕೋರುವವರು

ಬಿ.ವಿ.ದ್ವಾರಕಾನಾಥ್ ಸಂಸ್ಥಾಪಕರು ಹಾಗೂ ಅಧ್ಯಕ್ಷರು | ಶುಭಪ್ರದ ಇಟಗಿ ಉಪಾಧ್ಯಕ್ಷರು | ಶ್ಯಾಮಲಾ ಹೆಗಡೆ ಹಿರಿಯ ವ್ಯವಸ್ಥಾಪಕರು

ಆಡಳಿತ ಮಂಡಳಿಯ ಪದಾಧಿಕಾರಿಗಳು ಹಾಗೂ ವ್ಯವಸ್ಥಾಪನಾ ಸಮಿತಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗ

ಸ್ಥಾಪನೆ : 1907

ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18

ಕಛೇರಿ : 26678572 : 26600512 : 26609066.

ಈ–ಹರಾಜು ಮುಖಾಂತರ ಸ್ಥಿರಾಸ್ತಿ ಸ್ವತ್ತುಗಳ ಮಾರಾಟದ ಸೂಚನೆ

ಸೆಕ್ಯೂರಿಟೈಜೇಷನ್ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ನಿಬಂಧನೆಗಳನ್ನು ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟ ಸೂಚನೆ (ಈ–ಹರಾಜು).

ಸಾರ್ವಜನಿಕರಿಗೆ ಸಾರ್ವಜನಿಕವಾಗಿ ಸೂಚನೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ಮತ್ತು ಜಾಮೀನುದಾರ(ರು)ರಿಗೆ ಈ ಮೂಲಕ ತಿಳಿಸುದೇನೆಂದರೆ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು ಭದ್ರತಾ ಸಾಲಗಾರರಿಗೆ ಅಡಮಾನ / ಚಾರ್ಜ್ ಮಾಡಲಾಗಿದೆ. ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ, ಅಧಿಕೃತ ಅಧಿಕಾರಿಯವರಿಂದ ಸಾಂಕೇತಿಕವಾಗಿ/ರಚನಾತ್ಮಕ/ಭೌತಿಕ ಸ್ವಾಧೀನತೆಯನ್ನು ತೆಗೆದುಕೊಳ್ಳಲಾಗಿದೆ. (ವಿವರಗಳನ್ನು ಈ ಕೆಳಗೆ ನೀಡಿರುವ ಕೋಷ್ಟಕದಲ್ಲಿ ತಿಳಿಸಲಾಗಿದೆ.) ಈ ಕೆಳಕಂಡ ಸಾಲಗಳ ವಸೂಲಾತಿಗಾಗಿ ಹಾಗೂ ಮುಂದಿನ ಬಡ್ಡಿ ಮತ್ತು ವೆಚ್ಚಗಳಿಗಾಗಿ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು **"ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಏನಿದೆಯೋ ಹಾಗೆ", ಮತ್ತು "ಅಲ್ಲಿ ಏನೇ ಇರಲಿ ಹಾಗೆ"** ಆಧಾರದ ಮೇಲೆ ದಿನಾಂಕ : **20.04.2022** ರಂದು ಈ ಕೆಳಗೆ ನೀಡಿರುವ ಸಮಯದಲ್ಲಿ ಮಾರಾಟ ಮಾಡಲಾಗುವುದು.

ಮೀಸಲು ಬೆಲೆ ಮತ್ತು ಇಎಂಡಿ ಠೇವಣಿಗಳ ವಿವರಗಳು ಈ ಕೆಳಗಿನಂತಿವೆ : ಇಎಂಡಿ ಡೆಪಾಸಿಟ್ (ಆಯಾ ಸ್ವತ್ತುಗಳಿಗೆ ಅನ್ವಯಿಸುವಂತೆ) ದಿನಾಂಕ: **19.04.2022** ರಂದು ಸಂಜೆ **5:00** ಗಂಟೆಯ ಒಳಗೆ ಆನ್‌ಲೈನ್ ಮೂಲಕ (RTGS/NEFT) ಈ ಕೆಳಗೆ ನಮೂದಿಸಿರುವ ಖಾತೆಯ ಸಂಖ್ಯೆಗೆ ಪಾವತಿಸುವುದು ಅಥವಾ ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಪರವಾಗಿ DD ಮೂಲಕ ಸಂದಾಯ ಮಾಡಬಹುದಾಗಿದೆ.

ಕ್ರ. ಸಂ.	ಸಾಲಗಾರರ ಹೆಸರು, ವಿಳಾಸ ಮತ್ತು ಶಾಖೆ	ಸ್ಥಿರಾಸ್ತಿಯ ವಿವರಗಳು ಎಲ್ಲೆ ಮತ್ತು ವಿಸ್ತೀರ್ಣ	ಕಾಯ್ದಿಟ್ಟ ಬೆಲೆ	ಇಡಗಂಟು ಠೇವಣಿ ಹಣ (ಇಎಂಡಿ)	ಬ್ಯಾಂಕಿಗೆ ಬರಬೇಕಾದ ಬಾಕಿ ಮೊಬಲಗು	ಹರಾಜು ಸಮಯ ಮತ್ತು ದಿನಾಂಕ
1.	ಶ್ರೀ. ದಶರಥ ರಾಜು. ವಿ.ಆರ್. ನಂ.247, ಅವಲಹಳ್ಳಿ ಮುಖ್ಯ ರಸ್ತೆ, ಮಾರಮ್ಮ ದೇವಸ್ಥಾನದ ಹತ್ತಿರ, ಬೆಂಗಳೂರು–26. ಶಾಖೆ : ಪ್ರಧಾನ ಕಛೇರಿ	ಹೊಸ ನಂ.247, ಸರ್ವೆ ನಂ.1–1, ಅವಲಹಳ್ಳಿ ವಿಲೇಜ್, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಹಾಲಿ ಬಿ.ಬಿ.ಎಂ.ಪಿ. ವಾರ್ಡ್ ನಂ. 41 ಗಾಳಿ ಅಂಜನೇಯ ದೇವಸ್ಥಾನ ಪಿ.ಐ.ಡಿ. ನಂ. 41–114–247, ಬೆಂಗಳೂರು. ಪೂರ್ವ–ಪಶ್ಚಿಮ : 25 ಅಡಿಗಳು ಮತ್ತು ಉತ್ತರ – ದಕ್ಷಿಣ : 30 ಅಡಿಗಳು ಪೂರ್ವಕ್ಕೆ : ಸೈಟ್ ನಂ. 10, ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸೈಟ್ ನಂ. 02.	ರೂ. 56,59,000/– (ಐವತ್ತಾರು ಲಕ್ಷ ಐವತ್ತೊಂಭತ್ತು ಸಾವಿರ ಮಾತ್ರ)	ರೂ. 5,65,900/– (ಐದು ಲಕ್ಷ ಅರವತ್ತೈದು ಸಾವಿರದ ಒಂಭೈನೂರು ಮಾತ್ರ)	15.03.2022 ಕ್ಕೆ ರೂ. 58,22,051/– ನೋಟಿಸ್ ದಿನಾಂಕ 15.03.2022	20.04.2022 ಬೆಳಿಗ್ಗೆ 10:00 ರಿಂದ 11:00 ರವರೆಗೆ

ಇಎಂಡಿ ಠೇವಣಿ ಪಾವತಿಯ ಕೊನೆಯ ದಿನಾಂಕ : 19.04.2022 ಸಂಜೆ : 5 : 00 ರ ವರೆಗೆ	ಬ್ಯಾಂಕಿನ ಹೆಸರು ಮತ್ತು ಖಾತೆಯ ವಿವರಗಳು (ಇಎಂಡಿ ಪಾವತಿಗಾಗಿ) IFSC ಕೋಡ್: ಬ್ಯಾಂಕಿನ ಹೆಸರು: ಇಂಡಸ್‌ಇಂಡ್ ಬ್ಯಾಂಕ್.
ತಪಾಸಣೆಯ ದಿನಾಂಕ ಮತ್ತು ಸಮಯ: 16.04.2022 ಸಮಯ ಬೆಳಿಗ್ಗೆ : 10.00 ರಿಂದ ಸಂಜೆ 5 : 00 ರ ವರೆಗೆ	ಶಾಖೆ ಹೆಸರು : ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಪ್ರಧಾನ ಕಛೇರಿ ಶಾಖೆ : ಖಾತೆ ಸಂಖ್ಯೆ : 000220105013061.
ಬಿಡ್ ಗುಣಾಂಕ: ರೂ. 50,000/–	IFSC ಕೋಡ್ : INDB0BCCB02

ಸಾಲಗಾರರು/ ಅಡಮಾನದಾರರ ಗಮನಕ್ಕೆ ನಿಬಂಧನೆಗಳ ಉಪ–ವಿಭಾಗ (8) ರ ಸೆಕ್ಷನ್ 13ರ ಕಾಯಿದೆಯಲ್ಲಿ ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಲು ತಿಳಿಸಲಾಗಿದೆ. (ಈ ಪ್ರಕಟಣೆಯನ್ನು ನಿಯಮ (8) ಉಪನಿಯಮ (6) ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ನಿಯಮ 2002ರಡಿಯಲ್ಲಿ ಸಾಲಗಾರರಿಗೆ ನೀಡುವ ಪ್ರಕಟಣೆ ಎಂದು ಪರಿಗಣಿಸತಕ್ಕದ್ದು). ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ, ದಯವಿಟ್ಟು ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ವೆಬ್‌ಸೈಟ್ ನಲ್ಲಿನ ಲಿಂಕನ್ನು ನೋಡಿ ಅಂದರೆ, "ಅಡಮಾನ ಸ್ವತ್ತುಗಳ ಮಾರಾಟ" ಶೀರ್ಷಿಕೆಯ ಅಡಿಯಲ್ಲಿ www.bccbl.co.in, ಅನ್ನು ನೋಡಿ. ಈ– ಹರಾಜನ್ನು 05 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ದಿನಾಂಕ: 20.04.2022 ರಂದು ಬೆಳಿಗ್ಗೆ : 10.00 ರಿಂದ 11.00 ರವರಗೆ https://bankauctions.in ಪೋರ್ಟಲ್ ಮೂಲಕ ನಡೆಸಲಾಗುವುದು. ಉದ್ದೇಶಿತ ಬಿಡ್‌ದಾರರು ತಮ್ಮ ಹೆಸರನ್ನು https://bankauctions.in ನಲ್ಲಿ ನೊಂದಾಯಿಸಿಕೊಂಡು ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ನ್ನು ಉಚಿತವಾಗಿ ಪಡೆಯಬಹುದು ಮತ್ತು *E-auction (tentatively on 19.04.2022)* from M/s 4 Closure, Mr. Prakash Reddy /Bhaskar (Asst. Manager), No.22, 5th Cross, Gurumahal Extension, Opp. Indian Hotel, K.G. Halli, Jalahalli (West), Bengaluru-560015, Mobile No: 9515160061/9515160062, E-mail: prakash@bankauctions.in & bhaskar@bankauctions.in. ಹೆಚ್ಚಿನ ಮಾಹಿತಿಗಾಗಿ : bccbrec2021@gmail.com Mobile Number : 080-26600512, 26609066 & 9342781425.

ದಿನಾಂಕ : 15.03.2022 ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

‘ಬಿ ಪ್ಯಾಕ್’ ಸಾರ್ವಜನಿಕ ಸ್ಥಳಗಳ ಸುರಕ್ಷತಾ ಸಮೀಕ್ಷಾ ವರದಿ ಬಿಡುಗಡೆ

‘ತಂಗುದಾಣ ಪ್ರಯಾಣಿಕ ಸ್ನೇಹಿಯಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ಮತ್ತು ಮಲ್ಲೇಶ್ವರ ವಿಧಾನಸಭಾ ಕ್ಷೇತ್ರಗಳಲ್ಲಿನ ಬಸ್ ತಂಗುದಾಣಗಳು ಪ್ರಯಾಣಿಕ ಸ್ನೇಹಿಯಾಗಬೇಕು ಮತ್ತು ಬೀದಿ ದೀಪಗಳಂತಹ ಮೂಲಸೌಕರ್ಯವನ್ನು ಸುಧಾರಿಸಬೇಕು ಎಂದು ಸಾರ್ವಜನಿಕ ಸ್ಥಳಗಳ ಸುರಕ್ಷತಾ ಸಮೀಕ್ಷಾ ವರದಿಯಲ್ಲಿ ಸಲಹೆ ನೀಡಲಾಗಿದೆ.

ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿ (ಬಿ–ಪ್ಯಾಕ್) ಮತ್ತು ಸಿಜಿಐ ಸಂಸ್ಥೆಗಳು ಈ ವರದಿಯನ್ನು ಸಿದ್ಧಪಡಿಸಿವೆ.

ಬಸ್ ನಿಲ್ದಾಣಗಳಲ್ಲಿ ಮಾಹಿತಿ ವ್ಯವಸ್ಥೆ, ನಕ್ಷೆ ವಿವರ ಹಾಗೂ ಉತ್ತಮ ಗುಣಮಟ್ಟದ ಆಸನ ವ್ಯವಸ್ಥೆಗಳನ್ನು ಕಲ್ಪಿಸಬೇಕು. ಉತ್ತಮ ಬೆಳಕಿನ ವ್ಯವಸ್ಥೆ ಇರಬೇಕು. ಪಾದಚಾರಿ ಮಾರ್ಗಗಳನ್ನೂ ಸುಧಾರಿಸಬೇಕು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಉದ್ಯಾನಗಳು, ಅಂಗನವಾಡಿಗಳಲ್ಲಿ ಮೂಲಸೌಕರ್ಯಗಳನ್ನು ಸುಧಾರಿಸಬೇಕು. ಇದರಿಂದ, ಮಕ್ಕಳ ಚಟುವಟಿಕೆಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಲಾಗಿದೆ.

ಈ ವರದಿಯನ್ನು ಶಾಸಕ ಅರವಿಂದ ಲಿಂಬಾವಳಿ ಅವರು ಶನಿವಾರ ಬಿಡುಗಡೆ ಮಾಡಿದರು. ಈ ಎರಡು ಕ್ಷೇತ್ರಗಳಲ್ಲಿನ 260 ಸಾರ್ವಜನಿಕ ಸ್ಥಳಗಳಲ್ಲಿ ಸಮೀಕ್ಷೆಯನ್ನು ವರದಿಯು ಒಳಗೊಂಡಿದೆ.

ಮಹಿಳೆಯರ ಸುರಕ್ಷತೆ ಮತ್ತು ಸಬಲೀಕರಣದ ಕುರಿತ ಅಂಶಗಳ ಬಗ್ಗೆಯೂ ವಿಶ್ಲೇಷಿಸಲಾಗಿದೆ. 23 ಅಂಗನವಾಡಿ ಕೇಂದ್ರಗಳು, 71 ಬಸ್ ನಿಲ್ದಾಣಗಳು, 30 ಮಾರುಕಟ್ಟೆಗಳು, 37 ಉದ್ಯಾನಗಳು, 14 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 12 ಪೊಲೀಸ್ ಠಾಣೆಗಳು, 32 ಸಾರ್ವಜನಿಕ ಶೌಚಾಲಯಗಳ ಬಗ್ಗೆ ಸಮೀಕ್ಷೆ ನಡೆಸಲಾಗಿದೆ ಎಂದು ವಿವರಿಸಲಾಗಿದೆ.

ಮಹದೇವಪುರ ವಿಧಾನಸಭಾ ಕ್ಷೇತ್ರದ ಎಂಟು ವಾರ್ಡ್‌ಗಳು ಮತ್ತು ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಏಳು ವಾರ್ಡ್‌ಗಳಲ್ಲಿ ಈ ಸಮೀಕ್ಷೆ ಕೈಗೊಳ್ಳಲಾಗಿತ್ತು. ವರದಿಯಲ್ಲಿನ ಶಿಫಾರಸ್ಸುಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಿದರೆ ಎರಡು ಕ್ಷೇತ್ರಗಳು ಮಹಿಳಾ ಸಬಲೀಕರಣ ಮತ್ತು ಸುರಕ್ಷತೆಯ ವಿಷಯದಲ್ಲಿ ಮಾದರಿಯಾಗುತ್ತವೆ ಎಂದು ತಿಳಿಸಲಾಗಿದೆ.

ನಗರದಲ್ಲಿ ಸಾರ್ವಜನಿಕ ಸ್ಥಳಗಳ ಸುರಕ್ಷತಾ ಸಮೀಕ್ಷಾ ವರದಿಯನ್ನು ಶಾಸಕ ಅರವಿಂದ ಲಿಂಬಾವಳಿ ಅವರು ಶನಿವಾರ ಬಿಡುಗಡೆ ಮಾಡಿದರು. ‘ಬಿ ಸೇಫ್’ ಕಾರ್ಯಕ್ರಮದ ಮುಖ್ಯಸ್ಥೆ ಚಿತ್ರಾ ತಳವಾರ, ಸಿಇಒ ಮತ್ತು ಮ್ಯಾನೇಜಿಂಗ್ ಟ್ರಸ್ಟಿ ರೇವತಿ ಅಶೋಕ್, ಸಿಜಿಐ ಹಿರಿಯ ಉಪಾಧ್ಯಕ್ಷ ರಾಹುಲ್ ಘೋಡ್ಕೆ, ಜನಾಗ್ರಹದ ನಾಗರಿಕ ಸಹಭಾಗಿತ್ವ ವಿಭಾಗದ ಮುಖ್ಯಸ್ಥೆ ಸಪ್ನಾ ಕರೀಂ, ನಟಿ ಪ್ರಣೀತಾ ಸುಭಾಷ್ ಇದ್ದರು – ಪ್ರಜಾವಾಣಿ ಚಿತ್ರ

‘ಬೀದಿ ದೀಪಗಳಿಗೆ ಆದ್ಯತೆ ನೀಡಬೇಕು’

‘ಬೀದಿ ದೀಪಗಳನ್ನು ಅಳವಡಿಸಲು ಬಿಬಿಎಂಪಿ ಆದ್ಯತೆ ನೀಡಬೇಕು. ಬೀದಿ ದೀಪಗಳು ಇಲ್ಲದ ಕಾರಣ ಅಪಘಾತಗಳು ಸಂಭವಿಸುತ್ತಿವೆ. ಜತೆಗೆ, ಹೆಣ್ಣು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದಲೂ ಮುಖ್ಯವಾಗಿದೆ’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ರವಿಕಾಂತೇಗೌಡ ಹೇಳಿದರು.

ಸುರಕ್ಷಿತ ಸಾರ್ವಜನಿಕ ಸ್ಥಳಗಳು ಕುರಿತ ಬಿ ಪ್ಯಾಕ್ ಆಯೋಜಿಸಿದ್ದ ಚರ್ಚೆಯಲ್ಲಿ ಮಾತನಾಡಿದ ಅವರು, ‘ಕಾಲಕ್ಕೆ ತಕ್ಕಂತೆ ಪೊಲೀಸ್ ಇಲಾಖೆಯೂ ಹಲವಾರು ಬದಲಾವಣೆಗಳನ್ನು ಕಾಣುತ್ತಿದೆ. ಬೇರೆ ನಗರಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಪೊಲೀಸರು ಶೀಘ್ರವಾಗಿ ಸ್ಪಂದಿಸುತ್ತಿದ್ದಾರೆ’ ಎಂದು ಹೇಳಿದರು.

‘ಕಷ್ಟಗಳು ಬಂದಾಗ ಜನರು ಮೊದಲು ಪೊಲೀಸರನ್ನು ನೆನಪಿಸಿಕೊಳ್ಳುತ್ತಾರೆ. ಬೀಟ್ ವ್ಯವಸ್ಥೆಯನ್ನು ಜನಸ್ನೇಹಿ ಮಾಡಲಾಗುತ್ತಿದ್ದು, ನಾಗರಿಕರನ್ನು ಸಹ ಸೇರಿಸಿಕೊಳ್ಳಲಾಗುತ್ತಿದೆ’ ಎಂದು ವಿವರಿಸಿದರು.

ಆನೆ ದಂತ ಜಪ್ತಿ

ಬೆಂಗಳೂರು: ಆನೆ ದಂತಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಮೂವರು ಆರೋಪಿಗಳನ್ನು ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿ, 29 ಕೆ.ಜಿ ತೂಕದ ಎರಡು ದಂತಗಳನ್ನು ಜಪ್ತಿ ಮಾಡಿದ್ದಾರೆ.

ಚಂದ್ರಪ್ಪಗೆ ‘ಸಹಕಾರ ರತ್ನ’ ಪ್ರಶಸ್ತಿ ಪ್ರದಾನ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರ ಇಲಾಖೆ ವತಿಯಿಂದ ನೀಡಲಾಗುವ ‘ಸಹಕಾರ ರತ್ನ’ ಪ್ರಶಸ್ತಿಗೆ ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧ್ಯಕ್ಷ ಆವಲಹಳ್ಳಿ ಆರ್. ಚಂದ್ರಪ್ಪ ಆಯ್ಕೆಯಾಗಿದ್ದಾರೆ.

ಆವಲಹಳ್ಳಿ ಆರ್. ಚಂದ್ರಪ್ಪ

ಕೆಂಗೇರಿ ಉಪ ನಗರದ ಗಣೇಶ ಮೈದಾನದಲ್ಲಿ ಭಾನುವಾರ ಬೆಳಿಗ್ಗೆ 11 ಗಂಟೆಗೆ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

22ಕ್ಕೆ ಕುರಿಗಾಹಿಗಳಿಂದ ‘ವಿಧಾನಸೌಧ ಚಲೋ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕುರಿಗಾಹಿಗಳ ಮೇಲಿನ ದೌರ್ಜನ್ಯ ಖಂಡಿಸಿ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇದೇ 22ರಂದು ‘ವಿಧಾನಸೌಧ ಚಲೋ’ ಹಮ್ಮಿಕೊಳ್ಳಲಾಗಿದೆ’ ಎಂದು ಕುರುಬ ಸಮಾಜದ ಸಂಘಟನೆಗಳ ಒಕ್ಕೂಟದ ರಾಜ್ಯ ಸಂಚಾಲಕ ಸಿದ್ದಣ್ಣ ತೇಜಿ ಶನಿವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕುಂದಗೋಳದಲ್ಲಿ ಕುರಿಗಾಹಿ ಮಹಿಳೆ ಮೇಲೆ ಅತ್ಯಾಚಾರ ಎಸಗಿ ಕೊಲೆಗೈದ ಪ್ರಕರಣದ ಆರೋಪಿಗಳನ್ನು ಬಂಧಿಸಬೇಕು. ದೌರ್ಜನ್ಯ ತಡೆಗೆ ಕಾಯ್ದೆ ಜಾರಿ ರೂಪಿಸಬೇಕು’ ಎಂದು ಆಗ್ರಹಿಸಿದರು.

‘ಅರಣ್ಯ ಪ್ರದೇಶಗಳಲ್ಲಿ ಕುರಿ ಮೇಯಿಸಲು ಅವಕಾಶ ನೀಡಬೇಕು. ಕುರಿಗಾಹಿಗಳ ರಕ್ಷಣೆಗೆ ಬಂದೂಕು ಪರವಾನಗಿ ನೀಡಬೇಕು ಮತ್ತು ಸರ್ಕಾರವೇ ಉಚಿತವಾಗಿ ಬಂದೂಕು ನೀಡಬೇಕು. ಅಹವಾಲು ಆಲಿಸಲು ಪೊಲೀಸರು ಪ್ರತಿ ತಿಂಗಳು ಕುರಿಗಾಹಿಗಳ ಸಭೆ ನಡೆಸಬೇಕು. ದುರ್ಘಟನೆಗಳು ನಡೆದಾಗ ಪರಿಹಾರ ನೀಡಲು ಪರಿಹಾರ ನಿಧಿ ಸ್ಥಾಪಿಸಬೇಕು’ ಎಂದು ಹೇಳಿದರು.

‘ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮಾರ್ಚ್ 22ರಂದು ಬೆಳಿಗ್ಗೆ 10 ಗಂಟೆಗೆ ಮೆಜೆಸ್ಟಿಕ್‌ನ ಸಂಗೊಳ್ಳಿ ರಾಯಣ್ಣ ವೃತ್ತದಿಂದ ವಿಧಾನಸೌಧ ಚಲೋ ನಡೆಸಲಿದ್ದೇವೆ. 20 ಸಾವಿರಕ್ಕೂ ಹೆಚ್ಚು ಕುರಿಗಾಹಿಗಳು ಭಾಗವಹಿಸಲಿದ್ದಾರೆ’ ಎಂದರು.

ಯುಪಿಎಸ್‌ಸಿ: ಮೌಖಿಕ ಅಣಕು ಪರೀಕ್ಷೆಗೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಪಿಎಸ್‌ಸಿ ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಮೌಖಿಕ ಅಣಕು ಪರೀಕ್ಷೆಯ ಮಾರ್ಗದರ್ಶನ ಮತ್ತು ತರಬೇತಿಯನ್ನು ಕೃಷಿಕ್ ಸರ್ವೋದಯ ಫೌಂಡೇಷನ್ ಸ್ಪರ್ಧಾತ್ಮಕ ಪರೀಕ್ಷೆಯ ಸಂಸ್ಥೆಯ ವತಿಯಿಂದ ಆಯೋಜಿಸಲಾಗಿದೆ.

ಆಸಕ್ತರು ಮಾರ್ಚ್ 25ರ ಒಳಗೆ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಸಂಸ್ಥೆಯು ತಿಳಿಸಿದೆ.

ವಿಳಾಸ: ನಂ.15, 2ನೇ ಹಂತ, ಹಳೇ ವಿಮಾನ ನಿಲ್ದಾಣ ರಸ್ತೆ, ಗಾಲ್ಫ್ ಅವೆನ್ಯೂ ರಸ್ತೆ, ಕೋಡಿಹಳ್ಳಿ, ಬೆಂಗಳೂರು

ಸಂಪರ್ಕ: ಇ–ಮೇಲ್ : ksfbangalore@gmail.com ಅಥವಾ www.ksfkarnataka.com.

ದೂರವಾಣಿ: 080–25202299, 76250 00990.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪೊಲೀಸ್ ಪ್ರಕಟಣೆ

ದಿನಾಂಕ: 27.12.2021 ರಂದು ಸಂಜೆ 05:00 ಪಿ.ಎಂನಿಂದ 05.30 ಪಿ.ಎಂ ಮಧ್ಯದ ಅವಧಿಯಲ್ಲಿ ಶಿವಮೊಗ್ಗ ಟೌನ್‌ನಿಂದ ಅಪ್ರಾಪ್ತ ವಯಸ್ಸಿನ ಬಾಲಕಿ ಅಪಹರಣಕ್ಕೆ ಒಳಗಾದ ಬಗ್ಗೆ ಅದೇ ದಿನ ರಾತ್ರಿ 09:30 ಗಂಟೆಗೆ ಪಿರ್ಯಾದಿ ರವರು ನೀಡಿದ ದೂರಿನ ಮೇರೆಗೆ ಜಯನಗರ ಪೊಲೀಸ್ ಠಾಣಾ ಗುನ್ನೆ ನಂ 102/2021 ಕಲಂ 363 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿದ್ದು. ಈ ಕೇಸಿನಲ್ಲಿ ಸಂಶಯಾಸ್ಪದ ವ್ಯಕ್ತಿಯಾಗಿರುವ ಲಿಂಗರಾಜ್ ಯಾನೆ ವಿರಾಟ್ ಯಾನೆ ರಾಜು, ತಂದೆ ಲಕ್ಷ್ಮೀ ನಾರಾಯಣ, 26 ವರ್ಷ, ವಾಸ ಕೆ.ಪಿ ಅಗ್ರಹಾರ, ಬೆಂಗಳೂರು ಈತನು ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಅಪಹರಣ ಮಾಡಿರುವ ಬಗ್ಗೆ ಮಾಹಿತಿ ಇದ್ದು, ಈ ವ್ಯಕ್ತಿ ಹಾಗೂ ಅಪಹರಣಕ್ಕೊಳಗಾದ ಬಾಲಕಿ ಎಲ್ಲಿಯಾದರೂ ಕಂಡು ಬಂದಲ್ಲಿ ಕೂಡಲೇ ಪೊಲೀಸ್ ನಿರೀಕ್ಷಕರು ಮಹಿಳಾ ಪೊಲೀಸ್ ಠಾಣೆ ಶಿವಮೊಗ್ಗ ಪೋನ್ ನಂ. 9480803349, 9449584739ಗೆ ಹಾಗೂ ಶಿವಮೊಗ್ಗ ಪೊಲೀಸ್ ನಿಯಂತ್ರಣ ಕೊಠಡಿ ಪೋನ್ ನಂ. 9480803300ಗೆ ಕರೆ ಮಾಡಿ ಮಾಹಿತಿ ನೀಡಲು ಕೋರಲಾಗಿದೆ.

ವಿರಾಟ್

ಅಪಹರಣಕ್ಕೊಳಗಾದ ಬಾಲಕಿಯ ಚಹರೆ ಗುರುತುಗಳು: ವಯಸ್ಸು: 16 ವರ್ಷ, ಎತ್ತರ: 135 ಸೆಂಟಿಮೀಟರ್, ಸಾಮಾನ್ಯ ಕಪ್ಪು ಬಣ್ಣದ ಕೂದಲು, ಗೋದಿ ಮೈಬಣ್ಣ, ದುಂಡು ಮುಖ, ಸಾಧಾರಣ ಮೈಕಟ್ಟು ಹೊಂದಿರುತ್ತಾಳೆ.

ಸಂಶಯಾಸ್ಪದ ವ್ಯಕ್ತಿಯ ಪೋಟೋ ಮತ್ತು ಚಹರೆ ಗುರುತುಗಳು ಈ ಕೆಳಕಂಡಂತೆ ಇರುತ್ತೆ: ಎತ್ತರ: 5,5 ಅಡಿ ಸಾಧಾರಣ ಮೈಕಟ್ಟು ದುಂಡು ಮುಖ, ಎಣ್ಣೆ ಗೆಂಪು ಮೈಬಣ್ಣ, ಕಪ್ಪು ಕಣ್ಣುಗಳು ಚಿಗುರು ಗಡ್ಡ, ಚಿಗುರು ಮೀಸೆ ಬಿಟ್ಟಿದ್ದು. ಕನ್ನಡ ಹಾಗೂ ತೆಲುಗು ಮಾತನಾಡುತ್ತಿದ್ದು. ಎಡಗೈ ಹಾಗೂ ಬಲಗೈ ಮೊಣಕೈ ಮೇಲೆ ಹಳೆಯ ಗಾಯದ ಕಲೆಗಳು ಇರುತ್ತವೆ.

ಸಹಿ/– ಪೊಲೀಸ್ ಇನ್ಸ್‌ಪೆಕ್ಟರ್,
ಮಹಿಳಾ ಪೊಲೀಸ್ ಠಾಣೆ, ಶಿವಮೊಗ್ಗ.

Study in Karnataka which offers highest paying job opportunities

COMEDK Concern for Careers

COMEDK UGET 2022
All India Entrance Exam For B.E / B.Tech-2022

- One Entrance Exam, 150 colleges in Karnataka
- 20,000 seats in 150 colleges
- High quality education in India's leading institutions
- COMEDKARES Skill Labs to make you job ready
- Exam conducted all over India in 150+ cities, 400+ test centres

Start Date for Registration/Application: 14 March 2022
Last Date for Registration/Application: 02 May 2022
ENTRANCE EXAM ON SUNDAY, 19th JUNE 2022
REGISTRATIONS ARE ONLINE ONLY AT www.comedk.org

Note: 1) Application forms will neither be sold or received at COMEDK office or at any of our member institutions
2) www.comedk.org is the only official website for COMEDK applications
3) Payment should be made online only
- Dr. M R Jayaram Chairman, COMEDK

Corporate Office: No.132, 2nd Floor, 11th Main, 17th Cross, Malleswaram, Bangalore 560055
Ph: 080 46671060 Email: studenthelpdesk@comedk.org Website : www.comedk.org

NOTE : COMEDK UGET and Uni-GAUGE - E 2022 is a single unified exam

Uni-GAUGE - E 2022
All India Entrance Exam For BE/ B.Tech-2022
For Admissions to 50+ Engineering Universities across India.
Partner Universities located in Uttar Pradesh, Andhra Pradesh, Karnataka, Madhya Pradesh, Assam, Tamil Nadu, Maharashtra, Haryana, Gujarat, Jharkhand, Rajasthan, Telangana and Himachal Pradesh
Last Date to Apply: 2nd, May 2022 I Exam Date: 19th June 2022
APPLY Today I www.unigauge.com I 400 + Test centres in India
Call : 080 46671060 Email: helpdesk@unigauge.com

ಪ್ರಜಾವಾಣಿ

ಜನಸ್ಪಂದನ

ಸಿಟಿಜನ್ಸ್ ಫಾರ್ ಚೇಂಜ್

ನೀವು ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ನಿವಾಸಿಯೇ?

ನಿಮ್ಮ ಸಮಸ್ಯೆಗಳಿಗೆ ದನಿ ನೀಡಲು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಆಯೋಜಿಸಿರುವ ಜನಸ್ಪಂಧನ ಕಾರ್ಯಕ್ರಮದಲ್ಲಿ ಭಾಗವಹಿಸಿ. ನಿಮ್ಮ ಅಹವಾಲು ಆಲಿಸಲಿದ್ದಾರೆ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಂ. ಸತೀಶ್ ರೆಡ್ಡಿ ಅವರೊಂದಿಗೆ ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಪೊಲೀಸ್ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದು, ನಿಮ್ಮ ನೋವಿಗೆ ಕಿವಿಯಾಗಲಿದ್ದಾರೆ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ.



ಶ್ರೀ ಎಂ.ಸತೀಶ್ ರೆಡ್ಡಿ

- ಟ್ರಾಫಿಕ್
- ಕಸ ವಿಲೇವಾರಿ
- ನೀರು ಸರಬರಾಜು
- ರಸ್ತೆ ಗುಂಡಿಗಳು

ಕಾರ್ಯಕ್ರಮದ ದಿನಾಂಕ – 26/03/2022 ,ಶನಿವಾರ
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ
(ನೋಂದಣಿ: ಬೆಳಿಗ್ಗೆ 9ರಿಂದ, ಪ್ರವೇಶ ಉಚಿತ)
ಸ್ಥಳ: ಗಣೇಶ ದೇವಸ್ಥಾನ ಮೈದಾನ
186, ಪುಟ್ಟೇನಹಳ್ಳಿ ರೋಡ್,ಕೆ ಆರ್ ಲೇಔಟ್, ಜೆ ಪಿ ನಗರ 6ನೇ ಹಂತ, ಬೆಂಗಳೂರು 78.

ಸಂಪರ್ಕಕ್ಕೆ:
94485 28998

ಸ್ಥಾಪನೆ: 1907

ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಆಡಳಿತ ಕಛೇರಿ: ನಂ.3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18

ಅಭಿನಂದನೆಗಳು

ಶ್ರೀ ಆವಲಹಳ್ಳಿ ಚಂದ್ರಪ್ಪ ಆರ್
ಅಧ್ಯಕ್ಷರು

ನಮ್ಮ ಬ್ಯಾಂಕನ್ನು 2005 ರಿಂದಲೂ ಯಶಸ್ವಿಯಾಗಿ ಮುನ್ನಡೆಸಿ ಪ್ರಸ್ತುತ ಕರ್ನಾಟಕ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಅತ್ಯುನ್ನತ ಬ್ಯಾಂಕಾಗಿ ಹೊರ ಹೊಮ್ಮಲು ಕಾರಣರಾದ **ಶ್ರೀ ಆವಲಹಳ್ಳಿ ಚಂದ್ರಪ್ಪ ಆರ್, ಅಧ್ಯಕ್ಷರು** ರವರಿಗೆ **ದಿನಾಂಕ: 20-03-2022** ರಂದು ಕರ್ನಾಟಕ ರಾಜ್ಯ ಸರ್ಕಾರವು

“ಸಹಕಾರ ರತ್ನ”

ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿರುವುದಕ್ಕೆ ಅಭಿನಂದನೆಗಳು.

ಪಿ. ಮಂಜುನಾಥ
ಪ್ರಧಾನ ವ್ಯವಸ್ಥಾಪಕರು (ಪ್ರಭಾರ)
ಮತ್ತು ಸಿಬ್ಬಂದಿ ವರ್ಗ

ಡಾ|| ದೇವರಾಜ್.ಟಿ.ಎಂ
ಉಪಾಧ್ಯಕ್ಷರು
ಮತ್ತು ಆಡಳಿತ ಮಂಡಳಿ ಸದಸ್ಯರು

ಲಾಲ್‌ಬಾಗ್ ಉದ್ಯಾನದಲ್ಲಿರುವ ಪಾರಂಪರಿಕ ಕಟ್ಟಡ • ಹಳೆಯ ಶೈಲಿಯಲ್ಲೇ ಮತ್ತೆ ನಿರ್ಮಾಣ

ಶತಮಾನ ಕಂಡು ಕಂಗೊಳಿಸುತ್ತಿದೆ 'ಕೃಂಬಿಗಲ್ ಭವನ'

• ಮನೋಹರ್ ಎಂ.

ಬೆಂಗಳೂರು ನಮ್ಮ ಹೆಮ್ಮೆ...



ಜಿ.ಎಚ್. ಕೃಂಬಿಗಲ್

ಕೃಂಬಿಗಲ್ ಭವನದ ಒಳಾಂಗಣ

ಲಾಲ್‌ಬಾಗ್ ಉದ್ಯಾನದಲ್ಲಿ ಮರುನಿರ್ಮಾಣಗೊಂಡಿರುವ ಕೃಂಬಿಗಲ್ ಭವನ ಪ್ರಜಾವಾಣಿ ಚಿತ್ರ: ರಂಜು ಪಿ.

ಬೆಂಗಳೂರು: ಲಾಲ್‌ಬಾಗ್ ಸಸ್ಯೋದ್ಯಾನದಲ್ಲಿರುವ 'ಕೃಂಬಿಗಲ್ ಭವನ' 162 ವರ್ಷಗಳಷ್ಟು ಹಳೆಯದಾದ ಕಟ್ಟಡ. ಉದ್ಯಾನಗಳ ಶಿಲ್ಪಿ ಎಂದೇ ಹೆಸರುವಾಸಿಯಾಗಿದ್ದ 'ಗುಸ್ತಾವ್ ಹರ್ಮನ್ ಕೃಂಬಿಗಲ್' ಅವರ ಹೆಸರಿನಿಂದ ಈ ಕಟ್ಟಡ ರಾಜಧಾನಿ 'ಉದ್ಯಾನ ನಗರಿ'ಯಾಗಿ ಹೊರಹೊಮ್ಮಿದ್ದರ ಹಿಂದಿನ ಶ್ರಮವನ್ನು ಸಾರುವ ಕುರುಹೂ ಹೌದು.

ತೋಟಗಾರಿಕೆ ಅಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಆಸಕ್ತರಿಗೆ ತರಬೇತಿ ಹಾಗೂ ಉಪನ್ಯಾಸ ನೀಡುವ ಉದ್ದೇಶದಿಂದ 1860ರಲ್ಲಿ ಸುಮಾರು 25x35 ಅಡಿ ವಿಸ್ತೀರ್ಣದಲ್ಲಿ ಈ ಆಕರ್ಷಕ ಕಟ್ಟಡವನ್ನು ನಿರ್ಮಿಸಲಾಗಿತ್ತು.

ಮೂಲತಃ ಜರ್ಮನಿಯವರಾದ, ಸಸ್ಯ ವಿಜ್ಞಾನಿಯಾಗಿದ್ದ ಜಿ.ಎಚ್.ಕೃಂಬಿಗಲ್ ಅವರು ಲಾಲ್‌ಬಾಗ್ ಸಸ್ಯೋದ್ಯಾನದ ಮುಖ್ಯ ಉಪಾಧಿಕಾರಿಗಳಲ್ಲಿ ಒಬ್ಬರು. ಅವರು 1920ರಿಂದ 1932ರವರೆಗೆ ಲಾಲ್‌ಬಾಗ್ ಉಸ್ತುವಾರಿ ಅಧಿಕಾರಿಯಾಗಿದ್ದರು. ಉದ್ಯಾನವನ್ನು ಈ ಅವಧಿಯಲ್ಲಿ ಬಲು ಜತನದಿಂದ ಹಾಗೂ ವ್ಯವಸ್ಥಿತವಾಗಿ ಬೆಳೆಸಿದ್ದರು. ಬೆಂಗಳೂರು 'ಉದ್ಯಾನ ನಗರಿ' ಎಂಬ ಪಟ್ಟ ಮುಡಿಗೇರಿಸಿಕೊಳ್ಳುವಲ್ಲಿ ಅವರ ಪಾತ್ರವೂ ಮಹತ್ವದ್ದು. ತೋಟಗಾರಿಕೆ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯ ಸ್ಮರಣಾರ್ಥ ಈ ಕಟ್ಟಡಕ್ಕೆ ಅವರ ಹೆಸರಿಡಲಾಗಿತ್ತು.

ನೋಡಲು ಥೇಟ್ ಹೈಕೋರ್ಟ್ ಕಟ್ಟಡದ ಶೈಲಿಯಲ್ಲೇ ಕಾಣುವ ಈ ಕಟ್ಟಡದ ಮುಂಭಾಗದಲ್ಲಿ ನಾಲ್ಕು ಕಂಬಗಳಿದ್ದು, ಮೇಲ್ಭಾಗದಲ್ಲಿ ಮೈಸೂರು ಸಾಮ್ರಾಜ್ಯದ ಲಾಂಛನವಾದ 'ಗಂಡಭೇರುಂಡ' ಜನರ ಗಮನ ಸೆಳೆಯುತ್ತದೆ.

ಶತಮಾನ ಕಂಡಿರುವ ಈ ಭವನ ಇತ್ತೀಚಿನ ವರ್ಷಗಳಲ್ಲಿ ಶಿಥಿಲಾವಸ್ಥೆ ತಲುಪಿತ್ತು. ಈ ಕಟ್ಟಡವನ್ನು ತೋಟಗಾರಿಕೆ ಇಲಾಖೆ ಮರುನಿರ್ಮಿಸಿದೆ. ಆದರೆ, ಬೆಂಗಳೂರಿನ ಇತಿಹಾಸದ ಕುರುಹನ್ನು ಹೊತ್ತ ಈ ಕಟ್ಟಡದ ಶೈಲಿಯನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ.

'ಈ ಕಟ್ಟಡವು 'ಮಾಲಿಗಳ ತರಬೇತಿ ಕೇಂದ್ರ'ವಾಗಿತ್ತು. ಮಾಲಿಗಳಿಗೆ ಉದ್ಯಾನದ ನಿರ್ವಹಣೆ, ಸಸ್ಯಗಳನ್ನು ಬೆಳೆಸುವುದು, ಪೋಷಣೆ ಸೇರಿದಂತೆ ಎಲ್ಲ ರೀತಿಯ ತರಬೇತಿಯನ್ನು ಇಲ್ಲಿ ನೀಡಲಾಗುತ್ತಿತ್ತು. ಕೃಂಬಿಗಲ್ ಅವರು ಉದ್ಯಾನದ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದ ಅವಧಿಯಲ್ಲಿ ಈ ಕಟ್ಟಡ ಅವರಿಗೆ ಹೆಚ್ಚು ಪ್ರಿಯವಾದ ಸ್ಥಳವಾಗಿತ್ತು. ಹಾಗಾಗಿ ಕಟ್ಟಡಕ್ಕೆ ಅವರ ಹೆಸರು ನಾಮಕರಣ ಮಾಡಲಾಯಿತು' ಎಂದು ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಎಂ.ಜಗದೀಶ್ ತಿಳಿಸಿದರು.

'ಸಂರಕ್ಷಿತ ಸಸ್ಯ ಮಾದರಿಗಳ ಸಂಗ್ರಹ ಮತ್ತು ವೈಜ್ಞಾನಿಕ ಅಧ್ಯಯನ ನಡೆಸುವ 'ಹರ್ಬೇರಿಯಂ'ಗಳೂ ಈ ಕಟ್ಟಡದಲ್ಲಿದ್ದವು. ಉದ್ಯಾನದಲ್ಲಿದ್ದ ಸಸಿಗಳು ಹಾಗೂ ಅವುಗಳ ಎಲೆಗಳು ಯಾವ ಪ್ರಭೇದಕ್ಕೆ ಸೇರುತ್ತವೆ ಎಂಬ ಮಾಹಿತಿಯ ದಾಖಲೀಕರಣ ಇಲ್ಲೇ ನಡೆಯುತ್ತಿತ್ತು' ಎಂದರು.

'ವರ್ಚುವಲ್ ಮ್ಯೂಸಿಯಂ'ಗೆ ಸಿದ್ಧತೆ

'ಕೃಂಬಿಗಲ್ ಭವನವನ್ನು ಮತ್ತಷ್ಟು ಪ್ರಸಿದ್ಧಿಗೊಳಿಸುವ ಉದ್ದೇಶದಿಂದ ಇದಕ್ಕೆ 'ವರ್ಚುವಲ್ ಮ್ಯೂಸಿಯಂ' ರೂಪ ನೀಡಲಿದ್ದೇವೆ. ಇಲ್ಲಿ 100 ಆಸನಗಳ ವ್ಯವಸ್ಥೆ ಇರಲಿದೆ' ಎಂದು ಜಗದೀಶ್ ಮಾಹಿತಿ ನೀಡಿದರು.

'ಕೃಂಬಿಗಲ್ ಅವರ ಜೀವನ, ಸಾಧನೆ, ತೋಟಗಾರಿಕೆಗೆ ಅವರ ಕೊಡುಗೆ, ಉದ್ಯಾನಗಳ ವಿನ್ಯಾಸ, ಲಾಲ್‌ಬಾಗ್ ಉದ್ಯಾನದ ಇತಿಹಾಸ, ಇಲ್ಲಿನ ವಿಶೇಷ ಸಸ್ಯಸಂಪತ್ತು, ಫಲಪುಷ್ಪ ಪ್ರದರ್ಶನ ಸೇರಿದಂತೆ ಎಲ್ಲ ವಿಷಯಗಳ ಮೇಲೆ ಬೆಳಕು ಚೆಲ್ಲುವ ವಿಚಾರಗಳನ್ನು ಮ್ಯೂಸಿಂಯಿನ ಒಳಗೋಡೆಗಳ ಮೇಲೆ ಪ್ರದರ್ಶಿಸಲಾಗುವುದು. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಇದಕ್ಕೆ ಸಂಬಂಧಿಸಿದ ಸಾಕ್ಷ್ಯಚಿತ್ರಗಳ ಪ್ರದರ್ಶನವೂ ಇರಲಿದೆ' ಎಂದು ವಿವರಿಸಿದರು.

'ಸಾರ್ವಜನಿಕರು ಉದ್ಯಾನ ಸುತ್ತುವ ಮುನ್ನ ಇಲ್ಲಿ ಸಾಕ್ಷ್ಯಚಿತ್ರಗಳನ್ನು ವೀಕ್ಷಿಸಿದರೆ, ಉದ್ಯಾನದ ಸಂಪೂರ್ಣ ಮಾಹಿತಿ ಪಡೆದುಕೊಳ್ಳಬಹುದು. ಕೃಂಬಿಗಲ್ ಅವರ ವಿಚಾರಗಳನ್ನು ಜನರಿಗೆ ತಿಳಿಸುವುದರ ಜೊತೆಗೆ ಇಲಾಖೆಗೂ ವರಮಾನ ಬರುವಂತೆ ಮಾಡುವ ಸಲುವಾಗಿ ಮ್ಯೂಸಿಯಂಗೆ ಪ್ರವೇಶ ಶುಲ್ಕ ನಿಗದಿ ಮಾಡುವ ಚಿಂತನೆಯೂ ಇದೆ. ಈ ಕುರಿತು ಸದ್ಯದಲ್ಲೇ ಸಭೆ ನಡೆಸಲಿದ್ದೇವೆ' ಎಂದು ಹೇಳಿದರು.

'ಶತಮಾನಗಳಷ್ಟು ಹಳೆಯ ಕಟ್ಟಡ ಇತ್ತೀಚಿನ ವರ್ಷಗಳಲ್ಲಿ ಶಿಥಿಲಾವಸ್ಥೆ ತಲುಪಿತ್ತು. ಭಾರಿ ಮಳೆಯಿಂದ ಕಟ್ಟಡ ಬಹುತೇಕ ಕುಸಿದಿತ್ತು. ಬಳಿಕ ಕಟ್ಟಡದ ಮರುಸ್ಥಾಪನೆ ಕುರಿತು ಸಿವಿಲ್ ಏಯ್ಡ್ ಟೆಕ್ನಾಲಜೀಸ್ ಸಂಸ್ಥೆಯಿಂದ ತಾಂತ್ರಿಕ ಸಲಹೆ ಕೇಳಿದೆವು. ಅವರು ಕಟ್ಟಡವನ್ನು ಯಥಾವತ್ತಾಗಿ ಮರುನಿರ್ಮಿಸುವಂತೆ ವರದಿ ನೀಡಿದರು' ಎಂದು ವಿವರಿಸಿದರು.

'ಇಲಾಖೆ ಮನವಿ ಮೇರೆಗೆ ಪುರಾತತ್ವ ಇಲಾಖೆಯ ತಾಂತ್ರಿಕ ಸಮಿತಿ ಬಂದು ಸ್ಥಳ ಪರಿಶೀಲಿಸಿತು. ಯಥಾವತ್ತಾಗಿ ಕಟ್ಟಡ ನಿರ್ಮಾಣ ಮಾಡಲು ಅಂತಿಮ ನಿರ್ಧಾರ ಕೈಗೊಂಡರು. ₹1 ಕೋಟಿ ವೆಚ್ಚದಲ್ಲಿ ಹಳೆಯ ಶೈಲಿಯಲ್ಲೇ ಕಟ್ಟಡವನ್ನು ಮರುನಿರ್ಮಿಸಲಾಯಿತು. ಒಂದೂವರೆ ವರ್ಷದಲ್ಲಿ ಹೊಸ ಭವನ ಸಿದ್ಧವಾಗಿದೆ' ಎಂದು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ರೌಡಿ 'ಚೋಟಾ ಟೈಗರ್' ಬಂಧನ

ಬೆಂಗಳೂರು: ಅಪರಾಧ ಕೃತ್ಯಗಳನ್ನು ಎಸಗುತ್ತ ಜನರಲ್ಲಿ ಭಯವನ್ನುಂಟು ಮಾಡುತ್ತಿದ್ದ ರೌಡಿ ಮಹಮ್ಮದ್ ತಬ್ರೇಜ್ ಅಲಿಯಾಸ್ 'ಚೋಟಾ ಟೈಗರ್'ನನ್ನು (44) ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಲಾಗಿದೆ.

'ಮುನಿರೆಡ್ಡಿಪಾಳ್ಯದ ಮಾರಪ್ಪ ಬ್ಲಾಕ್‌ನ ನಿವಾಸಿ ತಬ್ರೇಜ್, 2009ರಿಂದ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ. ಈತನ ಹೆಸರು ಜೆ.ಸಿ.ನಗರ ಠಾಣೆಯ ರೌಡಿ ಪಟ್ಟಿಯಲ್ಲಿದೆ' ಎಂದು ಪೊಲೀಸರು ಹೇಳಿದರು.

'ಕೊಲೆ, ಕೊಲೆ ಯತ್ನ, ಸುಲಿಗೆ, ಜೀವ ಬೆದರಿಕೆ, ಹಲ್ಲೆ ಸೇರಿದಂತೆ 16 ಪ್ರಕರಣಗಳಲ್ಲಿ ತಬ್ರೇಜ್ ಆರೋಪಿಯಾಗಿದ್ದ. ಹಲವು ಬಾರಿ ಜೈಲಿಗೆ ಹೋಗಿದ್ದ ಆರೋಪಿ ಜಾಮೀನಿನ ಮೇಲೆ ಹೊರಬಂದಿದ್ದ. ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ.' 'ಆರೋಪಿಯನ್ನು ಪತ್ತೆ ಮಾಡಿದ್ದ ಪೊಲೀಸರು, ಗೂಂಡಾ ಕಾಯ್ದೆಯಡಿ ಬಂಧಿಸಲು ಅನುಮತಿ ಕೋರಿ ಕಮಿಷನರ್ ಅವರಿಗೆ ವರದಿ ನೀಡಿದ್ದರು. ಅದಕ್ಕೆ ಒಪ್ಪಿಗೆ ಸಿಗುತ್ತಿದ್ದಂತೆ, ತಬ್ರೇಜ್‌ನನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ' ಎಂದೂ ತಿಳಿಸಿದರು.

ಜೂಜು: ಫ್ಲ್ಯಾಟ್ ಮೇಲೆ ಸಿಸಿಬಿ ದಾಳಿ

ಬೆಂಗಳೂರು: ಸದಾಶಿವನಗರದ ಕರ್ಮ ಪ್ಯಾಲೇಸ್ ಸರ್ವೀಸ್ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಜೂಜಾಟದಲ್ಲಿ ತೊಡಗಿದ್ದ ಐವರನ್ನು ಬಂಧಿಸಿದ್ದಾರೆ.

'ಸ್ಥಳೀಯ ಹಾಗೂ ಹೊರಗಿನ ಜನರೆಲ್ಲ ಸೇರಿಕೊಂಡು ಫ್ಲ್ಯಾಟ್‌ನಲ್ಲಿ ಅಕ್ರಮವಾಗಿ ಜೂಜು ಆಡುತ್ತಿದ್ದ ಮಾಹಿತಿ ಬಂದಿತ್ತು. ದಾಳಿ ಮಾಡಿ ಐವರನ್ನು ಬಂಧಿಸಲಾಗಿದೆ. ₹ 1.37 ಲಕ್ಷ ನಗದು ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

YOUR LONG Cherished Ambition to start your own Daily Newspaper (Political/ Business) For Startup, an experienced Editor, who can oversee 24/7 in all areas of Production/ Circulation/ Marketing available. Contact PASUPATHI PROJECTS:- 9342247637.

GLOBAL STOCK Trading with Innovative Ideas. High Returns. Less Risk. Details Contact: PASUPATHI PROJECTS:- 9342247637.

Consultants

RETIRED BANK Officials can assist you For Loan Closure and One Time Settlement of Bank NPA Loans. Call Arun 9945699789. We are not Financiers.

Advertising Agency

ADVERTISING TRAINING (Every Sunday) to book Advertisements in All Newspapers with Recognition. PASUPATHI PROJECTS:- 9342247637.

Business Offers

Business For Sale

SALE WELL known schools and College in Bangalore for take over . Call Arun 9845077299.

General

WASTE MANAGEMENTAT Sandeep Vihar, an Army Welfare Housing Colony of 1524 flats near Seegahalli, on Whitefield - Hosakote Road invites proposals from reputed wet, reject and dry waste management agencies with relevant certifications for AMC for one year from 01 June 2022. Respond on svaoa.vendorteam@gmail.com by 01 April for tender documents.Contact 7348872675

AUTOMOTIVE

Four Wheelers Selling

Tata

DISPOSAL OF TATA TIGOR XZA AMT BS4 KA-41 MB-5232 March 2018 need quotation with & without RC in a week. Insured-9481821223, Workshop: Manoj-9606442075, Narayan-9448237007.

MATRIMONIAL

Brides Wanted

Kannada

ವಧು ಬೇಕಾಗಿದೆ
ಮದುವೆಯಾಗದ 48 ವರ್ಷ ವರನಿಗೆ MNC ಕಂಪನಿಯಲ್ಲಿ ಮ್ಯಾನೇಜರ್ ಆಗಿದ್ದು ಜಾತಿ ಅಭ್ಯಂತರವಿಲ್ಲದ ವಧು ಬೇಕಾಗಿದೆ.
ಸಂಪರ್ಕಿಸಿ: 9448396809

Bride Required Others

CASTE NO BAR, Brahmin, 38, MBA, 5'6", rich family, MNC Bangalorebased. Contact Ushodhaya: 9611919477

CASTE NO BAR Hindu, 43, MA, 5' 9" Rich, Only Son. Contact Ushodhaya :9611919477

SC/ ST

SC-ADI KARNATAKA (Right) Kannada-Boy 27years BE-working in-MNC Bangalore require Bride-with any-degree employed-from decent-family. 9242135834/ 7760388195

Grooms Wanted

Others

CASTE NO bar, Balija 27, 5'6" MCA, Bangalore based, only daughter, . Contact Ushodhaya: 9611919477

Brahmin

ALLIANCE INVITED from B.E./ MBA/ MCA Good-looking, Well Placed, Cultured, Madhwa/ Smartha, Brahmin Boy- Age: 26-29/30 for a Madhwa Brahmin/ Atreyasa Gotra- Fair, Beautiful Cultured Girl 25/ 5'4' M.Com/ CMA- Inter. Parents to Contact: 91102-35083

BRAHMIN 25 years , 5' 5" MBA only daughter. For details Contact Ushodhaya : 9611919477

Second Marriage

BRAHMIN 33 5'6" MBA MNC Bangalore based, only Daughter. Caste Nobar. Contact Ushodhaya: 9611919477

Matrimonial Bureaus

ವೈವಾಹಿಕ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಸುಮ ಗೋಪಾಲಕೃಷ್ಣ
ದೂರವಾಣಿ: 9886908152

PUBLIC NOTICE

INVITING EXPRESSION OF INTEREST
I, **Mr.Kirti K Mehta** is absolute owner and in possession of the properties mentioned hereunder. Sl.no.1 Property Residential Property bearing no.70, 2nd Phase, 2nd Stage, West of Chord Road, Bangalore-560086 Extent 2400 sq.ft. Base Price Rs.4.15 Crores The above mentioned property for sale is under SWISS Challenge method, based on existing offer in hand for Rs.4.15 crores, interested/ eligible buyers having adequate financial capability may offer above the Base Price with in 7 days and the Primary Offeror, has the first right to reject under Swiss Challenge Method.
Contact Mr.Kirti K Mehta Mobile No.9845026430

WEEKEND CORNER

SKEMATEKS TECHNOLOGIES PVT LTD
TOTAL BARCODE SOLUTION
Mfg : Barcode Labels, Taffeta, Doom Labels, SPECIAL LABELS & TTR RIBBONS

SRS Road, Peenya 1st Stage, Bengaluru-58
M: 9845339901 Email: skemateks@gmail.com

ಹಾರ್ದಿಕ ಅಭಿನಂದನೆಗಳು

ಬಾಡಿ ಬಿಲ್ಡಿಂಗ್ ಸ್ಪರ್ಧೆಯಲ್ಲಿ 'ಮಿಸ್ಟರ್ ಬೆಂಗಳೂರು ಪ್ರಶಸ್ತಿ' ಯನ್ನು ಮಾನ್ಯ ಕೆ.ವಿ. ರಾಮು, ಐಟಿಐ ರವರ ಮಗನಾದ ಮಾ॥ ರಜತ್ ಆರ್.ಎಸ್. ರವರು ನಗರಾಭಿವೃದ್ಧಿ ಸಚಿವರಾದ ಶ್ರೀ ಬಿ.ಎ. ಬಸವರಾಜುರವರಿಂದ ದಿನಾಂಕ : 06–03–2022 ರಂದು ಪ್ರಶಸ್ತಿ ಸ್ವೀಕರಿಸಿದರು.

PUBLIC NOTICE
Public Notice-1
Mohan Kumar M car KA01ML6206, in date 30/10/2019. If not collected the vehicle by or within 15 days of this notice. The vehicle will be disposed off.
Public Notice-2
Mr. Bhaskar car KA05MV6053, in date 14/10/2019. If not collected the vehicle by or within 15 days of this notice. The vehicle will be disposed off.
Surakshaa Car Care Pvt Ltd
Contact: Mr. Bharath Reddy : 9449865603

PERSONAL

Change of Name

I, IRULAPPAN Meenambigai, D/o. Irulappan, aged about 44 years, W/o. Karthikeyan, residing No.Flat No. 002, Block-C, Alpine Park, Begur Main Road, Opp CMC Building, Bommanahalli, Bangalore-68, have changed my name to MEENAMBIGAI Vide Affidavit dated 18-03-2022 sworn before Advocate & Notary Jain Swarnamala, Bengaluru

I, CHAGANLAL PARMAR, Residing at No. 6/1, B.N.P Nilaya, 3rd Cross, Magadi Road, Bangalore- 560023, have changed my name to CHAGAN LAL vide affidavit dated 19.03.2022, before notary C.N. Chandrashekar, Bangalore. Henceforth I shall be called CHAGAN LAL only.

I, SUHEEL ARIFF SAIT Residing at No. 23, S1, 3rd Floor, Ishwarya Court, 2nd Cross, Hennur Main Road, Kacharakana Halli, Bengaluru- 560084, have changed my name to SUHAIL SIAT, vide affidavit dated 19.03.2022, before notary K. Venkateshan, Bangaore. Henceforth I shall be called SUHAIL SAIT only.

I, CHIRALA LAKSHMI NAGA PUJITHA W/o No.15333708L Rank:Hav Name: Alumolu Prasad Reddy R/a H.No. 9-87, Vill: Seelamvaripalem, PO: Pereli, Gundur, Andra Pradesh have changed my name to ALUMOLU LAKSHMI NAGA PUJITHA vide affidavit dated 19.03.2022 before notary A.R.Muneer Ahmed, Bangalore.

I, TALANKI RAJESH RAJNI resident of No. 675, Stella Convent Road, Behind National College Hostel, V.V. Puram, Gauribidanur 561208, have changed my name to TALANKI RAJESH RAJANI, vide affidavit dated 18-03-2022 sworn to before notary K.H. Venkatappa, Chickballapur.

I, NIVAS BABU M S/o Manickam M residing at No.29, 1st Floor, VI Cross, Vasanthanagar, Bangalore-560052 have changed my name to RAAJ NIVAS BABHU M vide affidavit dated 18.03.2022 sworn before notary P.N.Nagesha, Bangalore-26.

I, KAVYA Shidlingesh Savanur W/o. Shidlingesh Savanur R/at. Chandragiri, Taluk: Hanagal, Dist: Haveri, Post: Belagalapeti Pin-581104 have changed my name from Megha Chandrappa Negaluru to KAVYA SHIDLINGESH SAVANUR vide affidavit dated 19/03/2022 before notary L. Gopalakrishna, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

MORE Classifieds IN SUPPLEMENT

DH ಪ್ರಜಾವಾಣಿ

BOOK YOUR REAL ESTATE

Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಕಾರ್ಯಾಚರಣೆ ವೇಳೆ ಸಿಕ್ಕಿದ್ದ ₹80 ಲಕ್ಷ ಮೌಲ್ಯದ ತುಂಡುಗಳು

750 ಕೆ.ಜಿ ರಕ್ತಚಂದನ ಮುಚ್ಚಿಟ್ಟರಾ ಪೊಲೀಸರು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಮೂರ್ತಿ ನಗರ ಪೊಲೀಸರು ಅಕ್ರಮವಾಗಿ 750 ಕೆ.ಜಿ ರಕ್ತಚಂದನ ಜಪ್ತಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸದೇ ಮುಚ್ಚಿಟ್ಟಿದ್ದ ಆರೋಪ ಕೇಳಿಬಂದಿದ್ದು, ಈ ಬಗ್ಗೆ ಕಮಿಷನರ್ ಕಮಲ್ ಪಂತ್ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ದೂರು ಸಲ್ಲಿಕೆಯಾಗಿದೆ.

ವಿಜಿನಾಪುರದ ನಿವಾಸಿ ಜಗನ್ ಕುಮಾರ್ ಎಂಬುವರು ಮಾರ್ಚ್ 16ರಂದು ದೂರು ಸಲ್ಲಿಸಿದ್ದಾರೆ. ರಕ್ತಚಂದನದ ಫೋಟೊ ಹಾಗೂ ವಿಡಿಯೊಗಳನ್ನು ದೂರಿನ ಜೊತೆ ನೀಡಿದ್ದಾರೆ. ದೂರು ಪರಿಶೀಲಿಸಿರುವ ಕಮಿಷನರ್, ಸೂಕ್ತ ತನಿಖೆ ನಡೆಸಿ ವರದಿ ನೀಡುವಂತೆ ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ಅವರಿಗೆ ಸೂಚಿಸಿದ್ದಾರೆ.

'ರಾಮಮೂರ್ತಿನಗರ ಠಾಣೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳಾದ ಮೌನೇಶ್ ಹಾಗೂ ಅರವಿಂದ್ ಕುಮಾರ್ ನೇತೃತ್ವದ ತಂಡ, ಬೆಳ್ತಂಗಡಿ ಹಾಗೂ ಮಂಗಳೂರು ನಡುವಿನ ವೇಣೂರು ಅರಣ್ಯ ಪ್ರದೇಶದಲ್ಲಿ 2021ರ ಅಕ್ಟೋಬರ್ 23ರಂದು 750 ಕೆ.ಜಿ ರಕ್ತ ಚಂದನದ ತುಂಡುಗಳನ್ನು (ಸುಮಾರು ₹ 80 ಲಕ್ಷ ಮೌಲ್ಯದ್ದು) ಜಪ್ತಿ ಮಾಡಿತ್ತು. ಸ್ಥಳೀಯ ಪೊಲೀಸರಿಗೆ ಯಾವುದೇ ಮಾಹಿತಿಯನ್ನೂ ನೀಡದೇ, ತುಂಡುಗಳನ್ನು ಇನ್ನೋವಾ ಕಾರಿನಲ್ಲಿ ರಾಮಮೂರ್ತಿನಗರ ಠಾಣೆಗೆ ತಂದಿತ್ತು' ಎಂದು ದೂರಿನಲ್ಲಿ ಜಗನ್‌ಕುಮಾರ್ ಅವರು ಉಲ್ಲೇಖಿಸಿದ್ದಾರೆ.

ಆರೋಪ ಸುಳ್ಳೆಂದ ಡಿಸಿಪಿ



ಭೀಮಾಶಂಕರ್

'750 ಕೆ.ಜಿ ರಕ್ತಚಂದನವನ್ನು ಪೊಲೀಸರು ಮುಚ್ಚಿಟ್ಟಿದ್ದಾರೆಂಬ ಆರೋಪ ಸುಳ್ಳು' ಡಿಸಿಪಿ ಭೀಮಾಶಂಕರ್ ಗುಳೇದ್ ಹೇಳಿದ್ದಾರೆ.

'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, 'ಗಾಂಜಾ ಮಾರಾಟ ಪ್ರಕರಣ ಭೇದಿಸಲು ಪೊಲೀಸರ ವಿಶೇಷ ತಂಡ ರಚಿಸಲಾಗಿತ್ತು. ಅದೇ ತಂಡ, ಗ್ರಾಹಕರ ವೇಷದಲ್ಲಿ ಕಾರ್ಯಾಚರಣೆ ಆರಂಭಿಸಿತ್ತು. ವೇಣೂರಿನಲ್ಲಿ ಗಾಂಜಾ ಬಚ್ಚಿಟ್ಟಿದ್ದ ಬಗ್ಗೆ ಪೆಡ್ಲರ್ ಮಾಹಿತಿ ನೀಡಿದ್ದ. ಹೀಗಾಗಿ, ವಿಶೇಷ ತಂಡ ಗಾಂಜಾ ಜಪ್ತಿ ಮಾಡಲು ವೇಣೂರಿಗೆ ಹೋಗಿತ್ತು. ಪೆಡ್ಲರ್ ಸೂಚಿಸಿದ್ದ ಸ್ಥಳದಲ್ಲಿ ಗಾಂಜಾ ಬದಲು, 165 ಕೆ.ಜಿ ರಕ್ತಚಂದನದ 16 ತುಂಡುಗಳು ಪತ್ತೆಯಾಗಿದ್ದವು' ಎಂದೂ ತಿಳಿಸಿದ್ದಾರೆ.

'ತುಂಡುಗಳನ್ನು ಠಾಣೆಗೆ ತಂದಿದ್ದ ಪೊಲೀಸರು, ಆ ಬಗ್ಗೆ ಠಾಣೆ ಡೈರಿಯಲ್ಲಿ ನಮೂದಿಸಿದ್ದರು. ಹಿರಿಯ ಅಧಿಕಾರಿಗಳು ಹಾಗೂ ಕಾನೂನು ತಜ್ಞರ ಸಲಹೆ ಪಡೆದು ಎರಡು ದಿನ ಬಿಟ್ಟು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ' ಎಂದು ಭೀಮಾಶಂಕರ್ ಹೇಳಿದ್ದಾರೆ. 'ರಕ್ತಚಂದನ ಮುಚ್ಚಿಟ್ಟಿದ್ದ ಬಗ್ಗೆ ದೂರು ಬರುತ್ತಿದ್ದಂತೆ ಎಸಿಪಿ ಮೂಲಕ ತನಿಖೆ ಮಾಡಿಸಲಾಗಿದೆ. ಅದರ ವರದಿಯನ್ನು ಸದ್ಯದಲ್ಲೇ ಕಮಿಷನರ್ ಅವರಿಗೆ ಸಲ್ಲಿಸಲಾಗುವುದು' ಎಂದೂ ತಿಳಿಸಿದ್ದಾರೆ.

ಪಾತ್ರೆಗಳಲ್ಲಿ ₹ 9.23 ಕೋಟಿ ಮೌಲ್ಯದ ಡ್ರಗ್ಸ್

ಪ್ರಜಾವಾಣಿ ವಾರ್ತೆ

ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿರುವ ಡ್ರಗ್ಸ್ ಹಾಗೂ ಪಾತ್ರೆಗಳು

ಬೆಂಗಳೂರು: ಅಡುಗೆ ಪಾತ್ರೆಗಳಲ್ಲಿ ಬಚ್ಚಿಟ್ಟು ಸಾಗಿಸುತ್ತಿದ್ದ ₹ 9.23 ಕೋಟಿ ಮೌಲ್ಯದ ಮಾದಕ ವಸ್ತುವನ್ನು (ಡ್ರಗ್ಸ್) ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಕೋರಿಯರ್‌ನಲ್ಲಿ ಡ್ರಗ್ಸ್ ಸಾಗಿಸುತ್ತಿದ್ದ ಬಗ್ಗೆ ಇಂಟೆಲಿಜೆನ್ಸ್ ವಿಭಾಗದಿಂದ ಮಾಹಿತಿ ಬಂದಿತ್ತು. ನಿಲ್ದಾಣದ ಸರಕು ವಿಭಾಗದಲ್ಲಿ ಪರಿಶೀಲನೆ ನಡೆಸಿದಾಗ 46 ಕೆ.ಜಿ 799 ಗ್ರಾಂ ಎಫೆಡ್ರೈನ್ ಡ್ರಗ್ಸ್ ಪತ್ತೆಯಾಯಿತು' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

'ಚೆನ್ನೈನಿಂದ ಆಸ್ಟ್ರೇಲಿಯಾಕ್ಕೆ ಅಡುಗೆ ಪಾತ್ರೆಗಳನ್ನು ಕೋರಿಯರ್ ಮೂಲಕ ಕಳುಹಿಸಲಾಗುತ್ತಿತ್ತು. ಅದೇ ಕೋರಿಯರ್ ಮೇಲೆ ಅನುಮಾನ ಬಂದಿತ್ತು. ಪಾತ್ರೆಗಳನ್ನು ಹೊರತೆಗೆದು, ಪರಿಶೀಲನೆ ನಡೆಸಿದಾಗ ಡ್ರಗ್ಸ್ ಪೊಟ್ಟಣಗಳು ಸಿಕ್ಕವು' ಎಂದೂ ತಿಳಿಸಿವೆ.

'ಡ್ರಗ್ಸ್ ಸಾಗಣೆ ಬಗ್ಗೆ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಯಾರು ಯಾರಿಗೆ ಡ್ರಗ್ಸ್ ಕಳುಹಿಸುತ್ತಿದ್ದರೆಂಬ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದೂ ಕಸ್ಟಮ್ಸ್ ಮೂಲಗಳು ಹೇಳಿವೆ.

ಆಟೊ ಹರಿದು ಬಾಲಕಿ ಸಾವು

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಗೂಡ್ಸ್ ಆಟೊದ ಚಕ್ರ ಮೈಮೇಲೆ ಹರಿದು ನಾಲ್ಕು ವರ್ಷದ ಬಾಲಕಿ ಭುವನಾ ಮೃತಪಟ್ಟಿದ್ದಾಳೆ.

'ಮಾರ್ಚ್ 17ರಂದು ಈ ಅವಘಡ ಸಂಭವಿಸಿದೆ. ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಆಟೊ ಚಾಲಕ ಧನಂಜಯ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಅಡುಗೆ ಅನಿಲ ಸಿಲಿಂಡರ್ ಸಾಗಿಸುತ್ತಿದ್ದ ಆಟೊ ಚಾಲಕ, ಕಾಮಾಕ್ಷಿಪಾಳ್ಯ ಬಳಿಯ ಕಾವೇರಿಪುರಕ್ಕೆ ಬಂದಿದ್ದ. ರಸ್ತೆ ಪಕ್ಕದಲ್ಲಿ ಇಳಿಜಾರಿನಲ್ಲಿ ಆಟೊ ನಿಲ್ಲಿಸಿ, ಹ್ಯಾಂಡ್ ಬ್ರೇಕ್ ಹಾಕದೇ ಇಳಿದು ಹೋಗಿದ್ದ. ಆಟೊ ಸಮೀಪದಲ್ಲೇ ಎಳನೀರು ಅಂಗಡಿ ಇತ್ತು. ಬಾಲಕಿ ಭುವನಾ, ತಾಯಿ ಜೊತೆಯಲ್ಲಿ ಎಳನೀರು ಕುಡಿಯಲು ಬಂದಿದ್ದಳು.'

'ಬಾಲಕಿ ಎಳನೀರು ಕುಡಿಯುತ್ತಿದ್ದ ಸಂದರ್ಭದಲ್ಲೇ, ಇಳಿಜಾರಿನಲ್ಲಿ ಆಟೊ ಮುಂದಕ್ಕೆ ಚಲಿಸಿ ಬಾಲಕಿಗೆ ಗುದ್ದಿ ಮೈಮೇಲೆ ಹರಿದಿತ್ತು. ತೀವ್ರ ಗಾಯಗೊಂಡಿದ್ದ ಬಾಲಕಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಬಾಲಕಿ ತೀರಿಕೊಂಡಿದೆ. ಅಪಘಾತದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಅದನ್ನು ಪರಿಶೀಲಿಸಲಾಗುತ್ತಿದೆ' ಎಂದೂ ಹೇಳಿವೆ.

ಗೃಹಿಣಿ ಆತ್ಮಹತ್ಯೆ: ಪತಿ ವಿರುದ್ಧ ದೂರು

ಬೆಂಗಳೂರು: ಸುಬ್ರಹ್ಮಣ್ಯನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಇಂದುಶ್ರೀ (28) ಎಂಬುವರು ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಗಾಯತ್ರಿನಗರದ ನಿವಾಸಿ ಇಂದುಶ್ರೀ, ರಾಕೇಶ್ ಎಂಬುವರನ್ನು 9 ತಿಂಗಳ ಹಿಂದಷ್ಟೇ ಮದುವೆಯಾಗಿದ್ದರು. ಆತ್ಮಹತ್ಯೆಗೆ ಪತಿಯೇ ಕಾರಣವೆಂದು ತಂದೆ ದೂರು ನೀಡಿದ್ದಾರೆ. ಅದರನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ರಂಗಭೂಮಿ ಕಲಾವಿದೆ ಮೇಲೆ ಆ್ಯಸಿಡ್ ದಾಳಿ

ಬೆಂಗಳೂರು: ನಂದಿನಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ರಂಗಭೂಮಿ ಕಲಾವಿದೆ ದೇವಿ (51) ಎಂಬುವರ ಮೇಲೆ ಆ್ಯಸಿಡ್ ದಾಳಿ ನಡೆದಿದ್ದು, ತೀವ್ರ ಗಾಯಗೊಂಡಿರುವ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

'ದೇವಿ ಅವರ ದೇಹದಲ್ಲಿ ಶೇ 20ರಷ್ಟು ಸುಟ್ಟ ಗಾಯಗಳಾಗಿವೆ. ಅವರ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆ್ಯಸಿಡ್ ಎರಚಿದ್ದಾನೆ ಎನ್ನಲಾದ ರಂಗಭೂಮಿ ಕಲಾವಿದರೊಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಿಎಂಟಿಸಿ ನಿರ್ವಾಹಕರಾಗಿದ್ದ ದೇವಿ, ಅನಾರೋಗ್ಯದಿಂದಾಗಿ ಕೆಲಸಕ್ಕೆ ರಾಜೀನಾಮೆ ನೀಡಿದ್ದರು. ಕಲಾವಿದೆಯಾಗಿ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದರು. ಇಬ್ಬರು ಮಕ್ಕಳ ಜೊತೆ ಗಣೇಶ್ ಬ್ಲಾಕ್‌ನಲ್ಲಿ ವಾಸವಿದ್ದರು' ಎಂದೂ ತಿಳಿಸಿವೆ.

'ಮಾರ್ಚ್ 17ರಂದು ರಾತ್ರಿ ದೇವಿ ಹಾಗೂ ಮಕ್ಕಳು ಮನೆಯಲ್ಲಿ ಮಲಗಿದ್ದರು. ಸೆಕೆ ಹೆಚ್ಚಿದ್ದರಿಂದ ಗಾಳಿಯಾಡಲು ಬಾಗಿಲು ತೆರೆದಿದ್ದರು. ಮಾರ್ಚ್ 18 ನಸುಕಿನಲ್ಲಿ ಮನೆಯೊಳಗೆ ನುಗ್ಗಿದ್ದ ಆರೋಪಿ, ದೇವಿ ಮೈ ಮೇಲೆ ಆ್ಯಸಿಡ್ ಎರಚಿ ಓಡಿ ಹೋಗಿದ್ದರು. ಮುಖ ಹಾಗೂ ಬೆನ್ನಿಗೆ ಸುಟ್ಟ ಗಾಯಗಳಾಗಿದ್ದರಿಂದ ದೇವಿ ಅವರನ್ನು ಕೆ.ಸಿ. ಜನರಲ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ನಾಟಕ ಕಂಪನಿಯಲ್ಲಿ ಗಲಾಟೆ: 'ವಶಕ್ಕೆ ಪಡೆದಿರುವ ಆರೋಪಿ ಹಾಗೂ ದೇವಿ, ಒಂದೇ ನಾಟಕ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ನಡುವೆ ಇತ್ತೀಚೆಗೆ ಗಲಾಟೆ ಆಗಿತ್ತು. ಸಿಟ್ಟಾದ ಆರೋಪಿ, ದೇವಿ ಮೇಲೆ ಆ್ಯಸಿಡ್ ಎರಚಿರುವ ಅನುಮಾನವಿದೆ. ಆರೋಪಿ ವಿಚಾರಣೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಿನ್ನಾಭರಣ ಸುಲಿಗೆ: ಮೂವರ ಬಂಧನ

ಬೆಂಗಳೂರು: ವ್ಯಾಪಾರಿಯನ್ನು ಬೆದರಿಸಿ ಚಿನ್ನಾಭರಣ ಸುಲಿಗೆ ಮಾಡಿದ್ದ ಆರೋಪದಡಿ ಮೂವರನ್ನು ಹಲಸೂರು ಗೇಟ್ ಪೊಲೀಸರು ಬಂಧಿಸಿದ್ದಾರೆ.

'ನಾಗ್ಪುರದ ರಾಜಾ ಅಲಿ, ನಾದಿರ್ ಜೈಬಿ, ವಿಕಾಸ್ ಬಂಧಿತರು. ಅವರಿಂದ 1 ಕೆ.ಜಿ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ರಾಜಾಜಿನಗರದ ಚಿನ್ನದ ವ್ಯಾಪಾರಿ ಚೇತನ್ ಎಂಬುವರ ಬಳಿ ಪ್ರಭುರಾಮ್ ಕೆಲಸ ಮಾಡುತ್ತಿದ್ದರು. ಮಾಲೀಕನ ಸೂಚನೆಯಂತೆ ಪ್ರಭುರಾಮ್, 1 ಕೆ.ಜಿ 700 ಗ್ರಾಂ ಚಿನ್ನಾಭರಣ ತೆಗೆದುಕೊಂಡು ಫೆ. 12ರಂದು ಬೈಕ್‌ನಲ್ಲಿ ಹೊರಟಿದ್ದರು. ಅವರನ್ನು ಅಡ್ಡಗಟ್ಟಿದ್ದ ಆರೋಪಿಗಳು, ತಮ್ಮ ಬ್ಯಾಗ್‌ನಲ್ಲಿ ಪಿಸ್ತೂಲ್ ಇರುವುದಾಗಿ ಹೇಳಿ ಬೆದರಿಸಿ ಚಿನ್ನಾಭರಣ ಸುಲಿಗೆ ಮಾಡಿಕೊಂಡು ಪರಾರಿಯಾಗಿದ್ದರು' ಎಂದರು.

'ಕೃತ್ಯದ ಬಗ್ಗೆ ಪ್ರಭುರಾಮ್ ದೂರು ನೀಡಿದ್ದರು. ತನಿಖೆ ಕೈಗೊಂಡಾಗ ಆರೋಪಿಗಳ ಸುಳಿವು ಸಿಕ್ಕಿತ್ತು. ನಾಗ್ಪುರಕ್ಕೆ ಹೋದ ತಂಡ, ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತಂದಿದೆ. ರಾಜಸ್ಥಾನ, ಉತ್ತರ ಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲೂ ಆರೋಪಿಗಳು ಸುಲಿಗೆ ಮಾಡಿರುವುದು ಗೊತ್ತಾಗಿದೆ' ಎಂದರು.

'ಪ್ರಭುರಾಮ್ ಅವರನ್ನು ತಡೆದಿದ್ದ ಆರೋಪಿಗಳು, 'ದೇವರು ನಿನಗೆ ಒಳ್ಳೆಯದು ಮಾಡುತ್ತಾನೆ' ಎಂದು ಮಾತು ಆರಂಭಿಸಿದ್ದರು. ಅದೇ ಸಮಯದಲ್ಲೇ ಇನ್ನಿಬ್ಬರು ಆರೋಪಿಗಳು, ಪಿಸ್ತೂಲ್ ಇರುವುದಾಗಿ ಬೆದರಿಸಿ ಸುಲಿಗೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ಪತ್ನಿ ಜೊತೆ ಸಲುಗೆ: ಜೈಲಿನಿಂದಲೇ ಕೊಲೆ ಸಂಚು

ಬೆಂಗಳೂರು: ತನ್ನ ಪತ್ನಿ ಜೊತೆ ಸಲುಗೆ ಇಟ್ಟುಕೊಂಡಿದ್ದವನ ಕೊಲೆಗೆ ಜೈಲಿನಿಂದಲೇ ರೌಡಿಯೊಬ್ಬ ಸಂಚು ರೂಪಿಸಿದ್ದ ಪ್ರಕರಣ ಭೇದಿಸಿರುವ ಸಿಸಿಬಿ ಪೊಲೀಸರು, 9 ಮಂದಿಯನ್ನು ಬಂಧಿಸಿದ್ದಾರೆ.

'ಮಹಾಲಕ್ಷ್ಮಿ ಲೇಔಟ್ ಠಾಣೆಯ ರೌಡಿ ಪಟ್ಟಿಯಲ್ಲಿ ಹೆಸರಿರುವ ಮಣಿ, ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದಾನೆ. ಜೈಲಿನಿಂದಲೇ ಸಂಚು ರೂಪಿಸಿದ್ದ ಆತ, ಆಟೊ ಚಾಲಕರೊಬ್ಬರನ್ನು ಅಪಹರಿಸಿ ಕೊಲೆ ಮಾಡಲು ಸಹಚರರಿಗೆ ತಿಳಿಸಿದ್ದ. ಇದೀಗ ಸಹಚರರನ್ನು ಬಂಧಿಸಿ, ಆಟೊ ಚಾಲಕನನ್ನು ರಕ್ಷಿಸಲಾಗಿದೆ' ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

'ತನ್ನ ಪತ್ನಿ ಆಟೊ ಚಾಲಕನ ಜೊತೆ ಸಲುಗೆ ಇಟ್ಟುಕೊಂಡಿದ್ದಾಳೆಂದು ಮಣಿ ಭಾವಿಸಿದ್ದ. ಆಟೊ ಚಾಲಕನನ್ನೇ ಕೊಲೆ ಮಾಡಿಸಲು ಮುಂದಾಗಿದ್ದ. ಮಣಿ ಸೂಚನೆಯಂತೆ ಯಶವಂತಪುರ ರೈಲು ನಿಲ್ದಾಣ ಬಳಿ ಆಟೊ ಚಾಲಕನನ್ನು ಸಹಚರರು ಅಪಹರಿಸಿದ್ದರು. ಲಗ್ಗೆರೆಯ ಮನೆಯೊಂದರಲ್ಲಿ ಕೂಡಿಹಾಕಿ ಚಿತ್ರಹಿಂಸೆ ನೀಡುತ್ತಿದ್ದರು. ಅಪಹರಣದ ವಿಷಯ ಗೊತ್ತಾಗುತ್ತಿದ್ದಂತೆ ಚಾಲಕನ ಸಹೋದರ ದೂರು ನೀಡಿದ್ದರು. ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದೂ ತಿಳಿಸಿವೆ.

ಪಾಕಿಸ್ತಾನಕ್ಕೆ ಔಷಧ ರಫ್ತು: ಐವರ ಬಂಧನ

ಬೆಂಗಳೂರು: ಪಾಕಿಸ್ತಾನಕ್ಕೆ ಅಕ್ರಮವಾಗಿ ಔಷಧ ರಫ್ತು ಮಾಡುತ್ತಿದ್ದ ಐವರು ಆರೋಪಿಗಳನ್ನು ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಅಧಿಕಾರಿಗಳು ಬಂಧಿಸಿದ್ದಾರೆ.

'ಟ್ರಾಮಡೋಲ್ ನೋವು ನಿವಾರಕ ಔಷಧವನ್ನು ಪಾಕಿಸ್ತಾನಕ್ಕೆ ಅಕ್ರಮವಾಗಿ ರಫ್ತು ಮಾಡಲಾಗುತ್ತಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ, ಲ್ಯೂಸೆಂಟ್ ಡ್ರಗ್ಸ್ ಕಂಪನಿ ನಿರ್ದೇಶಕ ಸೇರಿ ಐವರನ್ನು ಬಂಧಿಸಲಾಗಿದೆ' ಎಂದು ಎನ್‌ಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯಲ್ಲಿ ಔಷಧ ಉತ್ಪಾದನಾ ಘಟಕವನ್ನು ಕಂಪನಿ ತೆರೆದಿದೆ. ನೋವು ನಿವಾರಕ ಔಷಧ ತಯಾರಿಸಿ, ಹೊರ ದೇಶಗಳಿಗೆ ರಫ್ತು ಮಾಡುತ್ತಿದೆ. ಆದರೆ, ರಫ್ತಿಗೆ ಯಾವುದೇ ಅನುಮತಿ ಇರಲಿಲ್ಲ' ಎಂದೂ ತಿಳಿಸಿದರು.

'ಡೆನ್ಮಾರ್ಕ್, ಜರ್ಮನಿ, ಮಲೇಷ್ಯಾ ಹಾಗೂ ಇತರೆ ದೇಶಗಳಿಗೂ ಔಷಧಿ ಕಳುಹಿಸಿರುವ ಮಾಹಿತಿ ಇದೆ.'

'ಇತ್ತೀಚೆಗೆ 25 ಸಾವಿರ ಕೆ.ಜಿ ಟ್ರಾಮಡೋಲ್ ಔಷಧವನ್ನು ಪಾಕಿಸ್ತಾನಕ್ಕೆ ಕಳುಹಿಸಲು ಕಂಪನಿ ಮುಂದಾಗಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಂಪನಿ ಕಚೇರಿ ಹಾಗೂ ಔಷಧ ತಯಾರಿಕೆ ಘಟಕದ ಮೇಲೆ ದಾಳಿ ಮಾಡಲಾಯಿತು' ಎಂದೂ ಅಧಿಕಾರಿ ತಿಳಿಸಿದರು.

ವಾಹನ ದಟ್ಟಣೆಯಿಂದ 100ರ ಗಡಿ ದಾಟಿದ ಎಕ್ಯುಐ • ಅನಾರೋಗ್ಯಕ್ಕೆ ಆಹ್ವಾನ ನೀಡುವ ವಾಯುಮಾಲಿನ್ಯ

ಹದಗೆಡುತ್ತಿದೆ ನಗರದ ವಾತಾವರಣ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ ವಾಹನ ಸಂಚಾರ ದಟ್ಟಣೆ ಹಾಗೂ ತಾಪಮಾನ ಹೆಚ್ಚಳದಿಂದಾಗಿ ವಾತಾವರಣದ ಗುಣಮಟ್ಟ ದಿನೇ ದಿನೇ ಕುಸಿತ ಕಾಣುತ್ತಿದೆ. ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯುಐ) ‘ಉತ್ತಮ’ ಹಂತದಿಂದ ‘ಮಧ್ಯಮ’ ಹಂತಕ್ಕೆ ತಲುಪಿದೆ.

ಬೇಸಿಗೆ ಆರಂಭದಲ್ಲೇ ಬಿಸಿಲ ಧಗೆ ದಿನದಿಂದ ದಿನಕ್ಕೆ ಏರತೊಡಗಿದೆ. ಗರಿಷ್ಠ ತಾಪಮಾನ 35 ಡಿಗ್ರಿ ಸೆಲ್ಸಿಯಸ್‌ವರೆಗೂ ಹಾಗೂ ಕನಿಷ್ಠ 20 ಡಿಗ್ರಿ ಸೆಲ್ಸಿಯಸ್ ದಾಖಲಾಗುತ್ತಿದೆ. ಕೋವಿಡ್ ಪ್ರಕರಣಗಳು ಕಡಿಮೆಯಾಗಿದ್ದರಿಂದ ವ್ಯಾಪಾರ ವಹಿವಾಟು ಸೇರಿದಂತೆ ವಿವಿಧ ಚಟುವಟಿಕೆಗಳು ಗರಿಗೆದರಿವೆ. ಶಾಲಾ–ಕಾಲೇಜುಗಳು ಪ್ರಾರಂಭವಾಗಿವೆ. ಮುಚ್ಚಿದ್ದ ಕಂಪನಿಗಳು ಮತ್ತೆ ಕಾರ್ಯಾಚರಣೆ ಆರಂಭಿಸಿವೆ. ಈ ಎಲ್ಲ ಕಾರಣಗಳಿಂದಾಗಿ ವಾಹನಗಳ ಸಂಚಾರ ಒಮ್ಮೆಲೇ ಹೆಚ್ಚಳವಾಗಿದೆ. ತುಮಕೂರು ರಸ್ತೆ, ಮೈಸೂರು ರಸ್ತೆ ಸೇರಿದಂತೆ ಕೆಲವೆಡೆ ಬೆಳಿಗ್ಗೆ ಮತ್ತು ಸಂಜೆಯ ಅವಧಿ ವಾಹನ ದಟ್ಟಣೆ ಉಂಟಾಗುತ್ತಿದೆ. ಇದರಿಂದ ವಾತಾವರಣದಲ್ಲಿನ ಮಲಿನಕಾರಕ ಕಣಗಳೂ ಹೆಚ್ಚಳವಾಗುತ್ತಿವೆ.

ಕೋವಿಡ್ ಮೂರನೇ ಅಲೆಯ ಅವಧಿಯಲ್ಲಿ (2022ರ ಜನವರಿ–ಫೆಬ್ರುವರಿ) ಕೊರೊನಾ ಸೋಂಕಿತರ ಸಂಖ್ಯೆ ಏರಿಕೆಯಿಂದ ನಗರದಲ್ಲಿ ವಾಹನ ಸಂಚಾರ ವಿರಳವಾಗಿತ್ತು. ಎಕ್ಯುಐ ಇಳಿಕೆ ಕಂಡಿತ್ತು. ಹೆಬ್ಬಾಳ, ಪೀಣ್ಯ, ಜಯನಗರ ಸೇರಿದಂತೆ ಬಹುತೇಕ ಕಡೆ ಉತ್ತಮ ಸ್ಥಿತಿಯಲ್ಲಿತ್ತು. ಈಗ ಎಕ್ಯುಐ ಮಟ್ಟ 100ರ ಗಡಿ ದಾಟಿದೆ.

ಮಾಲಿನ್ಯಕಾರಕ ಕಣಗಳು: ನಗರದಲ್ಲಿ ವಾಯುಮಾಲಿನ್ಯದಿಂದಾಗಿ ಕೆಲವು ದಿನ ಮಾಲಿನ್ಯಕಾರಕ ಕಣಗಳು (ಪಿಎಂ)-10 (ಸೂಕ್ಷ್ಮ) ಹಾಗೂ ಪಿಎಂ-2.5 (ಅತಿ ಸೂಕ್ಷ್ಮ) ದೂಳಿನ ಕಣಗಳು ವಾತಾವರಣದಲ್ಲಿ ಕಾಣಿಸಿಕೊಳ್ಳುತ್ತಿವೆ. 1 ಸಾವಿರ ಲೀಟರ್ ಗಾಳಿಯಲ್ಲಿ ಪಿಎಂ-10 ಪ್ರಮಾಣ 100 ಮೈಕ್ರೊ ಗ್ರಾಂ ಹಾಗೂ ಪಿಎಂ-2.5 ಪ್ರಮಾಣ 60 ಮೈಕ್ರೊ ಗ್ರಾಂ ಮೀರಬಾರದು. ಆದರೆ, ಕೆಲ ಸಂದರ್ಭದಲ್ಲಿ ಈ ಕಣಗಳ ಪ್ರಮಾಣವು ನಿಗದಿತ ಮಿತಿಗಿಂತ ಹೆಚ್ಚು ಇರುವುದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ನಡೆಸಿದ ವಿಶ್ಲೇಷಣೆಯಿಂದ ತಿಳಿದು ಬಂದಿದೆ.

ತುಮಕೂರು ರಸ್ತೆ, ಬಳ್ಳಾರಿ ರಸ್ತೆ, ಕನಕಪುರ ರಸ್ತೆ, ಹೊಸೂರು ರಸ್ತೆ, ಮೈಸೂರು ರಸ್ತೆ ಹಾಗೂ ಬನ್ನೇರು ಘಟ್ಟ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚುತ್ತಿದೆ. ಇದರಿಂದಾಗಿ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾಲಿನ್ಯಕಾರಕ ಕಣಗಳು ಪತ್ತೆಯಾಗುತ್ತಿರುವುದು ಮಾಪನಾ ಕೇಂದ್ರಗಳಲ್ಲಿ ದಾಖಲಾಗು ತ್ತಿವೆ.

‘ಗಾಳಿಯ ಗುಣಮಟ್ಟದ ಸೂಚ್ಯಂಕವು 50ರ ಒಳಗಡೆ ಇದ್ದಲ್ಲಿ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮಗಳು ಅಷ್ಟಾಗಿ ಕಾಣಿಸಿಕೊಳ್ಳುವುದಿಲ್ಲ. ಎಕ್ಯುಐ 51ರಿಂದ 100ರ ಒಳಗಡೆ ಇದ್ದಲ್ಲಿ ಉಸಿರಾಟದ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. 101ರಿಂದ 200ರ ಗಡಿಯ ನಡುವೆ ಇದ್ದಲ್ಲಿ ಶ್ವಾಸಕೋಶ, ಹೃದಯ ಕಾಯಿಲೆಗಳು ಕೂಡ ಬರಬಹುದು’ ಎಂದು ಮಂಡಳಿಯ ಪರಿಸರ ಅಧಿಕಾರಿಯೊಬ್ಬರು ತಿಳಿಸಿದರು.

‘ಶಾಲಾ–ಕಾಲೇಜುಗಳು ಹಾಗೂ ಐಟಿ–ಬಿಟಿ ಕಂಪನಿಗಳು ಪ್ರಾರಂಭವಾಗಿರುವುದರಿಂದ ವಾಹನಗಳ ಸಂಚಾರ ಸಹಜವಾಗಿಯೇ ಹೆಚ್ಚಳವಾಗಿದೆ. ರಸ್ತೆ ಸೇರಿದಂತೆ ವಿವಿಧ ಕಾಮಗಾರಿಗಳಿಗೂ ವೇಗ ನೀಡಲಾಗುತ್ತಿದೆ. ಇದರಿಂದಾಗಿ ಎಕ್ಯುಐ ಹೆಚ್ಚಳವಾಗುತ್ತಿದೆ. ಈ ಪ್ರಮಾಣ 200ರ ಗಡಿ ದಾಟಿದರೆ ಅಪಾಯ’ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಮೈಸೂರು ರಸ್ತೆಯಲ್ಲಿ ಪುರಭವನದ ಎದುರು ಉಂಟಾಗಿರುವ ವಾಹನ ದಟ್ಟಣೆ ಚಿತ್ರ: ರಂಜು ಪಿ.

ಅನಾರೋಗ್ಯ ಹೆಚ್ಚಳ ಸಾಧ್ಯತೆ

ವಾಯುಮಾಲಿನ್ಯದಿಂದ ತ್ವಚೆಯ ಅಲರ್ಜಿ, ಉಸಿರಾಟದ ಸಮಸ್ಯೆ, ಕಣ್ಣಿನ ಉರಿ ಮತ್ತು ಹೃದಯ ಸಂಬಂಧಿ ತೊಂದರೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತವೆ. ಹೃದಯ, ಶ್ವಾಸಕೋಶ, ಕ್ಯಾನ್ಸರ್ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆ ಹೆಚ್ಚಲು ವಾಯುಮಾಲಿನ್ಯ ಹೆಚ್ಚುತ್ತಿರುವುದೂ ಪ್ರಮುಖ ಕಾರಣ ಎನ್ನುವುದು ವೈದ್ಯಕೀಯ ಸಂಶೋಧನೆಗಳಿಂದ ಸಾಬೀತಾಗಿದೆ. ವಾಯುಮಾಲಿನ್ಯದಿಂದ ಯುವಜನತೆ ಹೃದಯ ಸಮಸ್ಯೆ ಎದುರಿಸುತ್ತಿರುವುದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಡೆಸಿದ ಅಧ್ಯಯನದಿಂದ ದೃಢಪಟ್ಟಿದೆ.

‘ದೆಹಲಿ ಮತ್ತು ಅದರ ಉಪನಗರಗಳಲ್ಲಿ ಗಾಳಿಯ ಗುಣಮಟ್ಟ ಅತ್ಯಂತ ಅಪಾಯಕಾರಿ ಮಟ್ಟ ತಲುಪಿ, ಅಲ್ಲಿನ ಜನರು ಸಮಸ್ಯೆ ಎದುರಿಸಿದ್ದಾರೆ. ನಮ್ಮಲ್ಲಿ ಆ ಸ್ಥಿತಿ ನಿರ್ಮಾಣವಾಗದಂತೆ ಎಚ್ಚರವಹಿಸಬೇಕು. ವಾಯುಮಾಲಿನ್ಯದಿಂದ ಶ್ವಾಸಕೋಶಕ್ಕೆ ಹಾನಿಯಾಗುವ ಜತೆಗೆ ಈಗಾಗಲೇ ಶ್ವಾಸಕೋಶದ ಸಮಸ್ಯೆ (ಸಿಒಪಿಡಿ) ಎದುರಿಸುತ್ತಿರುವವರಿಗೆ ಕಾಯಿಲೆ ತೀವ್ರತೆ ಹೆಚ್ಚಲಿದೆ. ಆಸ್ತಮಾ ಸೇರಿದಂತೆ ವಿವಿಧ ಸಮಸ್ಯೆ ಇರುವವರು, ಮಕ್ಕಳು ಹಾಗೂ ವೃದ್ಧರಿಗೆ ಅನಾರೋಗ್ಯ ಕಾಡಲಿದೆ. ಮಾಲಿನ್ಯ ತಡೆಗೆ ಕ್ರಮವಹಿಸಬೇಕು’ ಎಂದು ಡಾ.ಸಿ. ನಾಗರಾಜ್ ತಿಳಿಸಿದರು.

ವಾಯುಮಾಲಿನ್ಯದಿಂದ ಉಸಿರಾಟದ ತೊಂದರೆ, ಶ್ವಾಸಕೋಶಕ್ಕೆ ಹಾನಿ ಮುಂತಾದ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ.

ಡಾ.ಸಿ. ನಾಗರಾಜ್, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ನಿರ್ದೇಶಕ

ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯುಐ)

00-50	ಉತ್ತಮ
51-100	ಸಮಾಧಾನಕರ
101-200	ಮಧ್ಯಮ
201-300	ಕಳಪೆ
301-400	ತುಂಬಾ ಕಳಪೆ
401 ಮೇಲ್ಪಟ್ಟು	ತೀರಾ ಕಳಪೆ

ನಗರದಲ್ಲಿನ ಗಾಳಿಯ ಗುಣಮಟ್ಟದ ಸೂಚ್ಯಂಕ (ಮಾ.19)

ಮಾಪನಾ ಕೇಂದ್ರವಿರುವ ಪ್ರದೇಶ	ಎಕ್ಯುಐ
ಹೆಬ್ಬಾಳ	113
ಜಯನಗರ	105
ಕವಿಕಾ ಲೇಔಟ್	142
ನಿಮ್ಹಾನ್ಸ್	109
ಸೆಂಟ್ರಲ್ ಸಿಲ್ಕ್ ಬೋರ್ಡ್	128
ನಗರದ ರೈಲು ನಿಲ್ದಾಣ	107
ಸಾಣೆಗುರುವನಹಳ್ಳಿ	32
ಕಾಡುಬೀಸನಹಳ್ಳಿ	116
ಪೀಣ್ಯ	86
ಬಿಟಿಎಂ ಬಡಾವಣೆ	139



‘ಮಹಾಭಾರತ: ಭೂಮಕಾವ್ಯ ಮತ್ತು ಭಾರತ ರಾಷ್ಟ್ರ’ ಕೃತಿಯನ್ನು ಬಿಡುಗಡೆ ಮಾಡಿದ ಪ್ರೊ.ಸಿ.ಎನ್. ರಾಮಚಂದ್ರನ್ ಅವರು ಪ್ರತಿಯನ್ನು ಗಣೇಶ ದೇವಿ ಅವರಿಗೆ ನೀಡಿದರು. ಕ್ರಿಯಾ ಮಾಧ್ಯಮದ ಎನ್‌.ಕೆ. ವಸಂತರಾಜ್ ಹಾಗೂ ಎಂ.ಜಿ. ಹೆಗಡೆ ಇದ್ದಾರೆ –ಪ್ರಜಾವಾಣಿ ಚಿತ್ರ

ದೇಶದ ಸಂಸ್ಕೃತಿ ರೂಪಿಸಿದ ಮಹಾಭಾರತ: ಸಿಎನ್‌ಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಮಾಯಣ ಮತ್ತು ಮಹಾಭಾರತ ಕಳೆದ ಎರಡು ಸಹಸ್ರಮಾನಗಳಿಂದ ಭಾರತದ ಸಂಸ್ಕೃತಿಯನ್ನು ರೂಪಿಸುವ ಜತೆಗೆ ಮನಸ್ಸನ್ನು ಸಂಪೂರ್ಣ ಆವರಿಸಿಕೊಂಡಿವೆ’ ಎಂದು ವಿಮರ್ಶಕ ಪ್ರೊ.ಸಿ.ಎನ್. ರಾಮಚಂದ್ರನ್ ತಿಳಿಸಿದರು.

ಕ್ರಿಯಾ ಮಾಧ್ಯಮ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯ-ಕ್ರಮದಲ್ಲಿ ಗಣೇಶ ದೇವಿ ಅವರ ‘ಮಹಾಭಾರತ್: ದಿ ಎಪಿಕ್ ಆ್ಯಂಡ್ ದಿ ನೇಷನ್’ ಕೃತಿಯ ಕನ್ನಡ ಅನುವಾದ ‘ಮಹಾಭಾರತ: ಭೂಮ ಕಾವ್ಯ ಮತ್ತು ಭಾರತ ರಾಷ್ಟ್ರ’ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಒಬ್ಬರನ್ನು ಬೈಯುವಾಗ ಅಥವಾ ಹೊಗಳುವಾಗ ಮಹಾಭಾರತ, ರಾಮಾಯಣದ ಒಂದಲ್ಲ ಒಂದು ಪಾತ್ರವನ್ನು ಬಳಸುತ್ತೇವೆ. ಈ ಕಾವ್ಯಗಳನ್ನು ಬಿಟ್ಟು ಜಗಳ ಅಥವಾ ಪ್ರೀತಿ ಮಾಡಲು ಸಾಧ್ಯವಿಲ್ಲ. ಇದಕ್ಕೆ ಏನು ಕಾರಣ ಎಂಬ ಚರ್ಚೆಯನ್ನು ಗಣೇಶ ದೇವಿ ಅವರು ಕೃತಿಯಲ್ಲಿ ನಡೆಸಿದ್ದಾರೆ. ಭಾರತದ ಮಹಾಕಾವ್ಯಗಳಷ್ಟು ಜಗತ್ತಿನ ಬೇರೆ ಭಾಷೆಯ ಯಾವುದೇ ಕೃತಿಗಳು ಮನಸ್ಸಿನ ಮೇಲೆ ಪ್ರಭಾವ ಬೀರಿಲ್ಲ’ ಎಂದು ಹೇಳಿದರು.

ಪುಸ್ತಕ ಪರಿಚಯ

- **ಪುಸ್ತಕ:** ‘ಮಹಾಭಾರತ: ಭೂಮಕಾವ್ಯ ಮತ್ತು ಭಾರತ ರಾಷ್ಟ್ರ’
- **ಲೇಖಕ:** ಗಣೇಶ ದೇವಿ
- **ಅನುವಾದಕ:** ಎಂ.ಜಿ. ಹೆಗಡೆ
- **ಪುಟಗಳು:** 140
- **ಬೆಲೆ:** ₹130
- **ಪ್ರಕಾಶನ:** ಕ್ರಿಯಾ ಮಾಧ್ಯಮ

‘ನಮ್ಮ ಅತ್ಯಂತ ಪ್ರಸಿದ್ಧ ಪ್ರಾಚೀನ ಕೃತಿಗಳು ಪ್ರಶ್ನೆಯಿಂದ ಪ್ರಾರಂಭ-ವಾಗುತ್ತವೆ. ಈ ಕಥನ ತಂತ್ರದಿಂದ ಸಂವಹನದ ಚೌಕಟ್ಟು ಕಟ್ಟಿಕೊಳ್ಳಲು ಹಾಗೂ ಕಥೆ ಎಲ್ಲೆಲ್ಲಿಗೊ ಹೋಗದಂತೆ ನೋಡಿಕೊಳ್ಳಲು ಸಾಧ್ಯ. ಸಾಹಿತ್ಯ ವಿಮರ್ಶೆಯ ಜತೆಗೆ ಚರಿತ್ರೆ, ಇತಿಹಾಸ ಸೇರಿದಂತೆ ಅನೇಕ ಜ್ಞಾನ ಶಿಸ್ತನ್ನು ಆಧರಿಸಿ ಗಣೇಶ ದೇವಿ ಅವರು ಕೃತಿಯನ್ನು ಪ್ರಸ್ತುತಪಡಿಸಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅನುವಾದಕ ಎಂ.ಜಿ.ಹೆಗಡೆ, ‘ಮಹಾಭಾರತದ ಜಗತ್ತಿನೊಳಗೆ ಹೋಗುವುದು ದೊಡ್ಡ ಪ್ರಯಾಣ. ಕೃತಿಯ ಲೇಖಕರ ಆಶಯದಂತೆ ಕನ್ನಡಕ್ಕೆ ಕೃತಿಯನ್ನು ತರಲಾಗಿದೆ. ವರ್ತಮಾನ-ದಲ್ಲಿ ನಿಂತುಕೊಂಡು ಮಹಾಭಾರತ ನೋಡಲಾಗಿದೆ. ಗಣೇಶ ದೇವಿ ಅವರು ಮಹಾಭಾರತವನ್ನು ಗಂಭೀರವಾಗಿ ಪರಿಗಣಿಸಿ, ಬರೆದಿದ್ದಾರೆ’ ಎಂದರು.

ಕನ್ಯಾಡಿ: ದಿನೇಶ್ ಕುಟುಂಬಕ್ಕೆ ಸಿದ್ದರಾಮಯ್ಯ ಸಾಂತ್ವನ

ಉಜಿರೆ: ಇತ್ತೀಚೆಗೆ ಕೊಲೆಯಾದ ಕನ್ಯಾಡಿಯ ಯುವಕ ದಿನೇಶ್ ಅವರ ಮನೆಗೆ ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಶನಿವಾರ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

‘ದಿನೇಶ್ ಹತ್ಯೆ ವಿಚಾರವನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸುತ್ತೇನೆ. ದಿನೇಶ್ ಕುಟುಂಬಕ್ಕೆ ಸರ್ಕಾರ ಕೂಡಲೇ ₹ 25 ಲಕ್ಷ ಪರಿಹಾರ ನೀಡಬೇಕು’ ಎಂದು ಒತ್ತಾಯಿಸಿದರು.

‘ಶಿವಮೊಗ್ಗದಲ್ಲಿ ಹತ್ಯೆಯಾದಾಗ ಪರಿಹಾರ ನೀಡಿದ ಸರ್ಕಾರ, ದಿನೇಶ್ ಬಗ್ಗೆ ಏಕೆ ತಾರತಮ್ಯ ಮಾಡುತ್ತಿದೆ’ ಎಂದು ಪ್ರಶ್ನಿಸಿದ ಅವರು, ‘ಹತ್ಯೆ ಯಾರದೇ ನಡೆದರೂ ಅದು ತಪ್ಪೇ ಇಂತಹ ಘಟನೆಗಳು ನಡೆದಾಗ ಸರ್ಕಾರ ತಾರತಮ್ಯ ನೀತಿ ಅನುಸರಿಸಬಾರದು’ ಎಂದು ಹೇಳಿದರು.

ಇದೇ ವೇಳೆ ವೈಯಕ್ತಿಕ ಪರಿಹಾರವಾಗಿ ₹ 1 ಲಕ್ಷ ಅನ್ನು ಸಿದ್ದರಾಮಯ್ಯ ಅವರು ಕುಟುಂಬದವರಿಗೆ ನೀಡಿದರು. ಮಾಜಿ ಶಾಸಕ ವಸಂತ ಬಂಗೇರ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಹರೀಶ್ ಕುಮಾರ್, ಮಾಜಿ ಸಚಿವ ರಮಾನಾಥ ರೈ, ಐವನ್ ಡಿಸೋಜ ಇದ್ದರು.

ಮತದಾರರ ಜಾಗೃತಿ ಸ್ಪರ್ಧೆ

ಬೆಂಗಳೂರು: ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ‘ನನ್ನ ಮತ ನನ್ನ ಭವಿಷ್ಯ– ಒಂದು ಮತದ ಶಕ್ತಿ’ ಎಂಬ ವಿಷಯದ ಬಗ್ಗೆ ರಾಷ್ಟ್ರ ಮಟ್ಟದ ಮತದಾರರ ಜಾಗೃತಿಗಾಗಿ ವಿವಿಧ ಸ್ಪರ್ಧೆಗಳನ್ನು ಚುನಾವಣಾ ಆಯೋಗ ಆಯೋಜಿಸಿದೆ.

ರಸಪ್ರಶ್ನೆ, ಸ್ಲೋಗನ್, ಗಾಯನ, ಚಿತ್ರೀಕರಣ ಮತ್ತು ಪೋಸ್ಟರ್ ವಿನ್ಯಾಸ ಸ್ಪರ್ಧೆಗಳನ್ನು ನಡೆಸುತ್ತಿದೆ. ವಿಜೇತರಿಗೆ ಇ–ಪ್ರಮಾಣ ಪತ್ರ ನೀಡಲಾಗುತ್ತದೆ. ಸ್ಪರ್ಧೆಯಲ್ಲಿ ಭಾಗವಹಿಸುವವರು ಆಕರ್ಷಕ ಪೋಸ್ಟರ್ ರಚಿಸಬೇಕು. ಗಾಯನ ಸ್ಪರ್ಧೆಗೆ ಹಾಡಿನ ಅವಧಿ 3 ನಿಮಿಷ ಮೀರಬಾರದು. 1 ನಿಮಿಷ ಮೀರದ ವಿಡಿಯೊಗಳನ್ನು ಚಿತ್ರೀಕರಣ ಸ್ಪರ್ಧೆಗೆ ಕಳುಹಿಸಬಹುದು.

ವಿಜೇತರಿಗೆ ₹1 ಲಕ್ಷದವರೆಗೆ ಬಹುಮಾನ ನೀಡಲಾಗುವುದು. ಆಸಕ್ತರು ಮಾರ್ಚ್ 31ರೊಳಗೆ voter--contest@eci.gov.inನಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ನಗರ ಜಿಲ್ಲಾ ಚುನಾವಣಾಧಿಕಾರಿ ಪರವಾಗಿ ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಮಲಬಾರ್‌ನಲ್ಲಿ ‘ಬ್ರ್ಯಾಂಡೆಡ್ ಆಭರಣ’ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್, ಕೋರಮಂಗಲದ ಶಾಖೆಯಲ್ಲಿ ಇದೇ ಶನಿವಾರದಿಂದ ಇದೇ 27ರವರೆಗೆ ಬ್ರ್ಯಾಂಡೆಡ್ ಆಭರಣ ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಆಯೋಜಿಸಿದೆ.

ನುರಿತ ಕುಶಲಕರ್ಮಿಗಳು ತಯಾರಿಸಿರುವ ವಿವಿಧ ವಿನ್ಯಾಸಗಳ ಚಿನ್ನ, ವಜ್ರ ಹಾಗೂ ಅಮೂಲ್ಯ ರತ್ನಗಳ ಆಭರಣಗಳನ್ನು ಪ್ರದರ್ಶನದಲ್ಲಿ ಇಡಲಾಗಿದೆ. ‘ಎಕ್ಸ್‌ಪೀರಿಯನ್ಸ್ ವೇರೆಬಲ್ ಆರ್ಟ್’ ಎಂಬ ಧ್ಯೇಯ ವಾಕ್ಯದೊಂದಿಗೆ ಮೇಳ ಹಮ್ಮಿಕೊಳ್ಳಲಾಗಿದೆ.

‘ಆಭರಣ ಪ್ರಿಯರು ಮೈನ್ ಡೈಮಂಡ್, ಇಆರ್‌ಎ ಅನ್‌ಕಟ್ ಡೈಮಂಡ್, ಡಿವೈನ್ ಇಂಡಿಯನ್ ಹೆರಿಟೇಜ್, ಎಥ್ನಿಕ್ಸ್ ಹ್ಯಾಂಡ್ ಕ್ರಾಫ್ಟೆಡ್, ಪ್ರೆಸಿಯಾ ಹಾಗೂ ಸ್ಟಾರ್ಲೆಟ್ ಕಿಡ್ಸ್ ಬ್ರ್ಯಾಂಡ್‌ಗಳ ಆಭರಣಗಳ-ನ್ನೂ ಮೇಳದಲ್ಲಿ ವೀಕ್ಷಿಸಬಹುದು. ಖರೀದಿ ಕೂಡ ಮಾಡಬಹುದು’ ಎಂದು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಪ್ರಕಟಣೆಯು ತಿಳಿಸಿದೆ.

ರೂಪದರ್ಶಿಯರು ಆಭರಣಗಳನ್ನು ಪ್ರದರ್ಶಿಸಿದರು

ಕೃತಕ ಬುದ್ಧಿಮತ್ತೆ ಪ್ರಯೋಗಾಲಯಕ್ಕೆ ಚಾಲನೆ

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆ ಸಹಯೋಗದಲ್ಲಿ ಆಸ್ಟರ್ ಸಿಎಂಐ ಆಸ್ಪತ್ರೆ ನಿರ್ಮಿಸಿರುವ ಕೃತಕ ಬುದ್ಧಿಮತ್ತೆ ಪ್ರಯೋಗಾಲಯಕ್ಕೆ ಚಾಲನೆ ನೀಡಲಾಗಿದೆ.

‘ವೈದ್ಯಕೀಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧರಿತ ಯಂತ್ರೋಪಕರಣಗಳನ್ನು ನಿರ್ಮಿಸಲು ಹಾಗೂ ಈ ತಂತ್ರಜ್ಞಾನದಲ್ಲಿ ತರಬೇತಿ ಹೊಂದಲು ಪ್ರಯೋಗಾಲಯ ಸಹಕಾರಿಯಾಗಲಿದೆ. ಔಷಧ ಮತ್ತು ತಂತ್ರಜ್ಞಾನದ ನಡುವಿನ ಅಂತ ರವೂ ಕಡಿಮೆ ಆಗಲಿದೆ. ನಿಖರ ಹಾಗೂ ಗುಣಮಟ್ಟದ ಚಿಕಿತ್ಸೆ ಈ ತಂತ್ರಜ್ಞಾನದಿಂದ ಸಾಧ್ಯ. ತಂತ್ರಜ್ಞಾನದ ಅಳವಡಿಕೆಯಲ್ಲಿ ನಾವು ಮುಂಚೂಣಿಯಲ್ಲಿದ್ದೇವೆ’ ಎಂದು ಆಸ್ಟರ್ ಡಿಎಂ ಹೆಲ್ತ್‌ಕೇರ್‌ನ ಸಂಸ್ಥಾಪನಾ ಅಧ್ಯಕ್ಷ ಡಾ. ಆಜಾದ್ ಮೂಪೇನ್ ತಿಳಿಸಿದರು.

‘ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಆವಿಷ್ಕಾರಗಳನ್ನು ನಡೆಸಲು ಈ ಪ್ರಯೋಗಾಲಯ ಸಹಕಾರಿ. ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನೂ ಸುಲಭವಾಗಿ ಈ ತಂತ್ರಜ್ಞಾನದ ನೆರವಿನಿಂದ ಮಾಡಲು ಸಾಧ್ಯ. ತ್ವರಿತವಾಗಿ ರೋಗ ನಿರ್ಣಯ ಮಾಡಿ, ಚಿಕಿತ್ಸೆ ಒದಗಿಸಬಹುದು. ಚಿಕಿತ್ಸಾ ವೆಚ್ಚವೂ ಕಡಿಮೆ ಆಗಲಿದೆ’ ಎಂದು ಆಸ್ಟರ್ ಸಿಎಂಐ ಆಸ್ಪತ್ರೆಯ ನರವಿಜ್ಞಾನ ವಿಭಾಗದ ಸಲಹೆಗಾರ ಡಾ.ಲೋಕೇಶ್ ಬಿ. ವಿವರಿಸಿದರು.

ಪ್ರಯೋಗಾಲಯವನ್ನು ಡಾ. ಆಜಾದ್ ಮೂಪೇನ್ ಉದ್ಘಾಟಿಸಿದರು. ಡಾ.ಲೋಕೇಶ್ ಬಿ. ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಪ್ರೊ. ಫಣೀಂದ್ರ ಕೆ. ಯಲವರ್ತಿ ಇದ್ದಾರೆ.

ಚಿತ್ರಾವಳಿ

ಅಂತರರಾಷ್ಟ್ರೀಯ ಲಯನ್ಸ್ ಕ್ಲಬ್ ಜಿಲ್ಲೆ 317ಎ ಪ್ರಾಂತ್ಯ 4ರ ವತಿಯಿಂದ ವಿಜಯನಗರದಲ್ಲಿ ಶುಕ್ರವಾರ ಏರ್ಪಡಿಸಿದ್ದ ಪ್ರಾಂತೀಯ ಸಮ್ಮೇಳನದಲ್ಲಿ ನೇತ್ರತಜ್ಞ ಡಾ.ಭುಜಂಗ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಪ್ರಾಂತೀಯ ಅಧ್ಯಕ್ಷರಾದ ರಾಜೇಶ್ವರಿ ವಸಂತಯ್ಯ, ಜಿಲ್ಲಾ ಗವರ್ನರ್ ಡಾ.ಪ್ರಭಾ ಮೂರ್ತಿ, ಕಾರ್ಯದರ್ಶಿ ಡಾ.ಎಚ್‌.ಸುಂದರ ಮೂರ್ತಿ ಖಜಾಂಚಿ ಎಲ್‌.ವಿ ಶ್ರೀನಿವಾಸ್, ಸ್ವಾಗತ ಸಮಿತಿ ಅಧ್ಯಕ್ಷರಾದ ಡಾ.ಅನಿತಾ ಪ್ರಸಾದ್, ಆತಿಥೇಯ ಸಮಿತಿಯ ಕಾರ್ಯದರ್ಶಿ ನಾಗರಾಜ ಎ.ಗೌಡ, ಖಜಾಂಚಿ ಮುರುಳಿ ಕೃಷ್ಣ ಮತ್ತು ಇತರರು ಭಾಗವಹಿಸಿದ್ದರು



ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕೈವಾರದಲ್ಲಿ ಶನಿವಾರ ಕೈವಾರ ತಾತಯ್ಯ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು

ಲಾಸ್ಯವರ್ಧನ ಟ್ರಸ್ಟ್ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದುಷಿ ಮಾಲಿನಿ ರವಿಶಂಕರ್ ಅವರ ಶಿಷ್ಯೆ ಎಸ್‌.ಭೂಮಿಕಾ ಅವರ ಭರತನಾಟ್ಯ ರಂಗಪ್ರವೇಶ ನಡೆಯಿತು –ಪ್ರಜಾವಾಣಿ ಚಿತ್ರ

ನಗರದಲ್ಲಿ ಶನಿವಾರ ನಡೆದ ‘ಪೂರ್ಣಾಹುತಿ’ ಸಂಗೀತೋತ್ಸವ ಉದ್ಘಾಟನಾ ಕಾರ್ಯಕ್ರಮದಲ್ಲಿ ವಿದುಷಿ ಆರತಿ ಅಂಕಲಿಕರ್ ಹಾಗೂ ಸಂಗಡಿಗರು ಸಂಗೀತ ಕಛೇರಿ ನಡೆಸಿಕೊಟ್ಟರು – ಪ್ರಜಾವಾಣಿ ಚಿತ್ರ

ಜನ್ಮಶತಾಬ್ದಿ: ‘ಪೂರ್ಣಾಹುತಿ’ ಸಂಗೀತೋತ್ಸವದ ಉದ್ಘಾಟನಾ ಕಾರ್ಯಕ್ರಮ

‘ಭೀಮಸೇನ ಜೋಶಿ ಶತಮಾನದ ಮಹಾಪುರುಷ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಂಡಿತ್ ಭೀಮಸೇನ ಜೋಶಿ ಅವರು ಅಗಾಧ ಪಾಂಡಿತ್ಯ ಹೊಂದಿದ್ದರು. ಅವರಂತಹ ಮಹಾಪುರುಷರು ಶತಮಾನದಲ್ಲಿ ಒಬ್ಬರು ಮಾತ್ರ ಜನಿಸುತ್ತಾರೆ’ ಎಂದು ಪಂಡಿತ್ ಉಲ್ಲಾಸ್ ಕಸಾಳ್ಕರ್ ಅಭಿಪ್ರಾಯ ಪಟ್ಟರು.

ಭೀಮಸೇನ ಜೋಶಿ ಅವರ ಜನ್ಮಶತಾಬ್ದಿ ಅಂಗವಾಗಿ ಪಂಡಿತ್ ಡಿ.ವಿ. ಕಾಣೆಬುವಾ ಪ್ರತಿಷ್ಠಾನ ಮತ್ತು ಕೇಂದ್ರ ಸಂಸ್ಕೃತಿ ಸಚಿವಾಲಯ ಶನಿವಾರ ಹಮ್ಮಿಕೊಂಡಿದ್ದ ‘ಪೂರ್ಣಾಹುತಿ’ ಸಂಗೀತೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶನಿವಾರ ಅವರು ಮಾತನಾಡಿದರು.

‘ಭೀಮಸೇನ ಜೋಶಿ ಅವರನ್ನು ಹತ್ತಿರದಿಂದ ನೋಡುವ ಹಾಗೂ ಅವರ ಹಾಡುಗಳನ್ನು ಕೇಳುವ ಅವಕಾಶ ಸಿಕ್ಕಿದ್ದು ನನ್ನ ಭಾಗ್ಯ. ಎಲ್ಲಾ ಕಲಾಕಾರರಿಗೂ ಅವರು ಆದರ್ಶಪ್ರಾಯರಾಗಿದ್ದರು. ತಮ್ಮ ಗಾನಸುಧೆಯ ಮೂಲಕ ಸಂಗೀತಾಸಕ್ತರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದರು’ ಎಂದರು.

ಭೀಮಸೇನ ಜೋಶಿಯವರ ಶಿಷ್ಯ ಪಂಡಿತ್ ವಿನಾಯಕ ತೋರವಿ, ‘ಕರ್ನಾಟಕದಲ್ಲಿ ಸಂಗೀತ ಕಛೇರಿಗಳು ನಡೆದಾಗಲೆಲ್ಲಾ ಅವರ ಜೊತೆ ಭಾಗ-ವಹಿಸುತ್ತಿದ್ದೆ. ಅವರೊಬ್ಬ ಅವತಾರ ಪುರುಷ. ಹಿಂದೂಸ್ತಾನಿ ಸಂಗೀತದ ಎಲ್ಲಾ ಘರಾಣೆಗಳ ಮೂಲತತ್ವಗಳನ್ನೂ ಅಳವಡಿಸಿಕೊಂಡಿದ್ದರು. ಸಂಗೀತವನ್ನೇ ಉಸಿರಾಗಿಸಿಕೊಂಡಿದ್ದರು. ಅವರ ಪಾಂಡಿತ್ಯಕ್ಕೆ ನೂರು ಭಾರತ ರತ್ನ ನೀಡಿದರೂ ಕಡಿಮೆ’ ಎಂದು ವಿಡಿಯೊ ಸಂದೇಶದಲ್ಲಿ ತಿಳಿಸಿದರು.

ಪಂಡಿತ್ ಎಂ.ವೆಂಕಟೇಶ್ ಕುಮಾರ್, ‘ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತಗಳೆರಡೂ ಜೀವಂತವಾ-ಗಿರುವುದು ರಾಜ್ಯದಲ್ಲಿ ಮಾತ್ರ. ನಮ್ಮಲ್ಲಿ ಈ ಎರಡೂ ಪ್ರಕಾರದ ಸಂಗೀತಗಳನ್ನೂ ಪ್ರೀತಿಸುವ ಜನರಿದ್ದಾರೆ. ಅವುಗಳನ್ನು ಪೋಷಿಸಿಕೊಂಡೂ ಹೋಗುತ್ತಿದ್ದಾರೆ’ ಎಂದು ಹೇಳಿದರು. ವಿದುಷಿ ಮಂಜೂಷಾ ಪಾಟೀಲ, ಕಾಣೆಬುವಾ ಪ್ರತಿಷ್ಠಾನದ ಅಧ್ಯಕ್ಷ ಗೋವಿಂದ್ ಬೇಡೆಕರ್ ಇದ್ದರು.

ನಗರದಲ್ಲಿ ಇಂದು

ಜಯಶ್ರೀ ದೇಶಪಾಂಡೆ ಅವರ ‘ಹಲವು ನಾಡು ಹೆಜ್ಜೆ ಹಾಡು’ ಮತ್ತು ‘ನೋಟ್‌ಬುಕ್‌ನ ಕಡೆಯ ಪುಟ’ ಪುಸ್ತಕಗಳ ಬಿಡುಗಡೆ: ಅತಿಥಿಗಳು–ಪಿ.ಶೇಷಾದ್ರಿ, ಜಯಶ್ರೀ ಕಾಸರವಳ್ಳಿ, ಭುವನೇಶ್ವರಿ ಹೆಗಡೆ, ಆರ್‌.ಪೂರ್ಣಿಮಾ, ಎನ್. ರಾಮನಾಥ್, ರೂಪಾ ಸತೀಶ್, ಸ್ಥಳ–ಪುರವಂಕರ ಸಭಾಂಗಣ, ಸುಚಿತ್ರಾ ಫಿಲಂ ಸೊಸೈಟಿ, ಬೆಳಿಗ್ಗೆ 10

ಕಥಕ್ ರಂಗಪ್ರವೇಶ: ರಂಜಿತಾ ವಿಜಯ ಕುಮಾರ್, ಅತಿಥಿಗಳು–ಕೆ.ಗೋಪಾಲಯ್ಯ, ಹೇಮಲತಾ, ಸುದರ್ಶನ ಶೆಟ್ಟಿ, ನಂಜುಂಡ ರಾವ್, ಮಯೂರಿ ಉಪಾಧ್ಯಾಯ, ಅಕುಲ್ ಬಾಲಾಜಿ, ಆಯೋಜನೆ–ಮಾತಾ ಮನೋರಂಜನ್, ಸ್ಥಳ–ರಾಜಕುಮಾರ್ ಕಲಾ ಭವನ, ಗೆಳೆಯರ ಬಳಗ, ಮಹಾಲಕ್ಷ್ಮಿ ಬಡಾವಣೆ, ಬೆಳಿಗ್ಗೆ 10

ಮಹಿಳೆಯರ ಶಿಕ್ಷಣದ ಹಕ್ಕು–ಆಯ್ಕೆ ಸ್ವಾತಂತ್ರ್ಯ ರಾಜ್ಯ ಸಮಾವೇಶ: ಉದ್ಘಾಟನೆ–ಬಿ.ಎಂ.ಹನೀಫ್, ಅಧ್ಯಕ್ಷತೆ–ದೇವಿ, ಮಾತನಾಡುವವರು–ಮೀನಾಕ್ಷಿ ಬಾಳಿ, ಅಖಿಲಾ ವಿದ್ಯಾಸಂದ್ರ, ಶಾಖಿರಾ ಖಾನಮ್, ಕೆ.ಷರೀಫಾ, ಅಧ್ಯಕ್ಷತೆ–ಕೆ.ಎಸ್. ವಿಮಲಾ, ಆಯೋಜನೆ–ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಸ್ಥಳ–ಸೌಹಾರ್ದ, ಮಿಷನ್ ರಸ್ತೆ, ಬೆಳಿಗ್ಗೆ 10.30

ಅರವಿಂದ ಪಟೇಲ ಅವರ ‘ಹಾಲು ಚೆಲ್ಲಿದ ಹೊಲ’ ಕವನ ಸಂಕಲನ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅತಿಥಿಗಳು–ಪಿ.ಬಿ.ಕೋಟೂರ, ಸಲೀಂ ನದಾಫ್, ಸಿರಿಗೇರಿ ಪನ್ನರಾಜ, ಸೌಮ್ಯಾ ಕೋಡೂರು, ಆಯೋಜನೆ–ಅಂಕುರ ಪ್ರಕಾಶನ, ಸ್ಥಳ–ಭಾರತೀಯ ವೈದ್ಯ ಸಂಘ ಸಭಾಂಗಣ, ಚಾಮರಾಜಪೇಟೆ, ಬೆಳಿಗ್ಗೆ 10.30

ಗುರುರಾಜ್ ಎಸ್.ದಾವಣಗೆರೆ ಸಂಪಾದಕತ್ವದ ನಾಗೇಶ ಹೆಗಡೆ ಅಭಿನಂದನಾ ಗ್ರಂಥ ‘ನೆಲಗುಣ’ ಬಿಡುಗಡೆ ಮತ್ತು ‘ಭೂಮಿಯ ಕ್ಷೇಮಕ್ಕಾಗಿ ನಾವು ನೀವು’ ವಿಚಾರ ಸಂಕಿರಣ: ಉಪನ್ಯಾಸ–ಬಿ.ಕೆ.ಚಂದ್ರಶೇಖರ್, ವಿ.ಗಾಯತ್ರಿ, ಕೆ.ಎನ್.ಗಣೇಶಯ್ಯ, ಅಧ್ಯಕ್ಷತೆ–ಜಿ.ರಾಮಕೃಷ್ಣ, ಅತಿಥಿ–ಗುರುರಾಜ್ ಎಸ್.ದಾವಣಗೆರೆ, ಆಯೋಜನೆ–ನಾಗೇಶ ಹೆಗಡೆ ಅಭಿನಂದನಾ ಸಮಿತಿ, ಸ್ಥಳ–ಗಾಂಧಿ ಭವನ, ಬೆಳಿಗ್ಗೆ 10



ಧನ್ವಂತರಿ ಸೇವಾ ಪ್ರತಿಷ್ಠಾನದ ಲೋಕಾರ್ಪಣೆ ಮತ್ತು ಕರ್ನಾಟಕ ಸೇವಾ ಪುರಸ್ಕಾರ: ಸಾನ್ನಿಧ್ಯ–ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಉದ್ಘಾಟನೆ–ಕೆ.ಸುಧಾಕರ್, ಅತಿಥಿಗಳು–ಪ್ರತಾಪಸಿಂಹ, ಸೌಮ್ಯಾರೆಡ್ಡಿ, ಎಚ್‌.ಪಿ.ಮಂಜುನಾಥ್, ಅಧ್ಯಕ್ಷತೆ–ಅಶೋಕ ಹಾರನಹಳ್ಳಿ, ಸ್ಥಳ–ಎನ್‌ಎಂಕೆಆರ್‌ವಿ ಕಾಲೇಜು ಆವರಣ, ಶಾಶ್ವತಿ ಸಭಾಂಗಣ, ಜಯನಗರ, ಬೆಳಿಗ್ಗೆ 10.30

ಚಾಮರಾಜಪೇಟೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನೆ: ಅತಿಥಿಗಳು–ಪಿ.ಸಿ.ಮೋಹನ್, ಜಮೀರ್ ಅಹ್ಮದ್, ಕೆ.ಎನ್.ಚನ್ನೇಗೌಡ, ಧರ್ಮೇಂದ್ರ ಕುಮಾರ್ ಅರೇನಹಳ್ಳಿ, ಸ್ಥಳ–ಅಖಿಲ ಕರ್ನಾಟಕ ಮಕ್ಕಳ ಕೂಟ, ಚಾಮರಾಜಪೇಟೆ, ಬೆಳಿಗ್ಗೆ 10.30

ನಮ್ಮ ನೆಲ ನಮ್ಮ ಬೆಳೆ: ಬೀಜ ಸಂರಕ್ಷಣಾ ಹೋರಾಟಗಾರ್ತಿ ವಿಶಾಲಾಕ್ಷಿ ಪದ್ಮನಾಭನ್ ಅವರಿಂದ ಚರ್ಚೆ, ಆಯೋಜನೆ ಮತ್ತು ಸ್ಥಳ–ರಾಗಿಕಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

ಎಸ್‌.ಆರ್‌.ಎನ್‌.ಜಿ.ಸಂಪನ್ನಪ್ಪ ವಿದ್ಯಾರ್ಥಿನಿಯರ ನಿಲಯದ ಉದ್ಘಾಟನೆ: ತೇಜಸ್ವಿನಿ ಅನಂತಕುಮಾರ್, ಅತಿಥಿಗಳು–ಸಿ.ಸೋಮಶೇಖರ, ನಂದಿನಿ ವಿಠ್ಠಲ, ಅಧ್ಯಕ್ಷತೆ–ಜಿ.ಕೆ.ನಾರಾಯಣ ರೆಡ್ಡಿ, ಸ್ಥಳ–ವಿದ್ಯಾರ್ಥಿನಿಯರ ನಿಲಯದ ಆವರಣ, ಗಿರಿನಗರ 2ನೇ ಹಂತ, ಬೆಳಿಗ್ಗೆ 11

ಸಹಕಾರ ರತ್ನ ಪ್ರಶಸ್ತಿ ಪ್ರದಾನ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಧ್ವಜಾರೋಹಣ–ಆರ್‌.ಅಶೋಕ, ಅಧ್ಯಕ್ಷತೆ–ಎಸ್‌.ಟಿ.ಸೋಮಶೇಖರ್, ಪುಷ್ಪಾರ್ಚನೆ–ಜಿ.ಟಿ.ದೇವೇಗೌಡ, ಕೈಪಿಡಿ ಬಿಡುಗಡೆ–ಗೋವಿಂದ ಕಾರಜೋಳ, ಸಂಘಗಳಿಗೆಪ್ರಶಸ್ತಿ ಪ್ರದಾನ–ಆರಗ ಜ್ಞಾನೇಂದ್ರ, ಆಯೋಜನೆ–ರಾಜ್ಯ ಸಹಕಾರ ಮಹಾಮಂಡಳ, ಸ್ಥಳ–ಗಣೇಶ ಮೈದಾನ, ಕೆಂಗೇರಿ ಉಪನಗರ, ಬೆಳಿಗ್ಗೆ 11

ಮಹಿಳಾ ದಿನ ಮತ್ತು ಬೆಳವಾಡಿ ಮಲ್ಲಮ್ಮ ಪ್ರಶಸ್ತಿ ಪ್ರದಾನ: ಉದ್ಘಾಟನೆ–ಡಿ.ರೂಪಾ, ಪುಷ್ಪಾರ್ಚನೆ–ಸುನಂದಾ ಪಾಲನೇತ್ರ, ಅತಿಥಿಗಳು–ರೂಪಾ ಅಯ್ಯರ್, ಹೇಮಲತಾ, ಕೆ.ಗಂಗರಾಜಮ್ಮ, ಅಧ್ಯಕ್ಷತೆ–ಎಚ್. ಎನ್.ದೀಪಕ್, ಆಯೋಜನೆ–ಕರುನಾಡ ವಿಜಯಸೇನೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 11.30

ರೂಪಾ ಅಯ್ಯರ್

ವಿಶ್ವ ಗುಬ್ಬಿ ದಿನದ ಅಂಗವಾಗಿ ವಿಶೇಷ ಲಕೋಟೆ ಬಿಡುಗಡೆ: ಜಿಐ ಪ್ರಮಾಣಪತ್ರ ಕುರಿತು ಮಾಹಿತಿ–ಬಿ.ಪ್ರಶಾಂತ್ ಕುಮಾರ್, ಅತಿಥಿಗಳು–ಎಂ.ಬಿ.ಕೃಷ್ಣ, ಎಸ್‌.ಟಿ.ಭಾಸ್ಕರನ್, ಆಯೋಜನೆ–ಅಂಚೆ ಇಲಾಖೆ, ಸ್ಥಳ–ಮೇಘದೂತ ಸಭಾಂಗಣ, ಜಿಪಿಒ, ರಾಜಭವನ ರಸ್ತೆ, ಬೆಳಿಗ್ಗೆ 11.30

ವಿಶ್ವ ಕಾವ್ಯ ದಿನ: ‘ಸಮಕಾಲೀನ ಕಾವ್ಯಚಿಂತನೆಯಲ್ಲಿ ಹೊಸ ತಲೆಮಾರಿನ ಪಾತ್ರ’ ಸಂವಾದ: ಅತಿಥಿಗಳು–ಎಂ.ಆರ್. ಕಮಲಾ, ಶ್ರೀಧರ ಬನವಾಸಿ, ವಿ.ಎ. ಲಕ್ಷ್ಮಣ, ಪೂರ್ಣಿಮಾ ಮಾಳಗಿಮನಿ, ಆಯೋಜನೆ ಮತ್ತು ಸ್ಥಳ–ಹರಿವು ಬುಕ್ಸ್, ಡಿವಿಜಿ ರಸ್ತೆ, ಬೆಳಿಗ್ಗೆ 11.30

‘ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ’ ಉಪನ್ಯಾಸ: ಆರ್‌.ಶೇಷಶಾಸ್ತ್ರಿ, ಆನಂದರಾಮರಾವ್, ವ.ಚ.ಚನ್ನೇಗೌಡ, ಅಧ್ಯಕ್ಷತೆ–ಜಿ.ಅಶ್ವತ್ಥನಾರಾಯಣ, ಆಯೋಜನೆ– ಕನ್ನಡ ಗೆಳೆಯರ ಬಳಗ, ಸ್ಥಳ–ಬಿಎಂಶ್ರೀ ಪ್ರತಿಮೆ ಎದುರು, ನ್ಯಾಷನಲ್ ಕಾಲೇಜು ವೃತ್ತ, ಬಸವನಗುಡಿ, ಮಧ್ಯಾಹ್ನ 12

ಸುವರ್ಣ ಸಂಗೀತೋತ್ಸವ: ಆರ್‌.ಎ. ರಮಾಮಣಿ ಅವರಿಂದ ಗಾಯನ, ಆಯೋಜನೆ–ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ–ಬಾಲಮೋಹನ್ ವಿದ್ಯಾ ಮಂದಿರ, ರಾಜಾಜಿನಗರ, ಸಂಜೆ 5ರಿಂದ

ನೂಪುರ ಸಂಗಮ: ನೃತ್ಯ ಮತ್ತು ಸಂಗೀತ ಕಾರ್ಯಕ್ರಮ, ಅತಿಥಿಗಳು–ಸುನಂದಾ ದೇವಿ, ಎಂ.ಆರ್‌.ಸತ್ಯನಾರಾಯಣ, ಎಂ. ಸೂರ್ಯಪ್ರಸಾದ್, ಆಯೋಜನೆ–ನೂಪುರ ಫೈನ್‌ಆರ್ಟ್ಸ್ ಅಕಾಡೆಮಿ, ಸ್ಥಳ–ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 5

ಬಿ.ವಿ.ರಾಧಾಕೃಷ್ಣ ಅವರ ಸಂಸ್ಮರಣೆ: ಅತಿಥಿಗಳು–ಸತೀಶ್ ಹಂಪಿಹೊಳಿ, ವಿಜಯ ಹಾವನೂರು, ಬಿ.ವಿ. ಶ್ರೀನಿವಾಸ್, ಆಯೋಜನೆ–ನಿನಾದ ಸಂಸ್ಕೃತಿ ಕಲಾಕೇಂದ್ರ, ಸ್ಥಳ–ಆರ್‌.ವಿ. ಶೇಷಾದ್ರಿ ಗವಾಯಿ–ಅತ್ರಿ ಸಭಾಂಗಣ, ರಾಜರಾಜೇಶ್ವರಿ ನಗರ, ಸಂಜೆ 6

ಭರತನಾಟ್ಯ ರಂಗಪ್ರವೇಶ: ಶ್ರೇಯಾ ನಾಯಕ್, ಅತಿಥಿಗಳು–ಬಿ.ಕೆ.ಶ್ಯಾಮ ಪ್ರಕಾಶ್, ಉಷಾ ದತಾರ್, ವೈ.ಕೆ. ಸಂಧ್ಯಾ ಶರ್ಮ, ನಾರಾಯಣ ಭಟ್, ಸ್ಥಳ–ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 5

ಸಾಮಾನ್ಯ ರೈತರಿಗಿದು ವೆಚ್ಚದಾಯಕ, ಸಬ್ಸಿಡಿಗೆ ಹಲವು ನಿಬಂಧನೆ ● ಕೆಲವೆಡೆ ಕೊಂಚ ಅನುಕೂಲ

ಗೋಳು ತಪ್ಪಿಸದ ಸೌರವಿದ್ಯುತ್

● ಜಿ.ಬಿ.ನಾಗರಾಜ್

ಚಿತ್ರದುರ್ಗ: ಸೌರವಿದ್ಯುತ್ ಪಂಪ್‌ಸೆಟ್‌ಗಳ ಬಳಕೆ ಹೆಚ್ಚಾದರೆ ಸಾಂಪ್ರದಾಯಿಕ ವಿದ್ಯುತ್ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ ಎಂಬ ನಂಬಿಕೆ ಹುಸಿಯಾಗಿದೆ. ಸೌರ ವಿದ್ಯುತ್ ಪಂಪ್‌ಸೆಟ್ ಸಾಮರ್ಥ್ಯದ ಮಿತಿ ಹಾಗೂ ಸಬ್ಸಿಡಿ ವಿತರಣೆಯಲ್ಲಿ ಆಗುತ್ತಿರುವ ಲೋಪದಿಂದ ರೈತರು ಹಿಂದೆಸರಿಯುತ್ತಿದ್ದಾರೆ.

ಸಬ್ಸಿಡಿ ನೆರವಿನಿಂದ ಅನೇಕರು ಸೋಲಾರ್ ಪಂಪ್‌ಸೆಟ್ ಅಳವಡಿಸಿಕೊಂಡು ಯಶಸ್ವಿಯಾಗಿದ್ದಾರೆ. ಪರ್ಯಾಯ ಇಂಧನದ ಮೂಲಕ ಕೃಷಿಯಲ್ಲಿ ಯಶಸ್ಸು ಪಡೆದ ರೈತಾಪಿ ವರ್ಗ ವಿರಳ. ದುಬಾರಿ ವೆಚ್ಚ ಭರಿಸುವ ಶಕ್ತಿ ಇಲ್ಲದ ಸಾಮಾನ್ಯ ರೈತರು ಇದಕ್ಕೆ ಆಸಕ್ತಿ ತೋರುತ್ತಿಲ್ಲ. ಅತಿ ಆಳದ ಕೊಳವೆಬಾವಿಯಿಂದ ನೀರು ಮೇಲೆತ್ತುವ ಬಯಲುಸೀಮೆ ರೈತರು ಸೌರವಿದ್ಯುತ್‌ನಿಂದ ವಿಮುಖರಾಗಿದ್ದಾರೆ.

ಕೃಷಿ ಪಂಪ್‌ಸೆಟ್‌ಗೆ ಸೌರವಿದ್ಯುತ್ ಸಂಪರ್ಕ ಪ್ರೋತ್ಸಾಹಿಸುವ ಉದ್ದೇಶದಿಂದ ಸರ್ಕಾರ ಜಾಲಮುಕ್ತ ಸೌರ ನೀರಾವರಿ ಪಂಪ್‌ಸೆಟ್ ಯೋಜನೆಯನ್ನು ಜಾರಿಗೊಳಿಸಿದೆ. ಪ್ರತಿ ಪಂಪ್‌ಸೆಟ್‌ಗೆ ತಗಲುವ ₹ 4.6 ಲಕ್ಷ ವೆಚ್ಚದಲ್ಲಿ ರೈತರು ₹ 1 ಲಕ್ಷ ಭರಿಸುವುದು ಕಡ್ಡಾಯ. 2020ರವರೆಗೆ ಈ ಯೋಜನೆಯಲ್ಲಿ 3,710 ಪಂಪ್‌ಸೆಟ್‌ಗಳಿಗೆ ಮಾತ್ರ ಸೌರವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. 5 ಎಚ್‌ಪಿ ಸಾಮರ್ಥ್ಯದ ಮೋಟಾರ್ ಅತಿ ಆಳದಿಂದ ನೀರು ಹೊರತೆಗೆಯುವುದಿಲ್ಲ. ಸೋಲಾರ್ ಪ್ಯಾನಲ್‌ಗಳಿಂದ ಇದಕ್ಕೆ ಸಾಕಾಗುವಷ್ಟು ವಿದ್ಯುತ್ ಸಿಗದಿರುವುದರಿಂದ ಈ ಯೋಜನೆಗೆ ಹಿನ್ನಡೆಯಾಗಿದೆ.

ರಾಜ್ಯ ಸರ್ಕಾರದ 'ಸೂರ್ಯ ರೈತ ಯೋಜನೆ' ಹಾಗೂ ಕೇಂದ್ರ ಸರ್ಕಾರದ 'ಕಿಸಾನ್ ಊರ್ಜಾ ಸುರಕ್ಷಾ ಮತ್ತು ಉತ್ಥಾನ್ ಮಹಾ ಅಭಿಯಾನ್ (ಕುಸುಮ್) ಯೋಜನೆ' ಜಾರಿಯಲ್ಲಿವೆ. 7.5 ಎಚ್‌ಪಿ ಮೋಟರ್‌ಗೆ ಪೂರೈಸುವಷ್ಟು ಸಾಮರ್ಥ್ಯದ ಸೋಲಾರ್ ಪ್ಯಾನಲ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ. ಹೆಚ್ಚುವರಿಯಾಗಿ ಉತ್ಪಾದನೆ ಆಗುವ ವಿದ್ಯುತ್‌ಅನ್ನು ರೈತರು ಗ್ರಿಡ್‌ಗೆ ಪೂರೈಸಬೇಕು. ಈ ನಿರ್ಬಂಧ ರೈತರನ್ನು ನಿರೀಕ್ಷಿತ ಪ್ರಮಾಣದಲ್ಲಿ ಆಕರ್ಷಿಸುತ್ತಿಲ್ಲ.

ಚಿತ್ರದುರ್ಗ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಸೇರಿ ಅಂತರ್ಜಲ ಮಟ್ಟ ಪಾತಾಳಕ್ಕೆ ಇಳಿದಿರುವ ಜಿಲ್ಲೆಗಳಲ್ಲಿ ಸೋಲಾರ್ ಪಂಪ್‌ಸೆಟ್ ರೈತರಿಗೆ ವರವಾಗಿಲ್ಲ. ಸಾವಿರ ಅಡಿ ಆಳದ ಕೊಳವೆಬಾವಿಗಳಿಂದ ನೀರು ಎತ್ತುವ ಸಾಮರ್ಥ್ಯ ಸೋಲಾರ್ ಪಂಪ್‌ಸೆಟ್‌ಗಳಿಗೆ ಇಲ್ಲವೆಂಬುದು ರೈತರ ಅಳಲು. ಸಬ್ಸಿಡಿ ಆಸೆಯಿಂದ ಸೋಲಾರ್ ಸೌಲಭ್ಯ ಪಡೆದಿದ್ದ ಕೆಲವರು ಪ್ಯಾನಲ್‌ಗಳನ್ನು ಮಾರಾಟ ಮಾಡಿದ್ದಾರೆ. ಅಂತರ್ಜಲ ಮಟ್ಟ ಚೆನ್ನಾಗಿರುವ ಮಲೆನಾಡಿನ ಅಂಚು ಹಾಗೂ ಕರಾವಳಿಯಲ್ಲಿ ಮಾತ್ರ ಇದರಿಂದ ಕೊಂಚ ಅನುಕೂಲವಾಗಿದೆ.

ಸೋಲಾರ್ ವಿದ್ಯುತ್ ಸಂಪರ್ಕ ಪಡೆದ ಪಂಪ್‌ಸೆಟ್‌ಗಳು

ಈವರೆಗೆ ರಾಜ್ಯದಾದ್ಯಂತ ವಿವಿಧ ಇಲಾಖೆ ಮತ್ತು ಸಂಸ್ಥೆಗಳಿಂದ ಒಟ್ಟು **6,426** (ಕ್ರೆಡೆಲ್–**3,710,** ಪಿಎಂ ಕುಸುಮ್ ಬಿ ಅಡಿ ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ–**130,** ಕೃಷಿ ಇಲಾಖೆ– **201**, ಸಣ್ಣ ನೀರಾವರಿ– **2,075**, ಬೆಸ್ಕಾಂನ ಸೂರ್ಯ ರೈತ–**310**) ಸೌರ ನೀರಾವರಿ ಪಂಪ್‌ಸೆಟ್ ಅಳವಡಿಸಲಾಗಿದೆ.

> **ನಿಯಮಿತವಾಗಿ ವಿದ್ಯುತ್ ಪೂರೈಕೆ ಆಗುತ್ತಿರಲಿಲ್ಲ. ರಾತ್ರಿ ವೇಳೆ ನೀರು ಹಾಯಿಸಲು ಕಷ್ಟವಾಗುತ್ತಿತ್ತು. ಕೊಳವೆಬಾವಿಯ ಆಳ ಕಡಿಮೆ ಇರುವುದರಿಂದ ಸೌರ ವಿದ್ಯುತ್ ಬಳಕೆ ಆರಂಭಿಸಿದೆ.**
> **ಡಾ.ಶಂಕರ್ ಪಾಟೀಲ್,** ಬಾತಿ, ದಾವಣಗೆರೆ

ತೀರ್ಥಹಳ್ಳಿ ತಾಲ್ಲೂಕಿನ ತುಂಗಾ ನದಿಯ ದಂಡೆಯ ಮೇಲೆ ಪಂಪ್‌ಹೌಸ್‌ಗಳಿಗಾಗಿ ಅಳವಡಿಸಿರುವ ಟಿಸಿ.

ಟಿಸಿ ಸುಟ್ಟರೂ ಆಗದು ಬದಲು!

● ಮನೋಜಕುಮಾರ್ ಗುದ್ದಿ

ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶದ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ವಿದ್ಯುತ್ ಸಮಸ್ಯೆ ತೀವ್ರವಾಗಿದ್ದು, ಸಮಸ್ಯೆ ನಿವಾರಿಸಲು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಮೊರೆಯಿಡುವ ರೈತರಿಗೆ ಸಮರ್ಪಕ ಸ್ಪಂದನೆ ಸಿಕ್ಕಿಲ್ಲ.

'ಸುಟ್ಟ ಟ್ರಾನ್ಸ್‌ಫಾರ್ಮರ್‌ಗಳನ್ನು (ಟಿಸಿ) ತಕ್ಷಣ ಬದಲಿಸಲು ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸರ್ಕಾರ ಸೂಚಿಸಿದೆ. ಆದರೆ, ತಿಂಗಳಾದರೂ ಟಿಸಿ ಬದಲಿಸುವುದಿಲ್ಲ. ರೈತರೆಲ್ಲ ಸೇರಿ ಇಂತಿಷ್ಟು ಹಣ ಹಾಕಿ ಸೆಕ್ಷನ್ ಎಂಜಿನಿಯರ್, ಹಿರಿಯ ಅಧಿಕಾರಿಗಳಿಗೆ 'ಕಾಣಿಕೆ' ಸಲ್ಲಿಸಿದರೆ ಮಾತ್ರ ಟಿಸಿ ಬದಲಾವಣೆ ಆಗುತ್ತದೆ' ಎಂಬುದು ಬಹುಪಾಲು ರೈತರು ಮಾಡುವ ಆರೋಪ.

'ಟಿಸಿ ಬ್ಯಾಂಕ್ ಆರಂಭಿಸುವುದಾಗಿ ಹೇಳಿದ್ದ ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ (ಜೆಸ್ಕಾಂ) ಈ ವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ' ಎನ್ನುತ್ತಾರೆ ರೈತ ಕೃಷಿ ಕಾರ್ಮಿಕ ಸಂಘಟನೆಯ ಜಿಲ್ಲಾ ಘಟಕದ ಕಾರ್ಯದರ್ಶಿ ಮಹೇಶ ಎಸ್.ಬಿ.

'ಕೊಪ್ಪಳ ಜಿಲ್ಲೆಯಲ್ಲಿ ಕಾಲುವೆ ಉದ್ದಕ್ಕೂ ಅಕ್ರಮ ಪಂಪ್‌ಸೆಟ್‌ಗಳಿವೆ. ಅಲ್ಲಿ ಹಾಯ್ದು ಹೋಗಿರುವ ಹೆವಿ ಲೈನ್‌ಗಳಿಂದ ಅಕ್ರಮವಾಗಿ ವಿದ್ಯುತ್ ಪಡೆಯಲಾಗುತ್ತಿದೆ. ಇದರ ಪರಿಣಾಮ ಟಿಸಿಗಳು ಸುಟ್ಟುಹೋಗುತ್ತಿವೆ' ಎಂಬುದು ಕೆಲ ರೈತರು ಮಾಡುವ ಆರೋಪ.

'ಅಕ್ರಮ ಪಂಪ್‌ಸೆಟ್‌ಗಳಿಗೆ ಕಡಿವಾಣ ಹಾಕಿ, ತಪ್ಪಿತಸ್ಥ ರೈತರಿಗೆ ದಂಡ ವಿಧಿಸುವ ಬದಲು ಅವರಿಂದ ಲಂಚ ಪಡೆದು ವಿದ್ಯುತ್ ಅಕ್ರಮಕ್ಕೆ ಜೆಸ್ಕಾಂ ಸಹಕರಿಸುತ್ತದೆ' ಎಂದು ರೈತರು ಹೇಳುತ್ತಾರೆ.

'ಬೀದರ್ ಜಿಲ್ಲೆಯಲ್ಲಿ ಮಾಂಜ್ರಾ ನದಿ ದಂಡೆ ಹಾಗೂ ಒಣಭೂಮಿಯಲ್ಲಿ ಬಾವಿಗಳನ್ನು ಹೊಂದಿರುವ ರೈತರಲ್ಲಿ ಕೆಲವರು ರಾತ್ರಿ ವೇಳೆ ವಿದ್ಯುತ್ ಲೈನ್‌ಗಳಿಗೆ ಕೊಕ್ಕೆ ಹಾಕಿ ವಿದ್ಯುತ್ ಕಳ್ಳತನ ಮಾಡುವುದು ಸಾಮಾನ್ಯವಾಗಿದೆ. ಲೈನ್‌ಮನ್‌ಗಳು ರೈತರಿಂದ 'ಮಾಮೂಲು' ಪಡೆದು ಏನೂ ಗೊತ್ತೇ ಇಲ್ಲ ಎಂಬಂತೆ ಮೌನ ವಹಿಸುತ್ತಾರೆ' ಎನ್ನುತ್ತಾರೆ ಕಂದಾಯ ಇಲಾಖೆಯ ಸಿಬ್ಬಂದಿಯೊಬ್ಬರು.

(ಪೂರಕ ಮಾಹಿತಿ: ಸಿದ್ದನಗೌಡ ಪಾಟೀಲ, ಚಂದ್ರಕಾಂತ ಮಸಾನಿ)

12 ಗಂಟೆ 'ತ್ರೀ ಫೇಸ್' ಅರೆಬರೆ ಕಾರ್ಯಗತ

● ಬಿ.ಜೆ.ಧನ್ಯಪ್ರಸಾದ್

ಚಿಕ್ಕಮಗಳೂರು: ಜಿಲ್ಲೆಯ ಕಾಫಿ ತೋಟ ಪ್ರದೇಶಗಳಲ್ಲಿ ನಿತ್ಯ 12 ಗಂಟೆ ತ್ರೀ ಫೇಸ್ ವಿದ್ಯುತ್ ಪೂರೈಸುವಂತೆ ಇಂಧನ ಸಚಿವರು ಸೂಚನೆ ನೀಡಿದ್ದರೂ ಅದು ಪೂರ್ಣವಾಗಿ ಅನುಷ್ಠಾನವಾಗಿಲ್ಲ.

ಪಟ್ಟಣಗಳ ಭಾಗದ ಫೀಡರ್‌ಗಳ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ತಗ್ಗಿದೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಯಥಾಸ್ಥಿತಿ ಮುಂದುವರಿದಿದೆ. ಮಲೆನಾಡು ಭಾಗದಲ್ಲಿ ವಿದ್ಯುತ್ ಬಳಕೆ ಬೇಸಿಗೆ ಕಾಲದಲ್ಲಿ ಮಳೆಗಾಲಕ್ಕಿಂತ ಐದಾರು ಪಟ್ಟು ಜಾಸ್ತಿ ಇರುತ್ತದೆ. ಬೆಳೆಗಾರರು ತೋಟಗಳಿಗೆ ನೀರುಣಿಸಲು 25 ಎಚ್.ಪಿ.ವರೆಗಿನ ಮೋಟರ್‌ಗಳನ್ನು ಅಳವಡಿಸಿದ್ದಾರೆ.

ಗ್ರಾಮೀಣ ಭಾಗದಲ್ಲಿ ದಿನದಲ್ಲಿ 6ರಿಂದ 8 ಗಂಟೆ ತ್ರೀ ಫೇಸ್ ವಿದ್ಯುತ್ ಪೂರೈಸಲಾಗುತ್ತಿದೆ. ಆದರೆ ವೋಲ್ಟೇಜ್ ಕೊರತೆ ಮಾಮೂಲಿ ಎಂಬಂತಾಗಿದೆ. ಬಹಳಷ್ಟು ಕಡೆ ಟ್ರಾನ್ಸ್‌ಫಾರ್ಮರ್‌ಗಳ ಸಮಸ್ಯೆ ವಿಪರೀತ ಇದೆ. ಹೊಸ ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆ ಗಗನಕುಸುಮವಾಗಿದೆ. ಲಂಚ ಕೊಟ್ಟರೆ ಮಾತ್ರ 'ಎಸ್ಟಿಮೇಟ್' ಮಾಡಿ ಅಳವಡಿಸುತ್ತಾರೆ, ಇಲ್ಲದಿದ್ದರೆ 'ಎಸ್ಟಿಮೇಟ್ ಕಳಿಸಿದ್ದೇವೆ, ಅನುಮೋದನೆ ಬಾಕಿ ಇದೆ' ಎಂಬ ಸಿದ್ಧ ಉತ್ತರ ನೀಡುತ್ತಾರೆ ಎಂದು ರೈತರು ಅಳಲು ತೋಡಿಕೊಳ್ಳುತ್ತಾರೆ.

'ಪ್ರವಾಸಿ ಕ್ಷೇತ್ರಗಳಾದ ಕಳಸ–ಹೊರನಾಡಿಗೆ ಎಕ್ಸ್‌ಪ್ರೆಸ್ ಲಿಂಕ್ ಲೈನ್ ಇದೆ. ಈ ಭಾಗದಲ್ಲಿ ವಿದ್ಯುತ್ ಸಮಸ್ಯೆ ಕಡಿಮೆ. ಬಾಳೆಹೊಳೆ, ಹಿರೇಬೈಲು, ಸಂಸೆ, ಜಾವಳಿ ಫೀಡರ್‌ಗಳ ವ್ಯಾಪ್ತಿಯಲ್ಲಿ ಸಮಸ್ಯೆ ತಪ್ಪಿಲ್ಲ. ಮಲೆನಾಡು ಭಾಗದ ಬಹಳಷ್ಟು ಕಡೆ ವಿದ್ಯುತ್ ಮಾರ್ಗಗಳಲ್ಲಿ ಕಬ್ಬಿಣದ ಹಳೆಯ ಕಂಬಗಳು ಇವೆ. ಕಂಡಕ್ಟರ್‌ಗಳು (ತಂತಿ, ಕಂಬಗಳು) ಕ್ಷಮತೆ ಇಲ್ಲ' ಎಂದು ಕಳಸದ ಕಾಫಿ ಬೆಳೆಗಾರ ರವಿ ಹೇಳುತ್ತಾರೆ.

ಕಾಫಿ ಗಿಡಗಳಲ್ಲಿ ಹೂ ಕಟ್ಟುವ ಹಂತದಲ್ಲಿ (ಫೆಬ್ರುವರಿಯಿಂದ ಜೂನ್‌ವರೆಗೆ) ನೀರು ನೀಡದಿದ್ದರೆ ಬೆಳೆ ಒಣಗುತ್ತದೆ. ಬೆಳೆಗಾರರು 'ಸ್ಪ್ರಿಂಕ್ಲರ್' ಬಳಸಿ ಗಿಡಗಳಿಗೆ ನೀರುಣಿಸುತ್ತಾರೆ. ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳ ಕಾಫಿ ಬೆಳೆಗೆ ಅನುಕೂಲ ಕಲ್ಪಿಸಲು ನಿತ್ಯ 12 ಗಂಟೆ ತ್ರೀಫೇಸ್ ವಿದ್ಯುತ್ ಪೂರೈಸಬೇಕೆಂದು ಶಾಸಕರಾದ ಎಂ.ಪಿ. ಕುಮಾರಸ್ವಾಮಿ, ಕೆ.ಜಿ. ಬೋಪಯ್ಯ, ಅಪ್ಪಚ್ಚು ರಂಜನ್, ವಿಧಾನ ಪರಿಷತ್ ಸದಸ್ಯ ಎಂ.ಕೆ. ಪ್ರಾಣೇಶ್ ಅವರು ಇಂಧನ ಸಚಿವ ಸುನೀಲ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದ್ದರು.

ಎಂ.ಪಿ. ಕುಮಾರಸ್ವಾಮಿ

'ಬಾಳೂರು, ಬಣಕಲ್, ಗೋಣಿಬೀಡು ಸಹಿತ ಕೆಲವೆಡೆ 'ಪವರ್ ಗ್ರಿಡ್' ಇಲ್ಲ. ಈ ಭಾಗದಲ್ಲಿ ವಿದ್ಯುತ್ ಸಮಸ್ಯೆಗೆ ಇದೂ ಒಂದು ಕಾರಣ. 12 ಗಂಟೆ 'ತ್ರೀ ಫೇಸ್' ವಿದ್ಯುತ್ ಪೂರೈಸಲು ಅಧಿಕಾರಿಗಳು ಕ್ರಮ ವಹಿಸುತ್ತಿಲ್ಲ' ಎಂದು ಮೂಡಿಗೆರೆ ಕ್ಷೇತ್ರದ ಶಾಸಕ ಕುಮಾರಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ಹೇಳಿಕೆಗೆ ಸೀಮಿತವಾದ ಸೂಚನೆ'

'ಇಂಧನ ಸಚಿವರ ಸೂಚನೆ ಬಾಯಿಮಾತಿಗೆ ಸೀಮಿತವಾಗಿದೆ. 12 ಗಂಟೆ 'ತ್ರೀ ಫೇಸ್' ವಿದ್ಯುತ್ ಪೂರೈಸುತ್ತಿಲ್ಲ. ಸಚಿವರಿಗೆ ಫೋನ್ ಮಾಡಿದರೆ ಕರೆ ಸ್ವೀಕರಿಸಲ್ಲ' ಎಂದು ಕರ್ನಾಟಕ ಬೆಳೆಗಾರರ ಒಕ್ಕೂಟದ (ಕೆಜಿಎಫ್) ಅಧ್ಯಕ್ಷ ಡಾ.ಎಚ್.ಟಿ. ಮೋಹನ್‌ಕುಮಾರ್ ದೂರಿದರು.

'ಮನವಿ ಸಲ್ಲಿಸಿ ಸುಸ್ತಾಗಿದ್ದೇವೆ. ಗ್ರಾಹಕರ ಕೋರ್ಟ್ ಮೆಟ್ಟಿಲು ಏರುವ ಚಿಂತನೆ ನಡೆಸಿದ್ದೇವೆ. ವಕೀಲರ ಸಲಹೆ ಪಡೆದು, ಸಭೆಯಲ್ಲಿ ಚರ್ಚಿಸಿ ನಿರ್ಧರಿಸುತ್ತೇವೆ' ಎಂದು ತಿಳಿಸಿದರು.



ಭಾವು ಪತ್ತಾರ್

1,40,598 ಚ.ಕಿ.ಮೀ	ರಾಜ್ಯದ ಒಟ್ಟು ಕೃಷಿ ಯೋಗ್ಯ ಭೂಮಿ
1,07,000 ಚ.ಕಿ.ಮೀ	ಈಗ ಬೇಸಾಯ ನಡೆಯುತ್ತಿರುವ ಪ್ರದೇಶ
ರಾಜ್ಯದಲ್ಲಿರುವ ಒಟ್ಟು ಪಂಪ್‌ಸೆಟ್‌ಗಳು	**32.34** ಲಕ್ಷ (ಜನವರಿ 2022 ರ ಅಂತ್ಯಕ್ಕೆ)
ರಾಜ್ಯದ ವಿದ್ಯುತ್ ಬೇಡಿಕೆ	**15,000** ದಿಂದ **15,500** ಮೆಗಾ ವಾಟ್ (ಮಾರ್ಚ್ ತಿಂಗಳಲ್ಲಿ)

● **ಕೃಷಿಗೆ ಬೇಕಾಗಿರುವ ವಿದ್ಯುತ್ ಬೇಡಿಕೆ ಮತ್ತು ಪೂರೈಕೆಯಾಗುತ್ತಿರುವ ವಿದ್ಯುತ್**

ವಿದ್ಯುತ್ ಸರಬರಾಜು ಕಂಪನಿಗಳು ಪೂರೈಸುವ ಒಟ್ಟು ವಿದ್ಯುತ್ ಪ್ರಮಾಣದಲ್ಲಿ ಶೇ **37**ರಷ್ಟನ್ನು ನೀರಾವರಿ ಪಂಪ್‌ಸೆಟ್‌ಗಳಿಗೆ ಪೂರೈಸಲಾಗುತ್ತಿದೆ.

● **ಅಕ್ರಮ–ಸಕ್ರಮದಡಿ ಸಲ್ಲಿಕೆಯಾದ ಅರ್ಜಿಗಳು**

14-07-2014 ಮತ್ತು 23-07-2014ರ ಸುತ್ತೋಲೆಗಳ ಅನ್ವಯ ಅಕ್ರಮ ಅಥವಾ ಹೊಸ ಸಂಪರ್ಕ ಎಂಬ ಭೇದವಿಲ್ಲದೇ **8.24** ಲಕ್ಷ ನೀರಾವರಿ ಪಂಪ್‌ಸೆಟ್ ಅರ್ಜಿಗಳು ವಿದ್ಯುತ್ ಸಂಪರ್ಕ ಪಡೆಯಲು ನೋಂದಣಿಗೊಂಡಿವೆ.

ರಾತ್ರಿ ವಿದ್ಯುತ್; ಕೃಷಿಗೆ ಕಂಟಕ

ಒಂದನೇ ಪುಟದಿಂದ

ದೂರದವರೆಗೆ ಮಾರ್ಗದ ತಂತಿಗಳು ಸಾಗುತ್ತವೆ. ಇದರಿಂದ ಪದೇ ಪದೇ ವಿದ್ಯುತ್ ವ್ಯತ್ಯಯವಾಗುತ್ತದೆ.

'ಹೊಸ ತಂತ್ರಜ್ಞಾನ ಅಳವಡಿಸಿಕೊಂಡರೆ ಕಚೇರಿಯಲ್ಲೇ ಕುಳಿತು ಯಾವ ಭಾಗದಲ್ಲಿ ಸಮಸ್ಯೆಯಾಗಿದೆ ಎಂದು ಪರಿಶೀಲಿಸಬಹುದು. ಸಮಸ್ಯೆಯಾದ ಒಂದು ಭಾಗ ಹೊರತುಪಡಿಸಿ ಉಳಿದ ಕಡೆಗೆ ವಿದ್ಯುತ್ ತಡೆಯಿಲ್ಲದೇ ಹರಿಯುವಂತೆ ಕ್ರಮ ಕೈಗೊಳ್ಳಬಹುದು. ಇಂದಿಗೂ ಒಬಿರಾಯನ ಕಾಲದ ವ್ಯವಸ್ಥೆಯಲ್ಲೇ ಇರುವಂತಾಗಿದೆ' ಎನ್ನುತ್ತಾರೆ ರೈತ ಮುಖಂಡ ಎಚ್.ಆರ್.ಬಸವರಾಜಪ್ಪ.

ರಾಜ್ಯದಲ್ಲಿ ಇರುವ ವಿದ್ಯುತ್ ಬೇಡಿಕೆಯಲ್ಲಿ ಕೃಷಿಗೆ ಬಳಕೆಯಾಗುವ ವಿದ್ಯುತ್ ಪ್ರಮಾಣ ಅತ್ಯಂತ ಕಡಿಮೆ ಇದೆ. ಆದರೆ, ಸರ್ಕಾರದ ಜನಪ್ರಿಯ ಯೋಜನೆಗಳ ಪಟ್ಟಿಯಲ್ಲಿ ಪಂಪ್‌ಸೆಟ್‌ಗಳಿಗೆ ಪೂರೈಸುವ ವಿದ್ಯುತ್ ಸಹ ಸೇರಿದ್ದು, ಉಚಿತವಾಗಿ ನೀಡಲಾಗುತ್ತಿದೆ. ಇದೂ ನಿರ್ಲಕ್ಷ್ಯಕ್ಕೆ ಕಾರಣ ಎನ್ನುವುದು ರೈತರ ಆರೋಪ.

ಖಾಸಗಿಯವರಿಗೆ ವಿದ್ಯುತ್ ಪರಿವರ್ತಕಗಳ ದುರಸ್ತಿ ಹೊಣೆ:

ನಿಯಮದ ಪ್ರಕಾರ ಕೃಷಿ ಪಂಪ್‌ಸೆಟ್‌ಗಳ ವಿದ್ಯುತ್ ಪರಿವರ್ತಕಗಳು (ಟಿಸಿ) ಸುಟ್ಟರೆ 72 ತಾಸುಗಳ ಒಳಗೆ ಬದಲಿಸಿಕೊಡಬೇಕು. ಆದರೆ, ವಾಸ್ತವದಲ್ಲಿ ಒಂದು ವಾರ ಕಳೆದರೂ ಬದಲಿಸಿಕೊಡಲು ಸಾಧ್ಯವಾಗುತ್ತಿಲ್ಲ. ದುರಸ್ತಿ ಹೊಣೆಯನ್ನು ಖಾಸಗಿ ಏಜೆನ್ಸಿಗಳಿಗೆ ವಹಿಸಿಕೊಡಲಾಗಿದೆ. ಅಲ್ಲಿ ಗುಣಮಟ್ಟದ ಪರಿಕರ ಬಳಸದ ಕಾರಣ ಮತ್ತೆ ಮತ್ತೆ ದುರಸ್ತಿಗೆ ಬರುತ್ತಿವೆ. ಇದರಲ್ಲೂ ಸಾಕಷ್ಟು ಹಣದ ಅವ್ಯವಹಾರ ನಡೆಯುತ್ತಿದೆ. ವೋಲ್ಟೇಜ್ ವ್ಯತ್ಯಯದಿಂದಲೂ ಅನೇಕ ಕಡೆ ಟಿಸಿಗಳು ಸುಟ್ಟುಹೋಗುತ್ತಿವೆ. ಇದರಿಂದ ಬೆಳೆಗಳು ಒಣಗುವುದು ಸಹಜವಾಗಿದೆ.

'ಮಲೆನಾಡಿನಲ್ಲಿ ಕಾನು, ತೋಟ, ಅರಣ್ಯ ಪ್ರದೇಶಗಳಿಂದ ಬರುವ ವಿದ್ಯುತ್ ಮಾರ್ಗದ ಮೇಲೆ ಮರ, ಸ್ವಾಗೆ ಬೀಳುತ್ತಿರುತ್ತವೆ. ಇದರಿಂದ ವಿದ್ಯುತ್ ಸಂಪರ್ಕ ಕಡಿತಗೊಳ್ಳುವುದು ಸಹಜವಾಗಿದೆ. ಟಿಸಿಗಳಿಗೆ ಕಾಲಕಾಲಕ್ಕೆ ಅಗತ್ಯವಾದ ಗ್ರೀಸ್, ಆಯಿಲ್‌ಗಳ ನಿರ್ವಹಣೆ ಮಾಡುತ್ತಿಲ್ಲ. ಅಳವಡಿಸಿದ ಟಿಸಿ ಹಾಳಾದ ಮೇಲೆ ಮಾತ್ರ ಬದಲಾವಣೆಯಾಗುತ್ತಿದೆ' ಎನ್ನುವುದು ತೀರ್ಥಹಳ್ಳಿ ತಾಲ್ಲೂಕಿನ ರೈತ ಶೇಡ್ಗಾರ್ ಪ್ರಫುಲ್ಲ ಅವರ ಆರೋಪ.

ರಾಜ್ಯ ಸರ್ಕಾರ ಹಲವು ಮಹತ್ವಾಕಾಂಕ್ಷಿ ಯೋಜನೆಗಳ ಮೂಲಕ ಗುಣಮಟ್ಟದ ವಿದ್ಯುತ್ ಪೂರೈಕೆಯ ಭರವಸೆ ನೀಡಿದೆ. ಆದರೂ ರೈತರಿಗೆ ಇದರ ಪ್ರಯೋಜನ ಪರಿಣಾಮಕಾರಿಯಾಗಿ ದೊರೆತಿಲ್ಲ. ಫೀಡರ್‌ನಿಂದ ಬರುವ ವಿದ್ಯುತ್, ಪಂಪ್‌ಸೆಟ್‌ಗಳಿಗೆ ತಲುಪುವ ಮೊದಲೇ ಸಾಕಷ್ಟು ಸೋರಿಕೆಯಾಗುತ್ತಿದೆ.

ಮಾಯವಾದ ಮಿತವ್ಯಯದ ಪರಿಕಲ್ಪನೆ: ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀತಿ ಜಾರಿಯಾದ ಮೇಲೆ ವಿದ್ಯುತ್ ಕಳವು ಪ್ರಕರಣಗಳು ಗಣನೀಯವಾಗಿ ಕಡಿಮೆಯಾಗಿವೆ. ಆದರೆ, ಉಚಿತ ವಿದ್ಯುತ್ ಸೌಲಭ್ಯ ಪಡೆದ ರೈತರು ಬೇಕಾಬಿಟ್ಟಿ ಬಳಸುತ್ತಿದ್ದಾರೆ. ಮಿತವ್ಯಯದ ಕಲ್ಪನೆ ಮಾಯವಾಗಿದೆ. ಈ ಕುರಿತು ರೈತರಲ್ಲಿ ಜಾಗೃತಿ ಮೂಡಿಸುವ ಕಾರ್ಯವೂ ಆಗುತ್ತಿಲ್ಲ ಎನ್ನುವುದು ರೈತ ಗುಣಶೇಖರ್ ಅವರ ಅಸಮಾಧಾನವಾಗಿದೆ.

ಅಕ್ರಮ ಪಂಪ್‌ಸೆಟ್‌ಗಳ ಹಾವಳಿ

ನದಿ ತೀರ, ರಾಜ್ಯದ ಪ್ರಮುಖ ಜಲಾಶಯಗಳ ನಾಲೆಗಳ ಉದ್ದಕ್ಕೂ ಅಕ್ರಮ ಪಂಪ್‌ಸೆಟ್‌ಗಳ ಹಾವಳಿ ಮಿತಿಮೀರಿದೆ. ರಾಜ್ಯದಲ್ಲಿ ಅಧಿಕೃತ ಪಂಪ್‌ಸೆಟ್‌ಗಳು ನಾಲ್ಕು ಲಕ್ಷ ಇದ್ದರೆ, ಅಕ್ರಮ ಪಂಪ್‌ಸೆಟ್‌ಗಳು ಸುಮಾರು 10 ಲಕ್ಷದಷ್ಟಿವೆ ಎಂದು ಅಂದಾಜಿಸಲಾಗಿದೆ. ಇಂತಹ ಅಕ್ರಮ ಪಂಪ್‌ಸೆಟ್‌ಗಳಿಗೂ ವಿದ್ಯುತ್ ಸರಬರಾಜು ಕಂಪನಿಗಳು ಸಕ್ರಮದ ಮುದ್ರೆ ಒತ್ತಿವೆ.

ಸಕ್ರಮದಲ್ಲೂ ವ್ಯಾಪಕ ಭ್ರಷ್ಟಾಚಾರ

ರಾಜ್ಯದಲ್ಲಿ ಅಕ್ರಮ–ಸಕ್ರಮ ಯೋಜನೆ ಅಡಿ ಲಕ್ಷಾಂತರ ರೈತರು ಅರ್ಜಿ ಸಲ್ಲಿಸಿದ್ದಾರೆ. ಕನಿಷ್ಠ ಎರಡು ಪಂಪ್‌ಸೆಟ್ ಇದ್ದರೆ ಒಂದು ಟಿಸಿ ಅಳವಡಿಸಲಾಗುತ್ತಿದೆ. ಇದರಲ್ಲೂ ಭ್ರಷ್ಟಾಚಾರ ಮನೆಮಾಡಿದೆ.

ನಿಯಮದ ಪ್ರಕಾರ ಅಕ್ರಮ ಪಂಪ್‌ಸೆಟ್‌ಗಳು ಸಕ್ರಮವಾಗಲು ₹ 10 ಸಾವಿರ ಠೇವಣಿ, ಪ್ರತಿ ಎಚ್‌ಪಿ ಮೋಟರ್‌ಗೆ ₹ 1,773ರಂತೆ ಶುಲ್ಕ ನಿಗದಿ ಮಾಡಲಾಗಿದೆ. ಆದರೆ, ಅದರ ಎರಡು ಪಟ್ಟು ಹಣ ವಸೂಲಿ ಮಾಡಲಾಗುತ್ತಿದೆ. ಲಂಚ ನೀಡದ ರೈತರು ನಾಲ್ಕು, ಐದು ವರ್ಷಗಳಿಂದಲೂ ಸಕ್ರಮಕ್ಕೆ ಚಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. 'ಎರಡು ಪಂಪ್‌ಸೆಟ್‌ಗಳ ಬಳಕೆಯನ್ನು ಸಕ್ರಮಗೊಳಿಸಲು ₹ 48 ಸಾವಿರ ಕಟ್ಟಿಸಿಕೊಂಡಿದ್ದಾರೆ. ಜಮೀನಿನವರೆಗೆ ಕಂಬ ಹಾಕಿದ್ದಾರೆ. ಮತ್ತೆ ₹ 30 ಸಾವಿರ ಲಂಚ ನೀಡದ ಕಾರಣ ಎರಡು ತಿಂಗಳಿನಿಂದ ವಿದ್ಯುತ್ ತಂತಿ ಎಳೆದಿಲ್ಲ. ಪ್ರತಿದಿನ ಕಚೇರಿಗೆ ಅಲೆಯುವುದೇ ಕೆಲಸವಾಗಿದೆ' ಎನ್ನುತ್ತಾರೆ ದಾವಣಗೆರೆ ಜಿಲ್ಲೆಯ ಕಾಶೀಪುರದ ರೈತ ಮಹಿಳೆ ಸವಿತಾ.

> **ಸರ್ಕಾರದ ನಿಯಮದಂತೆ ಪ್ರತಿ ಭಾಗದಲ್ಲೂ 100 ಕೆ.ವಿ ಟಿಸಿಗಳ ಸಂಗ್ರಹ ಇರಬೇಕು. ಹೆಚ್ಚುವರಿ ಟಿಸಿಗಳು ಇಲಾಖೆಗೆ ಬಂದರೂ, ಹಣ ನೀಡಿದರಷ್ಟೆ ತ್ವರಿತವಾಗಿ ನೀಡುತ್ತಾರೆ. ಇಲ್ಲದಿದ್ದರೆ ಅಲೆದಾಡಿಸುತ್ತಾರೆ. 100 ಕೆ.ವಿ ಟಿಸಿ ಜಾಗದಲ್ಲಿ 65 ಕೆವಿ ಟಿಸಿ ಅಳವಡಿಸಲಾಗಿದೆ**
> **ಪೂರ್ಣೇಶ್ ಕೆಳಕೆರೆ,** ಕೃಷಿಕ

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 20-3-1997

● **ಉತ್ತರಪ್ರದೇಶದಲ್ಲಿ ಬಿಜೆಪಿ- ಬಿಎಸ್‌ಪಿ ಸರ್ಕಾರ ನಾಳೆ ರಚನೆ**

ನವದೆಹಲಿ, ಮಾರ್ಚ್ 19 (ಯುಎನ್‌ಐ, ಪಿಟಿಐ)– ಉತ್ತರಪ್ರದೇಶ ರಾಜಕೀಯದಲ್ಲಿ ಇಂದು ಸಂಭವಿಸಿದ ನಾಟಕೀಯ ಬೆಳವಣಿಗೆಯೊಂದರಲ್ಲಿ ಭಾರತೀಯ ಜನತಾ ಪಕ್ಷ ಮತ್ತು ಬಹುಜನ ಸಮಾಜ ಪಕ್ಷಗಳು ಸಮ್ಮಿಶ್ರ ಸರ್ಕಾರ ರಚನೆಗೆ ಮುಂದಾಗಿವೆ.

ಮಾಯಾವತಿ ನೇತೃತ್ವದ ನೂತನ ಸರ್ಕಾರ ಶುಕ್ರವಾರ ಪ್ರಮಾಣವಚನ ಸ್ವೀಕರಿಸಲಿದ್ದು, ಇದರಿಂದ ರಾಜ್ಯದಲ್ಲಿ ಐದು ತಿಂಗಳ ರಾಜಕೀಯ ಅನಿಶ್ಚಿತತೆಗೆ ತೆರೆ ಬಿದ್ದಂತಾಗಿದೆ.

50 ವರ್ಷಗಳ ಹಿಂದೆ — ಸೋಮವಾರ, 20-3-1972

● **ಇಂದು ಅರಸು ಜತೆ ಚನ್ನಬಸಪ್ಪ, ಕೆ.ಎಚ್.ಪಾಟೀಲ್ ಪ್ರಮಾಣವಚನ**

ಬೆಂಗಳೂರು, ಮಾರ್ಚ್ 19– ಸೋಮವಾರ ಮಧ್ಯಾಹ್ನ ನಿಯೋಜಿತ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರೊಡನೆ ಶ್ರೀ ಎಚ್.ಎಂ. ಚನ್ನಬಸಪ್ಪ ಹಾಗೂ ಕೆ.ಎಚ್.ಪಾಟೀಲ್ ಅವರೂ ಪ್ರಮಾಣವಚನ ಸ್ವೀಕರಿಸುವರು.

ರಾಷ್ಟ್ರಪತಿ ಆಡಳಿತವನ್ನು ರದ್ದುಮಾಡಲು ಸಂವಿಧಾನದ ರೀತ್ಯಾ ಮಂತ್ರಿ ಮಂಡಲ ಅಧಿಕಾರಕ್ಕೆ ಬರಬೇಕಾದ ಅಗತ್ಯವಿರುವ ಕಾರಣ, ತಮ್ಮೊಡನೆ ಮತ್ತಿಬ್ಬರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲು ಶ್ರೀ ಅರಸು ಅವರು ರಾತ್ರಿ ಹೈಕಮಾಂಡಿನ ಅನುಮತಿ ಪಡೆದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಮಾರ್ಚ್ 20, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ– ಶಿಶಿರ ಋತು ಮೀನ ಮಾಸದ 06ನೇ ದಿನ
ತಿಥಿ: (ಫಾಲ್ಗುಣ ಕೃಷ್ಣ) ದ್ವಿತೀಯ ಗಂ. 10-07 ನಕ್ಷತ್ರ: ಚಿತ್ತಾ ಗಂ. 22-40 ಯೋಗ: ಧ್ರುವ ಗಂ. 18-33, ಕರಣ: ಗರಜೆ ಗಂ. 10-07.
ರಾಹುಕಾಲ: ಸಾಯಂಕಾಲ 04:30–06:00
ಸೂರ್ಯೋದಯ: 06-38 ಸೂರ್ಯಾಸ್ತ: 06-38
ಮುಸ್ಲಿಂ ದಿನಾಂಕ: 16 ಶಬನ್, ದಿನ ವಿಶೇಷ : ಮಹಾವಿಶ್ವ ದಿನ
ಅದೃಷ್ಟ ಸಂಖ್ಯೆ: 3, 11

ಮೇಷ: ಈ ದಿನವನ್ನು ಗಣಪತಿಯ ಪ್ರಾರ್ಥನೆ ಅಥವಾ ದರ್ಶನದೊಂದಿಗೆ ಪ್ರಾರಂಭಿಸಲು ಮರೆಯದಿರಿ. ಆತ್ಮೀಯನಿಗೆ ಸಾಂತ್ವನ ಹೇಳಬೇಕಾದ ಸಂದರ್ಭ ಬರಲಿದೆ. ಗೃಹಿಣಿಯ ಇಷ್ಟಾರ್ಥಗಳು ಸಿದ್ಧಿಯಾಗುವುದು.

ವೃಷಭ: ಇಂದು ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು. ಬಹಳ ದಿನಗಳ ಹಿಂದೆಯೇ ವಾಪಸ್ ಬರಬೇಕಾಗಿದ್ದ ಹಣ ಈ ದಿನ ಸಂಜೆಯ ವೇಳೆಗೆ ಕೈ ಸೇರುವುದು.

ಮಿಥುನ: ಈ ದಿನ ನಿಮಗೆ ಎದುರಾಗುವ ಪರಿಸ್ಥಿತಿಗೆ ನೀವೇ ಹೊಂದುಕೊಳ್ಳುವ ತೀರ್ಮಾನ ಮಾಡಿ. ಮಕ್ಕಳನ್ನು ಯಾವುದೇ ರೀತಿಯ ಶಿಕ್ಷೆಗೆ ಒಳಪಡಿಸದೇ ನಯವಾದ ಮಾತುಗಳಿಂದ ತಿದ್ದುವ ಪ್ರಯತ್ನವನ್ನು ಮಾಡಿ.

ಕರ್ಕಾಟಕ: ಔಷಧಿಯ ವಿಚಾರವಾಗಿ ಖರ್ಚುಗಳು ಸಂಭವಿಸಬಹುದು. ಸಾಮಾಜಿಕ ಕಾರ್ಯಗಳನ್ನು ಮಾಡಿರುವ ಕಾರಣದಿಂದಾಗಿ ಸಮಾಜದಲ್ಲಿ ಗುರುತಿಸಲ್ಪಟ್ಟು ಗೌರವಕ್ಕೆ ಪಾತ್ರರಾಗುವಿರಿ. ಕಿರು ಸಂಚಾರ ಯೋಗವಿದೆ.

ಸಿಂಹ: ಕಟ್ಟಡ ನಿರ್ಮಾಣದ ಗುತ್ತಿಗೆಯನ್ನು ಪಡೆಯುವವರು ಆಮೂಲಾಗ್ರ ಚಿಂತನೆಯನ್ನು ನಡೆಸಿ ಒಪ್ಪಿಕೊಳ್ಳುವುದು ಸೂಕ್ತ. ಸಿಹಿ ತಿಂಡಿಗಳ ತಯಾರಕರಿಗೆ ಬೇಡಿಕೆ ಹೆಚ್ಚುವುದು. ತಂತ್ರಜ್ಞಾನದ ವಿಚಾರದಲ್ಲಿ ಸಿದ್ಧಹಸ್ತರಾಗುವಿರಿ.

ಕನ್ಯಾ: ವ್ಯವಹಾರದ ವಿಚಾರದಲ್ಲಿ ನಿಮಗೆ ಇನ್ನೂ ಸಾಕಷ್ಟು ಅನುಭವ ಅಗತ್ಯ. ಸುಖ- ದುಃಖ, ನೋವು, ಅನಾರೋಗ್ಯ, ಲಾಭ- ನಷ್ಟಗಳ ಮಿಶ್ರಣಫಲವನ್ನು ಅನುಭವಿಸಬೇಕಾಗುತ್ತದೆ. ಅನವಶ್ಯಕ ಖರ್ಚು ನಿಲ್ಲಿಸಿದರೆ ಒಳಿತು.

ತುಲಾ: ಮನೆಯ ಎಲ್ಲ ವಿಷಯಗಳನ್ನು ಮುಕ್ತವಾಗಿ ಚರ್ಚಿಸಬೇಕೆಂಬ ಮನಸ್ಸಾಗುವುದು ಅದರಂತೆಯೇ ಚರ್ಚಿಸಲು ಸಿದ್ಧರಾಗುವಿರಿ. ವ್ಯಾಪಾರದಲ್ಲಿ ಮೋಸ ಹೋಗುವ ಸಂಭವವಿದೆ. ವಿದ್ಯಾಭ್ಯಾಸ ನಿಶ್ಚಿಂತೆಯಿಂದ ಸಾಗಲಿದೆ.

ವೃಶ್ಚಿಕ: ಧರ್ಮದ ವಿಚಾರದ ಲೇಖಕರು, ಅಂಕಣಕಾರರಿಗೆ ಕೀರ್ತಿ ಲಭ್ಯವಾಗುವುದು. ನೀವು ಇಂದು ಬಹಳ ಶಾಂತ ರೀತಿಯಿಂದ ವರ್ತಿಸುವುದು ಅನಿವಾರ್ಯವಾಗುವುದು. ಅದರಿಂದ ಮನೆಯಲ್ಲಿ ಸಂತಸದ ವಾತಾವರಣ.

ಧನು: ಬದುಕಿನ ಕವಲುದಾರಿಯಲ್ಲಿರುವ ನಿಮಗೆ ಸರಿಯಾದ ಮಾರ್ಗದರ್ಶನ ದೊರೆಯಲಿದೆ. ಧರ್ಮದಲ್ಲಿ ಶ್ರದ್ಧೆ ಹೆಚ್ಚಲಿದೆ. ಧಾರ್ಮಿಕ ಕೆಲಸಗಳಲ್ಲಿ ತೊಡಗುತ್ತೀರಿ. ವಾಹನ ಚಾಲನೆ ಕಲಿಕೆ ಆರಂಭಿಸಲು ಸಕಾಲ.

ಮಕರ: ಆಲಸ್ಯ ದೂರವಾಗಿ ಲವಲವಿಕೆಯಿಂದ ದಿನ ಕಳೆಯುತ್ತೀರಿ. ಒಡಹುಟ್ಟಿದವರೊಡನೆ ಗಹನವಾದ ಮಾತುಕತೆ ನಡೆಯಲಿದೆ. ನಿಮಗೆ ಒದಗಿದ್ದ ಆತಂಕ ದೂರವಾಗುತ್ತದೆ.

ಕುಂಭ: ನಿಮ್ಮ ಜೀವನ ಶೈಲಿಗೆ ಸಂಬಂಧಿಸಿದಂತೆ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸುಸಮಯ. ವಿದ್ಯಾರ್ಥಿಗಳು ಸ್ವಲ್ಪ ಶ್ರಮವಹಿಸಿ ಓದಿದರೆ, ಅಭ್ಯಾಸ ಮಾಡಿದರೆ ನಿರೀಕ್ಷೆಗಿಂತ ಹೆಚ್ಚಿನ ಯಶಸ್ಸು ಲಭ್ಯವಾಗುವುದು.

ಮೀನ: ಪಿತೃ ಸಮಾನರಿಂದ ಮನೆಯಲ್ಲಿ ನಡೆಯುವ ಶುಭ ಸಮಾರಂಭಕ್ಕೆ ಆಶೀರ್ವಾದವನ್ನು ಪಡೆಯಲು ಮರೆಯದಿರಿ. ಬಹುಜನರ ಒಡನಾಟದಿಂದ ವಿಶ್ವಾಸ, ಪ್ರೀತಿ ಪಡೆಯುವಂತಾಗುವುದು. ನವಗ್ರಹ ಆರಾಧನೆ ಶುಭ ತರುತ್ತದೆ.

ಪದಬಂಧ 4903 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಜಾರಿದವನ ಕಾಹಿಲೆ! (3)
2. ಮಾತಿನ ಅಟ್ಟಹಾಸ (5)
4. ಎದುರಿಗೆ ಮೂರ್ತೀಭವಿಸುವುದು (4)
6. ಹಸುವಿನ ಹತ್ತಿರವಿರುವ ಚಿಕ್ಕ ಮಗು (3)
7. ಒತ್ತು ಕಳೆದುಕೊಂಡ ತಮ್ಮನ ಅಜ್ಞಾನ! (2)
9. ದಿಕ್ಕನ್ನು ತೋರಿಸುವ ಯಂತ್ರ (3)
11. ಸ್ವಲ್ಪ ಎಂದು ಹೀಗೆನ್ನಿ (2)
13. ಅವಳಿ ಮಕ್ಕಳಿಗಾಗಿ ಖರೀದಿಸಿರುವ ಅರಿವೆ (3)
14. ನಾಲ್ಕು ಯುಗಗಳಲ್ಲಿ ಕಡೆಯದು (4)
15. ಕಲಹ ಮಾಡುವ ಸ್ವಭಾವದವಳು (5)
16. ಸೃಷ್ಟಿ ಇಲ್ಲಿ ಕಾಣುತ್ತಿದೆ (3)

ಮೇಲಿಂದ ಕೆಳಕ್ಕೆ
1. ಹಿಂಸೆ ಮಾಡಬಾರದೆಂಬ ವ್ರತ (5)
3. ನೇರವಲ್ಲದ ನುಡಿ (5)
5. ಪಾವತಿ ಪತ್ರ ಇಲ್ಲಿದೆ (3)
8. ಈತ ಲಗ್ನವಾಗುತ್ತಿರುವವ (5)
10. ಬಾಗಿಲಿಗೆ ಹಾಕುವ ಕೊಂಡಿ (3)
12. ಬೆಟ್ಟ ಅಥವಾ ನೆಲವನ್ನು ಕೊರೆದು ಮಾಡಿದ ದಾರಿ (5)



4902ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4. ಮಾಸ 5. ಚಂದನ 6. ಆಮ್ಲಜನಕ 9. ಪಾರಜ 10. ಗಣಿತ 11. ಕನಸುಗಾರ 14. ಇಂಗಿತ 15. ಕ್ಷಮೆ

ಮೇಲಿಂದ ಕೆಳಕ್ಕೆ:
1. ರೆಸಅ 2. ಸ್ಪಂದನ 3. ಮಂದಮಾರುತ 7. ಜಲಜನಕ 8. ಕಡೆಗಣಿಸು 9. ಪಾತರಗಿತ್ತಿ 12. ನಸುಕು 13. ರಕ್ಷಕ

ಸುಡೊಕು 5289

9				5		8	4	
			3		9			1
	4			1				7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5288 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಯಾಣಿಕರ ಪ್ರಾಣಕ್ಕೆ ಕುತ್ತಾದ ಬಸ್ ಚಾಲಕನ ಮೊಬೈಲ್ ಫೋನ್ ಕಾಲ್

ಬಸ್ ಪಲ್ಟಿ: 6 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಪಾವಗಡ ತಾಲ್ಲೂಕು ಪಳವಳ್ಳಿ ಕಟ್ಟೆ ಬಳಿ ಶನಿವಾರ ಅಪಘಾತಕ್ಕೀಡಾದ ಬಸ್

ಪಾವಗಡ (ತುಮಕೂರು): ತಾಲ್ಲೂಕಿನ ಪಳವಳ್ಳಿ ಕಟ್ಟೆ ಬಳಿ ಶನಿವಾರ ಬೆಳಿಗ್ಗೆ ಚಾಲಕನ ನಿಯಂತ್ರಣ ತಪ್ಪಿ ಖಾಸಗಿ ಬಸ್ ಉರುಳಿ ಬಿದ್ದು ಮೂವರು ವಿದ್ಯಾರ್ಥಿಗಳು ಸೇರಿದಂತೆ ಆರು ಜನರು ಮೃತಪಟ್ಟಿದ್ದಾರೆ.

ಚಾಲಕ ಮೊಬೈಲ್‌ನಲ್ಲಿ ಮಾತನಾಡುತ್ತ ವೇಗವಾಗಿ ಬಸ್ ಚಾಲನೆ ಮಾಡುತ್ತಿದ್ದ. ಕೆರೆ ಏರಿಯ ಮೇಲಿನ ರಸ್ತೆಯ ತಿರುವಿನಲ್ಲಿ ಏಕಾಏಕಿ ಬ್ರೇಕ್ ಹಾಕಿದಾಗ ಬಸ್ ಪಲ್ಟಿ ಆಯಿತು. ವೇಗ ತಗ್ಗಿಸುವಂತೆ ಮತ್ತು ಮೊಬೈಲ್‌ನಲ್ಲಿ ಮಾತನಾಡದಂತೆ ಪದೇ ಪದೇ ಹೇಳಿದರೂ ಚಾಲಕ ಕೇಳಿಸಿಕೊಳ್ಳಲಿಲ್ಲ. ಅಪಘಾತಕ್ಕೆ ಇದೇ ಕಾರಣ ಎಂದು ಪ್ರಯಾಣಿಕರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಪಾವಗಡದಲ್ಲಿ ಸರ್ಕಾರಿ ಪಿಯು ಕಾಲೇಜಿನ ವಿದ್ಯಾರ್ಥಿನಿಯರಾದ ಪೋತಗಾನಹಳ್ಳಿಯ ಅಮೂಲ್ಯ (16) ಮತ್ತು ಆಕೆಯ ತಂಗಿ ಹರ್ಷಿತಾ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ದ್ವಿತೀಯ ಪಿಯು ವಿದ್ಯಾರ್ಥಿ ನೀಲಮ್ಮನಹಳ್ಳಿಯ ದಾದಾವಲಿ (17), ಮಣಪ್ಪುರಂ ಸಂಸ್ಥೆ ಉದ್ಯೋಗಿ ಸೂಲನಾಯಕನಹಳ್ಳಿಯ ಅಜಿತ್ (28), ಕಂಪ್ಯೂಟರ್ ಕೋರ್ಸ್ ಕಲಿಯುತ್ತಿದ್ದ ವೈ.ಎನ್. ಹೊಸಕೋಟೆಯ ಕಲ್ಯಾಣ್ (18) ಮತ್ತು ಆಂಧ್ರಪ್ರದೇಶದ ಬೆಸ್ತರಹಳ್ಳಿ ಮೆಕಾನಿಕ್ ಶಾನವಾಜ್ (18) ಅವರು ಮೃತಪಟ್ಟಿದ್ದಾರೆ.

ಬಸ್ ಬಿದ್ದ ರಭಸಕ್ಕೆ ಪ್ರಯಾಣಿಕರೆಲ್ಲ ರಸ್ತೆ ಮತ್ತು ಪಕ್ಕದ ಕಂದಕದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದರು.

ಬಸ್ ಅಡಿ ಸಿಲುಕಿ ನಾಲ್ವರು ಸ್ಥಳದಲ್ಲಿಯೇ ಮೃತಪಟ್ಟರೆ, ಬೆಂಗಳೂರಿನ ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಹರ್ಷಿತಾ ರಾತ್ರಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

25ಕ್ಕೂ ಹೆಚ್ಚಿನ ಪ್ರಯಾಣಿಕರು ತೀವ್ರವಾಗಿ ಗಾಯಗೊಂಡಿದ್ದು ಅವರನ್ನು ಚಿಕಿತ್ಸೆಗಾಗಿ ತುಮಕೂರು ಮತ್ತು ಬೆಂಗಳೂರು ಆಸ್ಪತ್ರೆಗೆ ಕಳುಹಿಸಲಾಗಿದೆ. ಆ ಪೈಕಿ ಹಲವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳಿಗ್ಗೆ ಬರಬೇಕಿದ್ದ ಎರಡು ಬಸ್‌ಗಳು ಬಾರದ ಕಾರಣ ವೈ.ಎನ್. ಹೊಸಕೋಟೆಯಿಂದ ಪಾವಗಡಕ್ಕೆ ಹೊರಟಿದ್ದ ಈ ಬಸ್‌ನಲ್ಲಿ ನೂರಕ್ಕೂ ಹೆಚ್ಚು ಜನ ಪ್ರಯಾಣಿಸುತ್ತಿದ್ದರು. ಬಸ್ ಒಳಗೆ ಕಾಲಿಡಲು ಜಾಗ ಇರಲಿಲ್ಲ. ಹಾಗಾಗಿ, ಅನೇಕರು ಬಸ್ ಮೇಲ್ಭಾಗ ಏರಿ ಕುಳಿತಿದ್ದರು. ಪಾವಗಡದ ಕಾಲೇಜಿಗೆ ಹೊರಟಿದ್ದ ವಿದ್ಯಾರ್ಥಿಗಳು ಮತ್ತು ಕೆಲಸಗಾರರೇ ಈ ಬಸ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಬಸ್ ಪಲ್ಟಿಯಾಗುವ ವೇಳೆ ಮೇಲ್ಭಾಗದಲ್ಲಿ ಕುಳಿತಿದ್ದ ಪ್ರಯಾಣಿಕರು ಜೀವ ಉಳಿಸಿಕೊಳ್ಳಲು ಗಾಬರಿಯಿಂದ ಕೆಳಗೆ ನೆಗೆದರು. ಬಸ್ ಅವರ ಮೇಲೆಯೇ ಉರುಳಿ ಬಿದ್ದ ಕಾರಣ ಸಾವಿಗೀಡಾದರು. ಇನ್ನೂ ಕೆಲವರು ರಸ್ತೆಯ ಪಕ್ಕದ ಕಂದಕದ ಮುಳ್ಳುಕಂಟೆಗಳಲ್ಲಿ ಸಿಲುಕಿದ್ದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಸಕಲೇಶ್ವರಸ್ವಾಮಿ ರಥ

ಹಾಸನ ಜಿಲ್ಲೆಯ ಸಕಲೇಶಪುರದ ರಾಜಬೀದಿಯಲ್ಲಿ ಶನಿವಾರ ನಡೆದ ಸಕಲೇಶ್ವರಸ್ವಾಮಿ ರಥೋತ್ಸವದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು

‘ಗಂಗಾ ಕಲ್ಯಾಣದಲ್ಲಿ ₹ 130 ಕೋಟಿ ಅಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘2019–20 ಮತ್ತು 2020–21ನೇ ಆರ್ಥಿಕ ವರ್ಷಗಳಲ್ಲಿ ‘ಗಂಗಾ ಕಲ್ಯಾಣ ಯೋಜನೆ’ಯಡಿ ಕೊಳವೆ ಬಾವಿ ಕೊರೆಯಿಸುವ ಕಾಮಗಾರಿಗಳಲ್ಲಿ ₹ 130 ಕೋಟಿಗೂ ಹೆಚ್ಚು ಅಕ್ರಮ ನಡೆದಿದೆ’ ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಶನಿವಾರ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅವರು, ‘ಸಮಾಜಕಲ್ಯಾಣ ಇಲಾಖೆಯ ಅಧೀನದ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮಗಳಲ್ಲಿ ಎರಡು ವರ್ಷಗಳಲ್ಲಿ 14,577 ಕೊಳವೆಬಾವಿಗೆ ₹ 267 ಕೋಟಿ ವೆಚ್ಚ ಮಾಡಲಾಗಿದೆ. 2018ರ ದರದಲ್ಲಿ ಈ ಕಾಮಗಾರಿಗಳಿಗೆ ₹ 130 ಕೋಟಿ ಮಾತ್ರ ವೆಚ್ಚವಾಗುತ್ತಿತ್ತು’ ಎಂದರು.

‘ಈ ನಿಗಮಗಳಲ್ಲಿ 2019–20 ಮತ್ತು 2020–21ರಲ್ಲಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿ ವಿಧಾನಸಭೆಯಲ್ಲಿ ಪ್ರಶ್ನೆ ಕೇಳಿದ್ದೆ. ಸರ್ಕಾರ ನೀಡಿದ್ದ 100 ಪುಟಗಳ ಉತ್ತರದಲ್ಲಿಯೇ ಅಕ್ರಮಕ್ಕೆ ಸಂಬಂಧಿಸಿದ ಮಾಹಿತಿಗಳು ಇವೆ. 2018–19ರಲ್ಲಿ ಪ್ರತಿ ಮೀಟರ್ ಕೊಳವೆಬಾವಿ ಕೊರೆಯಲು ₹ 279ರಿಂದ ₹ 305 ರವರೆಗೂ ದರ ನೀಡಲಾಗಿತ್ತು. 2019–20 ಮತ್ತು 2020–21ರಲ್ಲಿ ಪ್ರತಿ ಮೀಟರ್‌ಗೆ ₹ 612 ದರ ನೀಡಲಾಗಿದೆ. ಪ್ರತಿ ಮೀಟರ್‌ಗೆ ₹ 307ರಿಂದ ₹ 333ರವರೆಗೂ ಹೆಚ್ಚುವರಿ ದರ ನೀಡಲಾಗಿದೆ ಎಂದು ಆರೋಪಿಸಿದರು.

ಟೆಂಡರ್‌ನಲ್ಲೂ ಅಕ್ರಮ: ‘ಕೆಲವೇ ಗುತ್ತಿಗೆದಾರರಿಗೆ ಕಾಮಗಾರಿ ನೀಡಲಾಗಿದೆ. ರಾಯಚೂರಿನ ಪಂಚಮುಖಿ ಬೋರ್‌ವೆಲ್ಸ್‌ನ ಕೆ. ಚಂದ್ರಶೇಖರ್ ನಾಯಕ್, ಸಿಂಧನೂರಿನ ಗುತ್ತಿಗೆದಾರ ವೀರಭದ್ರಪ್ಪ , ಬೆಳಗಾವಿಯ ಮಾರುತಿ ರಾಕ್ ಡ್ರಿಲ್ಲರ್ಸ್‌ನ ಶರವಣ ಅವರಿಗೆ ₹ 176 ಕೋಟಿ ಮೊತ್ತದ ಕಾಮಗಾರಿಗಳ ಗುತ್ತಿಗೆ ನೀಡಲಾಗಿದೆ ಎಂದು ಅವರು ದೂರಿದರು.

ಇದು ‘ಕರ್ನಾಟಕ ಫೈಲ್ಸ್’

ಪ್ರಿಯಾಂಕ್ ಖರ್ಗೆ

‘ಬಿಜೆಪಿ ರಾಜ್ಯದಲ್ಲಿ ‘ಕಾಶ್ಮೀರ್ ಫೈಲ್ಸ್’ ಸಿನಿಮಾವನ್ನು ಚುನಾವಣಾ ಪ್ರಚಾರದ ಟೂಲ್ ಕಿಟ್ ಆಗಿ ಬಳಸುತ್ತಿದೆ. ವಿಧಾನಸಭೆಯ ಅಧ್ಯಕ್ಷರೇ ಸಿನಿಮಾ ವೀಕ್ಷಣೆಗೆ ಆಹ್ವಾನ ನೀಡಿದ್ದಾರೆ. ರಾಜ್ಯ ಸರ್ಕಾರ ಈ ಸಿನಿಮಾಕ್ಕೆ ತೆರಿಗೆ ವಿನಾಯಿತಿಯನ್ನೂ ನೀಡಿದೆ. ಇಲ್ಲಿರುವುದು ‘ಕರ್ನಾಟಕ ಫೈಲ್ಸ್’. ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಾದ ಹಣದ ಲೂಟಿಯ ಕತೆಯು ಕರ್ನಾಟಕ ಫೈಲ್ಸ್‌ನಲ್ಲಿದೆ’ ಎಂದ ಪ್ರಿಯಾಂಕ್ ಖರ್ಗೆ ಅವರು ದಾಖಲೆಗಳನ್ನೂ ಪ್ರದರ್ಶಿಸಿದರು.

28ಕ್ಕೆ ಎಂ.ಬಿ. ಪಾಟೀಲ ಅಧಿಕಾರ ಸ್ವೀಕಾರ

ಬೆಂಗಳೂರು: ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷರಾಗಿ ನೇಮಕಗೊಂಡಿರುವ ಶಾಸಕ ಎಂ.ಬಿ. ಪಾಟೀಲ ಅವರು ಮಾರ್ಚ್ 28ರಂದು ನಗರದ ಅರಮನೆ ಮೈದಾನದಲ್ಲಿ ನಡೆಯುವ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಲಿದ್ದಾರೆ.

ವಿವಿಧೆಡೆ ಮಳೆ: ಇಬ್ಬರ ಸಾವು

ಬೆಂಗಳೂರು: ರಾಜ್ಯದ ವಿವಿಧೆಡೆ ಶನಿವಾರ ಧಾರಾಕಾರವಾಗಿ ಮಳೆಯಾಗಿದ್ದು, ಇಬ್ಬರು ಮೃತಪಟ್ಟಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕು ಕೇಂದ್ರದಲ್ಲಿ ಆಲಿಕಲ್ಲು ಸಮೇತ ಮಳೆ ಸುರಿದಿದೆ.

ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲ್ಲೂಕಿನ ಹನಸೋಗೆ ಗ್ರಾಮದ ರೈತ ಸಿದ್ದಲಿಂಗನಾಯಕ (72) ಅವರು ಜಮೀನಿನ ಬಳಿ ಸಿಡಿಲು ಬಡಿದು ಮೃತಪಟ್ಟಿದ್ದಾರೆ. ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನಲ್ಲಿ ಬಿರುಗಾಳಿ ಸಹಿತ ಮಳೆಗೆ ಮರದ ರೆಂಬೆ ಬಿದ್ದು ಮಲ್ಲಮ್ಮ (53) ಅಸುನೀಗಿದ್ದಾರೆ.

ವಿವಿಧ ಗ್ರಾಮಗಳಲ್ಲಿ ಮನೆಗಳ ಚಾವಣಿ, ಹೆಂಚುಗಳು ಹಾನಿಗೊಂಡಿವೆ. ವಿದ್ಯುತ್ ಸಂಪರ್ಕ ಅಸ್ತವ್ಯಸ್ತಗೊಂಡಿದೆ. ಹೊಳೆನರಸೀಪುರ ತಾಲ್ಲೂಕಿನ ಹೊಸಹಳ್ಳಿಯಲ್ಲಿ ಸಿಡಿಲು ಬಡಿದು ಟ್ರ್ಯಾಕ್ಟರ್ ಮಂಜು ಅವರ ಎತ್ತು ಮೃತಪಟ್ಟಿದೆ. ಉತ್ತರ ಕರ್ನಾಟಕದ ಕೆಲವೆಡೆಯೂ ಗುಡುಗು, ಸಿಡಿಲಿನಿಂದ ಮಳೆ ಸುರಿದಿದೆ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ,
ಐ.ಎಫ್.ಟಿ.ಸಂಖ್ಯೆ: 23/2021-22 ದಿನಾಂಕ: 18-03-2022
ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಕೆಟಿಪಿಪಿ ಕಾಯ್ದೆ 1999-3&4ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ಆಧಾರದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ನಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗಳಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.307.55 ಲಕ್ಷಗಳು, ಕನಿಷ್ಠ ಮೊತ್ತ ರೂ.88.83 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ:04-04-2022 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಇ-ಪ್ರಾಕ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/-ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/858/2021-22

ಕರ್ನಾಟಕ ಸರಕಾರ
ಉಪ ಕೃಷಿ ನಿರ್ದೇಶಕರ ಕಛೇರಿ-1, ಕೃಷಿ ಇಲಾಖೆ. ಗದಗ
ಮ. ನಂ. 27, ಕನಕ ಭವನ ಹತ್ತಿರ ಲಕ್ಷ್ಮಣಸಾ ನಗರ,
ಮುಳಗುಂದ ರೋಡ ಗದಗ-582103
ದೂರವಾಣಿ: 08372-239889, 236017. ಇ-ಮೇಲ್: dda1gadag@gmail.com
ಕ್ರಸಂ.ಉಕೃನಿ-1/ಗ/ಸಿ-1/ಬಾ.ವಾ/ಟೆಂಡರ್/ಬಾ.ವಾ/2021-22 ದಿನಾಂಕ: 18-03-2022
: ಟೆಂಡರ ಪ್ರಕಟಣೆ :
ಉಪ ಕೃಷಿ ನಿರ್ದೇಶಕರು-1 ಗದಗ ಕಛೇರಿಗೆ 2022-23 ನೇ ಸಾಲಿಗೆ ಮಾಸಿಕ ಭಾಡಿಗೆ ಆಧಾರದ ಮೇಲೆ: ಎರ್ಟಿಗಾ/ಇನೋವಾ/ಮಾರುತಿ ಡಿಜೈರ್ ಯಾವುದಾದರೂ ಮಾದರಿಯ (ಮಾರುತಿ ಡಿಜೈರ್ [ಟೂರ್] ಹೊರತುಪಡಿಸಿ) ಒಂದು ವಾಹನವನ್ನು ಒದಗಿಸಲು ಮೊಹರಾದ ಲಕೋಟೆಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು. ಇ.ಎಂ.ಡಿ ಮೊತ್ತ: 7,200/-ಡಿಡಿ ಹಾಗೂ ಖಾಲಿ ಟೆಂಡರ್ ಫಾರ್ಮ ಬೆಲೆ ಪ್ರತಿ ಒಂದಕ್ಕೆ ರೂ. 250/- ಪಾವತಿಸಿ **ದಿನಾಂಕ: 21-03-2022** ರಿಂದ **ದಿನಾಂಕ; 25-03-2022** ರ ವರೆಗೆ ಕಛೇರಿ ವೇಳೆಯಲ್ಲಿ ಪಡೆಯಬಹುದು. ಭರ್ತಿಮಾಡಿದ ಟೆಂಡರ ಅರ್ಜಿ ಫಾರ್ಮ ಸಲ್ಲಿಸಲು ಕೊನೆಯ ದಿನಾಂಕ: **30-03-2022** ರ ಸಾಯಂಕಾಲ 5.30 ಘಂಟೆಯ ವರೆಗೆ ಅವಕಾಶವಿದೆ. **ದಿನಾಂಕ:31-03-2022 ಪೂರ್ವಾಹ್ನ 11.00 ಘಂಟೆಗೆ** ಟೆಂಡರ್ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಛೇರಿ ದೂರವಾಣಿ ಸಂಖ್ಯೆ (08372-236017) ಸಂಪರ್ಕಿಸಬಹುದು.
ಸಹಿ/-ಉಪ ಕೃಷಿ ನಿರ್ದೇಶಕರು
ಕಛೇರಿ-1, ಕೃಷಿ ಇಲಾಖೆ. ಗದಗ
ವಾ.ಸಾ.ಇ./ಗದಗ/21-22/615/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ
ಸಂ.ಕಾನಿಅ/ಲೋಇ/ಕವಿ/ತಾಶಾ-3/.ಟೆಂಡರ್.ಅಧಿಸೂಚನೆ/2021-22/8979 ದಿನಾಂಕ:17.03.2022
ಅಲ್ಪಾವಧಿ ಟೆಂಡರ್ ಅಧಿಸೂಚನೆ
1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಲೆಕ್ಕ ಶೀರ್ಷಿಕೆ 5054 ಎಸ್.ಸಿ.ಪಿ ಹಾಗೂ 5054 ಎಸ್.ಡಿ.ಪಿ ಯೋಜನೆಯಡಿಯಲ್ಲಿ ಒಟ್ಟು (05) ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ: 150618, 150619, 150560, 150559 & 150539 ಗಳಿಗೆ e-procurement ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : **ಕನಿಷ್ಠ ರೂ. 26.71 ಲಕ್ಷಗಳು ಗರಿಷ್ಠ ರೂ. 133.70 ಲಕ್ಷಗಳು,** 3) ಗುತ್ತಿಗೆದಾರರ ಅರ್ಹತೆ ವಿವರ : "ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, "ಕ್ಲಾಸ್-I: ಯಾವುದೇ ಮೊತ್ತಕ್ಕೆ ಭಾಗವಹಿಸಬಹುದು, "ಕ್ಲಾಸ್-II: ಕಾಮಗಾರಿ ಮೊತ್ತ ರೂ. 5.00 ಕೋಟಿಯವರೆಗೆ, "ಕ್ಲಾಸ್-III: ಕಾಮಗಾರಿ ಮೊತ್ತ ರೂ. 2.00 ಕೋಟಿಯವರೆಗೆ "ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಾಗಿರಬೇಕು.", 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ : ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ಕನಿಷ್ಠ ರೂ. 53,000.00 ಗರಿಷ್ಠ ರೂ. 2,00,000.00, 5) ಪ್ರೀ ಬಿಡ್ ಮಿಟಿಂಗ : **24/03/2022 (11.00 ಗಂಟೆ),** 5) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **25/03/2022 (17.30 ಗಂಟೆ),** 6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **28/03/2022 (16.00 ಗಂಟೆ),** 7) ತಾಂತ್ರಿಕ ಬಿಡ್ ತೆರವುಗೊಳಿಸಿವ ದಿನಾಂಕ : **29/03/2022 (16.30 ಗಂಟೆ),** 8) ಆರ್ಥಿಕ ಬಿಡ್ ತೆರೆವುಗೋಳಿಸುವ ದಿನಾಂಕ: **31/03/2022 (16.30 ಗಂಟೆ),** 9) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ, 10) ಅಂತರ್ಜಾಲ ತಾಣದ ವಿಳಾಸ: www.e-proc.karnataka.gov.in
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1237/ಎಂ.ಸಿ.&ಎ/2021-22

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.
ಪೋಷಕರ ಪತ್ತೆಗಾಗಿ ಪ್ರಕಟಣೆ

ಈ ಭಾವಚಿತ್ರದಲ್ಲಿರುವ ಸುಮಾರು ಎರಡೂವರೆ ವರ್ಷದ ಕು॥ ಮೋನಿಕ ಎಂಬ ಹೆಣ್ಣು ಮಗುವು ದಿನಾಂಕ: **28.02.2022**ರಂದು ಗುಬ್ಬಿ ತಾಲ್ಲೂಕಿನ ಎನ್. ಮತ್ತಿಘಟ್ಟ ಸಮೀಪದ ಹೆದ್ದಾರಿ ಸೇತುವೆ ಬಳಿ ದೊರೆತಿದ್ದು, ಸದರಿ ಮಗುವು ಕಂದು ಬಣ್ಣ, ದುಂಡು ಮುಖವುಳ್ಳದ್ದಾಗಿದ್ದು, ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿರುತ್ತದೆ. ಸದರಿ ಮಗುವಿನ ಪೋಷಕರು ಯಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, 5ನೇ ಅಡ್ಡರಸ್ತೆ, ಅಶೋಕನಗರ, ತುಮಕೂರು. ದೂರವಾಣಿ ಸಂಖ್ಯೆ: 0816-2956699, ಕಛೇರಿಯನ್ನು ಸಂಪರ್ಕಿಸಲು ಕೋರಿದೆ.
ಸ್ಥಳ: ತುಮಕೂರು
ದಿನಾಂಕ: 18-03-2023
ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.
DIPR/TUM/752/MCA/2021-22

26ಕ್ಕೆ ಅಥಣಿ ತಾಲ್ಲೂಕಿನಲ್ಲಿ ನಿರ್ಮಿಸಿರುವ ನೂತನ ಕಟ್ಟಡಗಳ ಉದ್ಘಾಟನೆ

ಪಿಇಎಸ್ ವಿ.ವಿ ಯಿಂದ ಮತ್ತೆ 8 ಸರ್ಕಾರಿ ಶಾಲೆಗಳ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಇಎಸ್ ವಿಶ್ವವಿದ್ಯಾಲಯವು ಸರ್ಕಾರಿ ಶಾಲೆ ದತ್ತು ಪಡೆದು ಅಭಿವೃದ್ಧಿಪಡಿಸುವುದನ್ನು ಮುಂದುವರಿಸಿದ್ದು ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ ಅತ್ಯಾಧುನಿಕ ಸೌಕರ್ಯಗಳಿರುವಂತೆ ನಾಲ್ಕು ಶಾಲೆಗಳಿಗೆ ಹೊಸ ಕಟ್ಟಡ ನಿರ್ಮಿಸಿದೆ. ಮುಧೋಳ, ಬಾದಾಮಿ ತಾಲ್ಲೂಕುಗಳಲ್ಲಿ ನಾಲ್ಕು ಶಾಲೆಗಳನ್ನು ನವೀಕರಣಗೊಳಿಸಿದೆ. ಇದೇ 26ರಂದು ಅಥಣಿಯ ತೀರ್ಥದಲ್ಲಿ ನೂತನ ಕಟ್ಟಡಗಳ ಉದ್ಘಾಟನಾ ಸಮಾರಂಭ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎಂ.ಆರ್. ದೊರೆಸ್ವಾಮಿ, ‘ಅಥಣಿ ತಾಲ್ಲೂಕಿನ ತೀರ್ಥ, ಮಹಿಷವಾಡಗಿ, ಹಸಿರೇ ತೋಟ-ನಿಲಜಿ ಹಾಗೂ ಪೇರಲ ತೋಟ-ನದಿ ಇಂಗಳಗಾಂವ್‌ಗಳಲ್ಲಿ ಶಾಲೆಗಳ ಹೊಸ ಕಟ್ಟಡಗಳನ್ನು ನಿರ್ಮಿಸಿದ್ದೇವೆ. ಮುಧೋಳ ತಾಲ್ಲೂಕಿನ ಒಂಟಗೋಡಿ, ಬಿ.ಕೆ.ಬುದ್ನಿ (ಇಲ್ಲಿ ಪ್ರಾಥಮಿಕ ಶಾಲೆ ಹಾಗೂ ಅಂಗನವಾಡಿ ಕೇಂದ್ರ) ಮತ್ತು ಬಾದಾಮಿಯ ಕರ್ಲಕೊಪ್ಪದ ಶಾಲೆಗಳನ್ನು ನವೀಕರಿಸಿದ್ದೇವೆ. ಇದಕ್ಕಾಗಿ ₹4.31 ಕೋಟಿ ಮೊತ್ತ ವಿನಿಯೋಗಿಸಿದ್ದೇವೆ. ಪುಸ್ತಕಗಳು, ಪೀಠೋಪಕರಣ, ಕಂಪ್ಯೂಟರ್ ಸೇರಿದಂತೆ ಇತರೆ ಸೌಲಭ್ಯಗಳಿಗೆ ₹1.5 ಕೋಟಿ ಹೆಚ್ಚುವರಿ ವೆಚ್ಚ ಮಾಡಿದ್ದೇವೆ’ ಎಂದು ತಿಳಿಸಿದರು.



ಎಂ.ಆರ್. ದೊರೆಸ್ವಾಮಿ

‘ಶಾಲೆಗಳಲ್ಲಿ ಸ್ಥಾಪಿಸಲಾಗಿರುವ ಕಂಪ್ಯೂಟರ್ ಕೇಂದ್ರ, ಗ್ರಂಥಾಲಯದ ಉದ್ಘಾಟನೆಯೂ 26ರಂದು ನಡೆಯಲಿದೆ. ಅಥಣಿಯ ನಾಲ್ಕು ಶಾಲೆಗಳ ಮಕ್ಕಳಿಗೆ ಪುಸ್ತಕ ಹಾಗೂ ಬ್ಯಾಗ್‌ಗಳನ್ನು ವಿತರಿಸಲಾಗುತ್ತದೆ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಸಂಗ್ರಹಿಸಿರುವ ಸಣ್ಣ ಕಥೆಗಳನ್ನೊಳಗೊಂಡ ‘ಕಥಾಲೋಕ’ ಪುಸ್ತಕವೂ ಅಂದೇ ಬಿಡುಗಡೆಯಾಗಲಿದೆ’ ಎಂದರು.

ವಿಶ್ವವಿದ್ಯಾಲಯದ ಕುಲಸಚಿವ ಕೆ.ಎಸ್.ಶ್ರೀಧರ್, ‘ವಿಶ್ವವಿದ್ಯಾಲಯದಲ್ಲಿ ಕಲಿತ 1,193 ಬಿ.ಟೆಕ್.ವಿದ್ಯಾರ್ಥಿಗಳಿಗೆ ಈ ವರ್ಷ ವಿವಿಧ ಕಂಪನಿಗಳಲ್ಲಿ ಕೆಲಸ ಸಿಕ್ಕಿದೆ. ಈವರೆಗೂ 220 ವಿವಿಧ ಕಂಪನಿಗಳು ಕ್ಯಾಂಪಸ್‌ಗೆ ಭೇಟಿ ನೀಡಿವೆ. ಈ ವರ್ಷ 941 ವಿದ್ಯಾರ್ಥಿಗಳಿಗೆ 150 ಕಂಪನಿಗಳಲ್ಲಿ ಇಂಟರ್ನ್‌ಶಿಪ್ ಅವಕಾಶ ಲಭಿಸಿದೆ’ ಎಂದು ವಿವರಿಸಿದರು.

‘ಮುಂದಿನ ವರ್ಷ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ (ಬಿ.ಎ), ಬ್ಯುಸಿನೆಸ್ ಅನಾಲೆಟಿಕ್ (ಬಿಬಿಎ), ಎಸಿಸಿಎ (ಬಿ.ಕಾಂ) ಸೇರಿದಂತೆ ಹಲವು ಕೋರ್ಸ್‌ಗಳನ್ನು ನಾವು ಪರಿಚಯಿಸುತ್ತಿದ್ದೇವೆ’ ಎಂದು ತಿಳಿಸಿದರು.

ಯುವತಿ ಸಾವು: ಪ್ರಿಯಕರನ ಬಂಧನ

ಶಿವಕುಮಾರ್

ಬೆಂಗಳೂರು: ಪರಿಶಿಷ್ಟ ಜಾತಿಯ ಯುವತಿ ದಾನೇಶ್ವರಿ (23) ಸಾವಿನ ಪ್ರಕರಣ ಸಂಬಂಧ ಪ್ರಿಯಕರ ಶಿವಕುಮಾರ್ ಅವರನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಸುಟ್ಟಗಾಯಗಳಾಗಿದ್ದ ದಾನೇಶ್ವರಿ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ತೀರಿಕೊಂಡಿದ್ದರು. ‘ದಾನೇಶ್ವರಿ ಅವರನ್ನು ಮೈ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಶಿವಕುಮಾರ್ ಕೊಲೆ ಮಾಡಿದ್ದಾರೆ’ ಎಂದು ಆರೋಪಿಸಿ ಮೃತ ಯುವತಿಯ ಸಹೋದರಿ ದೂರು ನೀಡಿದ್ದರು.

‘ಮಾರ್ಚ್ 15ರಂದು ದಾನೇಶ್ವರಿ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದ ಶಿವಕುಮಾರ್, ನಂತರ ತನ್ನೂರು ಬಾದಾಮಿಗೆ ಹೋಗಿದ್ದ. ದಾನೇಶ್ವರಿ ಮೃತಪಟ್ಟ ಸುದ್ದಿ ತಿಳಿದು ಊರಿನಿಂದ ನಾಪತ್ತೆಯಾಗಿದ್ದ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಅಮಾಯಕನೆಂದ ಆರೋಪಿ: ‘ನನ್ನ ತಪ್ಪಿಲ್ಲ. ನಾನು ಅಮಾಯಕ’ ಎಂದು ಆರೋಪಿ ಹೇಳುತ್ತಿದ್ದಾರೆ. ಹೆಚ್ಚಿನ ವಿಚಾರಣೆ ನಡೆಸಿದಾಗಲೇ ಸತ್ಯಾಂಶ ತಿಳಿಯಲಿದೆ’ ಎಂದು ಪೊಲೀಸ್ ಅಧಿಕಾರಿ ಹೇಳಿದರು. ‘ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಿದ್ದು, ಹೆಚ್ಚಿನ ವಿಚಾರಣೆಗೆ ಕಸ್ಟಡಿಗೆ ನೀಡುವಂತೆ ನ್ಯಾಯಾಲಯವನ್ನು ಕೋರಲಾಗುವುದು’ ಎಂದೂ ತಿಳಿಸಿದರು.

ರಾತ್ರಿ 8ರವರೆಗೂ ನೋಂದಣಿ ಕಚೇರಿ ಕಾರ್ಯನಿರ್ವಹಣೆ

ಬೆಂಗಳೂರು: ರಾಜ್ಯದಾದ್ಯಂತ ಮಾರ್ಚ್ 31ರವರೆಗೆ ಉಪ ನೋಂದಣಿ ಕಚೇರಿ ಗಳ ಕೆಲಸದ ವೇಳೆಯನ್ನು ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8ರವರೆಗೂ ವಿಸ್ತರಿಸಿ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಆಯುಕ್ತರು ಶನಿವಾರ ಆದೇಶ ಹೊರಡಿಸಿದ್ದಾರೆ.

ಮಾರ್ಚ್ 26ರಂದು ಕೂಡಾ ಉಪ ನೋಂದಣಿ ಕಚೇರಿಗಳು ಕಾರ್ಯನಿರ್ವ ಹಿಸಲಿವೆ ಎಂದು ಆಯುಕ್ತರು ತಿಳಿಸಿದ್ದಾರೆ.

31ರವರೆಗೆ ರಿಯಾಯ್ತಿ: ವಿವಿಧ ಸ್ಥಿರಾಸ್ತಿಗಳ ನೋಂದಣಿಗೆ ಮುದ್ರಾಂಕ ಶುಲ್ಕ ನಿಗದಿಗೆ ಮಾರ್ಗಸೂಚಿ ದರದ ಶೇ 10ರಷ್ಟು ರಿಯಾಯಿತಿ ನೀಡಿರುವ ಆದೇಶವು ಮಾರ್ಚ್ 31ರವರೆಗೆ ಮಾತ್ರ ಜಾರಿಯಲ್ಲಿರುತ್ತದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕ್ಲಾಕ್‌ಟವರ್ ಮೇಲೆ ಹಾರಿದ ರಾಷ್ಟ್ರಧ್ವಜ: ವಿವಾದಕ್ಕೆ ತೆರೆ

ಕೋಲಾರ: ಜಿಲ್ಲಾ ಕೇಂದ್ರದ ಅತಿ ಸೂಕ್ಷ್ಮಪ್ರದೇಶ ಕ್ಲಾಕ್ ಟವರ್‌ನಲ್ಲಿ ಮುಸ್ಲಿಂ ಸಮುದಾಯದ ಸಹಕಾರದೊಂದಿಗೆ ಜಿಲ್ಲಾಡಳಿತ ಶನಿವಾರ ರಾಷ್ಟ್ರಧ್ವಜ ಹಾರಿಸುವ ಮೂಲಕ ದಶಕಗಳ ವಿವಾದಕ್ಕೆ ತೆರೆ ಎಳೆಯಿತು.

ಮುಸ್ಲಿಂ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶದಲ್ಲಿನ ಕ್ಲಾಕ್ ಟವರ್ ಮೇಲೆ ತ್ರಿವರ್ಣ ಧ್ವಜ ಹಾರಿಸುವಂತೆ ಆಗ್ರಹಿಸಿ ಸೋಮವಾರದಿಂದ (ಮಾರ್ಚ್ 21) ಧರಣಿ ನಡೆಸುವುದಾಗಿ ಸಂಸದ ಎಸ್. ಮುನಿಸ್ವಾಮಿ ಗಡುವು ನೀಡಿದ್ದರು.

ಇದಕ್ಕೆ ಅವಕಾಶ ನೀಡದ ಜಿಲ್ಲಾಡಳಿತವು ಮುಸ್ಲಿಂ ಸಮುದಾಯ ಮತ್ತು ಅಂಜುಮನ್ ಇಸ್ಲಾಮಿಯಾ ಸಂಘಟನೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಶಾಂತಿಯುತವಾಗಿ ವಿವಾದ ಅಂತ್ಯಗೊಳಿಸಿತು. ಜಿಲ್ಲಾಡಳಿತವು ಧ್ವಜಾರೋಹಣಕ್ಕೆ ಸಿದ್ಧತೆ ನಡೆಸುತ್ತಿದ್ದ ಹಿನ್ನೆಲೆಯಲ್ಲಿ ಸ್ಥಳದಲ್ಲಿ ಬಿಗುವಿನ ವಾತಾವರಣವಿತ್ತು. ಬಿಗಿಪೊಲೀಸ್ ಭದ್ರತೆಯೊಂದಿಗೆ ಪರಿಸ್ಥಿತಿ ನಿಯಂತ್ರಿಸಲಾಯಿತು.

ಧ್ವಜಾರೋಹಣದ ವೇಳೆ ಮುಸ್ಲಿಂ ಸಮುದಾಯದವರು ‘ಹಿಂದೂಸ್ತಾನ್ ಜಿಂದಾಬಾದ್’ ಘೋಷಣೆ ಕೂಗಿದರು.

ಕ್ಲಾಕ್‌ಟವರ್‌ನಲ್ಲಿ ಜಿಲ್ಲಾಡಳಿತದ ವತಿಯಿಂದ ರಾಷ್ಟ್ರಧ್ವಜ ಹಾರಿಸಲಾಯಿತು

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ),
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು-560 029.
ದೂರವಾಣಿ: 91-80-26560722 / 26560723 / 66697999 E-mail: kidwai@nic.in
No.KMIO/SME(1)/Tender/CSSD Consumables/298/2020-21 Date: 19.03.2022
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ **ದ್ವಿ-ಲಕೋಟೆ ಪದ್ಧತಿಯಲ್ಲಿ** ಆನ್‌ಲೈನ್ ಮುಖಾಂತರ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Name of the Item
1.	No.KMIO/SME(1)/Tender/CSSD Consumables/298/2020-21 dt. 19-03-2022	Procurement of CSSD Consumables to KMIO.
2.	No.KMIO/SME(1)/Tender/T.V./299/2020-21 dt. 19-03-2022	Procurement of Televisions to KMIO.
3.	No. KMIO/SME(1)/Tender/Dietary/286/ 2021-22 (Call-3) dated: 19-03-2022	Providing Dietary Service to Hospital in Patients & Canteen Services at P.G. Hostel

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ: **22.03.2022** ರಿಂದ **02.04.2022** ರವರೆಗೆ. ವೆಬ್‌ಸೈಟ್: **https://eproc.karnataka.gov.in**ನಲ್ಲಿ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಶುಲ್ಕ **ರೂ.500**/-ನ್ನು ಪಾವತಿಸಿ, ಬಿಡ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ **02.04.2022** ರಂದು ಮಧ್ಯಾಹ್ನ **3:00 p.m.** ಗಂಟೆಗೆ. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ/ತಿರಸ್ಕರಿಸುವ/ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.
ಸಹಿ/-
ನಿರ್ದೇಶಕರು
DIPR/DDU/AAPL/RO3841/21-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ
ಯೋಜನಾ ವಿಭಾಗ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಶಾಮಿಲಿ ಹತ್ತಿರ, ಮಾಂಡವಿ ಟವರ್ಸ್, ಪ್ರಥಮ ಮಹಡಿ, ಅಂಬಲಪಾಡಿ, ಉಡುಪಿ-576103
ದೂರವಾಣಿ/ಫ್ಯಾಕ್ಸ್: 0820-2532704, ಇ-ಮೇಲ್: kn-udu@pmgsy.nic.in
No.EE/PD/U/SCP-TSP/Tender Notification/2021-22/625, Date: 18.03.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಮತ್ತು ಕರ್ನಾಟಕ ಪಾರದರ್ಶಕತೆ ಅಧಿನಿಯಮಗಳನ್ವಯ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಮಂತ್ರಿಸಲಾಗಿದೆ. ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಿದ ನಿಗಧಿತ ದಿನಾಂಕ ಮತ್ತು ಅವಧಿಯೊಳಗೆ ಸಲ್ಲಿಸತಕ್ಕದ್ದು. ನಂತರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿದ ನಿಗದಿತ ದಿನಾಂಕ ಮತ್ತು ಸಮಯಕ್ಕೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಉಡುಪಿ ಕಛೇರಿಯಲ್ಲಿ ತೆರೆಯಲಾಗುವುದು.

ಕ್ರ.ಸಂ.	ಕಾಮಗಾರಿಯ ಹೆಸರು	Amount put to tender (in Rs)	EMD (Rs)	Period of completion
1.	ಪ್ಯಾಕೇಜ್ ಸಂಖ್ಯೆ: KSSCP 25-04 ಉಡುಪಿ ಜಿಲ್ಲೆ ಉಡುಪಿ ವಿಧಾನಸಭಾ ಕ್ಷೇತ್ರದ ಉಪ್ಪೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಉಗ್ಗೆಲ್‌ಬೆಟ್ಟು ಬ್ರಿಡ್ಜ್‌ನಿಂದ ಉಗ್ಗೆಲ್‌ಬೆಟ್ಟು ಗರಡಿ ಮಾರ್ಗವಾಗಿ ಆರೂರು ಪ.ಜಾತಿ ಕಾಲೋನಿ ರಸ್ತೆ ಅಭಿವೃದ್ಧಿ	4,38,60,922.00	6,58,000.00	11 Months (ಮಳೆಗಾಲ ಸೇರಿ)

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತಿವೆ. 1) ಗುತ್ತಿಗೆದಾರರ ಸಭೆ ನಡೆಯುವ ಸ್ಥಳ ಮತ್ತು ದಿನಾಂಕ: ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಯೋಜನಾ ವಿಭಾಗ, ಉಡುಪಿ. 31.03.2022, 11.30 hours 2) ಸ್ಪಷ್ಟನೆಗಳನ್ನು ಕೇಳುವ ಕೊನೆಯ ದಿನಾಂಕ: 01.04.2022. 3) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 04.04.2022 upto 16.30 Hours, 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸ್ಥಳ: 05.04.2022 upto 16.35 Hours. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಸ್ಥಳ: ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಯೋಜನಾ ವಿಭಾಗ, ಶಾಮಿಲಿ ಹತ್ತಿರ, ಮಾಂಡವಿ ಟವರ್ಸ್, ಪ್ರಥಮ ಮಹಡಿ, ಅಂಬಲಪಾಡಿ ಉಡುಪಿ.
ಸೂಚನೆಗಳು: 1) ಲೋಕೋಪಯೋಗಿ ಇಲಾಖೆ/ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿಕೊಂಡ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಮರುನೊಂದಣಿ ಮಾಡಿಕೊಂಡಿರುವ ಒಂದನೇ ದರ್ಜೆ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. 2) ಕೆ.ಆರ್.ಆರ್.ಡಿ.ಎ ವತಿಯಿಂದ ಕೈಗೊಂಡ ಕಾಮಗಾರಿ ಪೂರ್ಣಗೊಳ್ಳದೇ ಗುತ್ತಿಗೆ ರದ್ದುಪಡಿಸಲಾದ (Terminate) ಅಥವಾ ರಸ್ತೆ ನಿರ್ವಹಣೆ ಗುತ್ತಿಗೆ ಕಾಮಗಾರಿಯನ್ನು ನಿರ್ವಹಣೆ ಮಾಡದಿರುವುದರಿಂದ ಗುತ್ತಿಗೆ ರದ್ದಾದ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ. 3) ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಇವರನ್ನು ಸಂಪರ್ಕಿಸಬಹುದು. 4) ಮಾಹಿತಿಯನ್ನು http://www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಉಡುಪಿ

ನಗರಸಭಾ ಕಾರ್ಯಾಲಯ ಕನಕಪುರ
ರಾಮನಗರ ಜಿಲ್ಲೆ. ದೂರವಾಣಿ : 080-2752 2428.
ಇಮೇಲ್: kanakapura_tmc@yahoo.co.in ವೆಬ್‌ಸೈಟ್: www.kanakapuratown.mrc.gov.in
ನಂ.: ಕನಸ/ನೈ.ಶಾ./ಕಾರ್&ಬೆ.ಉ./ಟೆಂಡರ್-03/2021-22 ದಿನಾಂಕ : 16-03-2022
ಟೆಂಡರ್ ಪ್ರಕಟಣೆ - 2ನೇ ಕರೆ
ಪೌರಾಯುಕ್ತರು, ನಗರಸಭೆ, ಕನಕಪುರ ರವರು 2021-2022 ಮತ್ತು 2022-2023 ನೇ ಸಾಲಿನ ನಗರಸಭಾ ನಿಧಿ ಹಾಗೂ ಶೇ. 24.10% (ಎಸ್.ಎಫ್.ಸಿ ಮತ್ತು ನಗರ ಸಭಾ ನಿಧಿ) ಯಡಿ ಪೌರಕಾರ್ಮಿಕರಿಗೆ ಬೆಳಗಿನ ಉಪಹಾರ, ಕೌನ್ಸಿಲ್ ಸಭೆಗಳಿಗೆ / ಕಛೇರಿ ಸಭೆ / ಜಯಂತಿಗಳಿಗೆ ಉಪಹಾರ ಹಾಗೂ ಇನ್ನಿತರೆ ಏರ್ಪಾಟುಗಳನ್ನು ಮಾಡುವ ಸೇವೆ ಒದಗಿಸುವ ಕಾಮಗಾರಿ. ಅಂದಾಜು ಮೊತ್ತ ವಾರ್ಷಿಕ ರೂ. 12,37,200.00/-. ಅರ್ಹ ಸರಬರಾಜುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮೂಲಕ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಹಾಗೂ ಸಲ್ಲಿಸುವುದು. ಇ.ಎಂ.ಡಿ. ಹಣ ಹಾಗೂ ಟೆಂಡರ್ ಪ್ರಕ್ರಿಯೆ ಶುಲ್ಕಗಳನ್ನು ಸಹ ವಿದ್ಯುನ್ಮಾನದ ಮೂಲಕ ಪಾವತಿಸಬೇಕು. ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕಾದ ದಿನಾಂಕ : 17-03-2022 ರ ಬೆಳಿಗ್ಗೆ 10.00 ಗಂಟೆಯ ನಂತರ. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 04-04-2022 ರ 16.00 ಗಂಟೆಗೆ, ಟೆಂಡರ್ ತೆರೆಯುವ ದಿನಾಂಕ : 05-04-2022 ರ 16.30 ಗಂಟೆಗೆ. ಯಾವುದೇ ದಿನಾಂಕಗಳಲ್ಲಿ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/- ಪೌರಾಯುಕ್ತರು,
ನಗರಸಭೆ, ಕನಕಪುರ.
ಡಿಐಪಿಆರ್/ರಾಮನಗರ/559/ಮಣಿಪಾಲ್/2021-22

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.-3/ಟೆಂಡರ/2021-22/7595 ದಿನಾಂಕ:17/02/2022
ಅಲ್ಪಾವಧಿ ಇ-ಟೆಂಡರ್/ಮರುಟೆಂಡರ್ ಪ್ರಕಟಣೆ
(Call-1 & Call-2)
ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021-22 ನೇ ಸಾಲಿನ ಲೆಕ್ಕ ಶಿರ್ಷಿಕೆ 3054-ರಾಹೆ ನಿರ್ವಹಣೆ ಅಡಿ 1 ಕಾಮಗಾರಿ ಹಾಗೂ 8443-ಠೇವಣಿ ವಂತಿಕೆ ಅಡಿ 2 ಕಾಮಗಾರಿಗಳು, ಹೀಗೆ ಒಟ್ಟು 3 ಕಾಮಗಾರಿಗಳ ಗುತ್ತಿಗೆ ಇಟ್ಟ ಕನಿಷ್ಟ ಮೊತ್ತ ರೂ. 4.91 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 131.58 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್/ಮರುಟೆಂಡರ್ ಆವ್ಹಾನಿಸಲಾಗಿದೆ.
ಕ್ರಸಂ. 2 & 3 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:23-03-2022(ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:25-03-2022 (ಸಾಯಂಕಾಲ 5.00 ಗಂಟೆಯವರೆಗೆ), 3)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Single Cover System): 28-03-2022 (ಸಾಯಂಕಾಲ 4.30 ಗಂಟೆಗೆ)
ಕ್ರಸಂ. 1 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:23-03-2022 ರಂದು (11.00 ಗಂಟೆಗೆ), 2)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:25-03-2022 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ :28-03-2022 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):30-03-2022 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/-ಕಾರ್ಯನಿರ್ವಾಹಕ ಇಂಜೀನಿಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1827/MCA/2021-22

ಎನ್‌ಎಸ್‌ಎ ಕಾಯ್ದೆ: ಸಮಿತಿ ರಚನೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ (ಎನ್‌ಎಸ್‌ಎ) ದಾಖಲಾದ ಪ್ರಕರಣಗಳ ಪರಾಮರ್ಶೆ ನಡೆಸಲು ದೆಹಲಿ ಹೈಕೋರ್ಟ್‌ನ ಮೂವರು ನ್ಯಾಯಮೂರ್ತಿಗಳನ್ನೊಳಗೊಂಡ ಸಲಹಾ ಸಮಿತಿಯನ್ನು ಕೇಂದ್ರ ಗೃಹ ಸಚಿವಾಲಯ ರಚಿಸಿದೆ. 1980ರ ಕಾಯ್ದೆಯ 9ನೇ ಸೆಕ್ಷನ್ ಅಡಿಯಲ್ಲಿ ಸಲಹಾ ಸಮಿತಿ ರಚಿಸಲಾಗಿದೆ.

ನ್ಯಾಯಮೂರ್ತಿ ಯೋಗೇಶ್ ಖನ್ನಾ ಅವರು ಸಮಿತಿಯ ಮುಖ್ಯಸ್ಥರಾಗಿದ್ದಾರೆ. ನ್ಯಾಯಮೂರ್ತಿಗಳಾದ ಚಂದ್ರಧಾರಿ ಸಿಂಗ್ ಹಾಗೂ ರಜನೀಶ್ ಭಟ್ನಾಗರ್ ಅವರು ಸದಸ್ಯರು.

ಈ ಕಾಯ್ದೆಯಡಿ ವ್ಯಕ್ತಿಯೊಬ್ಬರನ್ನು ಯಾವುದೇ ಆರೋಪ ಹೊರಿಸದೆಯೂ ಒಂದು ವರ್ಷದವರೆಗೆ ಬಂಧನದಲ್ಲಿ ಇರಿಸಲು ಅವಕಾಶವಿದೆ. ವ್ಯಕ್ತಿಯೊಬ್ಬರು ದೇಶದ ಭದ್ರತೆಗೆ ಅಪಾಯಕಾರಿ ಎಂದು ಸರ್ಕಾರವು ಪರಿಗಣಿಸಿದರೆ, ಅಂತಹವನ್ನು ಬಂಧಿಸಿ ಇಡಲು ಈ ಕಾಯ್ದೆ ಅವಕಾಶ ನೀಡುತ್ತದೆ.

ಈ ಕಾಯ್ದೆಯಡಿ ಬಂಧನಕ್ಕೊಳಪಟ್ಟ ವ್ಯಕ್ತಿಯು ಸಲಹಾ ಮಂಡಳಿ ಎದುರು ಮನವಿ ಮಾಡಿಕೊಳ್ಳಬಹುದು. ಆದರೆ ವಿಚಾರಣೆ ಹಂತದಲ್ಲಿ ವಕೀಲರನ್ನು ನೇಮಿಸಿಕೊಳ್ಳಲು ಅವಕಾಶ ಇರುವುದಿಲ್ಲ.

ಯಾವ ಆಧಾರದಲ್ಲಿ ಬಂಧಿಸಲಾಗಿದೆ ಎಂಬುದನ್ನು ಹಾಗೂ ಬಂಧಿತ ವ್ಯಕ್ತಿಯ ಅಹವಾಲು ಇದ್ದಲ್ಲಿ, ಅದನ್ನು ಮಂಡಳಿಯ ಎದುರು ಮೂರು ವಾರಗಳ ಒಳಗೆ ಮಂಡಿಸಬೇಕು.

ವ್ಯಕ್ತಿಯ ಬಂಧನಕ್ಕೆ ಕಾರಣಗಳು ಇದ್ದವೇ ಎಂಬುದನ್ನು ಮಂಡಳಿಯು ತನ್ನ ವರದಿಯಲ್ಲಿ ತಿಳಿಸಬೇಕು. ಒಂದು ವೇಳೆ, ಬಂಧನ ಸೂಕ್ತವಾಗಿದೆ ಎಂದು ವರದಿ ತಿಳಿಸಿದಲ್ಲಿ, ವ್ಯಕ್ತಿಯ ಬಂಧನವನ್ನು ಸರ್ಕಾರ ಖಚಿತಪಡಿಸಿ, ಬಂಧನ ಅವಧಿಯನ್ನು ಮುಂದುವರಿಸುತ್ತದೆ. ಬಂಧನಕ್ಕೆ ಸೂಕ್ತ ಕಾರಣಗಳು ಕಂಡುಬಂದಿಲ್ಲ ಎಂದು ಮಂಡಳಿ ವರದಿ ನೀಡಿದಲ್ಲಿ, ವ್ಯಕ್ತಿಯ ಬಂಧನ ಆದೇಶವನ್ನು ರದ್ದುಗೊಳಿಸಿ, ಬಿಡುಗಡೆ ಮಾಡಲಾಗುತ್ತದೆ.

ಪಂಜಾಬ್ ಸಚಿವ ಸಂಪುಟಕ್ಕೆ 10 ಮಂದಿಯನ್ನು ಸೇರಿಸಿಕೊಂಡ ಭಗವಂತ ಮಾನ್

8 ಮಂದಿ ಹೊಸಬರು, ಮಹಿಳೆ ಒಬ್ಬರು

ಚಂಡೀಗಡ (ಪಿಟಿಐ): ಭಗವಂತ ಮಾನ್ ನೇತೃತ್ವದ ಪಂಜಾಬ್ ಸಚಿವ ಸಂಪುಟಕ್ಕೆ ಒಬ್ಬ ಮಹಿಳೆ ಸೇರಿದಂತೆ ಹತ್ತು ಮಂದಿಯನ್ನು ಶನಿವಾರ ಸೇರಿಸಿಕೊಳ್ಳಲಾಗಿದೆ. ರಾಜ್ಯಪಾಲ ಭನ್ವಾರಿಲಾಲ್ ಪುರೋಹಿತ್ ಅವರು ನೂತನ ಸಚಿವರಿಗೆ ಪ್ರಮಾಣವಚನ ಬೋಧಿಸಿದರು. ಕಾರ್ಯಕ್ರಮವು ಪಂಜಾಬ್ ಭವನದಲ್ಲಿ ನಡೆಯಿತು.

ಹರಪಾಲ್ ಸಿಂಗ್ ಚೀಮಾ ಮತ್ತು ಗುರ್ಮೀತ್ ಸಿಂಗ್ ಮೀತ್ ಹಯರ್ ಅವರನ್ನು ಬಿಟ್ಟರೆ ಉಳಿದ ಎಂಟು ಶಾಸಕರು ಇದೇ ಮೊದಲ ಬಾರಿ ಆಯ್ಕೆ ಆದವರು. ಚೀಮಾ ಅವರು ಮೊದಲಿಗರಾಗಿ ಪ್ರಮಾಣ ಸ್ವೀಕರಿಸಿದರು. ಬಳಿಕ, ಏಕೈಕ ಮಹಿಳಾ ಸಚಿವೆ ಡಾ. ಬಲಜಿತ್ ಕೌರ್ ಅವರು ಪ್ರಮಾಣ ವಚನ ಸ್ವೀಕರಿಸಿದರು.

ಹರಭಜನ್ ಸಿಂಗ್, ಡಾ. ವಿಜಯ್ ಸಿಂಗ್ಲಾ, ಲಾಲ್ ಚಂದ್, ಗುರ್ಮೀತ್ ಸಿಂಗ್ ಮೀತ್ ಹಯರ್, ಕುಲದೀಪ್ ಸಿಂಗ್ ಧಾಲಿವಾಲ್, ಲಾಲ್‌ಜಿತ್ ಸಿಂಗ್ ಭುಲ್ಲರ್, ಬ್ರಹ್ಮಶಂಕರ್ ಜಿಂಪ ಮತ್ತು ಹರಜೋತ್ ಸಿಂಗ್ ಬೈನ್ಸ್ ಅವರು ಸಂಪುಟ ಸೇರಿದ ಇತರರು.

ಮುಖ್ಯಮಂತ್ರಿ ಸೇರಿ 18 ಸಚಿವರಿಗೆ ಸಂಪುಟದಲ್ಲಿ ಅವಕಾಶ ಇದೆ. ಆದರೆ, ಮಾನ್ ಅವರು ಏಳು ಸ್ಥಾನಗಳನ್ನು ಖಾಲಿ ಉಳಿಸಿಕೊಂಡಿದ್ದಾರೆ.



ಮುಖ್ಯಮಂತ್ರಿ ಭಗವಂತ ಮಾನ್ ನೇತೃತ್ವದ ಪಂಜಾಬ್ ಸಚಿವ ಸಂಪುಟದ ಮೊದಲ ಸಭೆ ಶನಿವಾರ ನಡೆಯಿತು —ಪಿಟಿಐ ಚಿತ್ರ

ಮಾಲ್ವಾ ಪ್ರದೇಶದ ಐವರು, ಮಾಝಾ ಪ್ರದೇಶದ ನಾಲ್ವರು ಮತ್ತು ದೋಅಬಾ ಪ್ರದೇಶದ ಒಬ್ಬರಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ಸಿಕ್ಕಿದೆ. ಮೀಸಲು ಕ್ಷೇತ್ರಗಳಲ್ಲಿ ಗೆದ್ದ ನಾಲ್ವರು ಸಚಿವರಾಗಿದ್ದಾರೆ.

ಹರಪಾಲ್ ಸಿಂಗ್ ಚೀಮಾ ಅವರು ಎರಡನೇ ಅವಧಿಗೆ ಶಾಸಕರಾದವರು. ದಲಿತ ಸಮುದಾಯದ ನಾಯಕರಾಗಿರುವ ಅವರು ಈ ಹಿಂದಿನ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ವೃತ್ತಿಯಲ್ಲಿ ಅವರು ವಕೀಲ. ದಿರ್ಬಾ ಕ್ಷೇತ್ರದಲ್ಲಿ ಅವರು ಶಿರೋಮಣಿ ಅಕಾಲಿದಳದ ಗುಲ್ಜಾರ್ ಸಿಂಗ್ ಮೂನಕ್ ಅವರನ್ನು ಸೋಲಿಸಿದ್ದಾರೆ.

ಬರ್ನಾಲಾದಿಂದ ಎರಡನೇ ಅವಧಿಗೆ ಗೆದ್ದಿರುವ ಗುರ್ಮೀತ್ ಸಿಂಗ್ ಮೀತ್ ಹಯರ್ ಅವರು ಎಎಪಿ ಯುವ ವಿಭಾಗದ ಅಧ್ಯಕ್ಷ. ಡಾ. ಬಲ್ಜಿತ್ ಕೌರ್ ಅವರು ಕಣ್ಣಿನ ವೈದ್ಯೆ. ಎಎಪಿಯ ಮಾಜಿ ಸಂಸದ ಸಂಧು ಸಿಂಗ್ ಅವರ ಮಗಳು. ಮುಕ್ತ್‌ಸಾರ್ ಸರ್ಕಾರಿ ಆಸ್ಪತ್ರೆಯ ಕೆಲಸಕ್ಕೆ ರಾಜೀನಾಮೆ ನೀಡಿ ಅವರು ರಾಜಕೀಯ ಪ್ರವೇಶಿಸಿದ್ದಾರೆ.

ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಪಂಜಾಬ್ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷವು ಭಾರಿ ಬಹುಮತದಿಂದ ಅಧಿಕಾರ ಹಿಡಿದಿದೆ. 117 ಕ್ಷೇತ್ರಗಳ ಪೈಕಿ 92ರಲ್ಲಿ ಗೆದ್ದಿದೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

25 ಸಾವಿರ ಹುದ್ದೆ ಭರ್ತಿಗೆ ನಿರ್ಧಾರ

ಪಂಜಾಬ್ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 25,000 ಹುದ್ದೆಗಳನ್ನು ಭರ್ತಿ ಮಾಡಲು ಸಚಿವ ಸಂಪುಟದ ಮೊದಲ ಸಭೆಯು ಅನುಮೋದನೆ ಕೊಟ್ಟಿದೆ. ಇದರಲ್ಲಿ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 10,000 ಹುದ್ದೆಗಳೂ ಸೇರಿವೆ. ಮಾನ್ ಅವರು ವಿಡಿಯೊ ಸಂದೇಶದ ಮೂಲಕ ಈ ನಿರ್ಧಾರವನ್ನು ಪ್ರಕಟಿಸಿದರು.

ಖಾಲಿ ಹುದ್ದೆ ಭರ್ತಿ ಪ್ರಕ್ರಿಯೆ ಒಂದು ತಿಂಗಳಲ್ಲಿ ಆರಂಭವಾಗಲಿದೆ. ಪ್ರಣಾಳಿಕೆಯಲ್ಲಿ ನೀಡಿದ ಇತರ ಭರವಸೆಗಳನ್ನು ಮುಂದಿನ ದಿನಗಳಲ್ಲಿ ಈಡೇರಿಸಲಾಗುವುದು ಎಂದು ಮಾನ್ ತಿಳಿಸಿದ್ದಾರೆ.ನಿರುದ್ಯೋಗ ಸಮಸ್ಯೆಯನ್ನು ಚುನಾವಣಾ ಪ್ರಚಾರ ಸಂದರ್ಭದಲ್ಲಿ ಎಎಪಿ ಮುಖ್ಯವಾಗಿ ಪ್ರಸ್ತಾಪಿಸಿತ್ತು. ಅಧಿಕಾರಕ್ಕೆ ಬಂದರೆ ಸಚಿವ ಸಂಪುಟದ ಮೊದಲ ಸಭೆಯಲ್ಲಿಯೇ ನಿರುದ್ಯೋಗ ನಿವಾರಣೆಯ ನಿರ್ಧಾರ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿತ್ತು.

ದಿಗ್ಗಜರ ಸೋಲಿಸಿದವರಿಗೆ ಸ್ಥಾನವಿಲ್ಲ

ದಿಗ್ಗಜ ನಾಯಕರನ್ನು ಸೋಲಿಸಿದ ಯಾರೊಬ್ಬರಿಗೂ ಸಂಪುಟದಲ್ಲಿ ಸ್ಥಾನ ದೊರೆತಿಲ್ಲ. ಹಿಂದಿನ ಸರ್ಕಾರದ ಮುಖ್ಯಮಂತ್ರಿಯಾಗಿದ್ದ ಚರಣ್‌ಜಿತ್ ಸಿಂಗ್ ಚನ್ನಿ, ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ನವಜೋತ್ ಸಿಂಗ್ ಸಿಧು, ಶಿರೋಮಣಿ ಅಕಾಲಿದಳದ ಪ್ರಕಾಶ್ ಸಿಂಗ್ ಬಾದಲ್ ಮತ್ತು ಸುಖಬೀರ್ ಸಿಂಗ್ ಬಾದಲ್, ಪಂಜಾಬ್ ಲೋಕ ಕಾಂಗ್ರೆಸ್ ಮುಖ್ಯಸ್ಥ ಅಮರಿಂದರ್ ಸಿಂಗ್ ಮುಂತಾದವರನ್ನು ಸೋಲಿಸಿದವರಿಗೆ ಸಚಿವ ಸ್ಥಾನ ನೀಡಲಾಗಿಲ್ಲ.

ಮಾನ್ ಅವರ ಮಗಳು ಸೀರತ್ ಮಾನ್ (21) ಮತ್ತು ಮಗ ದಿಲ್ಶನ್ ಮಾನ್ (17) ಅವರು ಕಾರ್ಯಕ್ರಮದಲ್ಲಿ ಇದ್ದರು.

ಉತ್ತರಾಖಂಡ ಬಿಜೆಪಿ ಸಭೆ ಸೋಮವಾರ?

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ ಹೊಸ ಮುಖ್ಯಮಂತ್ರಿ ಯಾರಾಗಬೇಕು ಎಂದು ನಿರ್ಧರಿಸಲು ಬಿಜೆಪಿ ಶಾಸಕಾಂಗ ಪಕ್ಷದ ಸಭೆಯನ್ನು ಸೋಮವಾರ ನಡೆಸುವ ಸಾಧ್ಯತೆ ಇದೆ.

ಉತ್ತರಾಖಂಡಕ್ಕೆ ವೀಕ್ಷಕರಾಗಿ ನೇಮಕವಾಗಿರುವ ಕೇಂದ್ರ ಸಚಿವರಾದ ರಾಜನಾಥ್ ಸಿಂಗ್ ಮತ್ತು ಮೀನಾಕ್ಷಿ ಲೇಖಿ ಅವರು ಸಭೆಯಲ್ಲಿ ಪಾಲ್ಗೊಳ್ಳಲು ಉತ್ತರಾಖಂಡಕ್ಕೆ ಭಾನುವಾರ ಆಗಮಿಸಲಿದ್ದಾರೆ ಎಂದು ಬಿಜೆಪಿ ವಕ್ತಾರ ಶಾಬಾದ್ ಶಮ್ಸ್ ತಿಳಿಸಿದ್ದಾರೆ.

ಗೋವಾ: ಕಾಂಗ್ರೆಸ್ ಮುಖಂಡನಿಗೆ ನೋಟಿಸ್

ಪಣಜಿ (ಪಿಟಿಐ): ಗೋವಾ ಕಾಂಗ್ರೆಸ್ ಮುಖಂಡ ವಿಜಯ್ ಭಿಕೆ ಅವರಿಗೆ ಪಕ್ಷ ಶೋಕಾಸ್ ನೋಟಿಸ್ ನೀಡಿದೆ. ಗೋವಾ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಲು ಮಿತ್ರಪಕ್ಷವಾದ ಗೋವಾ ಫಾರ್ವರ್ಡ್ ಪಕ್ಷವೇ (ಜಿಎಫ್‌ಪಿ) ಕಾರಣ ಎಂದು ಅವರು ಶುಕ್ರವಾರ ಹೇಳಿಕೆ ನೀಡಿದ್ದರು. ಇದಕ್ಕಾಗಿ ಅವರ ವಿರುದ್ಧ ಈ ಕ್ರಮ ತೆಗೆದುಕೊಳ್ಳಲಾಗಿದೆ.

'ಜಿಎಫ್‌ಪಿ ಜೊತೆ ಕೈಜೋಡಿಸಿದ್ದು ನಮ್ಮ ತಪ್ಪು ನಿರ್ಧಾರ. ಈ ಮೈತ್ರಿಕೂಟದಿಂದ ಕಾಂಗ್ರೆಸ್‌ಗೆ ಯಾವುದೇ ಅನುಕೂಲ ಆಗಲಿಲ್ಲ. ಬದಲಾಗಿ ಬೇರೆ ಪಕ್ಷಗಳು ಅದರ ಲಾಭವನ್ನು ಪಡೆದವು' ಎಂದು ಭಿಕೆ ಹೇಳಿಕೆ ನೀಡಿದ್ದರು.

ಯೋಗಿ ಪ್ರಮಾಣ 25ರಂದು

ಲಖನೌ (ಪಿಟಿಐ): ಹೊಸದಾಗಿ ಆಯ್ಕೆಯಾಗಿರುವ ಉತ್ತರಪ್ರದೇಶ ಸರ್ಕಾರವು ಇದೇ 25ರಂದು ಪ್ರಮಾಣ ವಚನ ಸ್ವೀಕರಿಸಲಿದೆ. ಪ್ರಮಾಣ ವಚನ ಕಾರ್ಯಕ್ರಮಕ್ಕಾಗಿ ಅಟಲ್ ಬಿಹಾರಿ ವಾಜಪೇಯಿ ಇಕಾನಾ ಕ್ರೀಡಾಂಗಣದಲ್ಲಿ 75 ಸಾವಿರ ಜನರಿಗೆ ಆಸನ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನವನೀತ್ ಸೆಹಗಲ್ ಶನಿವಾರ ಹೇಳಿದ್ದಾರೆ.

ಯೋಗಿ ಆದಿತ್ಯನಾಥ ಮತ್ತು ಸಂಪುಟದ ಸಚಿವರು ಶುಕ್ರವಾರ ಸಂಜೆ ನಾಲ್ಕು ಗಂಟೆಗೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಕೇಂದ್ರದ ಇತರ ಸಚಿವರು ಶುಕ್ರವಾರದ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಬಿಜೆಪಿ ಆಳ್ವಿಕೆ ಇರುವ ರಾಜ್ಯಗಳ ಮುಖ್ಯಮಂತ್ರಿಗಳು, ಆರ್‌ಎಸ್‌ಎಸ್ ನಾಯಕರು, ಬಿಜೆಪಿಯ ಪದಾಧಿಕಾರಿಗಳು ಸಮಾರಂಭಕ್ಕೆ ಹಾಜರಾಗುವ ನಿರೀಕ್ಷೆ ಇದೆ. ವಿರೋಧ ಪಕ್ಷಗಳ ಪ್ರಮುಖ ನಾಯಕರನ್ನೂ ಆಹ್ವಾನಿಸಲಾಗುವುದು ಎಂದು ಮೂಲಗಳು ಹೇಳಿವೆ.

ಆದಿತ್ಯನಾಥ ಅವರು ಸತತ ಎರಡನೇ ಅವಧಿಗೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಆಗಲಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಿಯು ವಿದ್ಯಾರ್ಥಿಗಳಿಗಾಗಿ
ಆನ್‌ಲೈನ್ ಬೋಧನಾ ಸರಣಿ
ಗಣಿತಶಾಸ್ತ್ರ ಟಿಪ್ಸ್
ಮಂದಾರ್ ಹುಕ್ಕೇರಿ
ಗಣಿತಶಾಸ್ತ್ರ ಉಪನ್ಯಾಸಕರು, ಕಲಬುರಗಿ
ಸಂಜೆ 4 ರಿಂದ 6 ರವರೆಗೆ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9, ಸಂಪಾದಕೀಯ: ಬೆಳಿಗ್ಗೆ 9.30, ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಪ್ರಜಾವಾಣಿ ಕನ್ನಡ ಧ್ವನಿ

ಆಘಾಡಿಗೆ ಒವೈಸಿ ಪಕ್ಷ: ಪ್ರಸ್ತಾವ ತಿರಸ್ಕಾರ

ಔರಂಗಾಬಾದ್: ಮಹಾರಾಷ್ಟ್ರದಲ್ಲಿ ಶಿವಸೇನಾ, ಎನ್‌ಸಿಪಿ ಮತ್ತು ಕಾಂಗ್ರೆಸ್ ಮೈತ್ರಿಕೂಟಕ್ಕೆ ಸೇರಲು ಸಿದ್ಧ ಎಂದು ಎಐಎಂಐಎಂ ಸಂಸದ ಇಮ್ತಿಯಾಜ್ ಜಲೀಲ್ ಶನಿವಾರ ಹೇಳಿದ್ದಾರೆ. ಆದರೆ, ಈ ಪ್ರಸ್ತಾವವನ್ನು ಶಿವಸೇನಾ ತಳ್ಳಿಹಾಕಿದೆ.

ಮಹಾರಾಷ್ಟ್ರದಲ್ಲಿ ಸರ್ಕಾರ ನಡೆಸುತ್ತಿರುವ ಮೂರು ಪಕ್ಷಗಳ ಮೈತ್ರಿಕೂಟವಾದ ಮಹಾ ವಿಕಾಸ ಆಘಾಡಿಯು (ಎಂವಿಎ) ಆಟೊರಿಕ್ಷಾದಂತಿದೆ. ಎಐಎಂಐಎಂ ಅನ್ನು ಸೇರಿಸಿಕೊಂಡರೆ ನಾಲ್ಕು ಚಕ್ರದ ಕಾರಿನಂತಾಗುತ್ತದೆ. ಬಿಜೆಪಿಯನ್ನು ಅಧಿಕಾರದಿಂದ ದೂರವಿರಿಸಲು ಇದು ಸಹಕಾರಿಯಾಗುತ್ತದೆ ಎಂದು ಜಲೀಲ್ ಹೇಳಿದ್ದಾರೆ.

ಮಹಾರಾಷ್ಟ್ರದ ಆರೋಗ್ಯ ಸಚಿವ ರಾಜೇಶ್ ಟೋಪೆ ಅವರು ಜಲೀಲ್ ಮನೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರು ಈ ಪ್ರಸ್ತಾವ ಮುಂದಿಟ್ಟಿದ್ದಾರೆ.

'ತಾಯಿಯ ನಿಧನಕ್ಕೆ ಸಂತಾಪ ಸೂಚಿಸುವುದಕ್ಕಾಗಿ ಎನ್‌ಸಿಪಿಯ ಹಲವು ಮುಖಂಡರು ನನ್ನ ಮನೆಗೆ ಬಂದಿದ್ದಾರೆ. ನಮ್ಮಿಂದಾಗಿ ಬಿಜೆಪಿ ಗೆಲ್ಲುತ್ತಿದೆ ಎಂದು ಆರೋಪಿಸಲಾಗುತ್ತಿದೆ. ಈ ಆರೋಪವು ಸುಳ್ಳೆಂದು ಸಾಬೀತು ಮಾಡುವುದಕ್ಕಾಗಿ ಮಹಾ ವಿಕಾಸ ಆಘಾಡಿಗೆ ಸೇರುವ ಪ್ರಸ್ತಾವ ಮುಂದಿಟ್ಟಿದ್ದೇನೆ' ಎಂದು ಜಲೀಲ್ ಹೇಳಿದ್ದಾರೆ.

'ಮಹಾರಾಷ್ಟ್ರದಲ್ಲಿ ಕೂಡ ಈ ಪಕ್ಷಗಳಿಗೆ (ಕಾಂಗ್ರೆಸ್ ಮತ್ತು ಎನ್‌ಸಿಪಿ) ಮುಸ್ಲಿಮರ ಮತಗಳು ಬೇಕು. ಆದರೆ ಎಐಎಂಐಎಂ ಬೇಡ. ಬಿಜೆಪಿ ಗೆಲುವಿಗೆ ಅವರು ನಮ್ಮನ್ನು ದೂರುತ್ತಾರೆ. ಹಾಗಾಗಿಯೇ, ನಾವು ಜತೆಯಾಗಿಯೇ ಚುನಾವಣೆ ಎದುರಿಸೋಣ ಎಂಬ ಪ್ರಸ್ತಾವ ಮುಂದಿಟ್ಟಿದ್ದೇನೆ. ಇಲ್ಲ ಎಂದಾದರೆ, ನಾವು ಪ್ರತ್ಯೇಕವಾಗಿಯೇ ಸ್ಪರ್ಧಿಸುತ್ತೇವೆ. ಬಿಜೆಪಿಯ ಬಿ ತಂಡ ಎಂದು ನಮ್ಮನ್ನು ಕರೆಯುವುದನ್ನು ತಪ್ಪಿಸುವುದಕ್ಕಾಗಿಯೇ ಮೈತ್ರಿಕೂಟಕ್ಕೆ ಸೇರಿಕೊಳ್ಳಲು ಸಿದ್ಧರಾಗಿದ್ದೇವೆ' ಎಂದು ಜಲೀಲ್ ಹೇಳಿದ್ದಾರೆ.

'ಮೈತ್ರಿಕೂಟದಲ್ಲಿ ಹೊಸ ಪಕ್ಷಕ್ಕೆ ಅವಕಾಶ ಇಲ್ಲ'

ಮಹಾ ವಿಕಾಸ ಆಘಾಡಿಗೆ ಎಐಎಂಐಎಂ ಸೇರುವ ಪ್ರಸ್ತಾವವನ್ನು ಶಿವಸೇನಾದ ವಕ್ತಾರ ಸಂಜಯ ರಾವುತ್ ಅವರು ತಿರಸ್ಕರಿಸಿದ್ದಾರೆ. 'ಎಂವಿಎಯಲ್ಲಿ ಮೂರು ಪಕ್ಷಗಳಿವೆ. ಅದು ಹಾಗೆಯೇ ಮುಂದುವರಿಯಲಿದೆ. ನಾಲ್ಕು, ಐದನೇ ಪಕ್ಷಗಳ ಸೇರ್ಪಡೆ ಇಲ್ಲ' ಎಂದು ಅವರು ಹೇಳಿದ್ದಾರೆ.

'ಛತ್ರಪತಿ ಶಿವಾಜಿ ಮತ್ತು ಛತ್ರಪತಿ ಸಂಭಾಜಿಯ ಸಿದ್ಧಾಂತಗಳನ್ನು ಶಿವಸೇನಾ ಅನುಸರಿಸುತ್ತಿದೆ. ಔರಂಗಜೇಬ್ ಮುಂದೆ ತಲೆಬಾಗುವ ಜನರ ಜತೆಗೆ ನಾವು ಕೈಜೋಡಿಸುವುದಿಲ್ಲ' ಎಂದಿದ್ದಾರೆ.

ಬಿಜೆಪಿಯ ಜತೆಗೆ ಎಐಎಂಐಎಂ 'ರಹಸ್ಯ ಒಪ್ಪಂದ' ಮಾಡಿಕೊಂಡಿದೆ. ಇದನ್ನು ಉತ್ತರ ಪ್ರದೇಶದಲ್ಲಿ ಮತ್ತು ಅದಕ್ಕೂ ಹಿಂದೆ ಪಶ್ಚಿಮ ಬಂಗಾಳದಲ್ಲಿ ಕಂಡಿದ್ದೇವೆ ಎಂದು ಅವರು ಹೇಳಿದ್ದಾರೆ.

ಎಐಎಂಐಎಂ ಅನ್ನು ಸಮಾನಮನಸ್ಕ ಪಕ್ಷ ಎಂದು ಪರಿಗಣಿಸಲು ಸಾಧ್ಯ ಎಂಬುದನ್ನು ಆ ಪಕ್ಷವು ಸಾಬೀತು ಮಾಡಬೇಕು. ಪ್ರಚೋದನಕಾರಿ ಭಾಷೆ ಕೈಬಿಡಬೇಕು
ಜಯಂತ್ ಪಾಟೀಲ್
ಎನ್‌ಸಿಪಿ ಮಹಾರಾಷ್ಟ್ರ ಘಟಕದ ಅಧ್ಯಕ್ಷ

ಬಿಜೆಪಿ ಜತೆ ಎಐಎಂಐಎಂ ರಹಸ್ಯ ಒಪ್ಪಂದ ಮಾಡಿಕೊಂಡಿದೆ. ಎಐಎಂಐಎಂ, ಬಿಜೆಪಿಯ ಬಿ ಟೀಮ್. ಮುಂದೆಯೂ ಅದು ಹಾಗೆಯೇ ಇರಲಿದೆ
ಸಂಜಯ ರಾವುತ್, ಶಿವಸೇನಾ ವಕ್ತಾರ

'ಹಣದುಬ್ಬರ ಇನ್ನಷ್ಟು ಏರಿಕೆ ಭೀತಿ: ಜನರ ರಕ್ಷಣೆಗೆ ಮುಂದಾಗಿ'

ನವದೆಹಲಿ (ಪಿಟಿಐ): ಹಣದುಬ್ಬರ ಇನ್ನಷ್ಟು ಏರಬಹುದು ಎಂದು ಎಚ್ಚರಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ದೇಶದ ಜನರ ರಕ್ಷಣೆಗೆ ಸರ್ಕಾರ ಕ್ರಮವಹಿಸಬೇಕು ಎಂದು ಶನಿವಾರ ಒತ್ತಾಯಿಸಿದ್ದಾರೆ.

'ಹಣದುಬ್ಬರ ಎಂದರೆ ಅದು ಎಲ್ಲ ಭಾರತೀಯರ ಮೇಲಿನ ತೆರಿಗೆ. ಉಕ್ರೇನ್–ರಷ್ಯಾ ಯುದ್ಧ ಆರಂಭಕ್ಕೂ ಮೊದಲೇ ಅಗತ್ಯ ವಸ್ತುಗಳ ದರ ಏರಿಕೆಯಿಂದ ಮಧ್ಯಮ, ಬಡವರ್ಗದ ಜನರು ತತ್ತರಿಸಿದ್ದರು' ಎಂದೂ ಅವರು ಉಲ್ಲೇಖಿಸಿದ್ದಾರೆ.

ಕಚ್ಚಾ ತೈಲದ ದರ ಬ್ಯಾರಲ್‌ಗೆ 100 ಡಾಲರ್‌ಗೆ ಏರಿದೆ. ಇದರಿಂದ ಆಹಾರ ವಸ್ತುಗಳ ದರ ಶೇ 22ರಷ್ಟು ಏರಬಹುದು. ಕೋವಿಡ್‌ನಿಂದ ಈಗಾಗಲೇ ಜಾಗತಿಕವಾಗಿ ಪೂರೈಕೆ ವ್ಯವಸ್ಥೆ ಹದಗೆಟ್ಟಿದೆ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಶ್ರೀಲಂಕಾದಲ್ಲಿ ಕಾಗದ ಕೊರತೆ: ವಾರ್ಷಿಕ ಪರೀಕ್ಷೆಯೇ ರದ್ದು

ಕೊಲಂಬೊ(ಎಎಫ್‌ಪಿ): ಕಾಗದದ ಕೊರತೆಯಿಂದ ಶ್ರೀಲಂಕಾದಲ್ಲಿ ಶಾಲಾ ಪರೀಕ್ಷೆಗಳನ್ನೇ ರದ್ದು ಮಾಡಲಾಗಿದೆ ಎಂದು ವರದಿಯಾಗಿದೆ. ತೀವ್ರ ವಿದೇಶಿ ವಿನಿಮಯ ಪಾವತಿ ಕೊರತೆಯಿಂದಾಗಿ ಈ ದುಃಸ್ಥಿತಿ ಎದುರಾಗಿದೆ ಎಂದು ಶನಿವಾರ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಶ್ರೀಲಂಕಾದಲ್ಲಿ 1948ರ ನಂತರ ಇದೇ ಮೊದಲ ಬಾರಿಗೆ ಅತಿ ದೊಡ್ಡ ಆರ್ಥಿಕ ಮುಗ್ಗಟ್ಟು ಕಾಣಿಸಿಕೊಂಡಿದ್ದು, ವಿದೇಶಿ ವಿನಿಮಯ ಪಾವತಿ ಕೊರತೆಯಿಂದ ಕಾಗದವನ್ನು ಆಮದು ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರಿಂದ ಪರೀಕ್ಷೆ ಬರೆದು ಮುಂದಿನ ತರಗತಿಗೆ ಹೋಗಬೇಕಿದ್ದ ಲಕ್ಷಾಂತರ ಮಕ್ಕಳು ತೊಂದರೆಗೆ ಸಿಲುಕಿದ್ದಾರೆ.

ಈ ವರ್ಷ 45 ಲಕ್ಷ ಮಕ್ಕಳು ಪರೀಕ್ಷೆ ಬರೆಯಬೇಕಿತ್ತು. ಆದರೆ, ವಿದೇಶದಿಂದ ಕಾಗದವನ್ನು ಆಮದು ಮಾಡಿಕೊಳ್ಳಲು ವಿದೇಶಿ ವಿನಿಮಯ ಇರದಿದ್ದರಿಂದ ಕಾಗದ ಕೊರತೆಯಾಗಿದೆ ಎಂದು ಸರ್ಕಾರ ಮಾಹಿತಿ ನೀಡಿದೆ.

'ವಿದೇಶಿ ವಿನಿಮಯದ ಕೊರತೆಯಿಂದಾಗಿ ಪ್ರಿಂಟರ್‌ಗಳು, ಕಾಗದಗಳು ಮತ್ತು ಶಾಯಿ ಅನ್ನು ಆಮದು ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಪರೀಕ್ಷೆಗಳನ್ನು ನಡೆಸುವುದು ಅಸಾಧ್ಯವಾಗಿದೆ' ಎಂದು ಪಶ್ಚಿಮ ಪ್ರಾಂತ್ಯದ ಶಿಕ್ಷಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ದಾಭೋಲ್ಕರ್ ಹತ್ಯೆ: ಇಬ್ಬರು ಶೂಟರ್‌ಗಳ ಗುರುತು ಪತ್ತೆ

ಪುಣೆ(ಪಿಟಿಐ): ಮಹಾರಾಷ್ಟ್ರದ ವಿಚಾರವಾದಿ ನರೇಂದ್ರ ದಾಭೋಲ್ಕರ್ ಅವರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಶೂಟರ್‌ಗಳಾದ ಶರದ್ ಕಲಾಸ್ಕರ್ ಹಾಗೂ ಸಚಿನ್ ಅಂದೂರೆ ಅವರನ್ನು ಪ್ರತ್ಯಕ್ಷದರ್ಶಿ ಗುರುತಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈ ಸಂಬಂಧ ಶನಿವಾರ ಮಾತನಾಡಿದ ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಕಾಶ್ ಸೂರ್ಯವಂಶಿ ಅವರು, 'ಪುಣೆ ಪಾಲಿಕೆಯಲ್ಲಿ ಪೌರ ಕಾರ್ಮಿಕರಾಗಿ ಕೆಲಸ ನಿರ್ವಹಿಸುವ ಕಿರಣ್ ಕಾಂಬ್ಳೆ(46) ಅವರು ಶೂಟರ್‌ಗಳಾದ ಕಲಾಸ್ಕರ್ ಮತ್ತು ಅಂದೂರೆ ಅವರನ್ನು ನ್ಯಾಯಾಲಯದಲ್ಲಿ ಗುರುತಿಸಿದ್ದಾರೆ' ಎಂದು ಹೇಳಿದ್ದಾರೆ.

ಕಿರುಕುಳ: ಎಬಿವಿಪಿ ಮಾಜಿ ಅಧ್ಯಕ್ಷ ಷಣ್ಮುಗಂ ಬಂಧನ

ಚೆನ್ನೈ: ಮಹಿಳೆಗೆ ಕಿರುಕುಳ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ (ಎಬಿವಿಪಿ) ಮಾಜಿ ಅಧ್ಯಕ್ಷ ಡಾ. ಸುಬ್ಬಯ್ಯ ಷಣ್ಮುಗಂ ಅವರನ್ನು ತಮಿಳುನಾಡಿನ ಆಡಂಬಕ್ಕಂ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಸಂತ್ರಸ್ತೆ ಮತ್ತು ಷಣ್ಮುಗಂ ಅವರು ನಂಗಾನಲ್ಲೂರಿನಲ್ಲಿ ಒಂದೇ ವಸತಿ ಸಮುಚ್ಚಯದಲ್ಲಿ ವಾಸವಾಗಿದ್ದು, ಪಾರ್ಕಿಂಗ್ ವಿಷಯಕ್ಕೆ ಸಂಬಂಧಿಸಿದಂತೆ ಅವರಿಬ್ಬರ ನಡುವೆ ವಾಗ್ವಾದ ನಡೆದಿತ್ತು ಎಂದು ದೂರಲಾಗಿತ್ತು.

2020ರ ಜುಲೈನಲ್ಲಿ ಕಿರುಕುಳದ ಬಗ್ಗೆ ಮಹಿಳೆಯ ಸಂಬಂಧಿಕರೊಬ್ಬರು ದೂರು ನೀಡಿದ್ದರು.

'ಷಣ್ಮುಗಂ ಅವರು ಮಹಿಳೆಯ ಮನೆ ಮುಂದೆ ಮಾಂಸ ಎಸೆಯುತ್ತಿದ್ದರು. ಅಲ್ಲದೇ, ಮೂತ್ರವಿಸರ್ಜನೆ ಮಾಡುತ್ತಿದ್ದರು. ಇವೆಲ್ಲವೂ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ' ಎಂದು ದೂರಿನಲ್ಲಿ ತಿಳಿಸಲಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಕೆ. ಅನಂತಮ್ಮ
W/o ಲೇಟ್ ಎನ್. ಎ. ಮುನಿರೆಡ್ಡಿ
ನಿಧನ: 10–03–2022
ಇವರು ದಿನಾಂಕ 10–03–2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ವೈಕುಂಠ ಸಮಾರಾಧನೆಯನ್ನು ದಿನಾಂಕ 20–03–2022 ರಂದು ನಂ. 19, ವೆಂಕಟೇಶ್ವರ ನಿಲಯ, ದೊಡ್ಡ ನೆಕ್ಕುಂದಿ ಮೈನ್ ರೋಡ್ ದೊಡ್ಡನೆಕ್ಕುಂದಿ, ಬೆಂಗಳೂರು–37 ಇಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು: ಎನ್. ಎಮ್. ಪದ್ಮಜ, ಎನ್. ಎಮ್. ಕವಿತ, ಎನ್. ಎಮ್. ರಶ್ಮಿ, ಮತ್ತು ಕುಟುಂಬದವರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook
ಸಸ್ಯಾಹಾರಿ ಅಡುಗೆ ಮಾಡಲು ಮಹಿಳೆ ಬೇಕಾಗಿದ್ದಾರೆ. ಸೂಕ್ತ ಸಂಬಳ ಜೊತೆಗೆ ಊಟ ಮತ್ತು ವಸತಿ ನೀಡಲಾಗುವುದು. ಸಂಪರ್ಕಿಸಿ: ಫೋನ್: 6360079117

Hotel
ಬೆಂಗಳೂರು ಪೀಣ್ಯ, ದಾಬಾಸಪೇಟೆ ಹಾಗೂ ಮೈಸೂರು ಇಂಡಸ್ಟ್ರಿಯಲ್ ಕ್ಯಾಂಟೀನಿಗೆಅಡುಗೆಯವರು (ದಕ್ಷಿಣ/ ಉತ್ತರ ಭಾರತ ಶೈಲಿ) ಅಡುಗೆ ಸಹಾಯಕರು, ರುಬ್ಬುವವರು, ತರಕಾರಿ ಹೆಚ್ಚುವವರು, ಕೌಂಟರ್‌ಬಾಯ್ಸ್ ಬೇಕಾಗಿದ್ದಾರೆ ಗಂಡಸರಿಗೆ ಮಾತ್ರ ಅವಕಾಶ. ESI, PF, ವಸತಿಸೌಕರ್ಯವಿದೆ. 9008962299, 9845074461, 9591810812, 9900141311

Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000/- ವರೆಗೆ ಸಂಪಾದಿಸಿ.(ಕೊರಿಯರ್ ಯಿದೆ). 8884686861, 8884686860.

Skilled Labour
WANTED Experienced Pest Control Operator For Hoskote Factory Ph:9446088913

Wanted
ಬೆಂಗಳೂರಿನ ಬಾಣಸವಾಡಿ ಮನೆಯಲ್ಲಿ ಅಡುಗೆ (ವೆಜ್ & ನಾನ್ ವೆಜ್) ಕೆಲಸ ಹಾಗೂ ಮನೆಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ವಯಸ್ಸು 30-40 ವರ್ಷ ಸಂಬಳ:10,000/- ಉಚಿತ ಊಟ + ವಸತಿ ಕೊಡಲಾಗುವುದು.ಸಂಪರ್ಕಿಸಿ: 9902817655.

ರಿಯಲ್ ಎಸ್ಟೇಟ್ ಸೆಲ್ಲಿಂಗ್
J P Nagar
2 BHK flat in JP Nagar 7th Phase, 60 Lakhs , Contact: 9449788764

Residential/ Commercial
Peenya
T. DASARAHALLI 1350 Sqft East Facing Earning 54000 rent Ramesh Road Malleswaram Tailoring Society land 1.08 Cr Contact 7760080110

Sites
Kengeri
VISHVESHWARAIAH 4th Block Bda 30x40ft West Facing Near Nice Road. Rate 65lakh. Brokers Excuse. 8105412983

ಬಿಲ್ಡರ್ ಎಸೆನ್ಶಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ
Business Offers
Franchise
PMS COMPANY is inviting Franchise Partner and Channel Partner for every Pincode in Bangalore And Karnataka for Real Estate Activity. For details Call 9342335589 or visit @ office M.G.Road Bangalore.

ವೈವಾಹಿಕ
Brides Wanted
Brahmin
BOY, 5'4', 35 Years, Good Looking, B.Com., working in Private Company and Social Worker, Madhawa Brahmin, Vasista Gothra. Contact: 9341702733

Grooms Wanted
Kannada
ವರ ಬೇಕಾಗಿದ್ದಾರೆ. ಹುಡುಗಿ ಪದವೀದರೆ, ವಯಸ್ಸು 24 ಆದಿ ಕರ್ನಾಟಕ ಐ. ಟಿ. ಕಂಪನಿಯಲ್ಲಿ ಕೆಲಸ. (ಕುಜದೋಷ) ಸಂಪರ್ಕಿಸಿ : 9994477753 purandaran@gmail.com

ಭವಿಷ್ಯ
Astrology
★ನಂ.1 ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್* ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ ಪಂಡಿತ್.ದೇವೇಂದ್ರಭಟ್‌ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845333808

★॥ವಶೀಕರಣ ಸ್ಪೆಷಲಿಸ್ಟ್॥★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

ಪಂಡಿತ್ ಕಾಳಿ ಪ್ರಸಾದ್ ಕೊಳ್ಳೇಗಾಲದ ಪ್ರಖ್ಯಾತ ಜ್ಯೋತಿಷ್ಯರು ಕೊಳ್ಳೇಗಾಲಕ್ಕೆ ಬಂದು ನೇರ ಭೇಟಿಗೆ ಸದಾ ಅವಕಾಶ ನಿಮ್ಮ ಸರ್ವ ಸಮಸ್ಯೆಗೆ ಪರಿಹಾರ ಮಾಟ ಮಂತ್ರ ಸ್ತ್ರೀ ಪುರುಷ ಗುಪ್ತ ಸಮಸ್ಯೆ ಶತ್ರು ಕಾಟ ವಿವಾಹ ವಿಳಂಬಕ್ಕೆ ಕಚಿತ ಪರಿಹಾರ ಸರ್ವ ವಶೀಕರಣ ಸ್ಪೆಷಲಿಸ್ಟ್. 7338244377

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

॥ಉಚಿತ ಭವಿಷ್ಯ॥: *ವಶೀಕರಣ ಸ್ಪೆಷಲಿಸ್ಟ್* ಯಾವುದೇ ಕಠಿಣ ಸಮಸ್ಯೆಗಳಿಗೆ 20 ನಿಮಿಷಗಳಲ್ಲಿ 100% ಪರಿಹಾರ. ಪಂಡಿತ್. ಪವನ್‌ಭಟ್. 8095569819

EDUCATION CORNER
ಸ್ಪರ್ಧಾಮಿತ್ರ Academy
IAS / KAS Prelims & Mains Exams
PSI 1st & 2nd Paper
ಬೆಂಗಳೂರು & ಕಲಬುರ್ಗಿ
Near Attiguppe Metro Station, Opp. Maruthi Medicals, Vijayanagar, Blore-40
9535111133 / 9535111199

ಪ್ರವಾಸ
Travel
★ಶ್ರೇಯಸ್ ಟೂರ್ಸ್★ ವಿ.ವಿ.ಪುರಂ:08.05.2022 14.05.2022 7/12/15/24ದಿನಗಳು ಈಶಾನ್ಯ ಭಾರತ(ಸೆವೆನ್‌ಸಿಸ್ಟರ್ಸ್) ರಾಜ್ಯಗಳ ಪ್ರವಾಸ ಅಸ್ಸಾಂ, ಅರುಣಾಚಲ,ಮೇಘಾಲಯ, ಮಣಿಪುರ,ತ್ರಿಪುರ,ನಾಗಲ್ಯಾಂಡ್, ಮಿಝೋರಾಂ.8073824856/ 9743351212/ 9206979202/ 6366322639

28.04.2022, 8ದಿನಗಳು ವಾರಣಾಸಿ, ಗಯಾ,ಬುದ್ಧಗಯಾ, ಕಲ್ಕತ್ತಾ,ಭುವನೇಶ್ವರ್, ಪೂರಿಜಗನ್ನಾಥ್ ಮತ್ತು ಚಾರ್ ಧಾಮ್‌ಯಾತ್ರೆ. ಆಗಸ್ಟ್‌ನಲ್ಲಿ 12ದಿನಗಳು ಗಂಗೋತ್ರಿ, ಯಮುನೋತ್ರಿ. ಕೇದಾರನಾಥ್, ಬದರಿನಾಥ್. ಸಂಪರ್ಕಿಸಿ: ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ, ಬೆಂಗಳೂರು-03. 9448294477

★17.04.2022 10ದಿನಗಳು★ ಆಗ್ರಾ, ಮಥುರಾ, ಅಲಹಾಬಾದ್, ಗಯಾ,ಕಾಶಿ,ಸೀತಾಮಡಿ, ವಿಂದ್ಯಾಚಲಂ ಪ್ರವಾಸ. ರೂ.13,500 ಒಬ್ಬರಿಗೆ. ಆರ್.ಗಾಂಧಿ ಟೂರ್ಸ್. 9945445809/ 9902433500

19.4.2022 ಕಾಶಿ, ಗಯ, ದೆಹಲಿ 13ದಿನಗಳು. 24.5.2022 ಡಾರ್ಜಿಲಿಂಗ್, ಗ್ಯಾಂಗ್ಟಕ್, ಕಲ್ಕತ್ತಾ, ಭುವನೇಶ್ವರ 12ದಿನಗಳು. 20.6.2022 ಚಾರ್ ಧಾಮ್ ಯಾತ್ರೆ. ನಂದಿನಿ ಟೂರಿಸ್ಟ್.9916574089.

★ಶ್ರೇಯಸ್ ಟೂರ್ಸ್★ ವಿ.ವಿ. ಪುರಂ:12.04.2022 6ದಿನಗಳು ಕಾಶಿ,ಗಯಾ,ಅಯೋಧ್ಯಾ,ಪ್ರಯಾಗ್‌ರಾಜ್,ವಿಂಧ್ಯಾವಾಸಿನಿ, ಸೀತಾಮಡು.,09.04.2022, 19.05.2022 11ದಿನಗಳು ನೈಮಿಷ್ಯಾರಣ್ಯ,ಅಯೋಧ್ಯಾ, ಅಲಹಾಬಾದ್,ಚಿತ್ರಕೂಟ, ವಿಂಧ್ಯಾವಾಸಿನಿ,ಕಾಶಿ,ಗಯಾ, ನಳಂದ,ದೇವಘರ್.,20.04.22 10ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ (ಡಿಯು,ನಿಷ್ಕಳಂಕ,ಸರ್ದಾರ್ ಪ್ರತಿಮೆ).,02.05.2022 10ದಿನಗಳು ಅಖಂಡ ನೇಪಾಳ ರಾಷ್ಟ್ರ ಪ್ರವಾಸ(ಎಲ್ಲಾ ವಿಮಾನದಲ್ಲಿ).,02.05.2022 12ದಿನಗಳು ಚಂದೀಗರ್,ಸಿಮ್ಲಾ, ಕುಲುಮನಾಲಿ,5ದೆಯುರು, ಡಾಲ್‌ಹೌಸಿ,ವೈಷ್ಣೋದೇವಿ, ಅಮೃತಸರ್,ವಾಘಗಡಿ, ಕುರುಕ್ಷೇತ್ರ.,9743351212/ 8073824856/ 9206979202/ 6366322639

ಸಮಾಜಸೇವೆ
Old Age Home
ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

	Ordinary	Bold	Ordinary Semi Display	Bold Semi Display
Per word	60	85	70	115

	Single Col	Double Col	Multi Col
CD Per Sqcm	430	450	475

SPECIAL OFFER				
PAY 2	And	GET	1	Free
PAY 3	And	GET	2	Free
PAY 5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಬಹರೇನ್ ಗ್ರ್ಯಾನ್ ಪ್ರಿ ರೋಮಾಂಚನ

ರೇಸ್ ನಡೆಯಲಿರುವ ಸಾಖಿರ್ ಸರ್ಕೀಟ್

ಎಫ್ ಒನ್ ವಾಹನಗಳ ಚಾಲನಾ ಸಾಮರ್ಥ್ಯವನ್ನು ಒರೆಗೆ ಹಚ್ಚುವ ಬಹರೇನ್ ಗ್ರ್ಯಾನ್ ಪ್ರಿಗೆ ವೇದಿಕೆ ಸಜ್ಜುಗೊಂಡಿದೆ. ಗಲ್ಫ್ ಏರ್‌ವೇಸ್‌ನ ವೈಮಾನಿಕ ಪ್ರದರ್ಶನದ ಮೆರುಗಿನೊಂದಿಗೆ ಭಾನುವಾರ ನಡೆಯಲಿರುವ ರೇಸ್‌ನಲ್ಲಿ ಅಮೆರಿಕದ ಲ್ಯೂಯಿಸ್ ಹ್ಯಾಮಿಲ್ಟನ್ ಮತ್ತು ನೆದರ್ಲೆಂಡ್ಸ್‌ನ ಮ್ಯಾಕ್ಸ್ ವರ್ಸ್ಟಾಪನ್ ಕುತೂಹಲದ ಕೇಂದ್ರವಾಗಿದ್ದಾರೆ.

ಪಾಲ್ಗೊಳ್ಳುವ ಪ್ರಮುಖ ಚಾಲಕರು

ಚಾಲಕ	ತಂಡ	ಸಹಚಾಲಕ
ಲ್ಯೂಯಿಸ್ ಹ್ಯಾಮಿಲ್ಟನ್	ಮರ್ಸಿಡಿಸ್	ಜಾರ್ಜ್ ರೆಸಲ್
ಮ್ಯಾಕ್ಸ್ ವರ್ಸ್ಟಾಪನ್	ರೆಡ್ ಬುಲ್	ಸರ್ಜಿಯೊ ಪೆರೆಜ್
ವಾಲ್ಟೆರಿ ಬೊತಾಸ್	ಅಲ್ಫಾ ರೊಮಿಯೊ	ಜೊಗುವಾನ್ಯು
ಕೆವಿನ್ ಮ್ಯಾಗ್ನಸೆನ್	ಹಾಸ್	ಮಿಕ್ ಶುಮಾಕರ್
ಎಸ್ತೆಬನ್ ಒಕಾನ್	ಆಲ್ಪೈನ್	ಫರ್ನಾಂಡೊ ಅಲೊನ್ಸೊ
ಲ್ಯಾಂಡೊ ನೊರಿಸ್	ಮೆಕ್‌ಲಾರೆನ್	ಡ್ಯಾನಿಯಲ್ ರಿಕ್ಯಾರ್ಡೊ

ಹಿಂದಿನ ಐದು ಆವೃತ್ತಿಗಳ ವಿಜೇತರ ವಿವರ

ವರ್ಷ	ಚಾಂಪಿಯನ್	ಕಂಪನಿ	ಲ್ಯಾಪ್‌ಗಳು	ಅವಧಿ
2021	ಲ್ಯೂಯಿಸ್ ಹ್ಯಾಮಿಲ್ಟನ್	ಮರ್ಸಿಡಿಸ್	56	1:32:03.897
2020	ಲ್ಯೂಯಿಸ್ ಹ್ಯಾಮಿಲ್ಟನ್	ಮರ್ಸಿಡಿಸ್	57	2:59:47.515
2019	ಲ್ಯೂಯಿಸ್ ಹ್ಯಾಮಿಲ್ಟನ್	ಮರ್ಸಿಡಿಸ್	57	1:34:21.295
2018	ಸೆಬಾಸ್ಟಿಯನ್ ವೆಟಲ್	ಫೆರಾರಿ	57	1:32:01.940
2017	ಸೆಬಾಸ್ಟಿಯನ್ ವೆಟಲ್	ಫೆರಾರಿ	57	1:33:53.374

ಮ್ಯಾಕ್ಸ್ ವರ್ಸ್ಟಾಪನ್ ಲ್ಯೂಯಿಸ್ ಹ್ಯಾಮಿಲ್ಟನ್ –ಎಎಫ್‌ಪಿ ಚಿತ್ರಗಳು

ಸ್ಥಳ	ಲ್ಯಾಪ್‌ಗಳು	ಅಂತರ
ಬಹರೇನ್ ಅಂತರರಾಷ್ಟ್ರೀಯ ಸರ್ಕೀಟ್, ಸಾಖಿರ್	57	5.412 ಕಿ.ಮೀ

ಆರಂಭ (ಮುಖ್ಯ ರೇಸ್): ರಾತ್ರಿ 8.30 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್; ಡಿಸ್ನಿ ಹಾಟ್‌ಸ್ಟಾರ್

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್: ಫೈನಲ್ ತಲುಪಿದ ಭಾರತದ ಮೂರನೇ ಆಟಗಾರ

ಪ್ರಶಸ್ತಿ ಸುತ್ತಿಗೆ ಲಕ್ಷ್ಯ ಸೇನ್ ಲಗ್ಗೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಚಿಗುರುಮೀಸೆಯ ತರುಣ ಲಕ್ಷ್ಯ ಸೇನ್ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಪುರುಷರ ಸಿಂಗಲ್ಸ್ ಫೈನಲ್‌ಗೆ ಲಗ್ಗೆ ಇಟ್ಟರು.

ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಭಾರತದ ಲಕ್ಷ್ಯ 21–13, 12–21, 21–19 ರಿಂದ ಹಾಲಿ ಚಾಂಪಿಯನ್, ಮಲೇಷ್ಯಾದ ಲೀ ಜೀ ಜಿಯಾ ಅವರಿಗೆ ಆಘಾತ ನೀಡಿದರು. ಪ್ರಕಾಶ್ ಪಡುಕೋಣೆ ಮತ್ತು ಪುಲ್ಲೇಲಾ ಗೋಪಿಚಂದ್ ನಂತರ ಈ ಪ್ರತಿಷ್ಠಿತ ಟೂರ್ನಿಯ ಪ್ರಶಸ್ತಿ ಸುತ್ತಿಗೆ ಸಾಗಿದ ಆಟಗಾರನೆಂಬ ಹೆಗ್ಗಳಿಕೆ ಲಕ್ಷ್ಯಗೆ ಸಂದಿದೆ.

ಪ್ರಕಾಶ್ ಮತ್ತು ಗೋಪಿಚಂದ್ ಅವರು ಚಾಂಪಿಯನ್ ಆಗಿದ್ದರು.

ಸೆಮಿಫೈನಲ್‌ನಲ್ಲಿ ಭಾರತದ ಲಕ್ಷ್ಯ ಸೇನ್ ಆಟದ ಸೊಗಸು –ಎಎಫ್‌ಪಿ ಚಿತ್ರ

2015ರಲ್ಲಿ ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಸೈನಾ ನೆಹ್ವಾಲ್ ಫೈನಲ್ ತಲುಪಿದ್ದರು. ಲಕ್ಷ್ಯ ಕಳೆದ ಆರು ತಿಂಗಳುಗಳಲ್ಲಿ ಒಂದರ ಹಿಂದೊಂದು ಮಹತ್ವದ ಸಾಧನೆಗಳನ್ನು ಮಾಡಿದ್ದಾರೆ. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ, ಸೂಪರ್ 500 ಟೂರ್ನಿಯಲ್ಲಿ ಪ್ರಶಸ್ತಿ ಮತ್ತು ಹೋದ ವಾರವಷ್ಟೇ ಜರ್ಮನ್ ಓಪನ್ ಟೂರ್ನಿಯಲ್ಲಿ ರನ್ನರ್ ಅಪ್ ಪ್ರಶಸ್ತಿ ಪಡೆದಿದ್ದರು.

ಬೆಂಗಳೂರಿನ ಪ್ರಕಾಶ್ ಪಡುಕೋಣೆ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ ಲಕ್ಷ್ಯ, ತಮಗಿಂತಲೂ ಅನುಭವಿ ಎದುರಾಳಿಯನ್ನು ಚುರುಕಿನ ಆಟದಿಂದ ಮಣಿಸಿದರು.

ಮೊದಲ ಗೇಮ್‌ನಲ್ಲಿಯೇ ತಮ್ಮ ಕೌಶಲ ಮೆರೆದ ಲಕ್ಷ್ಯ ಎಂಟು ಅಂಕಗಳ ಅಂತರದಿಂದ ಜಯಿಸಿದರು. ಆದರೆ, ಎರಡನೇ ಗೇಮ್‌ನಲ್ಲಿ ಮಲೇಷ್ಯಾದ ಆಟಗಾರ ಭರ್ಜರಿ ತಿರುಗೇಟು ನೀಡಿದರು. ಒಂಬತ್ತು ಅಂಕಗಳ ಅಂತರದಿಂದ ಈ ಗೇಮ್‌ನಲ್ಲಿ ಸೋಲನುಭವಿಸಿದರೂ ಲಕ್ಷ್ಯ ವಿಚಲಿತರಾಗಲಿಲ್ಲ. ಕೊನೆಯ ಮತ್ತು ನಿರ್ಣಾಯಕ ಗೇಮ್‌ನಲ್ಲಿ ತಮ್ಮ ಶ್ರೇಷ್ಠ ಸಾಮರ್ಥ್ಯವನ್ನು ಮೆರೆದರು.

ಮಲೇಷ್ಯಾ ಆಟಗಾರ ಕಠಿಣ ಪೈಪೋಟಿಯನ್ನು ಮೀರಿ ನಿಂತರು. ರಭಸದ ಸ್ಮ್ಯಾಷ್‌ಗಳಿಂದ ಗಮನ ಸೆಳೆದ ಲಕ್ಷ್ಯ, ಬೇಸ್‌ಲೈನ್ ಗೇಮ್‌ನಲ್ಲಿಯೂ ಮೇಲುಗೈ ಸಾಧಿಸಿದರು. ರೋಚಕ ಹಣಾಹಣಿಯಲ್ಲಿ ಕೇವಲ ಮೂರು ಪಾಯಿಂಟ್‌ಗಳ ಅಂತರದಿಂದ ಗೇಮ್ ಗೆದ್ದರು. ಭಾನುವಾರ ಫೈನಲ್ ಪಂದ್ಯಗಳು ನಡೆಯಲಿವೆ. ಭಾರತೀಯ ಕಾಲಮಾನದ ಪ್ರಕಾರ ಮಧ್ಯಾಹ್ನ 3.30ರಿಂದ ಆರಂಭವಾಗಲಿವೆ.

ಪ್ರಶಸ್ತಿ ಗೆಲ್ಲುವ ಸಾಮರ್ಥ್ಯ ಕಿಂಗ್ಸ್‌ಗೆ ಇದೆ: ಮಯಂಕ್

ನವದೆಹಲಿ (ಪಿಟಿಐ): 'ನಮ್ಮ ತಂಡಕ್ಕೆ ಪ್ರಶಸ್ತಿ ಗೆಲ್ಲುವ ಸಾಮರ್ಥ್ಯ ಇದೆ. ಆದರೆ ಬಳಗದಲ್ಲಿರುವ ನಾವೆಲ್ಲರೂ ಸಂಪೂರ್ಣ ಸಾಮರ್ಥ್ಯವನ್ನು ವಿನಿಯೋಗಿಸಿದಾಗ ಮಾತ್ರ ಅದು ಸಾಧ್ಯವಾಗುತ್ತದೆ' ಎಂದು ಪಂಜಾಬ್ ಕಿಂಗ್ಸ್ ತಂಡದ ನಾಯಕ ಮಯಂಕ್ ಅಗರವಾಲ್ ಅಭಿಪ್ರಾಯಪಟ್ಟಿದ್ದಾರೆ.

ನಾಲ್ಕು ವರ್ಷಗಳಿಂದ ಪಂಜಾಬ್ ತಂಡದಲ್ಲಿರುವ ಮಯಂಕ್ ಈ ಬಾರಿ ಪೂರ್ಣಾವಧಿ ನಾಯಕತ್ವ ವಹಿಸಿಕೊಂಡಿದ್ದಾರೆ. ಈ ಮೊದಲು ಪಂಜಾಬ್ ತಂಡದ ನಾಯಕರಾಗಿದ್ದ ಕೆ.ಎಲ್. ರಾಹುಲ್ ಲಖನೌ ತಂಡ ಸೇರಿದ್ದಾರೆ. ಅದರಿಂದಾಗಿ ಮಯಂಕ್ ಅವರಿಗೆ ನಾಯಕತ್ವದ ಹೊಣೆ ಬಿದ್ದಿದೆ.

ಐಪಿಎಲ್‌ನಲ್ಲಿ ಕಳೆದ ಎರಡು ವರ್ಷ ಒಟ್ಟು 400 ರನ್‌ಗಳನ್ನು ಮಯಂಕ್ ಗಳಿಸಿದ್ದಾರೆ. ಅವರು ಮತ್ತು ರಾಹುಲ್ ಪಂಜಾಬ್ ತಂಡದ ಇನಿಂಗ್ಸ್ ಆರಂಭಿಸುತ್ತಿದ್ದರು. ಈ ಬಾರಿ ಅನುಭವಿ ಶಿಖರ್ ಧವನ್ ಅವರೊಂದಿಗೆ ಮಯಂಕ್ ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತವಾಗಿದೆ. ತಂಡದಲ್ಲಿ ದಕ್ಷಿಣ ಆಫ್ರಿಕಾದ ವೇಗಿ ಕಗಿಸೊ ರಬಾಡ, ಲಿಯಾಮ್ ಲಿವಿಂಗ್‌ಸ್ಟೋನ್, ಜಾನಿ

ಮಯಂಕ್ ಅಗರವಾಲ್

ಬೆಸ್ಟೊ ಮತ್ತು ಒಡೇನ್ ಸ್ಮಿತ್ ಇದ್ದಾರೆ. ತಮಿಳುನಾಡಿನ ಬ್ಯಾಟರ್ ಶಾರೂಕ್ ಖಾನ್ ಕೂಡ ಸ್ಥಾನ ಪಡೆದಿದ್ದಾರೆ.

'ಹರಾಜು ಪ್ರಕ್ರಿಯೆಯಲ್ಲಿ ಉತ್ತಮ ತಂಡವನ್ನು ಕಟ್ಟುವ ಕೆಲಸ ಯಶಸ್ವಿಯಾಗಿ ನಡೆದಿದೆ. ಮುಂಬೈನ ವಾತಾವರಣದಲ್ಲಿ ಆಡಲು ಬೇಕಾದ ಮಹತ್ವದ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದೇವೆ. ಶಿಖರ್ ಅವರಂತಹ ಅನುಭವಿ ಮತ್ತು ಪ್ರತಿಭಾನ್ವಿತ ಬ್ಯಾಟರ್ ಇರುವುದು ತಂಡದ ಬಲ ಹೆಚ್ಚಿಸಿದೆ. ಅತ್ಯಂತ ಚುರುಕಿನ ಆಟಗಾರ, ಅಭಿಮಾನಿಗಳನ್ನು ತಮ್ಮ ಆಟದ ಮೂಲಕ ಮನರಂಜಿಸುವ ಆಟಗಾರ. ಅವರಿಂದಾಗಿ ತಂಡದಲ್ಲಿಯೂ ಲವಲವಿಕೆಯ ವಾತಾವರಣ ನೆಲೆ ಮಾಡಿದೆ' ಎಂದು ಮಯಂಕ್ ಹೇಳಿದರು.

ಆಗಸ್ಟ್ 27ರಿಂದ ಏಷ್ಯಾ ಕಪ್ ಕ್ರಿಕೆಟ್

ಕೊಲಂಬೊ (ಪಿಟಿಐ): ಶ್ರೀಲಂಕಾದಲ್ಲಿ ಆಗಸ್ಟ್ 27ರಿಂದ ಸೆಪ್ಟೆಂಬರ್ 11ರವರೆಗೆ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿ ನಡೆಯಲಿದೆ.

ಏಷ್ಯಾ ಖಂಡದ ಐದು ತಂಡಗಳಾದ ಭಾರತ, ಪಾಕಿಸ್ತಾನ, ಅಫ್ಗಾನಿಸ್ತಾನ, ಬಾಂಗ್ಲಾದೇಶ ಮತ್ತು ಶ್ರೀಲಂಕಾ ಸ್ಪರ್ಧಿಸಲಿವೆ. ಆಗಸ್ಟ್ 20ರಂದು ಕ್ವಾಲಿಫೈಯರ್ ಸುತ್ತು ಮುಗಿಯಲಿದೆ. ಅದರಲ್ಲಿ ಅಗ್ರಸ್ಥಾನ ಪಡೆದ ತಂಡವು ಟೂರ್ನಿಯ ಮುಖ್ಯ ಸುತ್ತಿಗೆ ಪ್ರವೇಶಿಸಲಿದೆ. ಅರ್ಹತಾ ಸುತ್ತಿನಲ್ಲಿ ಯುಎಇ, ಕುವೈತ್, ಸಿಂಗಪುರ ಮತ್ತು ಹಾಂಕಾಂಗ್ ಸ್ಪರ್ಧಿಸುತ್ತಿವೆ.

ಶನಿವಾರ ನಡೆದ ಎಸಿಸಿ ವಾರ್ಷಿಕ ಮಹಾಸಭೆಯಲ್ಲಿ ಈ ಕುರಿತು ಒಮ್ಮತದ ನಿರ್ಣಯ ಕೈಗೊಳ್ಳಲಾಯಿತು.

ಜಯ್ ಶಾ ಮುಂದುವರಿಕೆ: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ಜಯ್ ಶಾ ಅವರನ್ನು ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಸಲಾಗಿದೆ. 2021ರ ಜನವರಿಯಲ್ಲಿ ಅವರು ಅಧಿಕಾರ ಸ್ವೀಕರಿಸಿದ್ದರು.

'ಕೋವಿಡ್ ಭಯ ಇನ್ನೂ ಇದೆ. ಅದರಲ್ಲಿಯೇ ಏಷ್ಯಾಮಟ್ಟದ ಕ್ರಿಕೆಟ್ ಅಭಿವೃದ್ಧಿಗೆ ಬಹಳಷ್ಟು ಯೋಜನೆಗಳನ್ನು ಹಾಕಿಕೊಳ್ಳಲಾಗುವುದು' ಎಂದು ಶಾ ಭರವಸೆ ನೀಡಿದರು.

ಮೆಗ್ ಲ್ಯಾನಿಂಗ್ ಆಟಕ್ಕೆ ಒಲಿದ ಜಯ

ಮಹಿಳಾ ವಿಶ್ವಕಪ್: ಸೆಮಿಫೈನಲ್‌ಗೆ ಆಸ್ಟ್ರೇಲಿಯಾ; ಮಿಥಾಲಿರಾಜ್ ಅರ್ಧಶತಕ

ಆಕ್ಲೆಂಡ್ (ಪಿಟಿಐ): ಮಿಥಾಲಿ ರಾಜ್ ನಾಯಕತ್ವದ ಭಾರತ ತಂಡವು ಶನಿವಾರ ಆಸ್ಟ್ರೇಲಿಯಾ ಎದುರು ಬ್ಯಾಟಿಂಗ್‌ನಲ್ಲಿ ಮಿಂಚಿತು. ಆದರೆ, ಬೌಲಿಂಗ್‌ನಲ್ಲಿ ಮಂಕಾಯಿತು.

ಇದರಿಂದಾಗಿ 6 ವಿಕೆಟ್‌ಗಳಿಂದ ಗೆದ್ದ ಆಸ್ಟ್ರೇಲಿಯಾ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತು.

ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ ತಂಡದ ಆರಂಭಿಕ ಜೋಡಿ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ವೈಫಲ್ಯ ಅನುಭವಿಸಿದರು. ಆದರೆ, ಮಧ್ಯಮ ಕ್ರಮಾಂಕದಲ್ಲಿ ಯಷ್ಟಿಕಾ ಭಾಟಿಯಾ (59; 83ಎ), ಮಿಥಾಲಿ ರಾಜ್ (68; 96ಎ) ಮತ್ತು ಹರ್ಮನ್‌ಪ್ರೀತ್ ಕೌರ್ (ಔಟಾಗದೆ 57) ಅರ್ಧಶತಕ ಗಳಿಸಿದರು.

ಅದರಿಂದಾಗಿ 50 ಓವರ್‌ಗಳಲ್ಲಿ 7ಕ್ಕೆ277 ರನ್‌ಗಳ ಹೋರಾಟದ ಮೊತ್ತ ಗಳಿಸಿತು.

ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ತಂಡವು ನಾಯಕಿ ಮೆಗ್ ಲ್ಯಾನಿಂಗ್ (97; 107ಎ) ಮತ್ತು ಅಲೀಸಾ

ಮಿಥಾಲಿ ರಾಜ್ –ಎಎಫ್‌ಪಿ ಚಿತ್ರ

ಹೀಲಿ (72; 65ಎ) ಅವರ ಸುಂದರ ಬ್ಯಾಟಿಂಗ್ ಬಲದಿಂದ 49.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 280 ರನ್ ಗಳಿಸಿತು.

ಟೂರ್ನಿಯಲ್ಲಿ ಆಸ್ಟ್ರೇಲಿಯಾ ತಂಡವು ಸತತ ಐದನೇ ಜಯ ಸಾಧಿಸಿತು. ತಮ್ಮ ವೃತ್ತಿಜೀವನದ 200ನೇ ಏಕದಿನ ಪಂದ್ಯವಾಡಿದ ಜೂಲನ್ ಗೋಸ್ವಾಮಿ ಒಂದೂ ವಿಕೆಟ್ ಪಡೆಯಲಿಲ್ಲ. ಅಲ್ಲದೇ ದುಬಾರಿಯೂ ಆದರು. ಮೇಘನಾ ಸಿಂಗ್ ಒಂದು ವಿಕೆಟ್ ಗಳಿಸಿದರೂ ಹೆಚ್ಚು ರನ್ ಬಿಟ್ಟುಕೊಟ್ಟ ಬೌಲರ್ ಆದರು.

ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ್ ಅವರು ಪರಿಣಾಮಕಾರಿಯಾಗಲಿಲ್ಲ. ಪೂಜಾ (43ಕ್ಕೆ2) ಅವರ ಪ್ರಯತ್ನಕ್ಕೆ ಜಯ ಒಲಿಯಲಿಲ್ಲ.

ಇದರಿಂದಾಗಿ ಮಿಥಾಲಿ ಬಳಗವು ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕಿಳಿಯಿತು. ಉಳಿದಿರುವ ಇನ್ನೆರಡು ಪಂದ್ಯಗಳಲ್ಲಿ ಬಾಂಗ್ಲಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳನ್ನು ಭಾರತವು ಎದುರಿಸಲಿದೆ. ಎರಡರಲ್ಲೂ ಗೆದ್ದರೆ ಅಗ್ರ ನಾಲ್ಕರಲ್ಲಿ ಸ್ಥಾನ ಗಟ್ಟಿ ಮಾಡಿಕೊಳ್ಳಬಹುದು.

ಸ್ಕೋರ್ ಕಾರ್ಡ್

ಭಾರತ 7ಕ್ಕೆ277 (50 ಓವರ್)
ಸ್ಮೃತಿ ಸಿ ಲ್ಯಾನಿಂಗ್ ಬಿ ಬ್ರೌನ್ 10 (11ಎ, 4X1), ಶಫಾಲಿ ಸಿ ಮೂನಿ ಬಿ ಬ್ರೌನ್ 12 (16ಎ, 4X1, 6X1), ಯಷ್ಟಿಕಾ ಸಿ ಪೆರಿ ಬಿ ಬ್ರೌನ್ 59 (83ಎ, 4X6), ಮಿಥಾಲಿ ಸಿ ಪೆರಿ ಬಿ ಅಲಾನಾ 68 (96ಎ, 4X4, 6X1), ಹರ್ಮನ್‌ಪ್ರೀತ್ ಔಟಾಗದೆ 57 (47ಎ, 4X6), ರಿಚಾ ಸ್ಟಂಪ್ಡ್ ಹೀಲಿ ಬಿ ಅಲಾನಾ 8 (14ಎ), ಸ್ನೇಹಾ ಬಿ ಜಾನ್ಸೆನ್ 0 (5ಎ), ಪೂಜಾ ರನ್‌ಔಟ್ (ಜಾನ್ಸೆನ್) 34 (28ಎ, 4X1, 6X2)
ಇತರೆ (ಬೈ 2, ಲೆಗ್‌ಬೈ 3, ವೈಡ್ 24) 29
ವಿಕೆಟ್ ಪತನ: 1–11 (ಸ್ಮೃತಿ ಮಂದಾನ;3.1), 2–28 (ಶಫಾಲಿ ವರ್ಮಾ;5.6), 3–158 (ಯಷ್ಟಿಕಾ ಭಾಟಿಯಾ; 31.4), 4–186 (ಮಿಥಾಲಿ ರಾಜ್; 37.3), 5–212 (ರಿಚಾ ಘೋಷ್; 41.1), 6–213 (ಸ್ನೇಹಾ ರಾಣಾ; 42.1), 7–277 (ಪೂಜಾ ವಸ್ತ್ರಕರ್; 49.6)
ಬೌಲಿಂಗ್: ಮೇಘನ್ ಶೂಟ್ 10–0–57–0, ಡಾರ್ಸಿ ಬ್ರೌನ್ 8–0–30–3, ಜೆಸ್ ಜಾನ್ಸೆನ್ 7–0–40–1, ಎಲ್ಲೈಸಾ ಪೆರಿ 3–0–24–0, ಆ್ಯಶ್ಲಿ ಗಾರ್ಡನರ್ 6–1–34–0, ತಹಲಿಯಾ ಮೆಕ್‌ಗ್ರಾ 6–0–35–0, ಅಲಾನಾ ಕಿಂಗ್ 10–1–52–2

ಆಸ್ಟ್ರೇಲಿಯಾ 4ಕ್ಕೆ280 (49.3 ಓವರ್)
ರಚೆಲ್ ಸಿ ರಿಚಾ ಬಿ ಪೂಜಾ 43 (53ಎ, 4X5), ಅಲೀಸಾ ಸಿ ಮಿಥಾಲಿ ಬಿ ಸ್ನೇಹಾ 72 (65ಎ, 4X9), ಲ್ಯಾನಿಂಗ್ ಸಿ ಪೂಜಾ ಬಿ ಮೇಘನಾ 97 (107ಎ, 4X13), ಎಲ್ಲೈಸಾ ಸಿ ಮಿಥಾಲಿ ಬಿ ಪೂಜಾ 28 (51ಎ, 4X1), ಮೂನಿ ಔಟಾಗದೆ 30 (20ಎ, 4X4), ತಹಿಲಾ ಔಟಾಗದೆ 0 (2ಎ)
ಇತರೆ (ಲೆಗ್‌ಬೈ1, ವೈಡ್ 9) 10
ವಿಕೆಟ್ ಪತನ: 1–121 (ಅಲೀಸಾ ಹೀಲಿ; 19.2), 2–123 (ರಚೆಲ್ ಹೇನ್ಸ್; 20.6), 3–336 (ಎಲ್ಲೈಸಾ ಪೆರಿ; 41.3), 4–270 (ಮೆಗ್ ಲ್ಯಾನಿಂಗ್; 48.4)
ಬೌಲಿಂಗ್: ಜೂಲನ್ ಗೋಸ್ವಾಮಿ 9.3–0–64–0, ಮೇಘನಾ ಸಿಂಗ್ 10–0–68–1, ರಾಜೇಶ್ವರಿ ಗಾಯಕವಾಡ್ 10–0–48–0, ಪೂಜಾ ವಸ್ತ್ರಕರ್ 10–0–43–2, ಸ್ನೇಹಾ ರಾಣಾ 10–0–56–1.

ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 6 ವಿಕೆಟ್‌ಗಳ ಜಯ.

ಅತಿ ಹೆಚ್ಚು ಏಕದಿನ ಕ್ರಿಕೆಟ್ ಪಂದ್ಯ ಆಡಿದ ಮಹಿಳೆಯರು

ಆಟಗಾರ್ತಿ	ಅವಧಿ	ದೇಶ	ಪಂದ್ಯ
ಮಿಥಾಲಿ ರಾಜ್	1999-2022	ಭಾರತ	230
ಜೂಲನ್ ಗೋಸ್ವಾಮಿ	2002-2022	ಭಾರತ	200
ಚಾರ್ಲೊಟ್ ಎಡ್ವರ್ಡ್	1997-2016	ಇಂಗ್ಲೆಂಡ್	191
ಮಿಗ್ನಾನ್ ಡುಪ್ರೀಜ್	2007-2022	ದ.ಆಫ್ರಿಕಾ	150

ಕ್ರಿಕೆಟ್: ಇತಿಹಾಸ ಬರೆದ ಬಾಂಗ್ಲಾ

ಸೆಂಚುರಿಯನ್ (ಪಿಟಿಐ): ಬಾಂಗ್ಲಾದೇಶ ಕ್ರಿಕೆಟ್ ತಂಡವು ದಕ್ಷಿಣ ಆಫ್ರಿಕಾ ತಂಡವನ್ನು ಅದರ ನೆಲದಲ್ಲಿಯೇ ಮೊದಲ ಬಾರಿ ಏಕದಿನ ಕ್ರಿಕೆಟ್‌ನಲ್ಲಿ ಸೋಲಿಸಿ, ಇತಿಹಾಸ ರಚಿಸಿತು.

ದಕ್ಷಿಣ ಆಫ್ರಿಕಾ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಲಿಟನ್ ದಾಸ್, ಶಕೀಬ್ ಅಲ್ ಹಸನ್ ಮತ್ತು ಯಾಸೀರ್ ಅಲಿ ಅವರ ಅರ್ಧಶತಕಗಳ ಬಲದಿಂದ ಬಾಂಗ್ಲಾ ತಂಡವು 50 ಓವರ್‌ಗಳಲ್ಲಿ 7ಕ್ಕೆ 314 ರನ್ ಗಳಿಸಿತು. ತಂಡವು ದಕ್ಷಿಣ ಆಫ್ರಿಕಾದಲ್ಲಿ ಪೇರಿಸಿದ ಗರಿಷ್ಠ ಮೊತ್ತ ಇದಾಗಿದೆ.

ಈ ಕಠಿಣ ಗುರಿಯನ್ನು ಬೆನ್ನತ್ತಿದ್ದ ಆತಿಥೇಯ ತಂಡಕ್ಕೆ ಬೌಲರ್‌ಗಳಾದ ಮೆಹದಿ ಹಸನ್ (61ಕ್ಕೆ4) ಮತ್ತು ತಸ್ಕಿನ್ ಅಹಮದ್ (36ಕ್ಕೆ3) ತಡೆಯೊಡ್ಡಿದರು. ದಕ್ಷಿಣ ಆಫ್ರಿಕಾ ತಂಡವು 48.5 ಓವರ್‌ಗಳಲ್ಲಿ 276 ರನ್ ಗಳಿಸಿ ಆಲೌಟ್ ಆಯಿತು. ರಸಿ ವ್ಯಾನ್ ಡರ್ ಡಸೆನ್ ಮತ್ತು ಡೇವಿಡ್ ಮಿಲ್ಲರ್ ಅವರ ಹೋರಾಟಕ್ಕೆ ತಕ್ಕ ಫಲ ಸಿಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 50 ಓವರ್‌ಗಳಲ್ಲಿ 7ಕ್ಕೆ314 (ತಮೀಮ್ ಇಕ್ಬಾಲ್ 41, ಲಿಟನ್ ದಾಸ್ 50, ಶಕೀಬ್ ಅಲ್ ಹಸನ್ 77, ಯಾಸೀರ್ ಅಲಿ 50, ಮೆಹಮುದುಲ್ಲಾ 25, ಮಾರ್ಕೊ ಜೆನ್ಸೆನ್ 57ಕ್ಕೆ2, ಕೇಶವ್ ಮಹಾರಾಜ 56ಕ್ಕೆ2) ದಕ್ಷಿಣ ಆಫ್ರಿಕಾ: 48.5 ಓವರ್‌ಗಳಲ್ಲಿ 276 (ಕೈಲ್ ವೆರೆಯನ್ 21, ತೆಂಬಾ ಬವುಮಾ 31, ರಸಿ ವ್ಯಾನ್ ಡರ್ ಡಸೆನ್ 86, ಡೇವಿಡ್ ಮಿಲ್ಲರ್ 79, ಕೇಶವ್ ಮಹಾರಾಜ 23, ಶರೀಫುಲ್ ಇಸ್ಲಾಂ 47ಕ್ಕೆ2, ತಸ್ಕಿನ್ ಅಹಮದ್ 36ಕ್ಕೆ3, ಮೆಹದಿ ಹಸನ್ 61ಕ್ಕೆ4) ಫಲಿತಾಂಶ: ಬಾಂಗ್ಲಾದೇಶ 38 ರನ್‌ಗಳ ಜಯ.

ಕೋವಿಡ್: ವರ್ಷದ ಬಳಿಕ ಚೀನಾದಲ್ಲಿ ಇಬ್ಬರ ಸಾವು

ಶಾಂಘೈ/ ಬೀಜಿಂಗ್ (ರಾಯಿಟರ್ಸ್): ವರ್ಷದ ಬಳಿಕ ಚೀನಾದಲ್ಲಿ ಕೋವಿಡ್‌ನಿಂದಾಗಿ ಸಾವು ಸಂಭವಿಸಿದೆ ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ ಶನಿವಾರ ತಿಳಿಸಿದೆ.

ಈಶಾನ್ಯ ಪ್ರಾಂತ್ಯ ಜಿಲಿನ್‌ನಲ್ಲಿ ಕೋವಿಡ್‌ನಿಂದ ಇಬ್ಬರು ಮೃತಪಟ್ಟಿದ್ದಾರೆ ಎಂದು ಆಯೋಗ ಮಾಹಿತಿ ನೀಡಿದೆ. ಈ ಹಿಂದೆ 2021ರ ಜನವರಿ 25ರಂದು ಕೋವಿಡ್‌ನಿಂದಾಗಿ ಮೃತಪಟ್ಟ ಪ್ರಕರಣ ವರದಿಯಾಗಿತ್ತು. ಆ ಬಳಿಕ ಚೀನಾದಲ್ಲಿ ಕೋವಿಡ್‌ನಿಂದಾಗಿ ಮೃತಪಟ್ಟವರ ವರದಿಯಾಗಿರಲಿಲ್ಲ.

ಮೃತರಲ್ಲಿ ಒಬ್ಬರು ಲಸಿಕೆ ಪಡೆದಿರಲಿಲ್ಲ ಹಾಗೂ ಇಬ್ಬರಲ್ಲೂ ಕೋವಿಡ್‌ಗೆ ಸಂಬಂಧಿಸಿದಂತೆ ಸೌಮ್ಯ ಲಕ್ಷಣಗಳಿದ್ದವು ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗದ ಅಧಿಕಾರಿ ಜಿಯಾವೊ ಯಾಹುಯಿ ತಿಳಿಸಿದ್ದಾರೆ. ಮೃತರಲ್ಲಿ ಒಬ್ಬರು 87 ವರ್ಷದವರು, ಇನ್ನೊಬ್ಬರು 65 ವರ್ಷದವರಾಗಿದ್ದಾರೆ.

ಈ ಎರಡು ಸಾವುಗಳಿಂದಾಗಿ ಚೀನಾದಲ್ಲಿ ಇಲ್ಲಿಯವರೆಗೆ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 4,638ಕ್ಕೆ ಏರಿಕೆಯಾಗಿದೆ. ಶುಕ್ರವಾರ ಒಂದೇ ದಿನ ಚೀನಾದಲ್ಲಿ 2,228 ಜನರಲ್ಲಿ ಸೋಂಕು ಪತ್ತೆಯಾಗಿದ್ದು, ಗುರುವಾರ 2,416 ಜನರಲ್ಲಿ ಸೋಂಕು ದೃಢಪಟ್ಟಿತ್ತು.

ಜಿಲಿನ್‌ನಲ್ಲಿ ಕಳೆದ ಒಂದು ವಾರದಿಂದ ಸಾವಿರಾರು ಕೋವಿಡ್ ಪ್ರಕರಣಗಳು ವರದಿಯಾಗಿವೆ. ಸೋಂಕಿತರ ಚಿಕಿತ್ಸೆಗಾಗಿ ಎಂಟು ತಾತ್ಕಾಲಿಕ ಆಸ್ಪತ್ರೆಗಳನ್ನು ನಿರ್ಮಿಸಲಾಗಿದೆ.

ಹಾಂಗ್‌ಕಾಂಗ್‌ನಲ್ಲಿ ಶನಿವಾರ ಹೊಸದಾಗಿ 16,597 ಜನರಲ್ಲಿ ಕೋವಿಡ್– 19 ಪತ್ತೆಯಾಗಿದೆ. ಇಲ್ಲಿ ಶುಕ್ರವಾರ 20,000 ಜನರಲ್ಲಿ ಸೋಂಕು ದೃಢಪಟ್ಟಿತ್ತು.

ದೇಶದಲ್ಲಿ 2,075 ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೇಶದಾದ್ಯಂತ ಶನಿವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಹೊಸದಾಗಿ 2,075 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದೇ ಅವಧಿಯಲ್ಲಿ 71 ಜನರು ಸೋಂಕಿನಿಂದ ಮೃತಪಟ್ಟಿದ್ದಾರೆ. ಮೃತರಲ್ಲಿ 59 ಜನರು ಕೇರಳದವರಾಗಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಪ್ರಕಟಣೆ ತಿಳಿಸಿದೆ.

ಈ ಅವಧಿಯಲ್ಲಿ 3,383 ಮಂದಿ ಸೋಂಕಿನಿಂದ ಚೇತರಿಸಿಕೊಂಡಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 27,802ಕ್ಕೆ ತಲುಪಿದ್ದು ದೈನಂದಿನ ಕೋವಿಡ್ ದೃಢ ಪ್ರಮಾಣ ಶೇ 0.56 ಆಗಿದೆ. ದೇಶದಲ್ಲಿ 181.04 ಕೋಟಿ ಕೋವಿಡ್ ಲಸಿಕೆ ಡೋಸ್ ನೀಡಲಾಗಿದೆ. ಹಾಗೆಯೇ 78.22 ಕೋಟಿ ಕೋವಿಡ್ ಮಾದರಿ ಪರೀಕ್ಷಿಸಲಾಗಿದೆ.

ಆರು ಒಪ್ಪಂದಗಳಿಗೆ ಜಪಾನ್–ಭಾರತ ಸಹಿ

'ಭಾರತದಲ್ಲಿ ₹3.2 ಲಕ್ಷ ಕೋಟಿ ಹೂಡಿಕೆ'

ನವದೆಹಲಿ (ಪಿಟಿಐ): ಮುಂದಿನ ಐದು ವರ್ಷಗಳ ಅವಧಿಗೆ ಭಾರತದಲ್ಲಿ ₹3.2 ಲಕ್ಷ ಕೋಟಿ (5 ಟ್ರಿಲಿಯನ್ ಯೆನ್) ಬಂಡವಾಳ ಹೂಡಿಕೆ ಮಾಡುವ ಗುರಿ ಹೊಂದಿರುವುದಾಗಿ ಜಪಾನ್ ಶನಿವಾರ ಘೋಷಿಸಿದೆ.

ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಮತ್ತು ಜಪಾನ್ ಪ್ರಧಾನಿ ಫುಮಿಯೊ ಕಿಷಿಡ ನಡುವೆ ಮಾತುಕತೆ ನಡೆಯಿತು.

ಶುದ್ಧ ಇಂಧನ ಪಾಲುದಾರಿಕೆಯ ಜೊತೆಗೆ ವಿವಿಧ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರವನ್ನು ವಿಸ್ತರಿಸಲು ಪ್ರತ್ಯೇಕವಾದ ಆರು ಒಪ್ಪಂದಗಳಿಗೆ ಉಭಯ ರಾಷ್ಟ್ರಗಳು ಸಹಿ ಹಾಕಿದವು.

ಜಂಟಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಭಾರತ-ಜಪಾನ್ ಬಾಂಧವ್ಯವನ್ನು ಗಾಢಗೊಳಿಸುವುದರಿಂದ ಉಭಯ ದೇಶಗಳಿಗೆ ಪ್ರಯೋಜನವಾಗುವುದಲ್ಲದೆ, ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ, ಸಮೃದ್ಧಿ ಮತ್ತು ಸ್ಥಿರತೆ ಉತ್ತೇಜಿಸಲು ನೆರವಾಗಲಿದೆ ಎಂದು ಹೇಳಿದರು.

ಭದ್ರತೆ, ನಂಬಿಕೆ, ಸುಸ್ಥಿರವಾದ ಇಂಧನ ಪೂರೈಕೆಯ ಮಹತ್ವವನ್ನು ಭಾರತ ಮತ್ತು ಜಪಾನ್ ಅರ್ಥಮಾಡಿಕೊಂಡಿವೆ. ಪರಸ್ಪರ ಸಹಕಾರವನ್ನು

ಒಪ್ಪಂದಗಳಿಗೆ ಸಹಿ ಹಾಕಿದ ಬಳಿಕ ಜಪಾನ್ ಪ್ರಧಾನಿ ಫುಮಿಯೊ ಕಿಷಿಡ ಮತ್ತು ಪ್ರಧಾನಿ ಮೋದಿ ಅವರು ಹಸ್ತಲಾಘವ ಮಾಡಿದರು – ಪಿಟಿಐ ಚಿತ್ರ

ಇನ್ನಷ್ಟು ವಿಸ್ತರಿಸಲು ಎರಡೂ ರಾಷ್ಟ್ರಗಳು ನಿರ್ಧರಿಸಿವೆ ಎಂದು ಮೋದಿ ಹೇಳಿದರು.

ಉಕ್ರೇನ್ ಮೇಲೆ ರಷ್ಯಾದ ಆಕ್ರಮಣದ ನಂತರ ಮೋದಿಯವರ ಜತೆ ಮೊದಲ ಬಾರಿಗೆ ಮಾತುಕತೆ ನಡೆಸಿದ ಫುಮಿಯೊ ಕಿಷಿಡ, ರಷ್ಯಾದ ಆಕ್ರಮಣ ತುಂಬಾ ಗಂಭೀರ ವಿಷಯ. ಅಂತರರಾಷ್ಟ್ರೀಯ ಮಾನದಂಡಗಳ ಬುಡವನ್ನೇ ಈ ದಾಳಿ ಅಲುಗಾಡಿಸಿದೆ ಎಂದು ಹೇಳಿದರು.

ಒಂದು ರಾಷ್ಟ್ರದ ಯಥಾಸ್ಥಿತಿಯನ್ನು ಬಲ ಪ್ರಯೋಗಿಸಿ ಬದಲಾಯಿಸುವ ಏಕಪಕ್ಷೀಯ ಪ್ರಯತ್ನಕ್ಕೆ ಅವಕಾಶವನ್ನು ನೀಡಬಾರದು ಎಂದು ಕಿಷಿಡ ಹೇಳಿದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹400
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹403

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1400-1800
ಮಧ್ಯಮ	₹800-1400
ಸಣ್ಣ	₹400-800

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಬೆಂಗಳೂರು	₹20000-21000
ಪುತ್ತೂರು	₹4000-10500
ತುಮಕೂರು	₹7200-8400

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹18000-20000
2ನೇ ದರ್ಜೆ ₹10000-16000

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (---)
ಸೋಯಾ (ರಿಫೈನ್ಡ್)	₹1510 (---)
ಸೂರ್ಯಕಾಂತಿ (ರಿಫೈನ್ಡ್)	--- (---)
ಪಾಮೋಲಿನ್	₹1487 (---)

ಎನ್‌ಎಂಡಿಸಿ: ಹೊಸ ಮೈಲುಗಲ್ಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಹಣಕಾಸು ವರ್ಷದಲ್ಲಿ ಈವರೆಗೆ ಒಟ್ಟಾರೆ 4 ಕೋಟಿ ಟನ್‌ಗಳಷ್ಟು ದಾಖಲೆ ಪ್ರಮಾಣದ ಅದಿರು ಉತ್ಪಾದನೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರಿ ಸ್ವಾಮ್ಯದ ಎನ್‌ಎಂಡಿಸಿ ಲಿಮಿಟೆಡ್ ಶನಿವಾರ ತಿಳಿಸಿದೆ.



ಸುಮಿತ್ ದೇಬ್

ಹಿಂದಿನ ಹಣಕಾಸು ವರ್ಷದಲ್ಲಿ 3.5 ಕೋಟಿ ಟನ್‌ಗಳಷ್ಟು ಉತ್ಪಾದನೆ ಆಗಿತ್ತು.

ಈ ಮೈಲುಗಲ್ಲು ತಲುಪಿದ ದೇಶದ ಮೊದಲ ಕಬ್ಬಿಣದ ಅದಿರು ಕಂಪನಿ ಆಗಿ ಎನ್‌ಎಂಡಿಸಿ ಹೊರಹೊಮ್ಮಿದೆ. ಆತ್ಮನಿರ್ಭರ ಭಾರತ ಯೋಜನೆಯ ಹಾದಿಯಲ್ಲಿ ಇನ್ನೂ ಹಲವು ಮೈಲುಗಲ್ಲುಗಳನ್ನು ದಾಟುವ ವಿಶ್ವಾಸ ಇದೆ. 2030ರ ವೇಳೆಗೆ ವಾರ್ಷಿಕ ಉತ್ಪಾದನಾ ಸಾಮರ್ಥ್ಯವು 10 ಕೋಟಿ ಟನ್‌ಗಳಿಗೆ ತಲುಪುವ ಹಾದಿಯಲ್ಲಿ ಸಾಗುತ್ತಿರುವುದನ್ನು ಇದು ತೋರಿಸುತ್ತಿದೆ ಎಂದು ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸುಮಿತ್ ದೇಬ್ ಹೇಳಿದ್ದಾರೆ.

'12ನೇ ತರಗತಿ ಫಲಿತಾಂಶ ಶಾಲೆಗಳಿಗೆ ರವಾನೆ'

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) 12ನೇ ತರಗತಿಯ ಮೊದಲ ಹಂತದ ಪರೀಕ್ಷೆಯ ಫಲಿತಾಂಶವನ್ನು ಆಯಾ ಶಾಲೆಗಳಿಗೆ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಅಧಿಕಾರಿಯೊಬ್ಬರು, 'ಆಂತರಿಕ ಮೌಲ್ಯ ಮಾಪನ ಮತ್ತು ಪ್ರಯೋಗಾಲಯದ ಅಂಕಗಳು ಶಾಲೆಗಳ ಬಳಿಯೇ ಇದೆ. ಲಿಖಿತ ಪರೀಕ್ಷೆಯ ಅಂಕಗಳನ್ನು ಕಳಿಸಿಕೊಡಲಾಗಿದೆ' ಎಂದರು.

ಸಿಬಿಎಸ್‌ಇಯ 12ನೇ ತರಗತಿಯ 2ನೇ ಹಂತದ ಪರೀಕ್ಷೆಯು ಏಪ್ರಿಲ್ 26ರಿಂದ ಆರಂಭವಾಗಲಿದೆ. ಮೊದಲ ಹಂತದ ಪರೀಕ್ಷೆಯು ಕಳೆದ ವರ್ಷದ ನವೆಂಬರ್ 30ರಿಂದ ಡಿಸೆಂಬರ್ 11ರವರೆಗೆ ನಡೆದಿತ್ತು. ಕೊರೊನಾ ನಿಯಂತ್ರಣದ ಭಾಗವಾಗಿ ಪರೀಕ್ಷೆಗಳನ್ನು 2 ಹಂತಗಳಲ್ಲಿ ನಡೆಸಲಾಗುತ್ತಿದೆ.

ಬೆಲೆ ಏರಿಕೆ, ಬೇಡಿಕೆ ಹೆಚ್ಚಳ ಪರಿಣಾಮ: ಸರ್ಕಾರಿ ಅಧಿಕಾರಿಗಳ ಮಾಹಿತಿ

ಅಮೆರಿಕದಿಂದ ತೈಲ ಆಮದು ಹೆಚ್ಚಲಿದೆ

ನವದೆಹಲಿ (ರಾಯಿಟರ್ಸ್): ಭಾರತವು ಅಮೆರಿಕದಿಂದ ಈ ವರ್ಷ ಆಮದು ಮಾಡಿಕೊಳ್ಳಲಿರುವ ಕಚ್ಚಾ ತೈಲದ ಪ್ರಮಾಣವು ಶೇ 11ರಷ್ಟು ಏರಿಕೆ ಆಗಲಿದೆ ಎಂದು ಸರ್ಕಾರದ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ರಷ್ಯಾದ ಮೇಲೆ ಪಾಶ್ಚಾತ್ಯ ರಾಷ್ಟ್ರಗಳು ಕಠಿಣ ನಿರ್ಬಂಧ ಹೇರಿವೆ. ಹೀಗಾಗಿ ದೇಶಿ ಬೇಡಿಕೆ ಈಡೇರಿಸಿಕೊಳ್ಳಲು ಆಮದು ಮೇಲೆ ಹೆಚ್ಚು ಅವಲಂಬಿತವಾಗಿರುವ ದೇಶಗಳು ಕಚ್ಚಾ ತೈಲ ಉತ್ಪಾದನಾ ರಾಷ್ಟ್ರಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಲು ಮುಂದಾಗಿವೆ.

ಭಾರತವು ತನ್ನ ದೇಶಿ ಬೇಡಿಕೆಯ ಬಹುಪಾಲು ಕಚ್ಚಾತೈಲವನ್ನು ಮಧ್ಯಪ್ರಾಚ್ಯದ ದೇಶಗಳಿಂದ ಖರೀದಿಸುತ್ತಿದೆ. ಅಮೆರಿಕವು ಭಾರತಕ್ಕೆ ತೈಲ ಆಮದು

ಮಾಡುವ ನಾಲ್ಕನೇ ಅತಿದೊಡ್ಡ ಮೂಲವಾಗಿ ಬೆಳೆದಿದೆ. ಈ ವರ್ಷ ಅಮೆರಿಕದಿಂದ ಭಾರತಕ್ಕೆ ಹೆಚ್ಚಿನ ಪ್ರಮಾಣದ ತೈಲ ಆಮದಾಗಲಿದೆ ಎಂದು ಹೇಳಿದ್ದಾರೆ.

ಭಾರತದ ಒಟ್ಟಾರೆ ತೈಲ ಬೇಡಿಕೆಯ ಶೇ 23ರಷ್ಟನ್ನು ಇರಾಕ್ ಪೂರೈಸುತ್ತಿದೆ. ಸೌದಿ ಅರೇಬಿಯಾ ಶೇ 18ರಷ್ಟು ಮತ್ತು ಯುಎಇ ಶೇ 11ರಷ್ಟು ಪೂರೈಕೆ ಮಾಡುತ್ತಿವೆ. ಈ ವರ್ಷ ಅಮೆರಿಕದ ಪಾಲು ಶೇ 8ಕ್ಕೆ ತಲುಪಲಿದೆ ಎಂದು ಹೆಸರು ಬಹಿರಂಗಪಡಿಸಬಾರದು ಎನ್ನುವ ಷರತ್ತಿನ ಮೇಲೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮುಖ್ಯಾಂಶಗಳು

- ಮಧ್ಯಪ್ರಾಚ್ಯದ ದೇಶಗಳಿಂದ ಹೆಚ್ಚಿನ ಖರೀದಿ
- ದೇಶಿ ಬೇಡಿಕೆಯ ಶೇ 80ರಷ್ಟು ಆಮದು
- ರಿಯಾಯಿತಿ ದರದಲ್ಲಿ ಭಾರತಕ್ಕೆ ತೈಲ ನೀಡುತ್ತಿರುವ ರಷ್ಯಾ

ಭಾರತವು ತನ್ನ ಬೇಡಿಕೆಯ ಕಚ್ಚಾ ತೈಲದ ಪೈಕಿ ಶೇ 80ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ. ಈ ಪೈಕಿ ಶೇ 2ರಿಂದ ಶೇ 3ರಷ್ಟು ಕಚ್ಚಾ ತೈಲವು ರಷ್ಯಾದಿಂದ ಪೂರೈಕೆ ಆಗುತ್ತದೆ. ರಷ್ಯಾ ದೇಶವು ಉಕ್ರೇನ್ ವಿರುದ್ಧ ಸಮರ ಸಾರಿದ ನಂತರದಲ್ಲಿ ಪಾಶ್ಚಿಮಾತ್ಯ ದೇಶಗಳು ಕಠಿಣ ಆರ್ಥಿಕ ನಿರ್ಬಂಧಗಳನ್ನು ಹೇರಿವೆ. ಹೀಗಾಗಿ ರಷ್ಯಾವು ರಿಯಾಯಿತಿ ದರದಲ್ಲಿ ಭಾರತಕ್ಕೆ ಕಚ್ಚಾ ತೈಲ ಪೂರೈಸುವ ಬೇಡಿಕೆ ಇಟ್ಟಿದ್ದು, ಅದಕ್ಕೆ ಅನುಗುಣವಾಗಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೊರೇಷನ್ ರಷ್ಯಾದಿಂದ 30 ಲಕ್ಷ ಬ್ಯಾರಲ್ ಯೂರಲ್ಸ್ ಕಚ್ಚಾ ತೈಲ ಖರೀದಿಸಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆಗೆ ಹೋಲಿಸಿದರೆ, ಪ್ರತಿ ಬ್ಯಾರಲ್‌ಗೆ 20–25 ಡಾಲರ್ ಕಡಿಮೆ ಬೆಲೆಗೆ ಐಒಸಿ ಖರೀದಿಸಿದೆ. ಎಚ್‌ಪಿಸಿಎಲ್ ಕಂಪನಿಯು ರಷ್ಯಾದಿಂದ 20 ಲಕ್ಷ ಬ್ಯಾರಲ್ ಯೂರಲ್ಸ್ ಕಚ್ಚಾ ತೈಲ ಖರೀದಿಸಿದೆ ಎಂದು ಮೂಲಗಳು ತಿಳಿಸಿವೆ.

ಇ.ವಿ: ಸುಜುಕಿಯಿಂದ ₹ 9,500 ಕೋಟಿ ಹೂಡಿಕೆ

ಟೋಕಿಯೊ (ರಾಯಿಟರ್ಸ್): ಭಾರತದಲ್ಲಿ ವಿದ್ಯುತ್ ಚಾಲಿತ (ಇ.ವಿ.) ವಾಹನ ಮತ್ತು ಬ್ಯಾಟರಿ ತಯಾರಿಕೆಗಾಗಿ ₹ 9,500 ಕೋಟಿ ಹೂಡಿಕೆ ಮಾಡಲು ಜಪಾನ್‌ನ ಸುಜುಕಿ ಮೋಟರ್ ಕಂಪನಿಯು ಉದ್ದೇಶಿಸಿದೆ ಎಂದು ಅಲ್ಲಿನ ನಿಕೇಯ್ ಬಿಸಿನೆಸ್ ಡೈಲಿ ಶನಿವಾರ ವರದಿ ಮಾಡಿವೆ.

ಭಾರತದಲ್ಲಿ ಜಪಾನ್ ಮುಂದಿನ ಐದು ವರ್ಷಗಳಲ್ಲಿ ₹ 3.2 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಘೋಷಿಸಿದ್ದು, ಸುಜುಕಿ ಕಂಪನಿಯ ಹೂಡಿಕೆಯು ಅದರ ಒಂದು ಭಾಗವಾಗಿರಲಿದೆ ಎಂದು ತಿಳಿಸಿದೆ. 2025ರ ಆರಂಭದಲ್ಲಿ ಭಾರತದಲ್ಲಿ ವಿದ್ಯುತ್ ಚಾಲಿತ ವಾಹನಗಳ ತಯಾರಿಕೆ ಆರಂಭಿಸುವ ಉದ್ದೇಶದಿಂದ ತಯಾರಿಕಾ ಘಟಕ ಸ್ಥಾಪನೆ ಮಾಡಲು ಕಂಪನಿಯು ನಿರ್ಧರಿಸಿದೆ ಎಂದು ಹೇಳಿದೆ. ಈ ವರದಿಯನ್ನು ಖಚಿತಪಡಿಸಲು ಕಂಪನಿಯ ವಕ್ತಾರರು ನಿರಾಕರಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕುಂದಾಪುರ	
ಹೊಸಚಾಲಿ	43500-44500
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	23900-32118
ಚಾಲಿ	44039-44039
ಕೋಕ	23189-33699
ಹೊಸಚಾಲಿ	33599-39639
ಕೆಂಪುಗೋಟು	27679-32699
ರಾಶಿ	45139-46509
ತಟ್ಟಿಬೆಟ್ಟೆ	37419-39019
ಶಿರಸಿ	
ಬೆಟ್ಟೆ	34399-41598
ಬಿಳಿಗೋಟು	22111-32303
ಚಾಲಿ	36999-39999
ರಾಶಿ	44449-46669
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	400-766
ದ್ವಿತಳಿ	552-940
ತಿಪಟೂರು ಕೊಬ್ಬರಿ	
ಕನಿಷ್ಠ	16650
ಗರಿಷ್ಠ	17100
ಮಾದರಿ	17000
ಒಟ್ಟು ಆವಕ	1,110 (ಕ್ವಿಂಟಲ್)

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15500	15550	220.05 ಸೆಂಟ್ಸ್
ಎಸಿ	---	7800	8100	
ಆರ್‌ಪಿ	---	8500	8700	ಲಂಡನ್
ಆರ್‌ಸಿ	---	3900	4000	2167 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

19-3-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (---)
ಒಂದು ವಾರದ ಡೆಲಿವರಿ	1595 (---)
ಸೋಯಾ ಕಚ್ಚಾ	1480 (---)
ಪಾಮ್ ವಾರದ ಡೆಲಿವರಿ	1585 (---)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,100 (---)
ಬೆಳ್ಳಿ ಕೆ.ಜಿ 67,250 (---)

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ದೊಡ್ಲಾ ಡೈರಿ ತೆಕ್ಕೆಗೆ ಕೃಷ್ಣಾ ಮಿಲ್ಕ್

ನವದೆಹಲಿ (ಪಿಟಿಐ): ಕರ್ನಾಟಕದ ಶ್ರೀಕೃಷ್ಣಾ ಮಿಲ್ಕ್ಸ್ ಪ್ರೈವೇಟ್ ಲಿಮಿಟೆಡ್ ಅನ್ನು ₹ 50 ಕೋಟಿಗೆ ಸ್ವಾಧೀನಪಡಿಸಿಕೊಂಡಿರುವುದಾಗಿ ದೊಡ್ಲಾ ಡೈರಿ ಲಿಮಿಟೆಡ್ ಶನಿವಾರ ತಿಳಿಸಿದೆ.

ವಹಿವಾಟು ವಿಸ್ತರಣೆಯ ಭಾಗವಾಗಿ ಈ ಸ್ವಾಧೀನ ಮಾಡಿಕೊಳ್ಳಲಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಸ್ವಾಧೀನಪಡಿಸಿಕೊಂಡ ದಿನಾಂಕದಿಂದ ಎರಡು ತಿಂಗಳಲ್ಲಿ ಒಪ್ಪಂದವು ಪೂರ್ಣಗೊಳ್ಳುವ ನಿರೀಕ್ಷೆ ಇದೆ. 1989 ರಲ್ಲಿ ಸ್ಥಾಪನೆಯಾದ ಕೃಷ್ಣಾ ಮಿಲ್ಕ್ಸ್ ಪ್ರೈವೇಟ್ ಲಿಮಿಟೆಡ್ ಕರ್ನಾಟಕದ ಮೊದಲ ಖಾಸಗಿ ವಲಯದ ಡೈರಿ ಕಂಪನಿಯಾಗಿದೆ.

2020–21ರಲ್ಲಿ ಕೃಷ್ಣಾ ಮಿಲ್ಕ್‌ನ ಒಟ್ಟಾರೆ ವಹಿವಾಟು ಮೊತ್ತವು ₹ 67.27 ಕೋಟಿ ಆಗಿದೆ.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 20 ಮಾರ್ಚ್ 2022

ಶಿಲ್ಪಕಲಾವೈಭವದ ಸರಸ್ವತಿ ದೇಗುಲ 9

ಬದುಕಿಗಾಗಿ ನಡೆಸಿದ ಹೋರಾಟದ ಕಥನ

ಅಸಾಧಾರಣ ಸಮಾಜವಾದಿ 11

ದಮನಿತರ ಸಾವುಗಳಿಗೆ ಯಾಕಿಲ್ಲ ಕಣ್ಣೀರು?

ಕಾಶ್ಮೀರದಲ್ಲಿ ಪಂಡಿತ ಸಮುದಾಯದ ಮೇಲೆ ಮುಸ್ಲಿಮ್ ಉಗ್ರರು ನಡೆಸಿದ ದೌರ್ಜನ್ಯದ ಕುರಿತು ಈಗ ದೇಶದಾದ್ಯಂತ ಬಿಸಿ ಬಿಸಿ ಚರ್ಚೆಯಾಗುತ್ತಿದೆ. ಆ ಅಟ್ಟಹಾಸವನ್ನು ಗಟ್ಟಿ ದನಿಯಲ್ಲಿ ಖಂಡಿಸಲೇಬೇಕು. ಆದರೆ, ದೇಶದಲ್ಲಿ ನಡೆದಿರುವುದು ಇದೊಂದೇ ಹತ್ಯಾಕಾಂಡವಲ್ಲ. ದಲಿತರು, ದಮನಿತರ ನರಮೇಧಗಳಿಗೂ ಸ್ವಾತಂತ್ರ್ಯೋತ್ತರ ಭಾರತ ಸಾಕ್ಷಿಯಾಗಿದೆ. ಅವುಗಳ ಕುರಿತು ಚರ್ಚೆಯೇ ಆಗುವುದಿಲ್ಲವಲ್ಲ, ಏಕೋ?

ಡಿ. ಉಮಾಪತಿ

ಭಾರತದಲ್ಲಿ ದಲಿತರು, ಆದಿವಾಸಿಗಳು ಹಾಗೂ ಮುಸಲ್ಮಾನರ ಪ್ರಮಾಣ ಶೇ 39. ದೇಶದ ಜೈಲು ಪಾಲಾಗಿರುವ ಬಂದಿಗಳು ಮತ್ತು ವಿಚಾರಣಾಧೀನ ಕೈದಿಗಳ ಪೈಕಿ ಈ ಸಮುದಾಯಗಳ ಪ್ರಮಾಣ ಶೇ 51. ಈ ಶೇಕಡಾ ಮೂವತ್ತೊಂಬತ್ತು ಮಂದಿ ಬಂದೀಖಾನೆಗಳಲ್ಲಿ ಮಾತ್ರ ಬಂದಿಗಳಲ್ಲ. ಬಂದೀಖಾನೆಗಳ ಹೊರಗಣ ಬಯಲಿನಲ್ಲೂ 'ಬಂದಿಗಳು'. ಕಾಶ್ಮೀರಿ ಬ್ರಾಹ್ಮಣರ ನೋವಿಗೆ ಆಕ್ರೋಶಗೊಳ್ಳುವವರ ಕಣ್ಣುಗಳು ನಿತ್ಯ ನಿರಂತರ ತಮ್ಮ ಸುತ್ತಮುತ್ತ ನಡೆಯುವ ದಲಿತ-ಆದಿವಾಸಿ-ಅಲ್ಪಸಂಖ್ಯಾತರ ಸಾವು ಸಂಕಟಗಳಿಗೆ ಯಾಕೆ ಹಸಿಯಾಗುವುದಿಲ್ಲ? ಕರುಣೆಯ ಜಲ ಇವರ ಪಾಲಿಗೆ ಬತ್ತಿ ಹೋಗಿರುವುದೇಕೆ?

ಭಾರತ ದೇಶದಲ್ಲಿ ದಲಿತರ ಮೇಲೆ ಪ್ರತಿ 18 ನಿಮಿಷಗಳಿಗೊಂದರಂತೆ ಅತ್ಯಾಚಾರವನ್ನು ನಡೆಸಲಾಗುತ್ತಿದೆ. ನೂರಾರು ತಲೆಮಾರುಗಳಿಂದ ಜಾತಿಪದ್ಧತಿಯ ಕ್ರೌರ್ಯದಡಿ ನಜ್ಜುಗುಜ್ಜಾಗುತ್ತ ಬಂದಿರುವವರ ಬದುಕು, ಬವಣೆ, ಅಸ್ಮಿತೆಗಳ ಕತೆಯೇನು?

ಅವಮಾನಿತ ಕೆಳಜಾತಿಗಳ ದಮನದ ಅಮಾನುಷ ಮುಖಗಳು ಹತ್ತು ಹಲವು. ದಲಿತರು ಚಪ್ಪಲಿ ಧರಿಸುವುದನ್ನು ನಿಷೇಧಿಸಿರುವ, ಊರು ಪ್ರವೇಶ ಮಾಡುವ ಮುನ್ನ ಚಪ್ಪಲಿಯನ್ನು ಕಳಚಿ ಕೈಲಿ ಹಿಡಿದು ನಡೆಯಬೇಕಾದ, ಏರಿದ್ದ ಸೈಕಲ್ಲನ್ನು ಇಳಿದು ಅದನ್ನು ತಳ್ಳಿಕೊಂಡೇ ಮೇಲ್ಜಾತಿಗಳ ವಸತಿಯನ್ನು ಹಾದು ಹೋಗಬೇಕಾದ ರೂಢಿ ಇಂದಿಗೂ ಜಾರಿಯಲ್ಲಿರುವ ಸಾವಿರಾರು ಹಳ್ಳಿಗಳಿವೆ.

ನಮ್ಮ ಹಳ್ಳಿಗಳ ದಲಿತರ ಕೇರಿಗಳು ಊರಿನ ಅಂಚಿಗಿರುತ್ತವೆ. ಪಶ್ಚಿಮ ದಿಕ್ಕಿಗಿರುವುದು ವಾಡಿಕೆ. ಮುಂಜಾನೆಯ ಸೂರ್ಯನ ಕಿರಣಗಳು ಮೇಲ್ಜಾತಿಗಳ ಕೇರಿಗಳ ಮೇಲೆ ಬೀಳುವ ಮುನ್ನ ಅಸ್ಪೃಶ್ಯರ ಹಟ್ಟಿಗಳನ್ನು ತಾಕಿ ಮೈಲಿಗೆ ಆಗದಂತೆ ವಹಿಸಿರುವ ಎಚ್ಚರಿಕೆ. ಚರಂಡಿಯ ರೊಜ್ಜು ಕೂಡ ಪೂರ್ವದ ಎತ್ತರದಿಂದ ಪಶ್ಚಿಮದ ತಗ್ಗಿನುದ್ದಕ್ಕೆ ಚಾಚಿ ಹರಿಯಬೇಕು.

ಉತ್ತರಭಾರತದ ಮದುವೆಗಳಲ್ಲಿ ವರ ಕುದುರೆಯೇರಿ ದಿಬ್ಬಣ ಹೊರಡುವ ರಿವಾಜಿದೆ. ದಲಿತರು ಕುದುರೆ ಏರುವಂತಿಲ್ಲ. ಆನೆ, ಕುದುರೆ, ಎತ್ತಿನ ಗಾಡಿ ಏರಿದ ದಲಿತ ಮದುಮಕ್ಕಳನ್ನು ಮೇಲು ಜಾತಿಯವರು ಥಳಿಸಿ ರಂಪ ಮಾಡುವ ವಿದ್ಯಮಾನಗಳು ಇಂದಿಗೂ ಅಳಿದಿಲ್ಲ.

ಥಳಗುಟ್ಟುವ ಭಾರತದ ಆಚೆಗೆ ಬದುಕಿರುವ ಕಗ್ಗತ್ತಲ ಉದ್ದಗಲಗಳಲ್ಲಿ ಜಾತಿ ಬಲವುಳ್ಳವರು, ಹಣದ ಸೊಕ್ಕಿನವರು, ಧರ್ಮದುರಂಧರರು, ಪಿತೃಪ್ರಧಾನ್ಯದ ಪರಿಪಾಲಕರು, ಪೊಲೀಸರು ಹಾಗೂ ಪ್ಯಾರಾಮಿಲಿಟರಿಗಳ ಅಟ್ಟಹಾಸಗಳಲ್ಲಿ ಈ ಜೀವಗಳು ನಲುಗಿಹೋಗುತ್ತಿವೆ. ಇವರು ಮಾತು ಸತ್ತವರು, ಕಾಸಿಲ್ಲದವರು, ತುಳಿಸಿಕೊಂಡವರು, ಒಕ್ಕಲೆಬ್ಬಿಸಿ ದಬ್ಬಲಾದ ಅನಾಥ ಆದಿವಾಸಿಗಳು. ತಮ್ಮ ಮಾನ, ಪ್ರಾಣ, ಕಣ್ಣೀರುಗಳಿಗೆ ಕಾಸಿನ ಕಿಮ್ಮತ್ತೂ ಇಲ್ಲದ ದೈನೇಸಿಗಳು. ಖೈರ್ಲಂಜಿ, ಕಂಬಾಲಪಲ್ಲಿಗಳಲ್ಲಿ ಬೂದಿಯಾದವರು ಇವರು.

ಸಿಖ್ ನರಮೇಧ

ಅಮೃತಸರದ ಸ್ವರ್ಣಮಂದಿರದಲ್ಲಿ ಅಡಗಿದ್ದ ಸಿಖ್ ಪ್ರತ್ಯೇಕತಾವಾದಿಗಳ ವಿರುದ್ಧ 1984ರಲ್ಲಿ 'ಆಪರೇಷನ್ ಬ್ಲೂಸ್ಟಾರ್' ಹೆಸರಿನಲ್ಲಿ ಕಾರ್ಯಾಚರಣೆಗೆ ಅಂದಿನ ಪ್ರಧಾನಿ ಇಂದಿರಾಗಾಂಧಿ ಆದೇಶಿಸಿದ್ದರು. ಇದಾದ ಕೆಲವೇ ತಿಂಗಳಲ್ಲಿ ಸಿಖ್ ಧರ್ಮಕ್ಕೆ ಸೇರಿದ್ದ ಅಂಗರಕ್ಷಕರೇ ಇಂದಿರಾಗಾಂಧಿ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದರು. ತರುವಾಯ ದೆಹಲಿಯಲ್ಲಿ ಭುಗಿಲೆದ್ದ ಹಿಂಸಾಚಾರದಲ್ಲಿ ಸುಮಾರು 2,800 ಸಿಖ್ಖರು ಬಲಿಯಾಗಿದ್ದರು.



ಸತ್ಯವನ್ನು ಒಪ್ಪಿಕೊಳ್ಳಲಾಗದ ನೈತಿಕ ಅಧಃಪತನವೇ?

ಸಹನಾ ವಿಜಯಕುಮಾರ್

ಇದೇ ಮಾರ್ಚ್ ಹನ್ನೊಂದರಂದು ವಿವೇಕ್ ಅಗ್ನಿಹೋತ್ರಿ ನಿರ್ದೇಶನದ 'ದ ಕಾಶ್ಮೀರ್ ಫೈಲ್ಸ್' ಚಿತ್ರ ತೆರೆಕಂಡಿತು. ಮೂವತ್ತೆರಡು ವರ್ಷಗಳ ಹಿಂದೆ ಭಯೋತ್ಪಾದಕರ ಅಟ್ಟಹಾಸಕ್ಕೆ ಬೆದರಿ ಕಾಶ್ಮೀರವನ್ನು ತೊರೆದ ಕಾಶ್ಮೀರಿ ಹಿಂದೂ ಸಮುದಾಯದ ಬವಣೆಗಳನ್ನು ಆಧರಿಸಿದ ಚಿತ್ರ ಇದು. ಚಿತ್ರದಲ್ಲಿ ತೋರಿಸಿರುವುದೆಲ್ಲವೂ ನೈಜ ಘಟನೆಗಳೇ. ಕಲಾ ಮಾಧ್ಯಮವಾದ ಚಲನಚಿತ್ರದಲ್ಲಿ ಕಲ್ಪನೆಗೆ ಕೊಂಚವೂ ಆಸ್ಪದವಿರದೆ ಸತ್ಯವೇ ಬೃಹದಾಕಾರವಾಗಿ ಮೈತಳೆದಾಗ ಅದು ಇಷ್ಟು ಯಾತನಾಮಯವೂ, ಭೀಕರವೂ ಆಗಬಹುದೆಂಬುದನ್ನು ಬಹುಶಃ ಯಾರೂ ಎಣಿಸಿರಲಿಕ್ಕಿಲ್ಲ. ಆದರೆ, ಆ ನೋವನ್ನು ಉಂಡ ಪ್ರತೀ ಕುಟುಂಬಕ್ಕೂ ಈ ಚಿತ್ರದಲ್ಲಿರುವುದೆಲ್ಲವೂ ತಿಳಿದಿರುವ ಸಂಗತಿಗಳೇ. ತಮ್ಮ ಬದುಕಿನ ಆ ಕರಾಳ ಅಧ್ಯಾಯವನ್ನು ಈಗ ಮತ್ತೆ ನೆನೆದು ಕಣ್ಣೀರಾಗುತ್ತಿದ್ದಾರೆ. ಅಂದು ಕಾಶ್ಮೀರದಿಂದ ಹೊರಟ ಎಷ್ಟೋ ಕುಟುಂಬಗಳ ಹಿರಿಯರು ಈಗ ಬದುಕುಳಿದಿಲ್ಲ. ಅವರ ನಂತರದ ಪೀಳಿಗೆ ದೇಶ-ವಿದೇಶಗಳಲ್ಲಿ ಹಂಚಿಹೋಗಿದೆಯಾದರೂ ತಮ್ಮ ಮೂಲ ನೆಲೆಗೆ ಮರಳಲಾಗಿಲ್ಲ.

ಹಾಗೆ ನೋಡಿದರೆ ವಿವೇಕ್ ಅಗ್ನಿಹೋತ್ರಿ ಆ ಬರ್ಬರತೆಯನ್ನು ಯಥಾವತ್ತಾಗಿ ಚಿತ್ರಿಸಿಲ್ಲ. 1990ನೇ ಇಸವಿಯ ಜನವರಿ 19ರ ರಾತ್ರಿ ಉಗ್ರರೊಡಗೂಡಿದ ಕಾಶ್ಮೀರದ ಮುಸ್ಲಿಮರು 'ಕಾಶ್ಮೀರಿ ಪಂಡಿತರೇ, ನಿಮ್ಮ ಹೆಂಡತಿಯರು-ಹೆಣ್ಣುಮಕ್ಕಳನ್ನು ಮಾತ್ರ ಇಲ್ಲಿಬಿಟ್ಟು ನೀವು ಇಲ್ಲಿಂದ ಹೊರಡಿ' ಎಂದು ಬೊಬ್ಬಿರಿದರು. ಆ ಬೆದರಿಕೆಗೆ ಮಣಿದ ಹಲವರು ರಾತ್ರೋರಾತ್ರಿ ಅಲ್ಲಿಂದ ಓಡಿದರು. ತಮ್ಮ ನೆರೆಹೊರೆಯ ಮುಸ್ಲಿಮರ ಬಗ್ಗೆ ಅತೀವ ವಿಶ್ವಾಸವಿದ್ದ ಹಲವರು ಅಲ್ಲೇ ಉಳಿದರು. ಹಾಗೆ ಉಳಿದವರ ಬಗ್ಗೆ ಆ ನೆರೆಹೊರೆಯವರೇ ಉಗ್ರವಾದಿಗಳಿಗೆ ಸುಳಿವು ನೀಡಿ ಅವರ ಹತ್ಯೆಗೆ ಕಾರಣರಾದ ಅಸಂಖ್ಯ ಘಟನೆಗಳಿವೆ.

ತಾವು ಪಾಠ ಕಲಿಸಿದ ಮುಸ್ಲಿಂ ವಿದ್ಯಾರ್ಥಿ ತಮ್ಮ ಮಗಳ ಮೇಲೆ ಅತ್ಯಾಚಾರ ಮಾಡಿದುದನ್ನು ಕಂಡ ತಂದೆಯ, ಸಹೋದರಿಯ ಕಚೇರಿಯಲ್ಲಿ ಕೆಲಸ ಮಾಡುವ ಮುಸ್ಲಿಂ ಸಹೋದ್ಯೋಗಿಯೇ ತನ್ನ ಇತರ ಬಾಂಧವರೊಡನೆ ಸೇರಿ ಅವಳ ಶೀಲಭಂಗ ಮಾಡಿ ಹತ್ಯೆಗೈದುದನ್ನು ನೋಡಿದ ಸಹೋದರರ ಉದಾಹರಣೆಗಳಿವೆ. ಹೀಗೆ ತಾವು ನಂಬಿದ ಮುಸ್ಲಿಂ ಬಾಂಧವರೇ ದ್ರೋಹವೆಸಗಿದಾಗ ಕಂಗಾಲಾದ ಇತರ ಹಿಂದೂ ಕುಟುಂಬಗಳು ವಿಧಿಯಿಲ್ಲದೆ ಅಲ್ಲಿಂದ ಹೊರಟವು. ಅಲ್ಲಿಯವರೆಗೂ ಕವಿ, ಬುದ್ಧಿಜೀವಿಗಳ ಬಾಯಿಯಲ್ಲಿ ನಲಿಯುತ್ತಿದ್ದ 'ಕಾಶ್ಮೀರಿಯತ್' ಎಂಬ ಕಾಲ್ಪನಿಕ ಹಿಂದೂ-ಮುಸ್ಲಿಂ ಭಾವೈಕ್ಯ ತನ್ನ ಮುಖವಾಡವನ್ನು ಕಳಚಿತು. ಹಿಂದೂಗಳನ್ನು ಬಲಿಕೊಡುತ್ತಲೇ ಹಿಂದೂ-ಮುಸ್ಲಿಮರ ಸಾಮರಸ್ಯವನ್ನು ಸಾಧಿಸುವ ಸೆಕ್ಯುಲರಿಸಂನ ರಣಹದ್ದು ರೆಕ್ಕೆಪುಕ್ಕಗಳೊಂದಿಗೆ ಇನ್ನಷ್ಟು ಬಲಿಯಿತು.

ಇಷ್ಟೆಲ್ಲ ನಡೆದರೂ ಜಮ್ಮುವಿನ ಶಿಬಿರಗಳಲ್ಲಿ ನಿರಾಶ್ರಿತರಾಗಿ ದಿನದೂಡುತ್ತಿದ್ದ ಕಾಶ್ಮೀರಿ ಹಿಂದೂಗಳು ಭಯೋತ್ಪಾದನೆಗಿಳಿಯಲಿಲ್ಲ. ಅಕ್ಷರಶಃ ಅಲ್ಪಸಂಖ್ಯಾತರಾದರೂ ಮೀಸಲಾತಿಗಾಗಿ ಹೋರಾಡಲಿಲ್ಲ. ಆ ಶಿಬಿರಗಳಲ್ಲೇ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ನೀಡಿದರು. ಇಂದಲ್ಲ ನಾಳೆ ದೊರಕಬಹುದಾದ ನ್ಯಾಯದ ನಿರೀಕ್ಷೆಯಲ್ಲಿದ್ದರು. ಈ ನಡುವೆ ತಮ್ಮ ಮೂಲಸ್ಥಾನಕ್ಕೆ ತೆರಳಿ ತಾವು ಬಿಟ್ಟುಬಂದ ಮನೆ, ಹೊಲಗಳನ್ನು ಒಮ್ಮೆಯಾದರೂ ನೋಡಬೇಕೆಂಬ ಆಸೆಯನ್ನು ನಿಯಂತ್ರಿಸಿಕೊಂಡರು. ಏಕೆಂದರೆ ಅವರು ಅಲ್ಲಿಗೆ ಕಾಲಿಟ್ಟರೆ, 'ನೀವು ಈಗೇಕೆ ಬಂದಿರಿ? ಇಲ್ಲೇನು ಕೆಲಸವಿದೆ?' ಎಂದು ಬೆದರಿಸಿ ಕಳುಹಿಸುವ ಮನಃಸ್ಥಿತಿಯನ್ನು ಕಾಶ್ಮೀರದ ಮುಸ್ಲಿಮರು ಅದಾಗಲೇ ರೂಢಿಸಿಕೊಂಡಿದ್ದರು.

2019ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಭಾರತ ಸರ್ಕಾರ ಅನುಚ್ಛೇದ 370 ಅನ್ನು ತೆಗೆದುಹಾಕಿದಾಗ ಕಾಶ್ಮೀರಿ ಹಿಂದೂಗಳಿಗೆ ನ್ಯಾಯದ ಒಂದಂಶ ಸಂದಾಯವಾಯಿತು ಎನ್ನಬಹುದು. ಈಗ ವಿವೇಕ್ ಅಗ್ನಿಹೋತ್ರಿಯವರ ಚಿತ್ರದಿಂದಾಗಿ ಭಾರತೀಯರಲ್ಲಿ ಜಾಗೃತಿ ಮೂಡಿದೆ. ಕಾಶ್ಮೀರಿ ಹಿಂದೂಗಳನ್ನು ತಮ್ಮ ನೆಲೆಗೆ ಕಳುಹಿಸುವ ಕೆಲಸ ಸುಗಮವಾಗುವುದೆಂಬ ಭರವಸೆ ಉಂಟಾಗುತ್ತಿದೆ. ಈ ನಡುವೆ, 'ಕಾಶ್ಮೀರದಲ್ಲಿ ನಡೆದದ್ದು ನರಮೇಧವಲ್ಲ, ಅಲ್ಲಿಯ ಪಂಡಿತರು ತಾವಾಗಿಯೇ ಹೊರಟು ಬಂದರು, ಆಗ ರಾಜ್ಯಪಾಲರಾಗಿದ್ದ ಜಗಮೋಹನ್ ಮಲ್ಹೋತ್ರಾ ಎಲ್ಲರನ್ನೂ ಓಡಿಸಿದರು, ವಿವೇಕರ ಚಿತ್ರ ಬರೀ ಪ್ರಚಾರಕ್ಕಾಗಿ' ಎಂಬ ಮಿಥ್ಯಾಕಂತೆ ಹರಿದಾಡುತ್ತಿದೆ. ಇಂಥ ವಾದವನ್ನು ಮಂಡಿಸುತ್ತಿರುವ ಎಲ್ಲರನ್ನೂ ಒಟ್ಟುಗೂಡಿಸಿ ಒಂದು ವಿಮಾನದಲ್ಲಿ ಹತ್ತಿಸಿಕೊಂಡು ನೇರವಾಗಿ ಕಾಶ್ಮೀರದಲ್ಲಿ ಇಳಿಸಿ ಬರಬೇಕು ಎನಿಸುತ್ತಿದೆ. ಐಡಿಯಾಲಜಿಯ ಹೆಸರಿನಲ್ಲಿ ಇಲ್ಲೆಲ್ಲೋ ಕುಳಿತು ಸುಳ್ಳು ಲೇಖನಗಳನ್ನು ಸೃಷ್ಟಿಸುವ, ಸತ್ಯವನ್ನು ತಿರುಚಲು ಯತ್ನಿಸುವ ಎಷ್ಟು ಮಂದಿ ರಕ್ತದೋಕುಳಿ ನಡೆದ ಆ ನೆಲದಲ್ಲಿ ನಡೆದಾಡಿದ್ದಾರೋ ತಿಳಿಯದು. ತಮ್ಮ ವಾರಸುದಾರರಿಲ್ಲದೆ ಮುರಿದು ಬಿದ್ದಿರುವ ಮನೆಗಳು, ಗೆದ್ದಲು ಹಿಡಿದು ಪುಡಿಯಾಗಿರುವ ಬಾಗಿಲುವಾಡಗಳು, ಭಗ್ನವಾಗಿರುವ ಆಲಯಗಳು - ನಡೆದ ಕರಾಳ ಘಟನೆಗಳಿಗೆ ಸಾಕ್ಷಿಗಳಾಗಿ ಇಂದಿಗೂ ಲಭ್ಯವಿವೆ. 'ಈಗ ನೀವು ಹೊರಡಿ. ನಿಮ್ಮ ಮನೆಯನ್ನು ನಾವು ನೋಡಿಕೊಳ್ಳುತ್ತೇವೆ. ನೀವು ಬಂದೊಡನೆ ಹಿಂತಿರುಗಿಸುತ್ತೇವೆ' ಎಂದಿದ್ದ ಮುಸ್ಲಿಂ ಸಹೋದರರನೇಕರು ಆ ಮನೆಗಳನ್ನು ತಮ್ಮ ಅಂಗಡಿ, ಗೋದಾಮುಗಳನ್ನಾಗಿ ಮಾಡಿಕೊಂಡಿದ್ದಾರೆ. ಇನ್ನು ಕೆಲವರು ಇಡೀ ಮನೆಯನ್ನೇ ಕೆಡವಿ ನೆಲಸಮಗೊಳಿಸಿದ್ದಾರೆ. ಸಿದ್ಧಾಂತ ಯಾವುದೇ ಇರಲಿ, ಒಂದು ಸಮುದಾಯವನ್ನು ತಮ್ಮ ಮೂಲನೆಲೆಗೆ ಮರಳಿ ಕಳುಹಿಸಿಕೊಡಲಾಗದ ನೈತಿಕ ಅಧಃಪತನವೇಕೆ ಒಂದು ವರ್ಗಕ್ಕೆ? ಅಥವಾ ಸತ್ಯದ ಅರಿವಿದ್ದೂ ಹೀಗೆ ಆತ್ಮವಂಚನೆ ಮಾಡಿಕೊಳ್ಳುತ್ತಿದ್ದಾರೋ?

ಗೋಧ್ರಾ ಹತ್ಯಾಕಾಂಡ

2002ರ ಫೆಬ್ರುವರಿ 27ರ ಮುಂಜಾನೆ ಗುಜರಾತಿನ ಗೋಧ್ರಾ ಬಳಿ ಸಾಬರಮತಿ ಎಕ್ಸ್‌ಪ್ರೆಸ್‌ನ ಕರಸೇವಕರಿದ್ದ ಬೋಗಿಗೆ ಬೆಂಕಿ ಬಿದ್ದು 59 ಮಂದಿ ಆಹುತಿಯಾಗಿದ್ದರು. ಬೆಂಕಿಯ ಹಿಂದೆ ಕೈವಾಡವಿದ್ದರೆ ಅದು ಅಮಾನುಷ ಕೃತ್ಯ. ಕಾರಣರಾದವರನ್ನು ಕಾನೂನಿನ ಕುಣಿಕೆಗೆ ಸಿಕ್ಕಿಸಲೇಬೇಕು. ಗೋಧ್ರಾ ಹತ್ಯಾಕಾಂಡದ ನಂತರ ಹೊತ್ತಿಕೊಂಡ ಕೋಮುಗಲಭೆಗಳ ದಳ್ಳುರಿ ಗುಜರಾತಿನ ಉದ್ದಗಲಕ್ಕೆ ಅಲ್ಪಸಂಖ್ಯಾತರ ಮಾರಣಹೋಮ, ಲೂಟಿ, ವಿಧ್ವಂಸ ಕೃತ್ಯ ಹಾಗೂ ಅತ್ಯಾಚಾರಗಳಿಗೆ ಕಾರಣವಾಯಿತು.

ಗರ್ಭಿಣಿ ಬಿಲ್ಕಿಸ್ ಬಾನು ಮೇಲೆ ಬಿಟ್ಟೂಬಿಡದೆ 22 ಬಾರಿ ಅತ್ಯಾಚಾರ ನಡೆಯಿತು. ಮೂರು ವರ್ಷದ ಮಗಳ ತಲೆಯನ್ನು ನೆಲಕ್ಕೆ ಅಪ್ಪಳಿಸಿ ಕೊಲ್ಲಲಾಯಿತು. ಆಕೆಯ ತಾಯಿಯೂ ಸೇರಿದಂತೆ ಕುಟುಂಬದ ಇತರ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೆಸಿ ಕೊಚ್ಚಿ ಹಾಕಲಾಯಿತು. ಕಣ್ಣೆದುರಿಗೇ ಕುಟುಂಬದ 14 ಹೆಣಗಳು ಉರುಳಿದವು. ಗೋಧ್ರೋತ್ತರ ಹಿಂಸಾಚಾರ ಇಂತಹ ಬಿಲ್ಕಿಸ್ ಬಾನುಗಳ ಹತ್ತಾರು ಕತೆಗಳಿವೆ. ಅಧಿಕೃತ ಅಂಕಿ ಅಂಶಗಳ ಪ್ರಕಾರ 1,044 ಮಂದಿ ಈ ಹಿಂಸೆಗೆ ಬಲಿಯಾದರು. 233 ಮಂದಿ ಕಾಣೆಯಾದರು.

ಮೋಟರ್ ಸೈಕಲ್ ಸವಾರಿ ಮಾಡುವ ದಲಿತ ಯುವಕನ ಮೂಗು ಕತ್ತರಿಸುವ, 'ಅಂಬೇಡ್ಕರ್ ರಿಂಗ್ ಟೋನ'ನ್ನು ತೆಗೆದು ಹಾಕಲಿಲ್ಲವೆಂದು ದಲಿತ ತರುಣನ ಪ್ರಾಣವನ್ನೇ ತೆಗೆಯುವ, ದಲಿತ ಪ್ರೊಫೆಸರರಿಗೆ ಬಾಡಿಗೆ ಮನೆ ನಿರಾಕರಿಸುವ, ಮೂರು ವರ್ಷದ ದಲಿತ ಹಸುಳೆಗೆ ಕ್ಷೌರ ಮಾಡಲು ನಿರಾಕರಿಸುವ, ಮೇಲ್ಜಾತಿಯ ಮಕ್ಕಳ ತಟ್ಟೆ ಮುಟ್ಟಿದನೆಂದು ಎಳೆಯ ದಲಿತ ಜೀವವನ್ನು ಥಳಿಸುವ ಘಟನೆಗಳು ಈ ಸಮಾಜದ ಆತ್ಮಸಾಕ್ಷಿಯನ್ನು ಕಲಕುವುದೇ ಇಲ್ಲ.

ಅತ್ಯಾಚಾರವನ್ನು ಪ್ರತಿಭಟಿಸಿದ ದಲಿತ ಬಾಲಕಿಯೊಬ್ಬಳ ಮೂಗು, ಕಿವಿ ಹಾಗೂ ತೋಳನ್ನು ಕತ್ತರಿಸಿ ಒಗೆದವರು ಮೇಲ್ಜಾತಿಗಳ ಬಲಾತ್ಕಾರಿಗಳು. ಆಕೆಯ ದುಪಟ್ಟಾದಿಂದಲೇ ಬಾಲೆಯ ಕಣ್ಣು ಕಟ್ಟಿದ ಧೂರ್ತರು ಮೂಗು, ಕಿವಿ, ತೋಳನ್ನು ಕೊಡಲಿಯಿಂದ ಕತ್ತರಿಸಿ ಒಗೆದದ್ದು ಮಧ್ಯಪ್ರದೇಶದ ಘಟನೆ.

2020ರಷ್ಟು ಇತ್ತೀಚಿನ ಈ ಉದಾಹರಣೆ ನೋಡೋಣ- ಉತ್ತರಪ್ರದೇಶದ ಸಹಾರಣಪುರ ಸನಿಹದ ಶಬ್ಬೀರ್‌ಪುರ್ ಗ್ರಾಮದ ರಜಪೂತರು ರಾಣಾಪ್ರತಾಪ ಉತ್ಸವದ ಮೆರವಣಿಗೆ ತೆಗೆದಿದ್ದರು. ಮೆರವಣಿಗೆ ದಲಿತ ವಸತಿ ಪ್ರದೇಶಗಳನ್ನು ಹಾಯುತ್ತಲಿತ್ತು. ಕಿವಿ ಗಡಚಿಕ್ಕುವ ಡಿ.ಜೆ.ಸಂಗೀತದ ಅಬ್ಬರವನ್ನು ತಗ್ಗಿಸಬೇಕೆಂಬ ದಲಿತರ ಮನವಿಗೆ ಬೆಲೆ ಸಿಗಲಿಲ್ಲ. ಪೊಲೀಸರ ಮಧ್ಯಪ್ರವೇಶದ ನಂತರ ಸಂಗೀತದ ಅಬ್ಬರ ಅಡಗಿತು.

10ನೇ ಪುಟಕ್ಕೆ...

ಕಿಳ್ವೆನ್ಮಣಿ ನರಮೇಧ

ಕಿಳ್ವೆನ್ಮಣಿ (1968)- ತಮಿಳುನಾಡಿನ ಈ ನರಮೇಧದಲ್ಲಿ 44 ಮಂದಿ ದಲಿತ ಕೃಷಿ ಕೂಲಿಗಳನ್ನು ಜಮೀನುದಾರರು ಕೊಂದರು. ಕೃಷಿ ಉತ್ಪಾದನೆ ಹೆಚ್ಚಳಕ್ಕೆ ಅನುಗುಣವಾಗಿ ಕೂಲಿ ದರವನ್ನೂ ಹೆಚ್ಚಿಸುವಂತೆ ಆಗ್ರಹಿಸಿ ಸಂಘಟಿತರಾದದ್ದು ಇವರ ಅಪರಾಧ.

ಲಾರಿಗಳಲ್ಲಿ ಬರುವ ಹಂತಕರು ಕೂಲಿಕಾರ್ಮಿಕರ ಗುಡಿಸಿಲುಗಳ ಮುತ್ತಿ ಬೆಂಕಿ ಇಟ್ಟರು. ಹೇಗಾದರೂ ಬದುಕಿಕೊಳ್ಳಲೆಂದು ಹಡೆದವರು ಗುಡಿಸಲಿನಿಂದ ಹೊರಗೆಸೆದ ಎರಡು ಕರುಳ ಕುಡಿಗಳನ್ನು ಎತ್ತಿಕೊಂಡು ಪುನಃ ಜ್ವಾಲೆಗಳಿಗೆ ಒಗೆದಿದ್ದರು ಕೊಲೆಗಡುಕರು. ಬೇಯುವ ಗುಡಿಸಲಿನಿಂದ ಹೊರಬಿದ್ದವರನ್ನು ಹಿಡಿದು ಕಡಿದು ಪುನಃ ಬೆಂಕಿಗೆ ಎಸೆಯಲಾಯಿತು. ಈ ನರಮೇಧದಲ್ಲಿ ಕರಕಲಾದವರು ಒಟ್ಟು 44 ಮಂದಿ- 23 ಮಕ್ಕಳು, 16 ಮಂದಿ ಹೆಣ್ಣುಮಕ್ಕಳು ಐವರು ವೃದ್ಧರು.

ಈ ಘಟನೆಯನ್ನು ಆಧರಿಸಿ ಇಂದಿರಾ ಪಾರ್ಥಸಾರಥಿ ಅವರು ಬರೆದ 'ಕರುಧಿಪ್ಪುನಾಳ್' ಕಾದಂಬರಿ 1977ರ ಸಾಹಿತ್ಯ ಅಕಾಡೆಮಿ ಪುರಸ್ಕಾರಕ್ಕೆ ಪಾತ್ರವಾಯಿತು. ಇದೇ ಕಾದಂಬರಿ ಆಧರಿಸಿ 1983ರಲ್ಲಿ ಬಿಡುಗಡೆಯಾದ ಚಲನಚಿತ್ರ 'ಕಣ್ ಸಿವಂಥಾಲ್ ಮಣ್ ಸಿವಕ್ಕುಮ್'. ಅರವಿಂಧನ್, ರಾಮಯ್ಯವಿನ್ ಕುಡಿಸೈ ಎಂಬ ಚಲನಚಿತ್ರ ಮತ್ತು ಸಾಕ್ಷ್ಯಚಿತ್ರಗಳು ತಯಾರಾದವು. ಇತ್ತೀಚಿನ ಧನುಷ್ ಅಭಿನಯದ 'ಅಸುರನ್' ನಲ್ಲಿಯೂ ಕಿಳ್ವೆನ್ಮಣಿಯ ದೃಶ್ಯಗಳಿವೆ.

- **ಚುಂಡೂರು (1991)**- ಸಿನೆಮಾ ಥಿಯೇಟರಿನಲ್ಲಿ ದಲಿತ ತರುಣನೊಬ್ಬನ ಕಾಲು ರೆಡ್ಡಿ ಜಾತಿಯ ವ್ಯಕ್ತಿಯೊಬ್ಬನಿಗೆ ಆಕಸ್ಮಿಕವಾಗಿ ತಗುಲಿದ ಕಾರಣ ನಡೆದ ಈ ನರಮೇಧದಲ್ಲಿ ಬಲಿಯಾದ ದಲಿತರು 13 ಮಂದಿ.
- **ಬಥಾನಿ ಟೋಲಾ (1996)**- ಬಿಹಾರದ ಭೋಜಪುರದ ಈ ನರಮೇಧದಲ್ಲಿ ಬಲಿಷ್ಠ ಜಾತಿಯ ರಣವೀರಸೇನೆ 21 ಮಂದಿ ದಲಿತರನ್ನು ಕೊಂದಿತು. ಈ ಪೈಕಿ ಹಸುಳೆಗಳನ್ನು ಆರಿಸಿ ವಧಿಸಲಾಯಿತು.
- **ಲಕ್ಷ್ಮಣಪುರ ಬಾಥೆ (1997)**- 37 ಮಂದಿ ಬಲಿಷ್ಠ ಜಾತಿ ಭೂಮಿಹಾರರ ಹತ್ಯೆಗೆ ಪ್ರತೀಕಾರವಾಗಿ 58 ಮಂದಿ ದಲಿತರನ್ನು ಗುಂಡಿಟ್ಟು ಕೊಲ್ಲಲಾಯಿತು.

ದೋಪ್ದಿ ಅನುಭವಿಸಿದ ಆ ಚಿತ್ರಹಿಂಸೆ

ಆದಿವಾಸಿಗಳ ಅಕ್ಕ- ಅಮ್ಮನೆಂದೇ ಪ್ರೀತಿಯಿಂದ ಕರೆಯಿಸಿಕೊಂಡವರು ದಿವಂಗತ ಮಹಾಶ್ವೇತಾದೇವಿ. 'ದೋಪ್ದಿ' (ದ್ರೌಪದಿ) ಅವರ ಬಹುಚರ್ಚಿತ ಸಣ್ಣ ಕತೆ. ಅದರ ಕಥಾನಾಯಕಿಯ ಹೆಸರು ದೋಪ್ದಿ. 70ರ ದಶಕದ ಪಶ್ಚಿಮ ಬಂಗಾಳದ 'ಸಜ್ಜನ ಕ್ರಾಂತಿಕಾರಿ'ಗಳೆಂದು ಕರೆಯಲಾದ ನಕ್ಸಲೀಯರ ಬೆಂಬಲಿಗ ಆದಿವಾಸಿ ದಂಪತಿಯ ಹೆಸರು ದೋಪ್ದಿ ಮತ್ತು ದುಲ್ನಾ ಮಾಝೀ. 'ಸಜ್ಜನ ಕ್ರಾಂತಿಕಾರಿ'ಗಳಿಗೆ ಗುಪ್ತ ಮಾಹಿತಿ ಒದಗಿಸುವ ಪತಿಪತ್ನಿ. ಆದಿವಾಸಿಗಳ ವಿರುದ್ಧ ದೌರ್ಜನ್ಯಗಳನ್ನು ಎಸಗಿದ ಬಲಿಷ್ಠ ಜಾತಿಯ ಭೂಮಾಲೀಕ ಸೂರ್ಯಕಾಂತ ಸಾಹುವಿನ ಹತ್ಯೆ ಸಂಬಂಧ ಇವರನ್ನು ಬಂಧಿಸಲಾಯಿತು. ದ್ರೌಪದಿಯನ್ನು ಚಿತ್ರಹಿಂಸೆ ಮತ್ತು ಅತ್ಯಾಚಾರಕ್ಕೆ ಗುರಿ ಮಾಡಲಾಯಿತು. ತನ್ನ ಸಹಚರರ ಹೆಸರು ವಿವರಗಳನ್ನು ಆಕೆ ಬಿಟ್ಟುಕೊಡುವುದಿಲ್ಲ. ಜರ್ಝರಿತ ರಕ್ತಸಿಕ್ತ ಬೆತ್ತಲು ದೇಹದ ಆಕೆಯನ್ನು ಸೇನಾಧಿಕಾರಿಯ ಮುಂದೆ ಹಾಜರುಪಡಿಸಲಾಯಿತು.

ದೋಪ್ದಿಯ ಅಂಗಾಂಗಗಳು ಅತ್ಯಾಚಾರ ಮತ್ತು ಅಮಾನುಷ ಚಿತ್ರಹಿಂಸೆಯಿಂದ ಜರ್ಝರಿತಗೊಂಡಿರುತ್ತವೆ. ಕೈ ಕಾಲುಗಳ ಅಗಲಿಸಿ ಕಟ್ಟಿ ಹಾಕಿ ಇರುಳೆಲ್ಲ ಆಕೆಯ 'ಒಡಲನ್ನು ಸೀಳಲಾಗಿತ್ತು'. ಯಾತನೆಯಿಂದ ಮೂರ್ಛೆ ಎಚ್ಚರಗಳ ನಡುವೆ ಜೀಕುತ್ತ ಕಣ್ತೆರೆದಾಗ ಸಾವಿರ ಚಂದ್ರ ಸೂರ್ಯರು ಕಣ್ಣಮುಂದೆ ಗರಗರನೆ ತಿರುಗಿದಂತೆ... ಒಂದರ ನಂತರ ಮತ್ತೊಂದರಂತೆ ರಕ್ತಮಾಂಸದ ಪುರುಷದಂಡಗಳು ಆಕೆಯನ್ನು ಬಗೆಯುತ್ತಲೇ ಇದ್ದವು.

ಮಹಾಶ್ವೇತಾ ಅವರ ಈ ದೋಪ್ದಿ ಭಾರತ ದೇಶದ ಆದಿವಾಸಿ ಸಮುದಾಯದ ನೆನ್ನೆ ಇಂದಿನ ವಾಸ್ತವ. ನಾಳೆಯೂ ಪರಿಸ್ಥಿತಿ ಬದಲಾಗುವ ಭರವಸೆ ಇಲ್ಲ. ದೇಶದ ಜೈಲುಗಳಲ್ಲಿ ಕೊಳೆಯುತ್ತಿರುವ ನೂರಾರು ದೋಪ್ದಿಗಳಿಗೆ ಕಣ್ಣೀರಿಡುವವರು ಯಾರು?

ಕಂಬಾಲಪಲ್ಲಿ ಕಹಿನೆನಪು

ಚಿಕ್ಕಬಳ್ಳಾಪುರ (ಅಂದಿನ ಅವಿಭಜಿತ ಕೋಲಾರ ಜಿಲ್ಲೆ)ಯ ಕಂಬಾಲಪಲ್ಲಿಯಲ್ಲಿ ಬಲಾಢ್ಯ ಜಾತಿಯ ಜನರ ಗುಂಪೊಂದು ದಲಿತರ ಮನೆಗಳ ಮೇಲೆ ದಾಳಿ ನಡೆಸಿ ಏಳು ಮಂದಿ ದಲಿತರನ್ನು ಮನೆಯೊಳಗೆ ಕೂಡಿ ಹಾಕಿ ಸೀಮೆಎಣ್ಣೆ ಸುರಿದು ಜೀವಂತವಾಗಿ ಸುಟ್ಟು ಹಾಕಿತು. ಜಮೀನುದಾರರ ಹೊಲಗಳಲ್ಲಿ ದುಡಿಯುತ್ತಿದ್ದ ದಲಿತರು ಮನುಷ್ಯರಂತೆ ಬದುಕಲು ತಮ್ಮ ಹಕ್ಕುಗಳನ್ನು ಸಮರ್ಥಿಸಿಕೊಂಡದ್ದೇ ಈ ಹತ್ಯಾಕಾಂಡಕ್ಕೆ ಪ್ರಚೋದನೆ.

ಬಿಹಾರದ ಬೆಲ್ಚಿ, ಪಿಪ್ರಾ, ಪಾರಸಬಿಘಾ, ದಾಂವರ್ ಬಿತಾ, ಗೈನಿ, ಶಂಕರಬಿಘಾ, ಮಹಾರಾಷ್ಟ್ರದ ಖೈರ್ಲಾಂಜಿ, ಆಂಧ್ರದ ಕರಂಚೇಡು, ಗುಜರಾತಿನ ಪಂಖಾನ್... ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಇನ್ನು ಪ್ರಭುತ್ವ ಪ್ರಾಯೋಜಿತ ನರಮೇಧಗಳು ಆಳುವವರು ಬಯಸಿದಾಗಲೆಲ್ಲ ಕಾಲ ಕಾಲಕ್ಕೆ ಎದ್ದು ನಿಲ್ಲುವ ವಿಷವೃಕ್ಷಗಳು. ಈ ವಿಷ ವೃಕ್ಷಗಳ ಹಣ್ಣುಗಳನ್ನು ಮೆಲ್ಲುತ್ತ ಮೈಮರೆತಿದೆ ಸಮಾಜ. ಆಳುವವರ ಪಾಲಿಗೆ ವರವಾಗಿ ಪರಿಣಮಿಸಿದೆ ಈ ಮೈಮರೆವು. ಸರ್ಕಾರಿ ಪ್ರಾಯೋಜಿತ ನರಮೇಧಗಳ ಎರಡು ಭೀಕರ ಉದಾಹರಣೆಗಳು ಇಲ್ಲಿವೆ

ಮಾರೀಚಝಾಪಿ (1979): ಪಶ್ಚಿಮ ಬಂಗಾಳದ ಮಾರೀಚಝಾಪಿ ದ್ವೀಪದ 'ಅಕ್ರಮ ದಲಿತ- ಹಿಂದುಳಿದ ನಿವಾಸಿ'ಗಳನ್ನು ಪಶ್ಚಿಮ ಬಂಗಾಳದ ಪೊಲೀಸರು, ಗಡಿ ಭದ್ರತಾ ಪಡೆಗಳು ಹಾಗೂ ಸ್ಥಳೀಯ ಗೂಂಡಾಗಳು ಸುತ್ತುವರಿದು ಗುಂಡಿಟ್ಟು ಕೊಂದರು. ದೇಶವಿಭಜನೆಯ ನಂತರ ಬಾಂಗ್ಲಾ ದೇಶದಿಂದ ನಡೆದ ಎರಡನೆಯ ಅಲೆಯ ವಲಸೆಯಲ್ಲಿ ಬಂದ ದಲಿತರು ಈ ದ್ವೀಪದಲ್ಲಿ ಬದುಕು ಕಂಡುಕೊಂಡಿದ್ದರು. ಹುಲಿ ಆವಾಸದ ರಕ್ಷಿತ ಅರಣ್ಯ ಪ್ರದೇಶದಿಂದ ಇವರನ್ನು ತೆರವು ಮಾಡಿಸಲು ಎಡರಂಗದ ಸರ್ಕಾರ ಭೀಷಣ ಕ್ರಮ ಜರುಗಿಸಿತು. ಆರ್ಥಿಕ ದಿಗ್ಬಂಧನಗಳ ಹೇರಿತು. ಕುಡಿಯುವ ನೀರು, ಆಹಾರ ಸಾಮಗ್ರಿ- ಔಷಧಿ ಪೂರೈಕೆ ತಡೆಯಿತು. ಕೊಳವೆ ಬಾವಿಗೆ ವಿಷ ಬೆರೆಸಿದ ಕಾರಣ 13 ಮಂದಿ ಸತ್ತರು. ಸರ್ಕಾರಗಳ ಮೂಗಿನಡಿಯಲ್ಲಿ ಮಾನವೀಯ ಹಕ್ಕುಗಳ ಘೋರ ಉಲ್ಲಂಘನೆ ನಡೆಯಿತು. ನಿರಾಯುಧ ಜನರ ಮೇಲೆ ಗುಂಡು ಹಾರಿಸಲಾಯಿತು. ಕಳೇಬರಗಳನ್ನು ರೈಮಂಗಲ್ ನದಿಗೆ ಎಸೆಯಲಾಯಿತು, ಹೆಣ್ಣುಮಕ್ಕಳ ಮೇಲೆ ಅತ್ಯಾಚಾರಗಳು ನಡೆದವು, ದ್ವೀಪವಾಸಿಗಳ ಗುಡಿಸಿಲುಗಳು ಮತ್ತು ದೋಣಿಗಳನ್ನು ಸುಡಲಾಯಿತು. 1977ರ ಸೋಲಿನ ನಂತರ ಕಾಂಗ್ರೆಸ್ ದುರ್ಬಲವಾಗಿತ್ತು. ಕೇಂದ್ರದಲ್ಲಿ ಮೊರಾರ್ಜಿ ದೇಸಾಯಿ ಅವರ ಸರ್ಕಾರ ಎಡರಂಗದ ಊರುಗೋಲಿನಿಂದ ನಡೆದಿತ್ತು. ಕಾನ್ಷಿರಾಮ್ ಅವರ ಸಂಘಟನೆಗೆ ಇನ್ನೂ ಬಲ ಬಂದಿರಲಿಲ್ಲ. ಹೀಗಾಗಿ ಈ ದಲಿತ ನಾಮಶೂದ್ರ ನಿರಾಶ್ರಿತರ ಪರವಾಗಿ ದನಿಯೆತ್ತುವವರೇ ಇರಲಿಲ್ಲ.

ಈ ನರಮೇಧದಲ್ಲಿ ಸತ್ತವರ ಸಂಖ್ಯೆ ಇಂದಿಗೂ ಖಚಿತವಾಗಿ ತಿಳಿಯದು. ಸಾವಿರಗಳ ಸಂಖ್ಯೆಯಲ್ಲಿ ಅಂದಾಜು ಮಾಡಲಾಗಿದೆ. ದೊಡ್ಡ ಮಟ್ಟದ ವಿಚಾರಣೆಯೂ ಈ ಹತ್ಯಾಕಾಂಡದ ಕುರಿತು ನಡೆಯಲಿಲ್ಲ. ಯಾರ ಮೇಲೆಯೂ ಚಾರ್ಜ್ ಶೀಟ್ ಹಾಕಲಾಗಿಲ್ಲ.



ಸರಸ್ವತಿ ದೇವಾಲಯ

ಶಿಲೆಯಲ್ಲವೇ ಗುಡಿಯು ಕಲೆಯ ಬಲೆಯು ಎಂಬ ಮಾತು ಗದಗಿನ ಸರಸ್ವತಿ ದೇವಾಲಯಕ್ಕೆ ಅತ್ಯಂತ ಅನ್ವಯವಾಗುತ್ತದೆ. ಈ ದೇಗುಲದಲ್ಲಿನ ಕಂಬಗಳಲ್ಲಿನ ಸೂಕ್ಷ್ಮ ಕೆತ್ತನೆಗಳು ಪೌರಾಣಿಕ ಘಟನೆಗಳನ್ನು ಹೇಳುವ ಫಲಕಗಳೇನೋ ಎಂಬಂತೆ ತೋರುತ್ತವೆ. ಶಿಲ್ಪಕಲಾವೈಭವ ಕಣ್ಮನ ಸೆಳೆಯುತ್ತದೆ.

ಶಿಲ್ಪಕಲಾವೈಭವದ ಸರಸ್ವತಿ ದೇಗುಲ

ಸ್ಮಿತಾ ಮೈಸೂರ

ಪ್ರವಾಸ

ಇತ್ತೀಚೆಗೆ ಗದಗ, ಲಕ್ಕುಂಡಿಯ ಐತಿಹಾಸಿಕ ಸ್ಮಾರಕಗಳನ್ನು ನೋಡಲು ಹೋಗಿದ್ದೆ. ಹಿಂದೆ ಆಕಾಶವಾಣಿಗೆ 'ಮರೆತ ಪುಟಗಳು' ಕಾರ್ಯಕ್ರಮ ಮಾಡುವಾಗ ಹೋಗಿದ್ದರೂ ಇವುಗಳನ್ನು ಸೂಕ್ಷ್ಮವಾಗಿ ನೋಡಲು ಆಗಿರಲಿಲ್ಲ. ಒಂದೇ ದಿನ ಎರಡು-ಮೂರು ಸ್ಮಾರಕಗಳನ್ನು ನೋಡುತ್ತಾ ದಾಖಲೆ ಮಾಡುವಾಗ ವಿವರವಾಗಿ ನೋಡಲು ಆಗಿರಲಿಲ್ಲ. ಗದುಗಿನ ತ್ರಿಕೂಟಾಚಲ ಅಥವಾ ತ್ರಿಕೂಟೇಶ್ವರ ಮಂದಿರದಲ್ಲಿರುವ ಶಿಲ್ಪಕಲಾವೈಭವ ಕಣ್ಣು ಮನಸ್ಸು ತುಂಬುವಂಥದ್ದು. ನಾನು ಅಲ್ಲಿಗೆ ತಲುಪಿದ್ದಾಗ ಮಧ್ಯಾಹ್ನ ಮೂರು ಗಂಟೆ. ಆದರೆ ಆರು ಗಂಟೆಯವರೆಗೆ ತ್ರಿಕೂಟೇಶ್ವರ ದೇವಸ್ಥಾನದ ಬಾಗಿಲು ತೆಗೆಯುವುದಿಲ್ಲ ಎಂದು ತಿಳಿಯಿತು. ಹೀಗಾಗಿ ಗುಡಿಯ ಸುತ್ತಲಿನ ಶಿಲ್ಪಕಲಾವೈಭವ ಮತ್ತು ಸರಸ್ವತಿ ಮಂದಿರದ ಅದ್ಭುತವಾದ ಕೆತ್ತನೆಯಿರುವ ಕಂಬಗಳನ್ನು ನೋಡಲು ಸಾಧ್ಯವಾಯಿತು. ಸರಸ್ವತಿ ಮಂದಿರ ಅತ್ಯಂತ ಸುಂದರವಾಗಿ ಸುಸ್ಥಿತಿಯಲ್ಲಿದ್ದರೂ ಮುಖ್ಯ ಮೂರ್ತಿ ಭಗ್ನವಾಗಿದ್ದರಿಂದ ಆ ಮೂರ್ತಿಗೆ ಪೂಜೆಯಿಲ್ಲ. ಹೀಗಾಗಿ ಆ ಮಂದಿರಕ್ಕೆ ಬಾಗಿಲು, ಬೀಗ ಯಾವುದೂ ಇಲ್ಲ.

11ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಸೋಮೇಶ್ವರ ಎಂಬ ಅರಸನಿಂದ ನಿರ್ಮಾಣವಾದ ತ್ರಿಕೂಟೇಶ್ವರ, ಸರಸ್ವತಿ, ಗಾಯತ್ರಿ ಮಂದಿರಗಳು ತಮ್ಮ ಶಿಲ್ಪಕಲಾವೈಭವವನ್ನು ಇಂದಿಗೂ ತೋರುತ್ತಾ ಆಕರ್ಷಿಸುತ್ತಿವೆ. ಇಂದಿನ ಅಧಿಕಾರಸ್ಥರಿಗೆ ವೈಭವಯುತ ಬಂಗಲೆಗಳು, ಹೋಟೆಲ್‌ಗಳನ್ನು ಕಟ್ಟಿಸಲು ಆಸಕ್ತಿ. ಆದರೆ, ಹಿಂದಿನ ಕಾಲದ ರಾಜರು ಮಂದಿರಗಳನ್ನು ನಿರ್ಮಿಸುವಲ್ಲಿ ಬಹಳ ಆಸಕ್ತಿ ತೋರುತ್ತಿದ್ದರು. ಅವೂ ವಿಭಿನ್ನ ಶಿಲ್ಪಕಲೆ, ಸೂಕ್ಷ್ಮಕೆತ್ತನೆಯ ಮೂರ್ತಿಗಳಿಂದ ಕಂಗೊಳಿಸುತ್ತಿದ್ದವು.

ಕಲ್ಯಾಣ ಚಾಲುಕ್ಯರು ಕರ್ನಾಟಕವನ್ನು ಮತ್ತು ಇತರೆ ರಾಜ್ಯಗಳನ್ನು ಅಥವಾ ಅವುಗಳ ಕೆಲ ಭಾಗವನ್ನು ಸುಮಾರು 200 ವರ್ಷಗಳ ಕಾಲ ಆಳಿ ಈ ನೆಲವನ್ನು ಸಮೃದ್ಧಿಗೊಳಿಸಿದ್ದಾರೆ. ಪ್ರತೀ ಊರಿನಲ್ಲಿ, ಸಣ್ಣ ಸಣ್ಣ ಹಳ್ಳಿಯಲ್ಲೂ ಆ ಕಾಲದ ಒಂದಲ್ಲ ಒಂದು ದೇವಾಲಯವಿದ್ದೇ ಇದೆ. 'ನಮ್ಮ ಊರಿಗೆ ಬನ್ನಿ, ಇಲ್ಲಿ ಚಾಲುಕ್ಯರ ಕಾಲದ ದೇಗುಲವೊಂದಿದೆ. ನೋಡುವಿರಂತೆ' ಎಂದು ಕರೆಯುವ ಆತ್ಮೀಯರ ಮಾತುಗಳು ನಮಗೆ ಇಂಥ ದೇಗುಲಗಳ, ಅಲ್ಲಿನ ಶಿಲ್ಪಕಲೆಯ ದರ್ಶನ ಮಾಡಿಸುತ್ತವೆ.

ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು ಎಂಬ ಮಾತು ಗದಗಿನ ಸರಸ್ವತಿ ದೇವಾಲಯಕ್ಕೆ ಅತ್ಯಂತ ಅನ್ವಯವಾಗುತ್ತದೆ. ಚಾಲುಕ್ಯರ ಕಾಲವನ್ನು ಶಿಲ್ಪಕಲಾವೈಭವದ ಮೇರು ಕಾಲವೆಂದೇ ಹೇಳಬಹುದು. ಏಕೆಂದರೆ ಇಲ್ಲಿನ ವೈಶಿಷ್ಟ್ಯಪೂರ್ಣವಾದ ಕುಸುರಿ ಕೆತ್ತನೆಯ ಕಂಬಗಳು, ಭಿತ್ತಿ ಶಿಲ್ಪಗಳು, ಅಧಿಷ್ಠಾನ, ವಿನ್ಯಾಸ, ಮೂರ್ತಿಗಳಲ್ಲಿನ ಜೀವಂತಿಕೆ ಇವೆಲ್ಲ ಮುಂದೆ ಬೇಲೂರು, ಹಳೆಬೀಡಿನ ಶಿಲ್ಪಕಲೆಗೆ ತಳಹದಿ ಆದವು. ಐಹೊಳೆ, ಪಟ್ಟದಕಲ್ಲುಗಳನ್ನಂತೂ ಶಿಲ್ಪಕಲೆಯ ತರಬೇತಿ ಶಾಲೆಗಳು ಎಂದೇ ಕರೆಯುತ್ತಾರೆ.

ಸರಸ್ವತಿ ದೇವಾಲಯದ ಒಳಗಿರುವ ಸರಸ್ವತಿ ಮೂರ್ತಿ ಪೂಜೆಗೊಳ್ಳುತ್ತಿದ್ದ ಕಾಲದಲ್ಲಿ ಹೇಗಿದ್ದಿರಬಹುದು, ಎಷ್ಟು ಪವಿತ್ರ ಭಾವನೆ, ಭಕ್ತಿ ಭಾವ ಹುಟ್ಟುತ್ತಿರಬಹುದು ಎಂದೆನಿಸುತ್ತದೆ. ಗುಡಿಯ ಪ್ರತಿಯೊಂದು ಕಂಬ, ಕಟ್ಟೆ, ಕಟ್ಟೆಯ ಹೊರಗೋಡೆ, ಪ್ರದಕ್ಷಿಣಾ ಪಥದಲ್ಲಿ ಕಾಣಸಿಗುವ ಸುಂದರ ಕಲಾಕೃತಿಗಳು ಒಂದಕ್ಕಿಂತ ಒಂದು ಸುಂದರವಾಗಿವೆ. ಇಂಥ ಕಲಾಕೃತಿಗಳನ್ನೂ ನಾವು ನೋಡಿ ಆನಂದಿಸಬೇಕಾದರೆ ನಮಗೆ ಒಂದು ಸಂಸ್ಕಾರ ಬೇಕು. ಇಲ್ಲಿ ಸಂಸ್ಕಾರವೆಂದರೆ, ನಮ್ಮ ಮೇಲೆ ಪರಂಪರೆ, ಸಂಪ್ರದಾಯಗಳಿಂದ ಆದ ಪ್ರಭಾವ ಮಾತ್ರ ಎಂದು ಭಾವಿಸದೆ, ನಮ್ಮ ಕಣ್ಣು, ಮನಸ್ಸು ಕಲೆಯ ಯಾವುದೇ ಭಾಗವನ್ನು ನೋಡಿ, ಹ್ಞಾಂ ಇದು ಇಲ್ಲಿ ಹೊಂದಿಕೆಯಾಗುತ್ತದೆ. ಇಲ್ಲಿ ಇದು ಬೇಕಿತ್ತೇ, ಈ ಭಾಗ ಇಷ್ಟು ಸೂಕ್ಷ್ಮವಾಗಿದ್ದೇ ಒಳ್ಳೆಯದಾಯಿತು, ಇದು ಮನದಲ್ಲಿ ತುಂಬಿನಿಲ್ಲುವಂಥದ್ದು ಎಂಬ ಭಾವ. ಸರಸ್ವತಿ ದೇವಾಲಯದ ಕಂಬಗಳನ್ನು, ದೇವಾಲಯದ ಹೊರಗೋಪುರದ ಸುಂದರ ಶಿಲ್ಪಗಳನ್ನು ನೋಡಿದಾಗ ಆಗುವ ಅನುಭವ ವಿಶಿಷ್ಟ. ಜಡವಾದ ಕಲ್ಲುಗಳಲ್ಲಿ ಶಿಲ್ಪ ಹೊರಡಿಸಿದ ಲಾಲಿತ್ಯ, ಬೆರಗು ಬಿನ್ನಾಣ, ವಿಸ್ಮಯ ನೋಡಿದಾಗ ಶಿಲ್ಪಿಗೆ ಒಲಿದ ಕಲೆ ದೈವದತ್ತವೇನೋ ಅನ್ನಿಸುತ್ತದೆ.

ಕಲ್ಲಿನ ಚಾವಣಿ ಹೊಂದಿರುವ ಸರಸ್ವತಿ ದೇವಾಲಯದ ಕಂಬಗಳದೇ ಒಂದು ವೈಶಿಷ್ಟ್ಯ. ಪ್ರತೀ ಕಂಬವೂ ಅದರದೇ ಆದ ವಿಶೇಷ ಹೊಂದಿದೆ. ದೇವಾಲಯದ ಒಳಾಂಗಣದ ಸುಮಾರು ಎಂಟು ಕಂಬಗಳನ್ನು ಹೊಂದಿದ ನವರಂಗ, ನೋಡಿದೊಡನೆ ಮನಸೆಳೆಯುವಂತಿದೆ. ಕಾರಣ, ಅದರಲ್ಲಿನ ಸೂಕ್ಷ್ಮ ಕೆತ್ತನೆಗಳು. ಇವುಗಳು ಪೌರಾಣಿಕ ಘಟನೆಗಳನ್ನು ಹೇಳುವ ಫಲಕಗಳೇನೋ ಎಂಬಂತೆ ತೋರುತ್ತವೆ. ಅಷ್ಟೊಂದು ಘಟನಾವಳಿಗಳು ಆರಾಧ್ಯದ ಮೂರ್ತಿಗಳು, ಅವರನ್ನು ಸುತ್ತುವರಿದ ಲತೆಬಳ್ಳಿಗಳು ಈ ಎಲ್ಲ ಕಂಬಗಳಲ್ಲಿ ಇವೆ. ನಂದಿಯನ್ನೇರಿದ ಶಿವಪಾರ್ವತಿ ಮೂರ್ತಿ, ಅವರ ತಲೆಯ ಮೇಲಿರುವ ಪ್ರಭಾವಳಿ, ಕೆಳಗೆ ಇರುವ ಗಣಗಳು ಕೈಲಾಸದ ಕಲ್ಪನೆ ನೀಡುತ್ತವೆ.

ಎರಡೂ ಬದಿಯಲ್ಲಿ ಚಿಕ್ಕಚಿಕ್ಕ ಗೋಪುರಗಳನ್ನು ಹೊಂದಿರುವ ಕಂಬಗಳು, ಮತ್ತೊಂದು ಕಂಬದ ಮೇಲೆ ಯಕ್ಷ, ಯಕ್ಷಿಣಿಯರ ಮಧ್ಯೆ ವಿಷ್ಣು, ಲಕ್ಷ್ಮಿ ಸುಂದರವಾಗಿ ಕಂಗೊಳಿಸುತ್ತಾರೆ. ಕಂಬಗಳನ್ನು ನೋಡುತ್ತಾ ಕಣ್ಣುಗಳನ್ನೂ ಮೇಲೆ ಹಾಯಿಸಿದಾಗ ಸುಂದರವಾದ ಭುವನಾಶಿ, ಅಂದರೆ ಛತ್ತಿನಲ್ಲಿರುವ ಉಬ್ಬು ನೆತ್ತನೆಯ ಅಲಂಕಾರ ಮನಸೆಳೆಯುತ್ತದೆ. ಇಡೀ ದೇವಾಲಯದ ಹೊರಾಂಗಣ ಗೋಡೆಗಳಲ್ಲೂ ಸಾಕಷ್ಟು ಶಿಲ್ಪಕಲಾ ವೈಭವ, ದೇವಾಲಯದ ಕಟ್ಟೆಯ ಮೇಲೂ ಸುಂದರವಾದ ಉಬ್ಬು ಶಿಲ್ಪಗಳಿವೆ.

ಈ ದೇವಾಲಯಕ್ಕೆ ಗೋಪುರವಿಲ್ಲ. ಕಲ್ಲಿನ ಚಾಚು ಗೋಡೆಗಳಿಂದ ದೇವಾಲಯ ನಿರ್ಮಿಸಿದ್ದಾರೆ. ಆದರೆ ಇಂಥ ಶಿಲ್ಪಕಲಾ ವೈಭವದ ತ್ರಿಕೂಟೇಶ್ವರ ದೇವಾಲಯದ ಪ್ರಾಂಗಣ ಸ್ವಲ್ಪವೂ ಸ್ವಚ್ಛವಾಗಿಲ್ಲ. ಕಾಲಹರಣ ಮಾಡುವ ಅನೇಕರು ಇಲ್ಲಿ ಕಾಣಸಿಗುತ್ತಾರೆ. ಸುಂದರವಾದ ಕಂಬಗಳಿಗೆ ಒರಗಿ ಕುಳಿತರೆ ಆ ಶಿಲ್ಪಕಲೆ ಹಾಗೇ ಉಳಿದೀತೇ? ಇಡೀ ಆವರಣ ಕಸಕಡ್ಡಿಯಿಂದ ತುಂಬಿದೆ. ಇಂಥ ಪರಿಸರದಲ್ಲೂ ತನ್ನತ್ತ ಸೆಳೆಯುವ ಈ ಶಿಲ್ಪಕಲೆ ಹೀಗೆ ಉಳಿಯಬಹುದೇ ಎಂಬ ವಿಷಾದ ಕಾಡದೇ ಇರದು. ಆದರೆ, ತ್ರಿಕೂಟೇಶ್ವರದ ಒಂದೇ ಅಧಿಷ್ಠಾನದಲ್ಲಿ ಮೂರು ಶಿವಲಿಂಗಗಳು ಇರುವ ಗುಡಿಯ ಪಕ್ಕ ಸರಸ್ವತಿ ದೇವಾಲಯ ಇರಬೇಕು ಎಂಬ ಅರಸನ ಅಭಿಲಾಷೆಗೆ ಕಾರಣವೇನು?

ಸರಸ್ವತಿ ದೇವಾಲಯದ ಹೊರನೋಟ

ಚಿತ್ರಗಳು: ಬನೇಶ್ ಕುಲಕರ್ಣಿ

ಬದುಕಿಗಾಗಿ ನಡೆಸಿದ ಹೋರಾಟದ ಕಥನ

ಪುನೀತ್ ತಥಾಗತ

ರಂಗಭೂಮಿ

ನಮ್ಮೆಲ್ಲರಿಗೂ ಒಂದು ಬದುಕಿದೆ ಎಂದು ನಾವು ಭಾವಿಸಿಕೊಂಡಿರುತ್ತೇವೆ. ಆದರೆ, ಎಲ್ಲರಿಗೂ ಸಮಾನವಾದ, ಘನತೆಯುಳ್ಳ ಬದುಕು ಇಲ್ಲ ಎಂಬುದನ್ನು ನಾವು ಒಪ್ಪಲೇಬೇಕು. ಈ ಸಮಾಜದಲ್ಲಿನ ಲಿಂಗ, ಧರ್ಮ, ಜಾತಿ, ವರ್ಣಗಳು ತಮ್ಮದೇ ಅಹಂಗಳ ಕಾರಣಕ್ಕೆ ಗೋಡೆಗಳನ್ನು ರೂಪಿಸಿ ಕೆಲವರ ಬದುಕು ಚೆಂದವಾಗಿಯೂ, ಚೊಕ್ಕವಾಗಿಯೂ ರೂಪಿಸಿದರೆ ಹಲವರ ಬದುಕನ್ನು ದುಸ್ತರಗೊಳಿಸಿ ಅವರ ಬದುಕು 'ಬದುಕೇ ಅಲ್ಲ' ಎನ್ನುವ ಮಟ್ಟಿಗೆ ನಂಬಿಸುವ, ಯಾಂತ್ರೀಕರಿಸುವ ಕೆಲಸವನ್ನು ಮಾಡುತ್ತಿರುತ್ತದೆ. ಅದರಲ್ಲೂ ಗಂಡು-ಹೆಣ್ಣಿನ ಜೈವಿಕ ವ್ಯತ್ಯಾಸಕ್ಕೆ ಕಂಡು ಕೇಳರಿಯಲಾರದ ಬದುಕಿನ ವೈಪರೀತ್ಯಗಳಿರುವಾಗ ಹುಟ್ಟುವಾಗ ಗಂಡಾಗಿಯೊ-ಹೆಣ್ಣಾಗಿಯೊ ಹುಟ್ಟಿ ಮನದಾಳದ ಭಾವನೆಗಳಲ್ಲಿ ಭಿನ್ನವಾದ ಜನರ ಬದುಕುಗಳನ್ನು ಈ ಸಮಾಜ ಒಪ್ಪುವುದಿರಲಿ, ಉಸಿರಾಡಲೇಬಾರದು ಎನ್ನುವ ಹಾಗೆ ವರ್ತಿಸುವ ಸಮಾಜಕ್ಕೆ ಹೋರಾಟದ ಮೂಲಕವೇ ಉತ್ತರಿಸಿದ ಬದುಕು ಪದ್ಮಶಾಲಿ ಅಕ್ಕಯ್ ಅವರದ್ದಾಗಿದೆ.

ಪ್ರೊ. ಡಾಮಿನಿಕ್ ಅವರು ನಿರೂಪಿಸಿರುವ ಅಕ್ಕಯ್ ಅವರ ಆತ್ಮಕಥನವನ್ನು ರಂಗ ರೂಪಕ್ಕೆ ಇಳಿಸಿ, ಸಮುದಾಯದ ಸಂಕಟಗಳನ್ನು ಅಕ್ಷರ ರೂಪದಿಂದ ಜನಸಾಮಾನ್ಯನ ಬಳಿಗೆ ಕರೆದೊಯ್ಯೊವ ಮಹತ್ವದ ಕೆಲಸವನ್ನು ಬೇಲೂರು ರಘುನಂದನ್ ಮಾಡಿದ್ದಾರೆ. ಅಕ್ಕಯ್ ಅವರ ನೋವಿಗೆ, ಹೋರಾಟಕ್ಕೆ ರಂಗದ ಮೇಲೆ ಮೆರಗು ತಂದವರು ನಯನ ಸೂಡ. ನಾಟಕದ ಸಂಗೀತ ನಿರ್ದೇಶನ ರಾಜಗುರು ಹೊಸಕೋಟೆ. ಇಡೀ ನಾಟಕವನ್ನು ರಂಗಪಯಣ ಮತ್ತು ಕಾಜಾಣ ರಂಗದ ಮೇಲೆ ತಂದಿದೆ.

ಜೈವಿಕವಾಗಿ ಗಂಡಾಗಿ ಹುಟ್ಟಿ ಹೆಣ್ಣಾಗುವ ತವಕಕ್ಕೆ ಕಾದ ಎಣ್ಣೆ ಸುರಿಯುವವರಿಗೆ ಲೆಕ್ಕವಿಲ್ಲ. ಪಬ್ಲಿಕ್ ಟಾಯ್ಲೆಟ್‌ಗಳು, ಗೋಡೆಯಾಚೆಗಿನ ಬದಿಗಳು, ಫಿಲಂ ಥಿಯೇಟರ್‌ಗಳು, ನಗರಗಳ ಮೇಲ್ಸೇತುವೆಗಳು ಹೀಗೆ ಎಲ್ಲೆಂದರಲ್ಲಿ ಬಟ್ಟೆ ಬಿಚ್ಚಿ ನಿಲ್ಲುವ ಲೈಂಗಿಕತೆಗಳಿಗೆ ಸಮಾಜ ಇಟ್ಟ ಹೆಸರು 'ಅಕ್ರಮ' ಎಂದಾದರೂ ಅದು ನಡೆಸುವ ಪ್ರಕ್ರಿಯೆಗಳೆಲ್ಲವೂ ಅದಕ್ಕೆ ವಿರುದ್ಧವಾಗಿಯೇ ಇವೆ. ನಾಟಕದಲ್ಲಿ ಇಂತಹ ಲೈಂಗಿಕತೆಯ ಸೋಗಲಾಡಿನಗಳು, ವಿಕೃತಗಳು ಹಾಗೂ ಬಣ್ಣಗಳ ಮರೀಚಿಕೆಯನ್ನು ತೀಕ್ಷ್ಣವಾಗಿ ಪ್ರಶ್ನಿಸಲಾಗಿದೆ. ಹಂಗುಗಳನ್ನು ತೊರೆದು ನಯನ ಸೂಡ ಅಭಿನಯಿಸಿರುವುದು ಪ್ರೇಕ್ಷರಿಗೆ ಸವಾಲೆಸದಂತಾಗಿದೆ.

ಲೈಂಗಿಕ ಅಲ್ಪಸಂಖ್ಯಾತ ಸಮುದಾಯಗಳು ಎಲ್ಲೆಲ್ಲಿಯೂ ಅವಮಾನ, ಅಪಹಾಸ್ಯಗಳಿಗೆ ಗುರಿಯಾಗುತ್ತಿರುತ್ತವೆ. ಭಿಕ್ಷಾಟನೆ ಮಾಡುತ್ತಾರೆ, ಅಸಹ್ಯವಾಗಿ ನಡೆದುಕೊಳ್ಳುತ್ತಾರೆ ಎಂದು ಟಂಕಿಸುವ ನಮ್ಮ ಮನಃಸ್ಥಿತಿಗಳಿಗೆ ಪ್ರಶ್ನೆಗಳ ಸರಮಾಲೆಯನ್ನೇ ಎಸೆದು ಉತ್ತರಿಸಲಾಗದ ಸಂದಿಗ್ಧಕ್ಕೆ ನಮ್ಮನ್ನು ದೂಡುವಂತೆ ನಾಟಕ ಮಾಡುತ್ತದೆ. ಪಾತ್ರಕ್ಕೆ, ಸಮುದಾಯಕ್ಕೆ ತಕ್ಕ ಹಾಡು, ಸಂಗೀತ ಮತ್ತು ರಾಜಗುರು ಅವರ ಭಾವ ತೀವ್ರತೆಯ ಆಲಾಪಗಳು ನಮ್ಮ ಕುರಿತು ನಾವೇ ನಾಚಿಕೆಪಟ್ಟುಕೊಳ್ಳುವ ಹಾಗೆ ಮಾಡಿದ್ದು ಸುಳ್ಳಲ್ಲ.

ಈ ಸಮಾಜ ತುಂಬಾ ಸಭ್ಯತೆವೆಂತಲೂ ಸುಸಂಸ್ಕೃತವೆಂತಲೂ ಕಂಡಾಗ ಸಹ ಇದು ಒಳಗೊಳ್ಳದ ಸಾಮಾಜಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಇಲ್ಲದಿದ್ದಲ್ಲಿ ಅಕ್ಕಯ್ ಅಂತಹ ಜೀವಗಳು ಈ ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗುವ ಪ್ರಮೇಯ ಎದುರುಗೊಳ್ಳುತ್ತಿರಲಿಲ್ಲ. ಜಗತ್ತಿನ ಇತಿಹಾಸಕ್ಕೆ ಪ್ರಶ್ನೆ ಎತ್ತುವ ಅಕ್ಕಯ್ ಅವರ ಬದುಕನ್ನು, ಅವರ ಜೀವನ ಕ್ರಮ, ಸಮುದಾಯದ ಆಚರಣೆ, ಮೂಢನಂಬಿಕೆ, ಗಂಡೊಳಗಿನ ಹೆಣ್ತನಗಳ ಗೊಂದಲಗಳನ್ನು ಪ್ರೇಕ್ಷಕನಿಗೆ ತಲುಪಿಸಿದ್ದು, ನಗಿಸಿದ್ದು, ಅಳಿಸಿದ್ದು, ಯೋಚಿಸುವ ಹಾಗೆ, ಪ್ರಶ್ನಿಸುವ ಹಾಗೆ, ತಿದ್ದಕೊಳ್ಳುವ ಹಾಗೆ ಮಾಡಿದ್ದು ಮಾತ್ರ ಅಕ್ಕಯ್ ಪಾತ್ರವನ್ನು ಮಾಡಿದ ನಯನ ಅವರು.

ನಯನ ಸೂಡ

ರಂಗರೂಪ ಮತ್ತು ನಿರ್ದೇಶನ ಮಾಡಿರುವ ಬೇಲೂರು ಅವರು ನಾಟಕದ ಉದ್ದಕ್ಕೂ ಗೆದ್ದಿರುವುದು ನಮಗೆ ಗೋಚರಿಸುತ್ತದೆ. ಒಂದು ಹೆಣ್ಣು ಪಾತ್ರ ಮಾಡುತ್ತಿದ್ದಾರೆ, ಆಕೆ ಲೈಂಗಿಕ ಅಲ್ಪಸಂಖ್ಯಾತೆಯ ಪಾತ್ರ ಮಾಡುತ್ತಿರುವಾಗ ಆಕೆಯ ಕೈಗೆ ಸಂವಿಧಾನವನ್ನು ಇಟ್ಟು, ಹೆಗಲಿಗೆ ನೀಲಿ ಶಾಲನ್ನು ಹೊದಿಸಿ ದಿಕ್ಸೂಚಿ ತೋರಿಸುವ, ಹೋರಾಟದ ಪ್ರತೀ ಹೆಜ್ಜೆಯಲ್ಲಿ ಸಾವಿರ ಸಾವಿರ ಮೈಲಿಗಲ್ಲುಗಳನ್ನು ಸ್ಥಾಪಿಸಿದ ಅಂಬೇಡ್ಕರ್ ಅವರ ತದ್ರೂಪಿಯನ್ನು ಸೃಷ್ಟಿಸಿದ್ದರಲ್ಲಿ ಆ ಗೆಲುವಿದೆ. ಭಾರತೀಯ ಹೋರಾಟಗಳ ಧ್ವನಿ 'ಅಂಬೇಡ್ಕರ್' ಎನ್ನುವುದು ಸಾರ್ವಕಾಲಿಕವಾದ ಸತ್ಯ ಎಂಬುದನ್ನು ಇಂತಹ ಪ್ರಕ್ಷುಬ್ಧ ಸನ್ನಿವೇಶದಲ್ಲಿಯೂ ಪ್ರತಿಷ್ಠಾಪಿಸಿದ್ದು ನಾಟಕ ಇನ್ನಷ್ಟು ಆಪ್ತವಾಗಲು ಸಾಧ್ಯವಾಗಿದೆ. ಅಲ್ಲದೆ ಒಬ್ಬ ಲೈಂಗಿಕ ಅಲ್ಪಸಂಖ್ಯಾತೆಯ ಪಾತ್ರ ಮಾಡುತ್ತಿರುವ ಹೆಣ್ಣೊಬ್ಬಳ ಕೈಯಲ್ಲಿ ಸಂವಿಧಾನವನ್ನು ಹಿಡಿಸಿದಾಗ ಇಡೀ ಪ್ರೇಕ್ಷಕರಲ್ಲಿ ಸಂಚಲನ ಉಂಟು ಮಾಡಿತು.

ಸಮುದಾಯದ ಹೋರಾಟ, ಪ್ರತ್ಯೇಕತೆಯಿಂದ ಒಳಗೊಳ್ಳುವ ಪ್ರಕ್ರಿಯೆ, ಸಹಜ-ಅಸಹಜತೆಯ ಮೀರಿದ ಸಂಬಂಧಗಳನ್ನು ದಿಟ್ಟ ಧ್ವನಿಯ ಮೂಲಕ ಆಜ್ಞಾಪಿಸಿದ ಅಕ್ಕಯ್ ಅವರ ಬದುಕಿಗೆ, ಇಡೀ ನಾಟಕ ತಂಡಕ್ಕೆ, ಅಕ್ಕಯ್ ಪಾತ್ರಕ್ಕೆ ಜೀವ ತುಂಬಿದ ನಯನ ಅವರಿಗೆ ಅಭಿನಂದನೆಗಳು ಸಲ್ಲುತ್ತವೆ. ಪಟ್ಟಶ್ರಮದ ಫಲವಾಗಿ ಸಮಾಜದಲ್ಲಿನ ಅಪನಂಬಿಕೆಗಳು ದೂರಾದರೆ ಅಕ್ಕಯ್ ಅವರ ಹೋರಾಟಕ್ಕೆ ಇನ್ನಷ್ಟು ಜಯ ಸಿಕ್ಕಂತಾಗುತ್ತದೆ.

ಮುನ್ನೋಟ 20-03-2022 ರಿಂದ 26-03-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಯುವತಿಯರಿಗೆ ಉತ್ತಮ ಅವಕಾಶಗಳು ತೆರೆದುಕೊಳ್ಳುವ ಸಂಭವವಿದೆ. ನೌಕರಿಯಲ್ಲಿರುವ ಮಹಿಳೆಯರಿಗೆ ಉದ್ಯೋಗ ಸ್ಥಳದಲ್ಲಿ ಕಿರಿಕಿರಿ ಉಂಟಾಗಬಹುದು. ಮಕ್ಕಳಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾದೀತು. ಹೊಸದಾಗಿ ಬರುವ ಜಂಟಿ ವ್ಯವಹಾರಗಳಲ್ಲಿ ಭಾಗವಹಿಸದಿರುವುದು ಬಹಳ ಉತ್ತಮ. ಕೆಲವೊಂದು ತುರ್ತು ವಿಷಯಗಳಿಗಾಗಿ ಮೇಲಧಿಕಾರಿಗಳನ್ನು ಸಂಪರ್ಕಿಸಬೇಕಾಗಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಆತ್ಮೀಯರ ಸಲಹೆಯಿಂದ ಎದುರಾಗಿದ್ದ ವಿಪತ್ತಿನಿಂದ ಪಾರಾಗುವಿರಿ. ಹಣದ ಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಕೆಲವು ನೌಕರಸ್ಥರಿಗೆ ಬಿಡುವಿಲ್ಲದ ಕೆಲಸಗಳಿಂದಾಗಿ ಅವರ ಸಂಗಾತಿಯ ಕೋಪಕ್ಕೆ ಗುರಿಯಾಗಬಹುದು. ನಿಮ್ಮ ಸಂಗಾತಿಗಾಗಿ ಹೊಸ ವಸ್ತುಗಳನ್ನು ಖರೀದಿಸುವಿರಿ. ಕುಟುಂಬ ಸದಸ್ಯರೊಡನೆ ಧಾರ್ಮಿಕ ಸ್ಥಳಗಳಿಗಾಗಿ ಪ್ರಯಾಣ ಬೆಳೆಸುವಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಔಷಧಿ ತಯಾರಕರಿಗೆ ವ್ಯಾಪಾರದಲ್ಲಿ ಹೆಚ್ಚಳವನ್ನು ಕಾಣಬಹುದು. ಬಟ್ಟೆ ವ್ಯಾಪಾರಿಗಳ ವ್ಯಾಪಾರದಲ್ಲಿ ವಿಸ್ತರಣೆಯಾಗಿ ಲಾಭವಿರುತ್ತದೆ. ಲೇವಾದೇವಿ ವ್ಯಾಪಾರ ಮಾಡುವವರಿಗೆ ಸ್ವಲ್ಪ ಹಿನ್ನಡೆ ಇರುತ್ತದೆ. ಕುಟುಂಬದವರಿಗೆ ಆರೋಗ್ಯ ಸಮಸ್ಯೆಗಳು ಕಾಣಿಸಬಹುದು. ತರಕಾರಿ ಬೆಳೆಯುವವರಿಗೆ ಉತ್ತಮ ಬೆಲೆ ಸಿಗುತ್ತದೆ. ಹಣ್ಣಿನ ವ್ಯಾಪಾರಿಗಳಿಗೆ ವ್ಯಾಪಾರದಲ್ಲಿ ವೃದ್ಧಿಯಿದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಪ್ರವಾಸೋದ್ಯಮ ಕೆಲಸವನ್ನು ಮಾಡುತ್ತಿರುವವರಿಗೆ ಉತ್ತಮ ಬೇಡಿಕೆ ಬರುತ್ತದೆ. ಸಾರಿಗೆ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿರುವವರಿಗೆ ಆದಾಯದಲ್ಲಿ ಹೆಚ್ಚಳವಿದೆ. ಬರಹಗಾರರಿಗೆ ಹಾಗೂ ಸಾಹಿತಿಗಳಿಗೆ ಸನ್ಮಾನ ದೊರೆಯುವ ಸಾಧ್ಯತೆ ಇದೆ. ಹಣದ ಒಳಹರಿವು ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ನಿಮ್ಮ ಯೋಜನೆಗಳನ್ನು ಪ್ರಾಮುಖ್ಯತೆಗೆ ಅನುಗುಣವಾಗಿ ಜಾರಿಗೊಳಿಸಿರಿ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಕ್ರೀಡಾಪಟುಗಳಿಗೆ ಸಾಧನೆಗೆ ಬೇಕಾದ ಎಲ್ಲ ರೀತಿಯ ಸವಲತ್ತುಗಳು ದೊರೆಯುತ್ತವೆ. ದೊಡ್ಡ ಹಣಕಾಸಿನ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಉನ್ನತ ಅಧಿಕಾರಿಗಳಿಗೆ ಪದೋನ್ನತಿ ಸಿಗುವ ಸಾಧ್ಯತೆ ಇದೆ. ನಿಮ್ಮ ಕೆಲಸ ಕಾರ್ಯಗಳಿಗೆ ಸಾಕಷ್ಟು ಸಹಾಯ ದೊರೆತು ಕಾರ್ಯಸಾಧನೆ ಆಗುವುದು. ದೃಢ ನಿರ್ಧಾರಗಳಿಂದ ಮಾಡಿದ ವ್ಯವಹಾರಗಳಲ್ಲಿ ಸಾಕಷ್ಟು ಲಾಭವಿರುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಕೃಷಿಕರಿಗೆ ಬೇಕಾದ ಅನುಕೂಲತೆ ಒದಗಿಬರುತ್ತದೆ. ಬಂಧುಗಳ ಮಧ್ಯಪ್ರವೇಶದಿಂದ ಆಸ್ತಿ ವಿವಾದಗಳು ಬಗೆಹರಿಯುತ್ತವೆ. ಪ್ರೀತಿ ಪ್ರೇಮ ಪ್ರಕರಣಗಳಲ್ಲಿ ಯಶಸ್ಸನ್ನು ಕಾಣಬಹುದು. ಉದ್ಯೋಗವನ್ನು ಹುಡುಕುತ್ತಿರುವವರಿಗೆ ಉದ್ಯೋಗ ದೊರೆಯುತ್ತದೆ. ವಿದೇಶಿ ವ್ಯವಹಾರ ಮಾಡುವಾಗ ಬಹಳ ಎಚ್ಚರವಿರಲಿ. ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಪ್ರಗತಿ ಇರುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ಹಿರಿಯ ಅಧಿಕಾರಿಗಳಿಗೆ ಸ್ಥಾನ ಬದಲಾವಣೆಯ ಸಾಧ್ಯತೆಗಳಿವೆ. ನೌಕರ ವರ್ಗಕ್ಕೆ ಇದ್ದ ಕೆಲಸದ ಒತ್ತಡಗಳು ಕಡಿಮೆಯಾಗುತ್ತವೆ. ಕೆಲವೊಂದು ಕೆಲಸಗಳಲ್ಲಿ ನಿಮ್ಮ ಕುಯುಕ್ತಿ ಬಯಲಾಗಿ ಮುಜುಗರ ಪಡುವ ಸಂದರ್ಭವಿದೆ. ರಾಜಕೀಯ ನಾಯಕರುಗಳ ಸಹಾಯದಿಂದ ನಿಮ್ಮ ವೈಯಕ್ತಿಕ ಕೆಲಸಗಳನ್ನು ಮಾಡಿಕೊಳ್ಳುವಿರಿ. ನೂತನ ವಾಹನದ ಖರೀದಿಗೆ ಗಮನ ಹರಿಸುವಿರಿ.

ವೃಶ್ಚಿಕ — ವಿಶಾಖೆ 4 ಅನುರಾಧ, ಜ್ಯೇಷ್ಠ

ಖರೀದಿ ಮತ್ತು ಮಾರಾಟ ಮಾಡುವ ವ್ಯಾಪಾರಸ್ಥರಿಗೆ ಉತ್ತಮ ಲಾಭವಿರುತ್ತದೆ. ಬುದ್ಧಿಜೀವಿಗಳು ವಿಪರೀತ ಮಾತನಾಡಿ ಮುಜುಗರಕ್ಕೆ ಒಳಗಾಗುವರು. ನಿರುದ್ಯೋಗಿಗಳಿಗೆ ಉದ್ಯೋಗದ ಅವಕಾಶಗಳು ತೆರೆದುಕೊಳ್ಳುತ್ತವೆ. ಗೃಹ ನಿರ್ಮಾಣ ಅಥವಾ ಖರೀದಿ ಮಾಡುವ ಸಾಧ್ಯತೆ ಇದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಆರ್ಥಿಕ ಅಡಚಣೆಗಳು ಹಂತಹಂತವಾಗಿ ನಿವಾರಣೆಯಾಗಿ ಆರ್ಥಿಕ ಮಟ್ಟ ಸುಧಾರಿಸುತ್ತದೆ. ಗಮನವಿಟ್ಟು ಮಾಡಿದ ಕೆಲಸಗಳಲ್ಲಿ ಉತ್ತಮ ಯಶಸ್ಸು ದೊರೆಯುತ್ತದೆ. ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ಅಗತ್ಯ. ಅನಿವಾರ್ಯ ಕಾರಣಗಳನ್ನು ಹೊರತುಪಡಿಸಿ ದೂರ ಪ್ರಯಾಣ ಮಾಡುವುದು ಬೇಡ. ತಂದೆ-ತಾಯಿಗಳಿಗೆ ಮಕ್ಕಳ ಸಲುವಾಗಿ ದೂರದ ಊರು ಅಥವಾ ವಿದೇಶಕ್ಕೆ ಹೋಗುವ ಯೋಗವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಪಾಲುದಾರಿಕೆಯ ವ್ಯವಹಾರಗಳಲ್ಲಿ ಉತ್ತಮ ಯಶಸ್ಸನ್ನು ಕಾಣುವಿರಿ. ಕಚೇರಿ ಕೆಲಸಗಳಲ್ಲಿ ಉತ್ತಮ ಹೆಸರನ್ನು ಪಡೆಯುವಿರಿ. ಲೆಕ್ಕಪರಿಶೋಧಕರಿಗೆ ಬಿಡುವಿಲ್ಲದ ಕೆಲಸವಿರುತ್ತದೆ. ಉನ್ನತ ಅಧ್ಯಯನಕ್ಕೆ ಉತ್ತೇಜನ ದೊರೆತು ಅಧ್ಯಯನ ಮುಂದುವರೆಸುವಿರಿ. ಕುಟುಂಬ ಸಮಸ್ಯೆಗಳಿಗೆ ಕುಳಿತು ಆಲೋಚಿಸಿ ಪರಿಹಾರ ಕಂಡುಕೊಳ್ಳುವಿರಿ. ಹಣಕಾಸಿನ ವಿಷಯದಲ್ಲಿ ಅತ್ಯಂತ ಜಾಗರೂಕರಾಗಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ರಾಜೀ ಸಂಧಾನಗಳು ಸಫಲಗೊಂಡು ಹಿರಿಯರು ಪ್ರತಿಷ್ಠಿತ ಸ್ಥಾನವೊಂದನ್ನು ಅಲಂಕರಿಸುವ ಸಾಧ್ಯತೆ ಇದೆ. ಶತ್ರುಗಳು ಸೃಷ್ಟಿಸುವ ಸಂಚುಗಳಲ್ಲಿ ಸಿಕ್ಕಿಬೀಳದಂತೆ ಎಚ್ಚರ ವಹಿಸಿರಿ. ಧೈರ್ಯ ಮತ್ತು ಆತ್ಮವಿಶ್ವಾಸಗಳಿಂದ ಯತ್ನಿಸಿದ ಕಾರ್ಯಗಳಲ್ಲಿ ಯಶಸ್ಸು ಇರುತ್ತದೆ. ಕೆಲವೊಂದು ಋಣಪರಿಹಾರವಾಗಿ ಮನಸ್ಸು ಸಂತೃಪ್ತಿಗೊಳ್ಳುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನೌಕರಿಯಲ್ಲಿರುವವರಿಗೆ ಬೇಸರವಾಗುವ ಸಾಧ್ಯತೆಗಳಿವೆ ಹಾಗೂ ಮನಸ್ಸಿಗೆ ಅಹಿತಕರವೆನಿಸುವ ಸುದ್ದಿಯನ್ನು ಕೇಳುವ ಸಾಧ್ಯತೆ ಇದೆ. ದ್ರವ್ಯಸಂಗ್ರಹ ಮಾಡಲು ಅತಿ ಆಸಕ್ತಿಯನ್ನು ತೋರುವಿರಿ. ವಿದೇಶಿ ವ್ಯವಹಾರ ಮಾಡುವವರಿಗೆ ಸ್ವಲ್ಪ ಹಿನ್ನಡೆ ಇರುತ್ತದೆ. ಭೂ ಖರೀದಿ ಮಾಡಬಹುದು. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಕೃಷಿಗೆ ಸಂಬಂಧಿಸಿದ ಕೆಲಸಗಳು ಭರದಿಂದ ಸಾಗುತ್ತವೆ.

ಪದಬಂಧ 2731



ಮೇಲಿನಿಂದ ಕೆಳಕ್ಕೆ

1. ಜೇನುತುಪ್ಪದ ವ್ಯಾಮೋಹದಿಂದ ಬಂದ ಕಾಯಿಲೆ 4
2. ಕಾಣದಿದ್ದರೂ ಕಂಡಂತಾಗುವ ಮೃಗ ಭ್ರಮೆ 4
3. ಆತುರಾತುರದ ತುರಿದ ಅವಸ್ಥೆಯೇ ಇದು? 4
4. ತಾವರೆಯಂತಹ ಮೊಗವುಳ್ಳವ 5
5. ಯುದ್ಧದ ಮಧ್ಯೆ ಜನಸಾಮಾನ್ಯರು ಚೇತರಿಸಿಕೊಳ್ಳಲು ಸಿಕ್ಕ ಬಿಡುವು 6
8. ಏನಾಯಿತು ಹೇಗಾಯಿತು ಎಂದು ತಿಳಿಯುವ ಆಸಕ್ತಿ 4
9. ಜರಿಯ ನಡುವೆ ಮುಂಬೈನ ಆಭರಣ ವ್ಯಾಪಾರಿ 3
10. ಮುಖದ ಹಾಸಕ್ಕೆ ಕಾರಣವಾಗುವ ಅಂತರಂಗದ ಖುಷಿ 4
12. ಮತದ ಆಚರಣೆಯನ್ನು ನಿಷ್ಠೆಯಿಂದ ಪಾಲಿಸಿ ನಡೆಯುವವ 6
15. ಇನ್ನೂ ಬೆಂಕಿಗೆ ಬೀಳದ ಮಣ್ಣಿನ ಪಾತ್ರೆ 5
16. ಚೈತ್ರದಲ್ಲಿ ಚಿಗುರುವ ಎಲೆಗಳ ಭಾವಸಂಯೋಗ; ಒಂದು ತಳಿರು, ಮತ್ತೊಂದು ಬೆಲ್ಲದ ಜೊತೆ ಸೇರುವ ಕಹಿ 4
17. ಗುಪ್ತಗಾಮಿನಿ ವಿದ್ಯೆಯ ಅಧಿದೇವತೆ 4
18. ಮೂರು ಕಣ್ಣುಗಳುಳ್ಳ ಮೃತ್ಯುಂಜಯ ಮೂರು ಕಾಲಗಳ ಯಜಮಾನ 4

ಎಡದಿಂದ ಬಲಕ್ಕೆ

1. ಪವಾಡವನ್ನು ತೋರಿಸುವ ದೊಡ್ಡ ಸಿದ್ಧಿ 3
3. ಕಾಯುವಾಗ ಆಗುವ ಕಳವಳ 3
5. ಕೈಯಿಂದ ಕಟ್ಟಬೇಕಾದ ಟಾಕ್ಸ್ 2
6. ರೆಸಾರ್ಟ್ ರಾಜಕಾರಣದಲ್ಲಿ ಒಟ್ಟಾದ ಮಂದಿ ಹಜಾರದಲ್ಲಿ ಸೇರಿದ್ದಾರೆ 4
7. ಮುಡಿಪಿಗೆ ಪ್ರಾಣ ತೆರುವ ಬಲಿ ಬಕರಾ 5
9. ಜನರ ಮಧ್ಯೆ ಹುಟ್ಟು 3
11. ಆಕಾಶಕಾಯನಾದ ಚಂದ್ರ ತಾರಾ ಪುತ್ರ 4
13. ಇಸ್ಪೀಟಾಟದಲ್ಲಿ ಅಡಿಯಾಳದವರು 4
14. ಹರಿಯುವ ಮನಸ್ಸಿನ ಗತಿ 3
16. ಅಂತರಂಗದಿಂದ ಹುಟ್ಟಿದ ಮಗ 5
19. ಪಾಯಸಕ್ಕೆ ಸಮನಾದ ದಶರಥಾತ್ಮಜನ ಹೆಸರು 4
20. ಮಾತಿನ ಪೆಟ್ಟು ಕೊಟ್ಟರೆ ಬದಲಾಗುವ ಬುದ್ಧಿವಂತ 2
21. ಒಂದಲ್ಲ, ಎರಡಲ್ಲ, ಹಲವಲ್ಲ ...... ಸ್ವಲ್ಪವಷ್ಟೆ 3
22. ಎಳ್ಳಿನಿಂದ ಹಣೆಗೆ ಹಚ್ಚಿದ ನಾಮ 3

ಪದಬಂಧ ಉತ್ತರ -2730

ಮೇಲಿಂದ ಕೆಳಕ್ಕೆ

1. ವಿಕಾರ 2.ರವಳಿ 3.ಅಧಮ 4.ತೆಗಳು 7.ಬಳಪ 9.ನೆರಳು 10.ಸರದಿ 11.ನವಣೆ 12.ಅಮರ 13.ಕಟ್ಟಳೆ 16.ರಕ್ಕಸ 18.ಣರಚ 19.ಬುನಾದಿ 20.ರವಿಕೆ 21.ಕುಂಕುಮ 22.ಚತುರ

ಎಡದಿಂದ ಬಲಕ್ಕೆ

1. ವಿಶ್ವಸಮರ 3.ಅಸಮಾನತೆ 5.ವಸುಧ 6.ರತ್ನಗಂಬಳಿ 8.ಮನೆಮಗಳು 10.ಸಭಾಕಂಪನ 12.ಅಳುಬುರುಕ 14.ವಸೀಮ 15.ದಿನಾಚರಣೆ 17.ರಣಕಹಳೆ 19.ಬುಧವಾಸರ 21.ಕುಂಚಪ್ರಪಂಚ 23.ವಿಳಕು 24.ದಿನಪತ್ರಿಕೆ 25.ಮನಮಂದಿರ

ಯಕ್ಷಲೋಕದಲ್ಲಿ ರಮ್ಯ ವಿಹಾರ

ಪ್ರತಿಭಾ ನಂದಕುಮಾರ್

ಈ ಆತ್ಮಕಥೆಯ ಮುನ್ನುಡಿಯಲ್ಲಿ ಲಕ್ಷ್ಮೀಶ ತೋಳ್ಪಾಡಿ ಅವರು ಒಂದು ಮಾತು ಹೇಳಿದ್ದಾರೆ: (ಮಹಿಳೆಯೊಬ್ಬಳು) 'ಒಂದು ಯಕ್ಷಗಾನ ಆಟ ನೋಡಿದರೆ ಪ್ರಾಯಶ್ಚಿತ್ತವೆಂಬಂತೆ ಏಳು ರಂಗಪ್ರಸಂಗಗಳನ್ನು ನೋಡಬೇಕೆಂಬ ಕಾಲದಲ್ಲಿ ಯಕ್ಷರಂಗ ಪ್ರವೇಶ ಮಾಡಿದ ಲೀಲಮ್ಮ 'ರಂಗ-ಪೂಜೆ' ಎಂಬ ಪರಿಕಲ್ಪನೆಯನ್ನೇ ಬದಲಿಸುವುದಕ್ಕೆ -ಯಕ್ಷ ವೇದಿಕೆಯಲ್ಲಿ ನಡೆಯುವ ಕಲಾ ವ್ಯವಹಾರವೂ ಪೂಜೆಯೇ ಎಂಬ ಭಾವನೆಯುಂಟಾಗುವುದಕ್ಕೆ- ಕಾರಣಕರ್ತರಾದವರಲ್ಲಿ ಓರ್ವರಾದರು! ಯಕ್ಷಮೇಳಗಳ ತಿರುಗಾಟದಲ್ಲಿ ಭಾಗವಹಿಸಿದ ಮೊದಲ ಮಹಿಳಾ ಭಾಗವತರೆಂಬ ಇತಿಹಾಸವನ್ನು ಲೀಲಮ್ಮ ಸೃಷ್ಟಿಸಿದರು - ಹೀಗೊಂದು ಇತಿಹಾಸ ಸೃಷ್ಟಿಸುತ್ತಿದ್ದೇನೆ ಎಂಬ ಅರಿವಿಲ್ಲದೆ!'

ಇದೊಂದು ಪ್ಯಾರಾ ಸಾಕು ಈ ಪುಸ್ತಕದ ಮಹತ್ವವನ್ನು ತಿಳಿಸಲು. ಅಷ್ಟೇ ಅಲ್ಲ, ಈ ವಾಕ್ಯಗಳಲ್ಲಿ ಒಂದು ಜೀವನಶೈಲಿ ಮತ್ತು ಕಲಾರಾಧನೆಯ ಪರಿಪೂರ್ಣ ವ್ಯಾಖ್ಯಾನವೇ ಇದೆ! ವಿದ್ಯಾರಶ್ಮಿ ಪೆಲತ್ತಡ್ಕ ಅತ್ಯಂತ ಸಂಭ್ರಮ, ನಿಷ್ಠೆಯಿಂದ ಈ ಪುಸ್ತಕವನ್ನು ರಚಿಸಿದ್ದಾರೆ. ಅದಕ್ಕಾಗಿ ಅವರಿಗೆ ಮೊದಲ ವಂದನೆ ಹೇಳಬೇಕು.

ಯಕ್ಷಗಾನ ಭಾಗವತಿಕೆ 'ಗಂಡುಮೆಟ್ಟಿನ ಕಲೆ' ಎಂದು ಪುರುಷರು ಎದೆತಟ್ಟಿ ಹೇಳಿಕೊಳ್ಳುವ ಸಮಯದಲ್ಲಿ ಲೀಲಾವತಿ ಬೈಪಾಡಿತ್ತಾಯ ಅವರು ಭಾಗವತಿಕೆಯನ್ನು ಕರಗತ ಮಾಡಿಕೊಂಡು ಸೈ ಅನ್ನಿಸಿಕೊಂಡಿದ್ದಲ್ಲದೆ ಊರಿಂದೂರಿಗೆ ಮೇಳದ ಜೊತೆಯೇ ಪ್ರಯಾಣಿಸಿದ ಏಕೈಕ ಮಹಿಳೆ ಎನ್ನುವ ವೈಶಿಷ್ಟ್ಯವನ್ನೂ ಗಳಿಸಿಕೊಂಡವರು. 'ಹೆಣ್ಣುಮಗಳು ಭಾಗವತಿಕೆ ಮಾಡ್ತಾರಂತೆ' ಎನ್ನುವ ಸೆನ್ಸೇಷನ್ ಹುಟ್ಟುಹಾಕಿದವರು. ಅವರ ಭಾಗವತಿಕೆ ಕೇಳಿ ಜನ ಹೇಗೆ ಕಿಕ್ಕಿರಿಯುತ್ತಿದ್ದರೆಂದರೆ ಕೂರಲು ಜಾಗವಿಲ್ಲದೆ ಟೆಂಟ್ ಬಿಚ್ಚಿಸಿ ಜಾಗ ಮಾಡಿಕೊಡಬೇಕಾಗುತ್ತಿತ್ತು! ಹೀಗೆ ಲೀಲಾವತಿ ಅವರ ಬದುಕು ವಿಶೇಷಗಳ ಸರಮಾಲೆ.

ಲೀಲಾವತಿ ಅವರು ಸಾರ್ಥಕ ದಾಂಪತ್ಯ ಬದುಕನ್ನೂ ನಡೆಸಿ, ಮಕ್ಕಳಿಗೆ ಉತ್ತಮ ತಾಯಿಯಾಗಿಯೂ ಆದರ್ಶಪ್ರಾಯರಾದರು. ಹಾಗಾಗಿ ವ್ಯಕ್ತಿಯೋ ವೈಯಕ್ತಿಕ ಬದುಕೋ ಎರಡರಲ್ಲಿ ಒಂದನ್ನು ಆರಿಸಿಕೋ ಎನ್ನುವ ಇವತ್ತಿನ ಯುಗದ ದ್ವಂದ್ವ ಅವರನ್ನು ಅಷ್ಟು ಕಾಡಲೇ ಇಲ್ಲ. ಅವರಿಗೆ ವೃತ್ತಿ ಮತ್ತು ಬದುಕು ಒಂದೇ ಆಗಿತ್ತು.

ಲೀಲಾವತಿಯವರು ಭಾಗವತಿಕೆಯನ್ನು ಟೋಕನ್ ಆಗಿ ಅಂದರೆ ಮೇಲುಮೇಲಕ್ಕೆ ಖಯಾಲಿಗೆ ಮಾಡಿದವರಲ್ಲ; ಅವರು ಪಕ್ಕಾ ವೃತ್ತಿಪರರಾಗಿ ಯಕ್ಷಗಾನದ ದೊಡ್ಡ ಹೆಸರುಗಳಾದ ಬಲಿಪರು, ಮಂಡೆಚ್ಚರು, ಅಗರಿ ಶ್ರೀನಿವಾಸ ಭಾಗವತರು, ಕಡತೋಕ ಮಂಜುನಾಥ ಭಾಗವತರು, ದಿವಾಣರು, ಚಿಪ್ಪಾರು ಕೃಷ್ಣಯ್ಯ ಬಲ್ಲಾಳ್, ನೆಡ್ಲೆ ನರಸಿಂಹ ಭಟ್ಟರಂತಹ ಘಟಾನುಘಟಿ ಹಿಮ್ಮೇಳಗಳ ಜೊತೆ ಒಡನಾಡಿದರು. ಅವರ ಭಾಗವತಿಕೆಗೆ ಕುಣಿದ ಮೇರು ಕಲಾವಿದರಲ್ಲಿ ಶೇಣಿ ಗೋಪಾಲಕೃಷ್ಣ ಭಟ್, ಕೋಳ್ಯೂರು ರಾಮಚಂದ್ರ ರಾವ್, ಮಲ್ಪೆ ಶಂಕರ ನಾರಾಯಣ ಸಾಮಗ, ವಾಸುದೇವ ಸಾಮಗ, ಕುಂಬಳೆ ಸುಂದರ ರಾವ್, ಕೆ. ಗೋವಿಂದ ಭಟ್ ಮೊದಲಾದವರಿದ್ದರು ಎಂದರೆ ಲೀಲಾವತಿ ಅವರ ಪ್ರತಿಭೆಗೆ ಬೇರೆ ಸಾಕ್ಷಿ ಬೇಕಿಲ್ಲ.

ಪು: 158 ₹150

ಯಕ್ಷ ಗಾನ ಲೀಲಾವಳಿ
ಯಕ್ಷಗಾನದ ಪ್ರಥಮ ಮಹಿಳಾ ಭಾಗವತರಾದ ಲೀಲಾವತಿ ಬೈಪಾಡಿತ್ತಾಯ ಅವರ ಆತ್ಮಕಥನ
ನಿರೂಪಣೆ: ವಿದ್ಯಾರಶ್ಮಿ ಪೆಲತ್ತಡ್ಕ
ಪ್ರಕಾಶನ: ಅಭಿನವ
ಸಂ: 9448804905

ಒಳನೋಟ

ಅಪ್ಪಟ ಪೌರಾಣಿಕ, ಸಾಮಾಜಿಕ ಕಥೆಗಳನ್ನು ರಂಗದ ಮೇಲೆ ನಿರೂಪಿಸಿದ ಲೀಲಾವತಿಯವರು ತಮ್ಮ ಸ್ವಂತದ ಕಥೆಯನ್ನು ಹೇಳಲು ಹಿಂಜರಿದರು, ತಮ್ಮ ಸ್ವಂತ ಕಷ್ಟ ಸುಖಗಳನ್ನು ಯಾವತ್ತೂ ಎಲ್ಲಿಯೂ ಬಿಚ್ಚಿಟ್ಟವರಲ್ಲ ಎನ್ನುವ ಸಂಗತಿಯನ್ನು ವಿದ್ಯಾರಶ್ಮಿ ಹೇಳಿದ್ದಾರೆ. ಹಾಗಾಗಿ ಈ ಆತ್ಮಕಥನ ನಿರೂಪಣೆ ತಮಗೆ ಅಷ್ಟು ಸುಲಭವಾದದ್ದೇನೂ ಆಗಿರಲಿಲ್ಲ ಎನ್ನುವುದನ್ನೂ ದಾಖಲಿಸುತ್ತಾರೆ. ಅದಕ್ಕಾಗಿ ತಾವು ಪಟ್ಟ ಪಾಡನ್ನೂ ಹೇಳಿದ್ದಾರೆ. ಈ ಕಥನ ಪೂರ್ಣಗೊಳ್ಳಲು ಹಲವಾರು ವರ್ಷಗಳೇ ಹಿಡಿದವು.

ಕಥನದ ಉದ್ದಕ್ಕೂ ಲೀಲಾವತಿಯವರ ಪತಿ ಹರಿನಾರಾಯಣ ಬೈಪಾಡಿತ್ತಾಯ ಅವರ ಚಿತ್ರಣವೂ ಸೊಗಸಾಗಿ ಮೂಡಿಬಂದಿದೆ. ಅರಿಕೆಯಲ್ಲಿ ನಿರೂಪಕಿ, 'ಸ್ತ್ರೀಯೊಬ್ಬಳು ಅಂತಹ ಪರಿಸರದಲ್ಲಿ ಈ ಬಗೆಯ ಸಾಧನೆಯ ಮಾಡುವುದಕ್ಕೆ ಕಾರಣಕರ್ತರಾಗಿ ಬೆನ್ನೆಲುಬಾಗಿ ನಿಂತ ಅವರಿಗೆ ಒಬ್ಬ ಮಹಿಳೆಯಾಗಿಯೂ ನನ್ನ ನಮನ' ಎಂದು ಹೇಳಿದಾಗ ಓದುಗರಾದ ನಾವೂ ತಲೆಬಾಗಿಸುತ್ತೇವೆ. ನಿಜ ಹೇಳಬೇಕೆಂದರೆ ಒಂದು ಆತ್ಮಕಥನವನ್ನು ಹೇಗೆ ರಚಿಸಬೇಕೆನ್ನುವುದಕ್ಕೆ ಮಾದರಿಯಂತಿದೆ ಈ ಪುಸ್ತಕ.

ಕನ್ನಡದಲ್ಲಿ ಜೀವನ ಚರಿತ್ರೆಗಳಿಗೆ ನೂರು ವರ್ಷಗಳ ಇತಿಹಾಸವಿದೆ. ಮಹಿಳೆಯರ ಜೀವನಚರಿತ್ರೆಗಳಿಗೆ ಅಷ್ಟಿಲ್ಲ. ಎಷ್ಟೋ ಮಹಿಳೆಯರ ಅಸಾಧಾರಣ ಜೀವನ ಚರಿತ್ರೆಗಳು ಕಾಲದ ಮುಸುಕಿನಲ್ಲಿ ಹಾಗೇ ಸರಿದುಹೋಗಿವೆ. ಮಹಿಳೆಯರು ತಾವೇ ಬರೆದ ಆತ್ಮಕಥೆಗಳು ಇತ್ತೀಚಿನ ವಿದ್ಯಮಾನ. ತಮ್ಮ ಬಗ್ಗೆ ತಾವೇ ಹೇಳಲು ಸಂಕೋಚಪಟ್ಟುಕೊಳ್ಳುವ ಮಹಿಳೆಯರ ಬಗ್ಗೆ ಇತರರು ಬರೆದು ದಾಖಲಿಸುವುದು ಕೂಡ ಈಚೆಗೆ ಹೆಚ್ಚುತ್ತಿರುವ ಸಂಗತಿ. ಮಹಿಳೆಯರ ಜೀವನಚರಿತ್ರೆಗಳಾಗಲೀ ಆತ್ಮಕಥೆಗಳಾಗಲೀ ಕನ್ನಡದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಇಲ್ಲ. ಇದ್ದವುಗಳ ಬಗ್ಗೆಯೂ ಹೆಚ್ಚು ಚರ್ಚೆ ಆಗಿಲ್ಲ.

ನಾಟಕ ಕ್ಷೇತ್ರದ ಭಾರ್ಗವಿ ನಾರಾಯಣ್ ಅವರ 'ನಾನು ಭಾರ್ಗವಿ' ಮತ್ತು ಡಾ. ವಿಜಯಾ ಅವರ 'ಕುದಿ ಎಸರು' ಆತ್ಮಕಥೆಗಳಿಗೆ ಪ್ರಶಸ್ತಿ ಲಭಿಸಿದ್ದು ಪ್ರಮುಖ ಸಂಗತಿ. ಹಾಗೆಯೇ ವೃತ್ತಿರಂಗಭೂಮಿಯ ಹಲವಾರು ಜೀವನ ಚರಿತ್ರೆಗಳನ್ನು ಇತರರು ಬರೆದರು. ಬಿ.ಜಯಶ್ರೀ ಅವರ ಬದುಕು, ಹಲವಾರು ಚಲನಚಿತ್ರ ಕಲಾವಿದೆಯರ, ಸಂಗೀತಗಾತಿಯರ ಬದುಕಿನ ಕುರಿತು ಗ್ರಂಥಗಳು ಬಂದಿವೆ. ಅದರಲ್ಲಿ ಲೀಲಾವತಿ ಅವರ ಆತ್ಮಕಥೆಗೆ ವಿಶಿಷ್ಟ ಸ್ಥಾನ ದೊರೆಯಲು ಕಾರಣ ಅವರ ಬದುಕು ಅನೇಕ ಪ್ರಥಮಗಳ ದಾಖಲೆ ಆಗಿರುವುದಕ್ಕಾಗಿ. ಇದರಿಂದ ಅವರ ಬಗ್ಗೆ ಹೆಚ್ಚು ಪ್ರಚಾರ ಸಿಕ್ಕಿದ್ದು.

ಮುಖ್ಯವಾಗಿ ಸ್ವತಂತ್ರ ಅಸ್ತಿತ್ವದ, ವೃತ್ತಿಪರ ಕಲಾವಿದೆಯೊಬ್ಬರ ಅನುಭವಗಳು ಮುಂದಿನ ಪೀಳಿಗೆಗೆ ಮಾದರಿಯಾಗುವಂಥವು. ಎಲ್ಲಿಯೂ ಲೀಲಾವತಿಯವರು ತಮ್ಮ ಕಷ್ಟ ಸುಖಗಳನ್ನು ದೊಡ್ಡದಾಗಿ ಬಿಂಬಿಸಿಲ್ಲ. ಸಹಜವಾಗಿ ಆತ್ಮೀಯರೊಡನೆ ಮಾತನಾಡುವಂತೆ ನಿರೂಪಿಸಿದ್ದಾರೆ. ಉದಾಹರಣೆಗೆ, ತಾವು ಭಾಗವತಿಕೆ ಮಾಡಲು ನಿರ್ಧರಿಸಿದ ಕಾರಣವನ್ನು ಸರಳವಾಗಿ ಬಡತನ ಎಂದು ಹೇಳುತ್ತಾರೆ.

ಬರೀ ಪುರುಷರಿರುವ ಮೇಳದಲ್ಲಿ ಮಹಿಳೆಯೊಬ್ಬಳು ಕಲಾವಿದೆ ಇದ್ದಾಗ ಅವಳಿಗಾಗಿ ಯಾವುದೇ ವಿಶೇಷ ಸೌಲಭ್ಯಗಳನ್ನು ಕೊಡುತ್ತಿರಲಿಲ್ಲವಾದರೂ ಲೀಲಾವತಿಯವರು ಅದನ್ನೆಲ್ಲ ದೊಡ್ಡ ವಿಷಯವೆಂದು ಕಿಸಿಬಿಸಿ ಮಾಡಿದವರೇ ಅಲ್ಲ. ಚಳಿಗಾಲದ ಸಮಯದಲ್ಲಿ ಪದ ಹೇಳುವುದು ಕಷ್ಟ. ಬೆಳಗಿನ ಹೊತ್ತಿನಲ್ಲಿ ತಲೆಯ ಮೇಲೆ ಇಬ್ಬನಿ ಬೀಳುತ್ತಿದ್ದರೂ ಹಾಗೆಯೇ ಪದ ಹೇಳುತ್ತಿದ್ದರಂತೆ. ಪುರುಷ ಭಾಗವತರು ಮುಂಡಾಸು ಕಟ್ಟಿಕೊಂಡರೆ, ಇವರು ಸ್ಕಾರ್ಫ್ ಕಟ್ಟಿಕೊಳ್ಳುತ್ತಾ ಶೀತದಿಂದ ರಕ್ಷಿಸಿಕೊಳ್ಳುತ್ತಿದ್ದರಂತೆ. ಇಂತಹ ರಸವತ್ತಾದ ವಿವರಗಳ ರಸಪಾಕ ಈ ಕೃತಿ.

ಪುಸ್ತಕದ ಕೊನೆಯಲ್ಲಿ ಲೀಲಾವತಿ ಅವರಿಗೆ ವೈಯಕ್ತಿಕವಾಗಿ ಸಂದ ಪ್ರಶಸ್ತಿ, ಗೌರವಗಳ ಪಟ್ಟಿ ಮತ್ತು ಹರಿನಾರಾಯಣ-ಲೀಲಾವತಿ ದಂಪತಿಗೆ ಸಂದ ಸನ್ಮಾನಗಳ ಪಟ್ಟಿಯನ್ನು ನೀಡಲಾಗಿದೆ. ಆಸಕ್ತರ ಚಿತ್ರಗಳಿವೆ. ಕನ್ನಡದ ಮಹಿಳಾ (ಪುರುಷರ ಕೂಡ) ಆತ್ಮಕಥೆಗಳ ಸಾಲಿನಲ್ಲಿ ಇದು ಮಹತ್ವದ ಸ್ಥಾನ ಪಡೆದಿದೆ.

ಚಿರಯೌವನೆಯ ಆ ಮೋಹಪಾಶದಲ್ಲಿ...

ಪಿನಾಕ

'ಗೋಪಿಯು ಗಾಂಡಲೀನಳ ಪಾದಪದ್ಮಂಗಳಿಗೆರಗಿ ಐವತ್ತು ವರ್ಷಗಳಾದವು. ಅವನ ಧರ್ಮಪತ್ನಿ ವೆಂಕಟಲಕ್ಷ್ಮಿಗೆ ಈ ವಿಚಾರ ತಿಳಿಯಿತೊ? ತಿಳಿದಿದ್ದರೆ ಏನಾಗಿದ್ದಿರಬಹುದು ಅಥವಾ ಈ ಪ್ರಹಸನವನ್ನು ಗೋಪ್ಯವಾಗಿಟ್ಟುಕೊಂಡೇ ಗೋಪಿ ಈ ಐವತ್ತು ವರ್ಷ ಕಳೆದುಬಿಟ್ಟಿರಬಹುದೆ? ಏನಾದರೂ ಇರಲಿ, ಲಕ್ಷ್ಮಣರಾಯರ ಕ್ಯಾಮೆರಾ ಕಣ್ಣಿನ ತುಂಟತನ, ಗಪಗಪನೆ ಬಾಳನ್ನು ಮುಕ್ಕುವ ಲವಲವಿಕೆ ಈಗಲೂ ಹಾಗೇ ಇದೆ ಎನ್ನುವುದೇ ಒಂದು ಬೆರಗು'



ಪು: 208 ₹230

ಗೋಪಿ ಮತ್ತು ಗಾಂಡಲೀನ 50
ಲೇ: ಬಿ.ಆರ್. ಲಕ್ಷ್ಮಣರಾವ್
ಪ್ರ: ಅಂಕಿತ ಪುಸ್ತಕ
ಸಂ: 080-26617100

ಅವಲೋಕನ

-ಬಿ.ಆರ್. ಲಕ್ಷ್ಮಣರಾಯರ 'ಗೋಪಿ ಮತ್ತು ಗಾಂಡಲೀನ' ಕವನ ಸಂಕಲನಕ್ಕೆ ಐವತ್ತು ತುಂಬಿದ ಸಂದರ್ಭದಲ್ಲಿ ಇಂದಿನ ತಲೆಮಾರಿನ ಪ್ರತಿಸ್ಪಂದನದೊಂದಿಗೆ ಅದನ್ನೀಗ ಮರುಮುದ್ರಿಸಲಾಗಿದೆ. ಹಾಗೆ ಪ್ರತಿಸ್ಪಂದಿಸಿದವರಲ್ಲಿ ಒಬ್ಬರಾದ ಕವಿ ವಿಕ್ರಮ್ ಹತ್ವಾರ್ ಅವರು ಮೇಲಿನಂತೆ ಬರೆಯುತ್ತಾರೆ. ಇದು ಅವರೊಬ್ಬರ ಅಭಿಪ್ರಾಯವಾಗಿರದೆ ಇಂದಿನ ತಲೆಮಾರಿನ ಕಾವ್ಯಪ್ರಿಯ ಪ್ರತಿಯೊಬ್ಬರ ಅಭಿಪ್ರಾಯವೂ ಆಗಿದೆ. ಒಳ್ಳೆಯ ಕವಿತೆಗಳಿಗೆ ಎಂದಿಗೂ ವಯಸ್ಸು ಆಗುವುದಿಲ್ಲವಂತೆ. ಆ ಲೆಕ್ಕದಲ್ಲಿ ಗೋಪಿ ಮತ್ತು ಗಾಂಡಲೀನ ಇಬ್ಬರಿಗೂ ಐವತ್ತು ವರ್ಷಗಳ ಬಳಿಕವೂ ಅದೇ ಹರೆಯ ಉಕ್ಕುತ್ತಿದೆ. ಇದೇ ಕವನ ಸಂಕಲನದ ಫೋಟೊಗ್ರಾಫರ್‌ನ ಕಣ್ಣುಗಳು ಕೂಡ ಇನ್ನೂ ಅಷ್ಟೇ ತೀಕ್ಷ್ಣವಾಗಿವೆ. ಆದ್ದರಿಂದಲೇ ಈ ಕವಿತೆಗಳನ್ನು ಬರೆದ ಕವಿ ಬಿಆರ್‌ಎಲ್‌ಗೆ ಈಗ 75 ವರ್ಷ ತುಂಬಿದೆ ಎಂದರೆ ಯಾರೂ ನಂಬುತ್ತಿಲ್ಲ!

ಬಿಆರ್‌ಎಲ್ ಅವರ ಕಾವ್ಯವೆಂದರೆ ಅದು ಪ್ರೇಮ, ಕಾಮ, ತುಂಟತನಗಳ ರಸಪೂರಿ ಹಣ್ಣು, ಸವಿದಷ್ಟೂ ಅದರ ರುಚಿ ಹೆಚ್ಚು ಎನ್ನುವುದು ಈ ಸಂಕಲನದ ಕುರಿತು ಪ್ರತಿಕ್ರಿಯೆ ಬರೆದ ಬಹುತೇಕ ಬರಹಗಾರರ ಒಕ್ಕೊರಲ ಮಾತು. ಕನ್ನಡ ಕಾವ್ಯಚರಿತ್ರೆಯಲ್ಲಿ ಗಟ್ಟಿ ಹೆಜ್ಜೆ ಗುರುತು ಮೂಡಿಸಿದ ಈ ಸಂಕಲನ ಅರ್ಧಶತಮಾನ ಕಳೆದರೂ ಅದೇ ಯೌವನವನ್ನು, ಅದೇ ತುಂಟತನವನ್ನು ಕಾಪಿಟ್ಟುಕೊಂಡಿರುವುದು ಒಂದು ಅಚ್ಚರಿ. 'ಎಷ್ಟು ಮುಚ್ಚಿಟ್ಟರೂ ಧಿಗ್ಗನೇ ಎದ್ದು ನಿಲ್ಲುವ ಕಾಮಾಸಕ್ತಿ, ಮನುಷ್ಯನನ್ನು ಗಿರಗಿರ ತಿರುಗಿಸಿ ತಲ್ಲಣಗೊಳಿಸುವ ಪರಿಯನ್ನು ಈ ಸಂಕಲನ ಅದ್ಭುತವಾಗಿ ಹಿಡಿದಿಟ್ಟಿದೆ. ಪರಂಪರೆಯ ನೆರಳು ಮತ್ತು ಆಧುನಿಕತೆಯ ಬೆಳಕು ಕವಿಯ ಕಣ್ಮನಗಳನ್ನು ದಿಗ್ಭ್ರಮೆಗೊಳಿಸುವ ಪರಿ ಕಾವ್ಯಾತ್ಮಕವಾಗಿದೆ' ಎನ್ನುವ ಧನಂಜಯ ಕುಂಬ್ಳೆ ಅವರ ಮಾತೂ ಖರೆ ಇದೆ.

ಸಂಕಲನದ 'ಚಳಿ' ಎಂಬ ಕವಿತೆಯಲ್ಲಿ ಬರುವ ಸಾಲುಗಳು ಹೀಗಿವೆ: 'ಮುಸುಕು ಕತ್ತಲೆಯಲ್ಲಿ/ ಬಿಸಿ ಬೆತ್ತಲೆ ಕಲ್ಪನೆಗಳ/ ಕಣ್ತುಂಬ ಕೆತ್ತುವ ಪೋಲಿ ಉಳಿ/ ಈ ಚಳಿ'. 'ಪ್ರತಿ ಸಂಜೆ ಮುಂಜಾನೆ/ ಕಾರಿಕೊಳ್ಳುವ / ಈ ಅತಿ ರತಿಯ/ ಮುಟ್ಟು/ ಬಟ್ಟೆಗಳನ್ನು/ ಪಶ್ಚಿಮ ಪೂರ್ವ ದಿಗಂತಗಳ/ ಧೋಬೀಘಾಟುಗಳಲ್ಲಿ ಒಗೆದು ಹರವುತ್ತಾನೆ/ ಅಗಸ ಸೂರ್ಯ...' ಹೀಗೆ ಕಾವ್ಯದ ಸಾಲುಗಳಲ್ಲಿ ರತಿವಿಲಾಸವನ್ನು ತೆರೆದಿಡುವ ಬಿಆರ್‌ಎಲ್ ಅವರ ತುಂಟತನಕ್ಕೆ ಸಾಟಿಯೇ ಇಲ್ಲ. 'ಪೋಲಿತನದಿಂದ ಇಲ್ಲಿನ ಕಾವ್ಯಗಳು ಮಿನುಗಿದರೂ ಖಾಸಗಿಯಾದ ಅಸ್ತಿತ್ವಶೋಧವನ್ನೂ ಬಿಟ್ಟುಕೊಟ್ಟಿಲ್ಲ' ಎನ್ನುವುದನ್ನು ತಾರಿಣಿ ಶುಭದಾಯಿನಿ ಸರಿಯಾಗಿಯೇ ಗುರುತಿಸಿದ್ದಾರೆ.

ಸಂಕಲನದ ಮೊದಲ ಮುದ್ರಣ ಪ್ರಕಟಗೊಂಡಾಗ 'ಪ್ರಜಾವಾಣಿ'ಯಲ್ಲಿ ಬಂದ ವಿಮರ್ಶೆಯನ್ನೂ ಬಿಆರ್‌ಎಲ್ ಈ ಮುದ್ರಣದಲ್ಲಿ ಪ್ರಕಟಿಸಿದ್ದಾರೆ. ಆ ವಿಮರ್ಶೆಯಲ್ಲಿ ಎನ್.ಎಸ್. ಲಕ್ಷ್ಮೀನಾರಾಯಣಭಟ್ಟರಿಗೆ ಬೋರಿನ ನೀರೋಗಾನದಂತಹ ಕಾವ್ಯದ ಅಪಾಯ ಹೆಚ್ಚಿದ ಸಂದರ್ಭದಲ್ಲಿ ಹೊಸತನದಿಂದ ಕೂಡಿದ ಉತ್ತಮ ಕವನ ಬರೆಯುವ ಕವಿಯಾಗಿ ಬಿಆರ್‌ಎಲ್ ಕಂಡಿದ್ದಾರೆ. ನಂತರದ ಐವತ್ತು ವರ್ಷಗಳಲ್ಲಿ ಅವರ ಆ ಮಾತು ನಿಜವಾಗಿರುವ ವಿದ್ಯಮಾನ ಕಣ್ಣ ಮುಂದೆಯೇ ಇದೆ. ಸಂಕಲನಕ್ಕೆ ಪಿ.ಲಂಕೇಶ್ ಅವರು ಬರೆದ ಮುನ್ನುಡಿ ಕವಿಯ ವ್ಯಕ್ತಿತ್ವಕ್ಕೊಂದು ಕೈಗನ್ನಡಿಯಾಗಿದೆ. ಹೌದು, ಬಿಆರ್‌ಎಲ್ ಅವರಿಗೂ ಅವರ ಕಾವ್ಯಕ್ಕೂ ಎಂದಿಗೂ ವಯಸ್ಸು ಆಗುವುದೇ ಇಲ್ಲ ಬಿಡಿ!

'ಅಂಗುಲ ಹುಳು' ತೋರಿಸಿದ ಜಗತ್ತು

ಎಚ್.ದಂಡಪ್ಪ

ತಾರಿಣಿ ಶುಭದಾಯಿನಿ ಅವರ 'ಅಂಗುಲ ಹುಳುವಿನ ಇಂಚುಪಟ್ಟಿ' ವಿಮರ್ಶಾ ಸಂಕಲನದಲ್ಲಿ 'ಓದು' ಮತ್ತು 'ಮೀಮಾಂಸೆ' ಎಂಬೆರಡು ಭಾಗಗಳಿದ್ದು, 13 ಲೇಖನಗಳಿವೆ. ಓದು ಮತ್ತು ಮೀಮಾಂಸೆ ಜತೆ ಜತೆಯಲ್ಲಿ ಸಾಗುವಂತಹವು. ಇವೆರಡು ಸಂಲಗ್ನಗೊಂಡಾಗ ಸಾಹಿತ್ಯ ಕೃತಿಯೊಂದರ ಒಳನೋಟಗಳು ಲಭ್ಯವಾಗಬಲ್ಲವು.

ಕೃತಿಯಲ್ಲಿನ ಲೇಖನಗಳನ್ನು ಓದಿದಾಗ ಇವುಗಳನ್ನು ಮೂರು ಬಗೆಗಳಲ್ಲಿ ಗುರುತಿಸಬಹುದು. 1) ಪುರುಷ ಲೇಖಕರ ಕೃತಿಗಳಲ್ಲಿ ಹೆಣ್ಣಿನ ಲೋಕದ ಗ್ರಹಿಕೆ. ಇದರಲ್ಲಿ ಎ.ಕೆ. ರಾಮಾನುಜನ್, ಷೇಕ್ಸ್‌ಪಿಯರ್, ಶಿವರಾಮ ಕಾರಂತ ಹಾಗೂ ತತ್ವ ಪದಕಾರರ ಅಧ್ಯಯನಗಳಿವೆ. 2) ಹೆಣ್ಣಿನ ಲೋಕವನ್ನು ಲೇಖಕಿಯರೇ ಕಂಡಿರಿಸಿರುವ ಬಗೆ. ಇದರಲ್ಲಿ ವೈದೇಹಿ, ಸ್ತ್ರೀವಾದಿ ವಿಮರ್ಶೆಯ ಸ್ವರೂಪ, ಕಥೆಗಾರ್ತಿಯರು ಕಟ್ಟಿದ ಕಥನಗಳು, ಕನ್ನಡ ಸ್ತ್ರೀವಾದಿ ಸಾಹಿತ್ಯ ಮೀಮಾಂಸೆಯ ತಾತ್ವಿಕ ನೆಲೆಗಳು ಎಂಬ ಲೇಖನಗಳಿವೆ. 3) ಸಾಹಿತ್ಯದ ಸ್ವರೂಪ, ಕನ್ನಡ ಲೇಖಕರ ಕವಿತೆ ಕೃತಿಗಳ ಅಧ್ಯಯನ. ಇದರಲ್ಲಿ ಎಚ್. ಎಸ್. ರಾಘವೇಂದ್ರರಾವ್, ನಿಸಾರ್ ಅಹಮದ್, ಕೆ.ಎಸ್.ನ ಇವರ ಕೃತಿಗಳ ಅಧ್ಯಯನಗಳು ಇವೆ. ಸಾಹಿತ್ಯದ ಗ್ರಹಿಕೆಗಳು ಎಂಬ ಲೇಖನವನ್ನು ಇಲ್ಲಿಯೇ ಸೇರಿಸಬಹುದು.

ವಿಮರ್ಶೆ ಎನ್ನುವುದು ಒಟ್ಟಂದದಲ್ಲಿ ಅನೇಕ ಬಗೆಯ ಶಿಸ್ತುಗಳ ಸಮ್ಮಿಳಿತವಾದ ಅನೇಕ ಚಹರೆಗಳುಳ್ಳ ಸಂಗತಿ. ವಿಮರ್ಶೆ ಎನ್ನುವುದು ಸಣ್ಣ ಪ್ರಮಾಣದ ಪ್ರತಿಕ್ರಿಯೆ ಎನ್ನವುದರಿಂದ ಹಿಡಿದು ಮೀಮಾಂಸೆಯವರೆಗೂ ಹರಡಿಕೊಂಡಿರುವ ಜಾಲ ಎಂದು ವಿಮರ್ಶೆಯನ್ನು ಇಲ್ಲಿ ವಿವರಿಸಿಕೊಂಡಿರುವ ಕಾರಣ ಸಾಹಿತ್ಯದ ಅಧ್ಯಯನಕ್ಕೆ ತನ್ನಷ್ಟಕ್ಕೆ ತಾನೇ ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿ ಬಂದಿದೆ.

ಪ್ರತೀ ಲೇಖನದ ಪ್ರಾರಂಭದಲ್ಲಿ ಆ ಲೇಖನದ ಶೀರ್ಷಿಕೆಗೆ ಅನುಗುಣವಾಗಿ ಒಂದು ಚೌಕಟ್ಟನ್ನು, ತಾತ್ವಿಕ ಹಿನ್ನೆಲೆಯನ್ನು ರೂಪಿಸಿಕೊಳ್ಳಲಾಗಿದೆ. ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ವಿಜ್ಞಾನ, ಮಾನವಿಕಗಳ ಜೊತೆಗೆ ಸಾಹಿತ್ಯ ತತ್ವಗಳನ್ನು ಕೃತಿಗಳೊಂದಿಗೆ ಅನುಸಂಧಾನಗೊಳಿಸಿ ವಿಶ್ಲೇಷಣೆ ಮಾಡಿರುವುದನ್ನು ಇಲ್ಲಿನ ಲೇಖನಗಳಲ್ಲಿ ಕಾಣಬಹುದು. ಹೀಗಾಗಿ ಸಾಹಿತ್ಯ ಕೃತಿಗಳ ಒಳಶರೀರದ ಸೂಕ್ಷ್ಮವಾದ ಚರ್ಚೆ ಹಿನ್ನೆಲೆಗೆ ಸರಿದಿರುವುದನ್ನು ಸ್ವಲ್ಪಮಟ್ಟಿಗೆ ಕಾಣಬಹುದಾದರೂ ಹದ ತಪ್ಪದಂತೆ ಎಚ್ಚರ ವಹಿಸಲಾಗಿದೆ.

ವಿಮರ್ಶೆ

ಈ ಕೃತಿಯಲ್ಲಿನ ಹೆಚ್ಚು ಲೇಖನಗಳಲ್ಲಿ ಹೆಣ್ಣಿನ ಲೋಕವನ್ನು, ಲೇಖಕಿಯರು ಮತ್ತು ಲೇಖಕರು ಗ್ರಹಿಸಿರುವ ಬಗೆಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಲೇಖಕರಲ್ಲಿ ರಾಮಾನುಜನ್, ಕಾರಂತ, ಷೇಕ್ಸ್‌ಪಿಯರ್ ಅವರ ಕೃತಿಗಳಲ್ಲಿ ಹೆಣ್ಣು ಮತ್ತು ಗಂಡಿನ ಸಂಬಂಧಗಳನ್ನು, ದಾಂಪತ್ಯ-ಕುಟುಂಬ-ಸಮಾಜಗಳ ನೆಲೆಗಳ ಸಾಂಸ್ಕೃತಿಕ ತಿಳಿವಳಿಕೆಗಳೊಂದಿಗೆ ಹೋಲಿಸಿ ಅಧ್ಯಯನ ಮಾಡಲಾಗಿದೆ. ಹೆಣ್ಣು ಅನ್ಯಳಲ್ಲ, ಅಧೀನಳಲ್ಲ. ಗಂಡು ಹೆಣ್ಣುಗಳ ನಡುವಿನ ಜೈವಿಕ ವ್ಯತ್ಯಾಸ ನೈಸರ್ಗಿಕವಾದದ್ದು. ಆದರೆ ಸಾಂಸ್ಕೃತಿಕ ಮತ್ತು ಸಾಮಾಜಿಕ ರಚನೆಗಳು ಈ ವ್ಯತ್ಯಾಸವನ್ನು ಸೃಷ್ಟಿಸಿಬಿಟ್ಟಿವೆ. ಪಿತೃಪ್ರಧಾನ ಸಮಾಜವು ಸ್ತ್ರೀಯನ್ನು ಅಧೀನಳನ್ನಾಗಿಸಿದೆ. ಈ ಬಗೆಯ ಅಧೀನತೆಯಿಂದ ಸ್ತ್ರೀ ಹೊರಬರಬೇಕಾಗಿದೆ. ಅದಕ್ಕಾಗಿ ಸಾಹಿತ್ಯದ ಚಿಂತನೆಗಳನ್ನು ಮರುರೂಪಿಸಿಕೊಳ್ಳಬೇಕು ಎಂಬ ಚಿಂತನೆಯ ಹಿನ್ನೆಲೆಯಲ್ಲಿ ಲೇಖಕರು ಬರೆದಿರುವ ಕೃತಿಗಳನ್ನು ಸ್ತ್ರೀವಾದಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.



ಪು: 168 ₹150

ಅಂಗುಲ ಹುಳುವಿನ ಇಂಚು ಪಟ್ಟಿ
ಲೇ: ಆರ್.ತಾರಿಣಿ ಶುಭದಾಯಿನಿ
ಪ್ರ: ಬಂಡಾರ ಪ್ರಕಾಶನ, ರಾಯಚೂರು
ಸಂ:98864 07011

ಸ್ತ್ರೀವಾದಿ ಅಧ್ಯಯನ ಕ್ರಮದಲ್ಲಿ, ಅಷ್ಟೇ ಏಕೆ, ಸಾಹಿತ್ಯದ ಅಧ್ಯಯನ ಕ್ರಮದಲ್ಲಿ ರಚನೆಯ ಕಾಲಕ್ಕೂ ನಾವು ಅದನ್ನು ಓದುತ್ತಿರುವ ಕಾಲಕ್ಕೂ ತುಲನೆ ಮಾಡಿ ವಿಶ್ಲೇಷಣೆ ಮಾಡುವ ಕ್ರಮವಿದೆ. ಅಂದಿನ ಮತ್ತು ಇಂದಿನ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಒಟ್ಟಾರೆ ಸಾಂಸ್ಕೃತಿಕವಾದ ವಿಚಾರಗಳನ್ನು ಪರಸ್ಪರ ತುಲನಾತ್ಮಕವಾಗಿ ನೋಡಿ ಕಾರ್ಯಕಾರಣ ಸಂಬಂಧಗಳನ್ನು ಶೋಧನೆ ಮಾಡುವ ವಿಮರ್ಶಾ ವಿಧಾನ ಇದು. ಇದರಲ್ಲಿ ಸ್ತ್ರೀವಾದಿ ವಿಮರ್ಶೆಯೂ ಸೇರುತ್ತದೆ. ಇಲ್ಲಿರುವ ಎಲ್ಲಾ ಲೇಖನಗಳಲ್ಲಿ ಈ ಬಗೆಯ ಅಧ್ಯಯನ ಕ್ರಮವಿರುವುದನ್ನು ಗಮನಿಸಬಹುದು. ನಿದರ್ಶನಕ್ಕಾಗಿ ಷೇಕ್ಸ್‌ಪಿಯರ್: ಚಾರಿತ್ರಿಕ ಪ್ರಶ್ನೆಗಳು ಮತ್ತು ಹೆಣ್ಣು ಅಸ್ಮಿತೆಯಾಗಿರಬಹುದು, ರಾಮಾನುಜನ್, ಕಾರಂತರ ಕೃತಿಗಳಲ್ಲಿನ ಹೆಣ್ಣಿನ ಲೋಕಗಳ ಬಗೆಗಿನ ಲೇಖನಗಳಾಗಿರಬಹುದು. ಬಹುತೇಕ ಎಲ್ಲ ಲೇಖನಗಳಲ್ಲಿ ಈ ಬಗೆಯ ವಿಮರ್ಶಾ ವಿಧಾನವನ್ನು ಗಮನಿಸಬಹುದು.

ಕೃತಿಯನ್ನು ಸಮಗ್ರವಾಗಿ ಅಧ್ಯಯನ ಮಾಡದೆ ಬರೀ ಹೆಣ್ಣಿನ ಲೋಕವನ್ನೇ ಅಧ್ಯಯನ ಮಾಡಿದರೆ ಆ ವಿಮರ್ಶೆ ಪಾರ್ಶ್ವಿಕವಾಗುವುದಿಲ್ಲವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಪ್ರಶ್ನೆಯ ಬಗ್ಗೆಯೂ ಲೇಖಕರಿಗೆ ಅರಿವಿದೆ ಎಂಬುದು ಕೆಲವು ಲೇಖನಗಳಲ್ಲಿ ಅವರು ಎತ್ತುವ ಪ್ರಶ್ನೆಗಳಿಂದ ತಿಳಿಯುತ್ತದೆ. ಈ ಕೃತಿಯಲ್ಲಿನ ಲೇಖನಗಳನ್ನು ಓದಿ ಮುಗಿಸಿದಾಗ 'ಜೀವಂತಿಕೆಯಿಂದ ಕೂಡಿದ ಸಂಸ್ಕೃತಿಯನ್ನು ಪಡೆಯಬೇಕಾದರೆ ಮೊದಲು ಜೀವಂತವಾದ ಸಾಹಿತ್ಯವಿರಬೇಕು, ಜೀವಂತವಾದ ಸಂಸ್ಕೃತಿ ಇದೆಯೋ ಇಲ್ಲವೋ ಎಂಬುದು ಗೊತ್ತಾಗುವುದು ವಿಮರ್ಶಕನಿಂದ' ಎಂದು ಎಫ್.ಆರ್. ಲಿವೀಸ್ ಹೇಳಿರುವ ಮಾತು ಜ್ಞಾಪಕಕ್ಕೆ ಬರುತ್ತದೆ.

ಮೊದಲ ಓದು

ಹೆಣ್ಣಿನ ಒಳಮನಸ್ಸಿಗೆ ಕನ್ನಡಿ

ಸಂಸ್ಕೃತಿ ಕುರಿತ ಬರಹಗಳ ಗುಚ್ಛ 'ಋತ'ವಲ್ಲದೆ 'ಹರಪನಹಳ್ಳಿ ಭೀಮವ್ವ', 'ಮುಕ್ತಛಂದದ ಕವಿ', 'ಲೋಕಸಂವಾದಿ' ಮುಂತಾದ ವ್ಯಕ್ತಿಚಿತ್ರಣಗಳನ್ನು ಕಟ್ಟಿಕೊಟ್ಟ ಲೇಖಕಿ ದೀಪಾ ಫಡ್ಕೆಯವರು ಈಗ 'ಮುಂದಣ ಹೆಜ್ಜೆ' ಕಥಾ ಸಂಕಲನದ ಮೂಲಕ ಓದುಗರ ಮುಂದೆ ಬಂದಿದ್ದಾರೆ. ಈ ಸಂಕಲನದಲ್ಲಿ ಒಟ್ಟು 11 ಕಥೆಗಳಿವೆ.

'ಮುಕ್ತಿಯೆನ್ನ ಮನೆಗೆ ನಡೆದು ಬಂದಿತ್ತು' ಕಥೆಯಲ್ಲಿ, ತನ್ನ ಮಗಳ ಮಡಿಲಿಗೆ ಮಗುವನ್ನು ಇಟ್ಟು 'ಪಾರೋತಿ' ಹೇಳುವ ಮಾತು, ಆಕೆ ಅನ್ನ ತಿಂದ ಮನೆಯ ಋಣ ತೀರಿಸಿದ ನಡೆ, ಶೀರ್ಷಿಕೆಗೆ ತಕ್ಕಂತೆ 'ಗಂಧವಿಲ್ಲದ ಹೂವು' ಕಥೆಯಲ್ಲಿನ 'ಚಂದ್ರಭಾಗ'ಳ ಬದುಕು, ಆಕೆ ಎದುರಿಸಿದ ತಿರಸ್ಕಾರ ಹೀಗೆ ಈ ಸಂಕಲನದಲ್ಲಿನ ಬಹುತೇಕ ಕಥೆಗಳು ಹೆಚ್ಚಾಗಿ ಹೆಣ್ಣಿನ ಆಸೆ ಆಕಾಂಕ್ಷೆಗಳು, ನೋವು-ನಲಿವು, ತಲ್ಲಣಗಳನ್ನು ಅಕ್ಷರ ರೂಪದಲ್ಲಿ ಕಟ್ಟಿಕೊಟ್ಟಿವೆ. ಜೊತೆಗೆ ನೂರೊಂದು ಬದುಕಿನ ಕಥೆಗಳನ್ನೂ ಇವು ಹೇಳಿವೆ. 'ಚಂದು ಎಂಬ ಗಾಂಧಿ'ಯಲ್ಲೂ 'ಸಹನಾ'ಳ ಮೌನದ ಜೊತೆಗೆ ಮನುಷ್ಯ ಹಾಗೂ ಪ್ರಾಣಿಗಳ ಸಂಘರ್ಷವೂ ಕಥೆಯ ಎಳೆಯಾಗಿದೆ. 'ಮುಕ್ತಿಯೆನ್ನ ಮನೆಗೆ..', 'ಚಂದು ಎಂಬ ಗಾಂಧಿ', 'ಗಂಧವಿಲ್ಲದ ಹೂವು' ಬಿಟ್ಟರೆ ಉಳಿದೆಲ್ಲ ಕಥೆಗಳು ನಗರ ಪರಿಸರದ ಹಿನ್ನೆಲೆಯಲ್ಲಿವೆ. ಇವುಗಳಲ್ಲಿ ಹೆಚ್ಚಿನ ಕಥೆಗಳಿಗೆ ಮದುವೆ, ಕೂಡುಕುಟುಂಬ ಅದರ ಸುತ್ತಲಿನ ಸಮಸ್ಯೆಗಳನ್ನು ಶೋಧಿಸುವ ಉಮೇದು ಇದೆ.

ಕಥೆಯ ವೇದಿಕೆ ಓದಿಗೆ ಉತ್ಸಾಹ ತರುತ್ತದೆ. 'ಮುಕ್ತಿಯೆನ್ನ ಮನೆಗೆ...' ಕಥೆಯಲ್ಲಿ 'ಮಂಜಾಡಿ' ಎನ್ನುವ ಊರಿನ ವಿವರಣೆ ಇದಕ್ಕೆ ಸಾಕ್ಷ್ಯ. 'ಮಂಜಾಡಿ' ಇಲ್ಲಿ ಹಲವು ಕಥೆಗಳಿಗೆ ವೇದಿಕೆಯಾಗಿದೆ. ದಕ್ಷಿಣ ಕನ್ನಡದ ಭಾಷೆಯಲ್ಲಿ ಕಥೆ ಹೇಳುವ ಪರಿ ಆಕರ್ಷಕವಾಗಿದ್ದು, ಪ್ರಭಾವವನ್ನೂ ಬೀರುತ್ತದೆ. ಪದ ಬಳಕೆಯೂ ಲೇಖಕಿಯ ಮನಸ್ಸಿಗೆ ಹತ್ತಿರವಾಗಿದೆ. 'ಕೆಲಸದ ಪೊಣ್ಣು', 'ಮೋಕೆ', 'ಸಂಕ', 'ತೋಡು' ಹೀಗೆ ಕಥೆಗಳುದ್ದಕ್ಕೂ ಸ್ಥಳೀಯ ಭಾಷೆ ಕನ್ನಡಕ್ಕೆ ಪೂರಕವಾಗಿ ಹೆಜ್ಜೆ ಇಡುತ್ತವೆ. 'ಮುಂದಣ ಹೆಜ್ಜೆ' ಎಂಬ ಶೀರ್ಷಿಕೆಯ ಕಥೆ ಇಲ್ಲಿಲ್ಲ. ಕಥೆಗಳ ಅಂತ್ಯವೇ ಈ ಕೃತಿಯ ಶೀರ್ಷಿಕೆಗೆ ಪೂರಕವಾಗಿರುವಂತೆ ತೋಚುತ್ತದೆ.



ಪು: 106 ₹100

ಮುಂದಣ ಹೆಜ್ಜೆ
ಲೇ: ದೀಪಾ ಫಡ್ಕೆ
ಪ್ರ: ಸಾಹಿತ್ಯ ಸಾಧನ
ಸಂ: 81234 96789

ಕಥೆ
ವಿಶ್ವನಾಥ ಎನ್. ನೇರಳಕಟ್ಟೆ ಅವರ ಸೋತಂತ್ರ ದಿನ
ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ನಾ ದಿವಾಕರ ಅವರ ಶ್ ಶ್.... ಸದ್ದು ಮಾಡದಿರಿ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ದಮನಿತರ ಸಾವುಗಳಿಗೆ...

8ನೇ ಪುಟದಿಂದ...

ಅವಮಾನವೆಂದು ಬಗೆದ ರಜಪೂತರು ತಲವಾರುಗಳು, ಬಂದೂಕುಗಳು, ಕಲ್ಲುಗಳನ್ನು ಹಿಡಿದು ದಲಿತರ ಮನೆಗಳ ಮೇಲೆ ದಾಳಿ ನಡೆಸಿದರು. ಅಂಬೇಡ್ಕರ್ ಪ್ರತಿಮೆ ಭಗ್ನವಾಯಿತು. ಸಂತ ರವಿದಾಸರ ದೇವಾಲಯಕ್ಕೆ ನುಗ್ಗಿ ಪ್ರತಿಮೆ ಉರುಳುಸಿ ಮೂತ್ರ ವಿಸರ್ಜಿಸಿದರು. ಮನೆಗಳಿಗೆ ಪೆಟ್ರೋಲ್ ಸುರಿದು ಬೆಂಕಿ ಇಟ್ಟರು. ಅಂಬೇಡ್ಕರ್ ಪಟಗಳು, ಪುಸ್ತಕಗಳು, ಒಲೆ ಮೇಲಿನ ಅಡುಗೆ, ಕಾಳು ಕಡ್ಡಿಗಳು, ಮೋಟರ್ ಸೈಕಲ್, ಟೀವಿ ಸೆಟ್ಟುಗಳನ್ನು ಸುಟ್ಟು ಹಾಕಿದರು. ನಗನಾಣ್ಯ ದೋಚಿದರು. ಪಾತ್ರೆ ಪಡಗಗಳನ್ನೂ ಬಿಡದೆ ಕೊಚ್ಚಿ ಹಾಕಿದರು. ಅಡ್ಡ ಬಂದವರ ಮೇಲೆ ತಲವಾರುಗಳ ಬೀಸಿದರು. ಹೆಣ್ಣುಮಕ್ಕಳ ಬಟ್ಟೆ ಹರಿದರು. ಸ್ತನ ಕತ್ತರಿಸುವ ಪ್ರಯತ್ನಗಳಲ್ಲಿ ಗಾಯಗೊಂಡವರ ಗಾಯಗಳು ಇನ್ನೂ ಹಸಿ ಹಸಿ. ಹಲ್ಲೆಕೋರರಿಂದ ರಕ್ಷಿಸಲು ಮಕ್ಕಳನ್ನು ಮಂಚಗಳೊಳಗೆ ಮುಚ್ಚಿಡಲಾಯಿತು. ಮುಖ್ಯಮಂತ್ರಿ ಖುದ್ದು ರಜಪೂತ ಕುಲಕ್ಕೆ ಸೇರಿದವರು. ಹೀಗಾಗಿ ದಾಳಿಕೋರರಿಗೆ ಪೊಲೀಸರ ಸಂಪೂರ್ಣ 'ಸಹಕಾರ'ವಿತ್ತು.

ಛತ್ತೀಸಗಡದ ಬಸ್ತರ್ ಸೀಮೆಯ ಸುಕ್ಮಾದ ಹಳ್ಳಿ. ಅಲ್ಲಿ ಕಾವಾಸಿ ಹಿಡ್ಮೆ ಎಂಬ ಗೊಂಡ್ ಯುವತಿ. ತನ್ನ ವಿಧವೆ ಚಿಕ್ಕಮ್ಮನೊಂದಿಗೆ ತುಂಡು ಜಮೀನು ಉತ್ತು ಹೊಟ್ಟೆ ಹೊರೆಯುತ್ತಿದ್ದ ಲವಲವಿಕೆಯ ಸ್ವಾಭಿಮಾನಿ. ಸುಗ್ಗಿಯ ನಂತರ ಜಾತ್ರೆಯಲ್ಲಿ ರಿಬ್ಬನ್ನು, ಗಾಜಿನ ಬಳೆ ಕೊಂಡಳು. ಹಾಡಿ ನರ್ತಿಸುತ್ತಿದ್ದ ಆದಿವಾಸಿಗಳ ಗುಂಪೊಂದರ ಜೊತೆಗೆ ಕೊರಳು ಸೇರಿಸಿ ಹೆಜ್ಜೆ ಹಾಕಿ ದಣಿದಳು. ದಾಹವಾಗಿ ನೀರು ಕುಡಿಯಲೆಂದು ಸನಿಹದ ಕೊಳವೆಬಾವಿಯ ಪಂಪಿಗೆ ಬೊಗಸೆ ಒಡ್ಡಿದ್ದಳು. ಹಠಾತ್ತನೆ ಸುತ್ತುವರೆದಿದ್ದರು ಪೊಲೀಸರು. ಮುಡಿಗೆ ಕೈ ಹಾಕಿ ಎಳೆದಾಡಿದರು. ಕೈ ಕಾಲು ಕಟ್ಟಿ ಟ್ರಕ್ಕಿಗೆಸೆದು ಠಾಣೆಗೆ ಒಯ್ದರು. ಆ ಠಾಣೆಯ ದೈಹಿಕ ಕಾಮನೆ ತಣಿದ ನಂತರ ಮತ್ತೊಂದು ಠಾಣೆಗೆ ಒದೆಯುವ ಕಾಲ್ಚೆಂಡಾದಳು ಅಮಾಯಕ ಆದಿವಾಸಿ ಕಾವಾಸಿ. ಈ ಕುಟಿಲ ಕಾರಸ್ಥಾನದ ಬಲಿವೇದಿಕೆ ಏರುವ ಆದಿವಾಸಿ ಯುವತಿಯರ ಪೈಕಿ ಕಾವಾಸಿ ಮೊದಲಿಗಳಂತೂ ಅಲ್ಲ, ಸದ್ಯಕ್ಕೆ ಕೊನೆಯವಳೂ ಆಗುವುದಿಲ್ಲ.

ಕೆಲ ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆಯ ನಂತರವೇ ಕಾಲ ಮೇಲೆ ನಿಂತಳು ಕಾವಾಸಿ. ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿದರು. ಹೊರಿಸಿದ್ದು ಸಿ.ಆರ್.ಪಿ.ಎಫ್. ಸಿಬ್ಬಂದಿಯ ಹತ್ಯೆ ಆಪಾದನೆ. ಜಗದಾಳಪುರದ ಜೈಲು ಪಾಲಾದಳು. ಅಮಾನುಷ ಲೈಂಗಿಕ ಹಿಂಸೆಯಿಂದ ಜರ್ಝರಿತವಾಗಿ ತತ್ತರಿಸಿದ್ದ ಒಡಲು ಹಠಾತ್ತನೆ ಗರ್ಭಕೋಶವನ್ನು ಹೊರ ಜಾರಿಸಿತ್ತು (ಪ್ರೊಲ್ಯಾಪ್ಸ್). ತೀವ್ರ ರಕ್ತಸ್ರಾವದಿಂದ ಹೌಹಾರಿದ ಬಾಲೆ ದಿಕ್ಕೆಟ್ಟಳು. ಪ್ರಯತ್ನಪಟ್ಟು ಪುನಃ ಒಡಲೊಳಗೆ ಕಳಿಸಿದಳು.

ಮರುದಿನ ಮತ್ತೆ ಅದೇ ವ್ಯಥೆ. ಏಕಾಂತ ಸಿಕ್ಕಾಗ ಬ್ಲೇಡಿನಿಂದ ಕತ್ತರಿಸಲು ಮುಂದಾದಳು. ಈ ಘೋರ ಇತರೆ ಮಹಿಳಾ ಕೈದಿಗಳ ಕಣ್ಣಿಗೆ ಬಿದ್ದು ಕಲ್ಲೋಲವೇ ಎದ್ದಿತು. ಆಸ್ಪತ್ರೆಗೆ ಕಳಿಸಲಾಯಿತು. ಶಸ್ತ್ರಚಿಕಿತ್ಸೆಯ ನಂತರ ಮತ್ತೆ ಜೈಲಿಗೆ ಮರಳಿದಳು.

ಇವೇ ಜೈಲುಗಳಲ್ಲಿ ನರಕ ಎದುರಿಸಿದ ಇನ್ನೊಬ್ಬ ಆದಿವಾಸಿ ಹೆಣ್ಣುಮಗಳ ಹೆಸರು ಸೋನಿ ಸೋರಿ. ಕಾವಾಸಿಯನ್ನು ಬಿಡುಗಡೆ ಮಾಡಿಸಲು ನೆರವಾದವಳು ಈಕೆ. ಕಾವಾಸಿಯನ್ನು ಪುನಃ ಜೈಲಿಗೆ ಅಟ್ಟುವ ದುರುಳ ಪ್ರಯತ್ನಗಳು ಇನ್ನೂ ನಿಂತಿಲ್ಲ.

ಇಂತಹ ಸಾವಿರ ಕಾಡು ಕಾವಾಸಿಗಳ ನೋವಿನ ಕತೆಗಳು ಕಣ್ಣೀರು ನಾಗರಿಕ ಎಂದು ಕರೆದುಕೊಳ್ಳುವ ಅನಾಗರಿಕ ಜಗತ್ತಿಗೆ ದಾಟಿ ಬರುವುದಿಲ್ಲ. ಬಂದರೂ ಅಳುವವರು ಬಹಳವೇನೂ ಇಲ್ಲ. ಅಸ್ಸಾಮಿನಲ್ಲಿ ನ್ಯಾಯ ಕೇಳಿ ಮೆರವಣಿಗೆ ಹೊರಟಿದ್ದ ಆದಿವಾಸಿಗಳ ತಂಡದಲ್ಲಿದ್ದ ಲಕ್ಷ್ಮೀ ಓರಾಂಗ್ ಎಂಬ ಯುವತಿಯನ್ನು ಬಹಿರಂಗವಾಗಿ ವಿವಸ್ತ್ರಗೊಳಿಸಿ ಜನನಾಂಗದ ಮೇಲೆ ಕಾಲಿಂದ ಒದೆಯುತ್ತಿದ್ದ ನಾಗರಿಕರ ಛಾಯಾಚಿತ್ರಗಳ ನೆನಪಿದೆಯೇ?

'ಬನ್ನಿ ನಮ್ಮನ್ನು ರೇಪ್ ಮಾಡಿ' ಎಂಬ ಬರಹವಿದ್ದ ಬ್ಯಾನರ್ ಹಿಡಿದು ಅಸ್ಸಾಮ್ ರೈಫಲ್ಸ್ ತುಕಡಿಯ ನಿವಾಸ ಕಾಂಗ್ಲಾ ಫೋರ್ಟ್ ಮುಂದೆ ಪೂರ್ಣ ಬೆತ್ತಲಾಗಿ ಪ್ರತಿಭಟಿಸಿದ ತಾಯಂದಿರ ಚಿತ್ರ ಸಾಕ್ಷಿಪ್ರಜ್ಞೆಯಿಂದ ಸುಲಭಕ್ಕೆ ಮಾಸುವಂತಹುದಲ್ಲ.

ಆರು ವರ್ಷಗಳ ಹಿಂದೆಯಷ್ಟೇ ಛತ್ತೀಸಗಡದಲ್ಲಿ ನಡೆದ ದೌರ್ಜನ್ಯ ಎಂದಿನಂತೆ ನಾಗರಿಕ ಜಗತ್ತಿನ ನಿರ್ಲಕ್ಷ್ಯದಡಿ ಹೂತು ಹೋಯಿತು. ತಡವಾಗಿಯಾದರೂ ಮೂರು ಕಂತುಗಳಲ್ಲಿ ಚಿತ್ರಗಳ ಸಹಿತ ವರದಿ ಮಾಡಿದ್ದು ಒಂದೇ ಒಂದು ಇಂಗ್ಲಿಷ್ ದಿನಪತ್ರಿಕೆ.

ಇನ್ನೂರು ಆಳುಗಳ ಬಲದ ಸಿ.ಆರ್.ಪಿ.ಎಫ್. ಸಿಬ್ಬಂದಿ ಛತ್ತೀಸಗಡದ ಬಿಜಾಪುರ ಜಿಲ್ಲೆಯ ಮಾವೋವಾದಿಗಳು ಎಡತಾಕುತ್ತಿದ್ದರೆನ್ನಲಾದ ಗ್ರಾಮಗಳ ಮೇಲೆ ಎರಗಿ ನಡೆಸಿರುವ ಕೃತ್ಯಗಳು ಆತ್ಮಸಾಕ್ಷಿ ಉಳ್ಳ ನಾಗರಿಕ ಜಗತ್ತು ತಲೆ ತಗ್ಗಿಸುವಂತಹವು.

ದನ ಮೇಯಿಸುತ್ತಿದ್ದ ಹದಿಹರೆಯದ ಅಪ್ರಾಪ್ತ ವಯಸ್ಸಿನ ಬಾಲೆ ಮತ್ತು ಗರ್ಭಿಣಿ ಹೆಣ್ಣುಮಗಳು ಸೇರಿದಂತೆ ಮೂವರ ಮೇಲೆ ನಡೆದದ್ದು ಸಾಮೂಹಿಕ ಅತ್ಯಾಚಾರ. ಮಕ್ಕಳನ್ನೂ ಬಿಡದೆ ಬಟ್ಟೆ ಹರಿದು ಅವುಗಳ ಮೈ ಮೇಲೆ ಬಾರಿಸಲಾಗಿದೆ. ಕಂಕುಳಲ್ಲಿ ಕೂಸುಗಳಿರುವ ತಾಯಂದಿರ ಕೂದಲು ಹಿಡಿದು ಮನೆಯಿಂದ ಹೊರಗೆ ಎಳೆದಾಡಲಾಗಿದೆ.

ಸ್ನಾನ ಮಾಡುತ್ತಿದ್ದ ಹೆಣ್ಣುಮಗಳನ್ನು ಓಡಿಸಿ ಥಳಿಸಲಾಗಿದೆ. ಬಾಣಂತಿಯರು ಎಂದರೂ ಬಿಡಲಿಲ್ಲ. ರವಿಕೆ ಬಿಚ್ಚಿಸಿ ಹಾಲು ಒಸರುತ್ತಿದೆಯೇ ಎಂದು ಹಿಸುಕಿ ನೋಡಲಾಗಿದೆ.

ತಮ್ಮ ಕೆಳವಸ್ತ್ರಗಳನ್ನು ಎತ್ತಿ ಲೈಂಗಿಕ ಹಿಂಸೆಯ ಬೆದರಿಕೆ ಹಾಕಲಾಯಿತು. ಜನನಾಂಗಗಳಿಗೆ ಮೆಣಸಿನ ಖಾರ ತುರುಕುವುದಾಗಿ ಹೆದರಿಸಲಾಯಿತು. ಕೆಲವರ ಬಟ್ಟೆ ಬಿಚ್ಚಿ ಓಡಿಸಲಾಯಿತು. ಚಿಲ್ಲರೆ ನಾಣ್ಯಗಳಲ್ಲಿ ಕೂಡಿಟ್ಟಿದ್ದ ಹಣವನ್ನು ದೋಚಲಾಯಿತು. ಮನೆಗಳನ್ನು ಒಡೆದು ಕೆಡಹುವ ಪ್ರಯತ್ನಗಳು ನಡೆದವು. ಕೋಳಿ, ಅಕ್ಕಿ, ಎಣ್ಣೆ ಮುಂತಾದ ದಿನಸಿಯನ್ನು ದೋಚಿ ತಿನ್ನಲಾಯಿತು ಎಂದು ಮಹಿಳೆಯರು ಸಂದರ್ಶನಗಳಲ್ಲಿ ತಮ್ಮ ಪಾಡು ತೋಡಿಕೊಂಡಿದ್ದಾರೆ.

ಛತ್ತೀಸಗಡದ ಬಿಜಾಪುರ ಜಿಲ್ಲೆಯ ಸರ್ಕೇಗುಡದಲ್ಲಿ 2012ರಲ್ಲಿ ಹುಸಿ ಎನ್‌ಕೌಂಟರ್ ಒಂದು ನಡೆಯಿತು. ಆರು ಮಂದಿ ಅಪ್ರಾಪ್ತ ವಯಸ್ಕರೂ ಸೇರಿದಂತೆ 17 ಮಂದಿ ಆದಿವಾಸಿಗಳನ್ನು ಈ ಎನ್‌ಕೌಂಟರ್‌ನಲ್ಲಿ ಕೊಲ್ಲಲಾಗಿತ್ತು. ಹತರಾದವರಿಗೆ ಮಾವೋವಾದಿಗಳ ಹಣೆಪಟ್ಟಿ ಹಚ್ಚಲಾಗಿತ್ತು. ನ್ಯಾಯಮೂರ್ತಿ ವಿ.ಕೆ. ಅಗರವಾಲ್ ಆಯೋಗ 2019ರಲ್ಲಿ ಸಲ್ಲಿಸಿದ ವರದಿಯ ಪ್ರಕಾರ 17 ಮಂದಿಯ ಪೈಕಿ ಯಾರೂ ಮಾವೋವಾದಿಗಳಾಗಿರಲಿಲ್ಲ.

ಅಡವಿಗಳ ನಡುವೆ ನಡೆವ ಅತ್ಯಾಚಾರಗಳು ಅಕ್ಷರಶಃ ಅರಣ್ಯ ರೋದನಗಳು. ಅವುಗಳನ್ನು ಪ್ರತಿಭಟಿಸಿ ಇಂಡಿಯಾ ಗೇಟಿನಲ್ಲಿ ಮೋಂಬತ್ತಿ ಮೆರವಣಿಗೆಗಳು ಜರುಗುವುದಿಲ್ಲ.

ಪು: 356 ₹350

ಭಾರತೀಯ ಧರ್ಮ
ಅಂತಃಸತ್ವದ ಹುಡುಕಾಟ
(ಎಡ-ಬಲಗಳ ನಡುವಿನ ಭಾರತ)
ಲೇ: ಡಾ.ಸರ್ಫ್ರಾಜ್ ಚಂದ್ರಗುತ್ತಿ
ಪ್ರ: ಜಾಗೃತಿ ಪ್ರಿಂಟರ್ಸ್ ಬೆಂಗಳೂರು
ಸಂ: 97400 66842

ಮಧ್ಯಮ ಮಾರ್ಗದ ಪ್ರತಿಪಾದನೆ

'ಮಧ್ಯಮ ಮಾರ್ಗವನ್ನು ಯಥಾಸ್ಥಿತಿವಾದ ಅಥವಾ ಅಪಾಯಕಾರಿವಾದ ಎನ್ನುವವರು ತಾವೇ ಆರಾಧಿಸುವ ಬುದ್ಧನನ್ನು ಮತ್ತೊಮ್ಮೆ ಓದುವುದೊಳಿತು. ಮಧ್ಯಮ ಮಾರ್ಗದಿಂದಲೇ ನಾನು ಬದಲಾದದ್ದು ಎನ್ನುತ್ತಾನೆ ಬುದ್ಧ. ಎಡಬಲ ಸಿದ್ಧಾಂತಗಳಿಗಿಂತ ಮಧ್ಯಮ ಮಾರ್ಗ ಇಂದಿನ ಜರೂರು ಎಂದು ಅರ್ಥ ಮಾಡಿಕೊಳ್ಳುವುದು ಅಗತ್ಯ...'

ಈ ಮಾತನ್ನು 'ಭಾರತೀಯ ಧರ್ಮ – ಅಂತಃಸತ್ವದ ಹುಡುಕಾಟ' ಕೃತಿಯ ಎಲ್ಲ ಲೇಖನಗಳಲ್ಲೂ ಎಡ-ಬಲಗಳೆಂಬ ಎರಡೂ ಗುಂಪುಗಳಿಗೆ ಒತ್ತಿ ಹೇಳುತ್ತಾ ಸಮನ್ವಯಕಾರರಾಗಲು ಲೇಖಕ ಸರ್ಫ್ರಾಜ್ ಚಂದ್ರಗುತ್ತಿ ಪ್ರಯತ್ನಿಸಿದ್ದಾರೆ. ಎಡ ಬಲಗಳ ಈ ಅಬ್ಬರದ ಕಾಲದಲ್ಲಿ ಮಧ್ಯಮ ಮಾರ್ಗದ ಜರೂರನ್ನು ಮನದಟ್ಟು ಮಾಡುವ ಪ್ರಯತ್ನದಂತೆ ಈ ಕೃತಿ ಗೋಚರವಾಗುತ್ತದೆ. ಎರಡೂ ಗುಂಪುಗಳಲ್ಲಿರುವ ಅತಿರೇಕಗಳ ಬಗ್ಗೆ ಅವರಿಗೆ ಬೇಸರವಿದೆ. ಸಾತ್ವಿಕ ಕೋಪವೂ ಇದೆ. ಈ ಗುಂಪುಗಳಲ್ಲಿ ನಿಂತು ಸುದ್ದಿಯಾದವರು, ವಿವಾದ ಸೃಷ್ಟಿಸಿದವರಿಗೆ ಅವರ ಮಾತುಗಳ ಉಲ್ಲೇಖಗಳ ಸಹಿತ ಮಧ್ಯಮ ಚಿಂತನೆಯಲ್ಲೇ ಉತ್ತರಿಸಲು ಪ್ರಯತ್ನಿಸಿದ್ದಾರೆ. ಹುಸಿವಾದಗಳನ್ನು ಬಯಲುಗೊಳಿಸುವ ಉತ್ಸಾಹವನ್ನೂ ಪ್ರದರ್ಶಿಸಿದ್ದಾರೆ. ಹಾಗೆಯೇ ಕರ್ಮಠ ಆಚರಣೆಗಳು, ಮಡಿಮೈಲಿಗೆ ಹೆಸರಿನ ಕಂದಾಚಾರಗಳನ್ನು ಖಂಡಿಸಲೂ ಹಿಂಜರಿದಿಲ್ಲ (ಭಾರತೀಯ ಧರ್ಮ: ಸಮಸ್ಯೆ ಸವಾಲುಗಳು, ಅಂತಿಮ ಪರಿಶೀಲನೆ ಲೇಖನಗಳು).

ಧರ್ಮ, ರಾಜಕಾರಣ, ಸಮಕಾಲೀನ ಸಂಗತಿಗಳನ್ನು ಮುಂದಿಟ್ಟುಕೊಂಡು ಎಲ್ಲ ಆಯಾಮಗಳನ್ನೂ ಸ್ಪರ್ಶಿಸಿದ್ದಾರೆ ಲೇಖಕರು. ವಾದ ವಿವಾದಗಳು ತಾರಕಕ್ಕೇರಿ ಹಿಂಸಾಸ್ವರೂಪ ತಳೆಯುತ್ತಿರುವ ಹೊತ್ತಿನಲ್ಲಿ ಇಲ್ಲಿನ ಲೇಖನಗಳನ್ನು ಓದಿ ಮುಗಿಸಿದಾಗ ಸಮಚಿತ್ತ ಸೃಷ್ಟಿಸುವ ಇಂತಹ ಕೃತಿಯ ಅಗತ್ಯವಿತ್ತು ಎನ್ನುವ ಮಾತು ಓದುಗರಿಂದ ಹೊರಡುತ್ತದೆ.

ಅಸಾಧಾರಣ ಸಮಾಜವಾದಿ

ದೇಶ ಕಂಡ ಅಪರೂಪದ ಸಮಾಜವಾದಿ ನಾಯಕ ನಮ್ಮ ಶಾಂತವೇರಿ ಗೋಪಾಲಗೌಡರು. ಅವರ ಜನ್ಮ ಶತಮಾನೋತ್ಸವದ ನೆಪದಲ್ಲಿ ಅವರ ಬದುಕಿನ ಮೇಲೊಂದು ಹೊರಳುನೋಟ

ನಟರಾಜ್ ಹುಳಿಯಾರ್

ಜನ್ಮಶತಮಾನೋತ್ಸವ

ನೂರು ವರ್ಷಗಳ ಕೆಳಗೆ ಹುಟ್ಟಿದ ಶಾಂತವೇರಿ ಗೋಪಾಲಗೌಡರನ್ನು ನೆನೆಯುತ್ತಿದ್ದರೆ, ಒಂದು ಶತಮಾನದ ಭಾರತದ ಹೋರಾಟದ ಕೆಚ್ಚು, ಹೊಣೆಯರಿತ ನಾಯಕತ್ವ, ಕನಸು, ನಿರೀಕ್ಷೆ, ನಿರಾಶೆಗಳ ಚಿತ್ರಗಳು ಕಣ್ಣೆದುರು ಮೂಡತೊಡಗುತ್ತವೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಆರಗ ಗ್ರಾಮದ 'ಸಂತೇರಿ' ಮನೆತನದ ಕೊಲ್ಲೂರಯ್ಯಗೌಡ-ಶೇಷಮ್ಮನವರ ಮಗ ಗೋಪಾಲಗೌಡ (14 ಮಾರ್ಚ್ 1923- 9 ಜೂನ್ 1972) ಬಾಲಕನಾಗಿದ್ದಾಗ ಪ್ರವಾಹದಲ್ಲಿ ತೇಲಿ ಬಂದ ತೆಂಗಿನಕಾಯನ್ನು ತಂದು ಮನೆಯ ಅಂಗಳದಲ್ಲಿ ನೆಟ್ಟ. ಆ ತೆಂಗಿನಮರ ಈಚಿನವರೆಗೂ ಕಾಯಿ ಬಿಡುತ್ತಿತ್ತು.

ಸ್ವಾತಂತ್ರ್ಯ ಚಳವಳಿಯ ಕಾವು, ಹುಮ್ಮಸ್ಸು ಆವರಿಸಿದ್ದ 1930ರ ದಶಕದಲ್ಲಿ ಗೋಪಾಲ ಒಮ್ಮೊಮ್ಮೆ ಶಾಲೆಗೆ ಹೋಗದೆ ಕೊಳಲು ಬಾರಿಸಿಕೊಂಡು ಕಾಡುಮೇಡು ಅಲೆಯುತ್ತಿದ್ದ; ದಿನಪತ್ರಿಕೆಗಳಲ್ಲಿ ಚಳವಳಿಯ ಸುದ್ದಿ ಓದಿ ಚಡಪಡಿಸುತ್ತಿದ್ದ. 9 ಆಗಸ್ಟ್ 1942. 'ಬ್ರಿಟಿಷರೇ! ಭಾರತ ಬಿಟ್ಟು ತೊಲಗಿ!' ಚಳವಳಿ ಶುರುವಾದ ದಿನ ಎಸ್ಸೆಸ್ಸೆಲ್ಸಿ ಸಿದ್ಧತಾ ಪರೀಕ್ಷೆ ನಡೆಯುತ್ತಿತ್ತು. ಚಳವಳಿಗಾರರ ಮೆರವಣಿಗೆ ಸ್ಕೂಲಿನವರೆಗೂ ಬಂತು. ಮೇಷ್ಟರು ಬೇಡಬೇಡವೆಂದರೂ ಗೋಪಾಲ ಸಹಪಾಠಿಗಳ ಜೊತೆ 'ಭಾರತ್ ಮಾತಾ ಕಿ ಜೈ' ಘೋಷಣೆ ಕೂಗುತ್ತಾ ಚಳವಳಿಗಾರರ ಜೊತೆ ಹೊರಟ. ಬ್ರಿಟಿಷ್ ಸರ್ಕಾರದ ವಿರುದ್ಧ ಪ್ರತಿಭಟಿಸುತ್ತಾ ಟೆಲಿಫೋನ್ ತಂತಿ ಕತ್ತರಿಸಿದ;

ಶಾಂತವೇರಿ ಗೋಪಾಲಗೌಡ – ಸೋನಕ್ಕ

ಪೋಸ್ಟ್ ಡಬ್ಬಗಳನ್ನು ಎತ್ತಿ ಹೊಳೆಗೆಸೆದ. ಶಿವಮೊಗ್ಗದ ಜೈಲಿನಲ್ಲಿ ವಿಚಾರಣಾಧೀನ ಕೈದಿಯಾದ. ಜೈಲಿನಲ್ಲಿದ್ದ ಸ್ವಾತಂತ್ರ್ಯ ಹೋರಾಟಗಾರ, ಲೇಖಕ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಗೋಪಾಲನ ಧೈರ್ಯ, ಜಾಣ್ಮೆಗಳನ್ನು ಕಂಡು ಬೆರಗಾದರು. ಜೈಲಿನಲ್ಲಿ ಮಾರ್ಕ್ಸ್‌ವಾದ, ಗಾಂಧೀವಾದ, ಸಮಾಜವಾದ ಎಲ್ಲವನ್ನೂ ಹುಡುಗ ಅರಿಯಲೆತ್ನಿಸುತ್ತಿದ್ದ.

ಗೋಪಾಲ ಜೈಲೆಂಬ ವಿಶ್ವವಿದ್ಯಾಲಯದಲ್ಲಿ ಸಮಾಜಪರ ಕಾಳಜಿಯ ನಾಯಕತ್ವದ ಗುಣಗಳನ್ನು ಪಡೆದು ಹೊರಬಂದ. ಗೋಪಾಲನ ತಲ್ಲಣಗಳನ್ನು ಅರಿಯಲಾರದೆ, ಅವನ ಬುದ್ಧಿಭ್ರಮಣೆಯಾಗಿದೆಯೆಂದು ಅಣ್ಣ ಧರ್ಮಯ್ಯಗೌಡರು ಅವನನ್ನು ಡಾಕ್ಟರ್ ಬಳಿ ಕರೆದೊಯ್ದರು. ಗೋಪಾಲ ಡಾಕ್ಟರ್ ಕಪಾಟಿನಲ್ಲಿದ್ದ ಸಾಮಾಜಿಕ ಪುಸ್ತಕಗಳನ್ನು ಓದತೊಡಗಿದ. ಲೇಖಕರೂ ಆಗಿದ್ದ ಡಾ.ವಿಶ್ವನಾಥರಾವ್, ಜಾನ್ ಮೆಕ್‌ಕ್ರೀಡಿಯ 'ಸೋಷಲಿಸಂ ಇನ್ ದ ಟೆಸ್ಟ್‌ಟ್ಯೂಬ್' ಪುಸ್ತಕವನ್ನು ಅವನಿಗೆ ಪರಿಚಯಿಸಿದರು; 'ಸಾಮಾನ್ಯ ರೈತನ ಉತ್ತಮ ಬಾಳ್ವೆಗೆ ಸಮಾಜವಾದವೇ ತಾರಕ ಮಂತ್ರ' ಎಂದು ತೋರಿಸಿದ್ದ ಈ ಪುಸ್ತಕ ಗೋಪಾಲನನ್ನು ತಟ್ಟಿತು.

ತಮ್ಮ 'ಸಂತೇರಿ' ಮನೆತನವನ್ನೇ 'ಶಾಂತವೇರಿ'ಯಾಗಿಸಿ, 'ಶಾಂತವೇರಿ ಗೋಪಾಲಗೌಡ' ಆದ ಕತೆಯನ್ನು ಮುಂದೊಮ್ಮೆ ಗೌಡರು ಕೋಣಂದೂರು ಲಿಂಗಪ್ಪನವರಿಗೆ ಹೇಳಿದ್ದರು. ಕಾಲೇಜು ಬಿಟ್ಟು ಪೂರ್ಣವಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿದ ಶಾಂತವೇರಿ ಗೋಪಾಲಗೌಡರು, ಕಾಂಗ್ರೆಸ್ ಪಕ್ಷಕ್ಕೆ ಸಮಾಜವಾದಿ ತಾತ್ವಿಕತೆ ಕೊಡಲು ಲೋಹಿಯಾ, ಜೆ.ಪಿ. ಮೊದಲಾದವರು ಕಟ್ಟಿದ 'ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ'ದ ಜೊತೆಯಾದರು. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರು ರಾಜ್ಯಕ್ಕೆ ಸ್ವಾತಂತ್ರ್ಯ ಬರದಂತೆ ಮೈಸೂರು ಮಹಾರಾಜರೂ ದಿವಾನರೂ ಅಡ್ಡಗಾಲಾಗಿದ್ದರು. ರಾಜ್ಯದಲ್ಲಿ ಪ್ರಜಾಪ್ರತಿನಿಧಿ ಸರ್ಕಾರಕ್ಕಾಗಿ ಚಳವಳಿ ಶುರುವಾಯಿತು. ಅಂಥ ಸಭೆಯೊಂದಕ್ಕೆ ಗೋಪಾಲಗೌಡರು ಬರುತ್ತಾರೆಂದು ಪೊಲೀಸರು ಕಾದಿದ್ದರು. ಗೌಡರು ಮಾರುವೇಷದಲ್ಲಿ ಸಭೆಗೆ ಬಂದು ಕಹಳೆ ಊದಿ ಸಭೆಯನ್ನು ಉದ್ಘಾಟಿಸಿ ಮಾಯವಾಗಿಬಿಟ್ಟರು!

ಸ್ವಾತಂತ್ರ್ಯ ಚಳವಳಿ ಬೆಳೆಸಿದ ಹೊಣೆಗಾರಿಕೆ, ಗಾಂಧೀ ಮಾರ್ಗ ಕಲಿಸಿದ ಕಾಳಜಿ, ಆದರ್ಶ; ಸಮಾಜವಾದದ ಗುರಿ-ದಾರಿ, ರೈತಪರ ಒಲವು- ಇವೆಲ್ಲ ಬೆರೆತ ಗೋಪಾಲಗೌಡರು ಸಮಾಜವಾದಿ ಪಕ್ಷದ 'ಕಿಸಾನ್ ಸಭಾ' ಸಮಾವೇಶವನ್ನು ಶಿವಮೊಗ್ಗದಲ್ಲಿ ಸಂಘಟಿಸಿದರು. ಆ ದಿನಗಳಲ್ಲಿ ಭೂಮಾಲೀಕರು ತಮ್ಮ ಗದ್ದೆಗಳಲ್ಲಿ ಗೇಣಿ ಮಾಡುತ್ತಿದ್ದ ದೀವರಿಗೆ ಕೊಡಬೇಕಾದ ಭತ್ತದಲ್ಲಿ ಮಾಡುತ್ತಿದ್ದ ಅಳತೆಯ ಮೋಸದ ವಿರುದ್ಧ ದೀವ ಗೇಣಿದಾರರನ್ನು ಸ್ಕೂಲ್ ಮೇಷ್ಟ್ರು ಗಣಪತಿಯಪ್ಪನವರು ಸಂಘಟಿಸಿದ್ದರು. ಸಾಗರ ತಾಲ್ಲೂಕಿನಲ್ಲಿ ನಡೆಯುತ್ತಿದ್ದ ಗೇಣಿದಾರರ ಹೋರಾಟವನ್ನು ಸಮಾಜವಾದಿ ಪಕ್ಷ ಬೆಂಬಲಿಸಿತು. 1951ರಲ್ಲಿ ಗೋಪಾಲಗೌಡರ ಗುರು ರಾಮಮನೋಹರ ಲೋಹಿಯಾ ಕಾಗೋಡಿಗೆ ಬಂದು ಹೋರಾಟವನ್ನು ಬೆಂಬಲಿಸಿ ಬಂಧನಕ್ಕೊಳಗಾದರು. ಪೊಲೀಸರ ಕ್ರೌರ್ಯ ಚೆಲ್ಲಾಡಿ ರೈತರು ಕಂಗೆಟ್ಟರು. ಗೋಪಾಲಗೌಡರು ಸೆರೆಮನೆ ಸೇರಿದರು.

ಗೌಡರು ಸೆರೆಮನೆಯಿಂದ ಬಿಡುಗಡೆಯಾದ ಮೇಲೆ ಬಡ ರೈತರು ಜಾತಿ, ವರ್ಗಗಳ ಭೇದ ಮರೆತು ಗೌಡರ ಅನುಯಾಯಿಗಳಾದರು. 1952ರಲ್ಲಿ ಮೈಸೂರು ರಾಜ್ಯ ವಿಧಾನಸಭಾ ಚುನಾವಣೆ ಬಂತು. ಶಿವಮೊಗ್ಗ ಜಿಲ್ಲೆಯ ಹೊಸನಗರ-ಸಾಗರ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ಭೂಮಾಲೀಕ ಬದರಿನಾರಾಯಣ್ ಅಯ್ಯಂಗಾರರ ಎದುರು ಸಮಾಜವಾದಿ ಪಕ್ಷದಿಂದ ಗೋಪಾಲಗೌಡರು ಚುನಾವಣೆಗೆ ನಿಂತರು. ಒಂದು ಊರಿನಲ್ಲಿ ಭಾಷಣ ಮಾಡಿ, ಮುಂದಿನ ಊರಿಗೆ ಹೋಗಲು ಬಸ್ ಚಾರ್ಜಿಲ್ಲದ ಗೌಡರಿಗೆ ಜನರೇ ಬಸ್‌ಚಾರ್ಜ್ ಕೊಟ್ಟು ಕಳಿಸುತ್ತಿದ್ದರು. 'ಒಂದು ನೋಟು, ಒಂದು ಓಟು' ಕೊಟ್ಟು ಜನರೇ ಮುನ್ನಡೆಸಿದ ಚುನಾವಣೆಯಲ್ಲಿ ಗೋಪಾಲಗೌಡರಿಗೆ ಸುಮಾರು 5000 ರೂಪಾಯಿಯಷ್ಟು ಖರ್ಚು ಬಂದಿತ್ತು. ಹಿತಾಸಕ್ತ ಗುಂಪುಗಳ ಹಂಗಿಲ್ಲದೆ, ಜನರಿಗಷ್ಟೇ ಜವಾಬ್ದಾರರಾದ ಗೋಪಾಲಗೌಡರು ವಿಧಾನಸಭೆಯನ್ನು ಪ್ರವೇಶಿಸಿದರು. ಅಧಿವೇಶನದ ಕಾಲದಲ್ಲಿ ಅವರು ಪಡೆದ ದಿನಭತ್ಯೆಯಲ್ಲಿ ಉಳಿದ 2000 ರೂಪಾಯಿ ಚುನಾವಣಾ ಸಾಲ ತೀರಿಸಲು ನೆರವಾಯಿತು!

ಸಮಾಜವಾದಿ ಮಾರ್ಗ-ತತ್ವಗಳನ್ನು ಗಟ್ಟಿಯಾಗಿ ನಂಬಿದ್ದ ಗೋಪಾಲಗೌಡರು ಆಳುವ ಪಕ್ಷವನ್ನು, ಮುಖ್ಯಮಂತ್ರಿ, ಮಂತ್ರಿಗಳನ್ನು ದಿಟ್ಟವಾಗಿ ಎದುರಾದರು. ಪ್ರಥಮ ವಾರ್ಷಿಕ ಬಜೆಟ್ಟಿಗೆ ಪ್ರತಿಕ್ರಿಯಿಸುತ್ತಾ, 'ನಾವು ಬಡತನ ಮತ್ತು ಹಣದ ಕೊರತೆಯಿಂದ ನರಳುತ್ತಿದ್ದೇವೆ; ರಾಜಪ್ರಮುಖರಿಗೆ 24 ಲಕ್ಷ ಮಾಸಾಶನ ಕೊಡುವುದನ್ನು ನಿಲ್ಲಿಸಬೇಕು' ಎಂದು ಗೌಡರು ಒತ್ತಾಯಿಸಿದರು. ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರನ್ನು ಆಶುಕವಿತೆಗಳ ಮೂಲಕವೂ ಕುಟುಕಿದರು. ಅಖಂಡ ಕರ್ನಾಟಕ ರಾಜ್ಯ ರಚನೆಯ ಅಗತ್ಯವನ್ನು, ಜನರ ಸಮಸ್ಯೆಗಳನ್ನು ಮುನ್ನೆಲೆಗೆ ತಂದರು. ಸೋಷಿಯಲಿಸ್ಟ್ ಪಕ್ಷದ ಘೋಷಣೆ 'ಉಳುವವನೇ ನೆಲದೊಡೆಯ' ವಿಧಾನಸಭೆಯಲ್ಲಿ ಮೊಳಗಿತು. 'ಭೂಮಿ ಉತ್ಪತ್ತಿಯ ಸಾಧನವಾಗಿರುವುದರಿಂದ ಯಾರು ಭೂಮಿಯನ್ನು ಉಳುಮೆ ಮಾಡುತ್ತಾರೋ, ಯಾರು ಕೃಷಿ ಮಾಡಿ ಅದರಿಂದ ಉತ್ಪನ್ನ ಮಾಡುತ್ತಾರೋ ಆ ಉತ್ಪನ್ನ ಅವರ ಸ್ವತ್ತಾಗಿರಬೇಕು, ಭೂಮಿ ಮಾರತಕ್ಕ, ಕೊಳ್ಳತಕ್ಕ ವಸ್ತುವಾಗಬಾರದು' ಎಂದು ಒತ್ತಿ ಹೇಳಿದರು.' ಕೃಷಿ ಭೂಮಿಯನ್ನು ವ್ಯಾಪಾರಿಗಳು ಕಬಳಿಸಲು ಅನುವು ಮಾಡಿಕೊಟ್ಟಿರುವ ರೈತವಿರೋಧಿ ಕಾನೂನುಗಳನ್ನು ವಾಪಸ್ ಪಡೆಯಲು ನಾಡಿನ ರೈತರು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತಿರುವ ಈ ಕಾಲದಲ್ಲಿ ಗೌಡರು ಸದನದಲ್ಲಿ ಆಡಿದ್ದ ಮಾತುಗಳು ಗೋಪಾಲಗೌಡರ ಶತಮಾನೋತ್ಸವ ಆಚರಿಸಲು ಹೊರಟಿರುವ ಸರ್ಕಾರದ ಆತ್ಮಸಾಕ್ಷಿಯನ್ನಾದರೂ ಕುಟುಕಲಿ!

1957ರ ಚುನಾವಣೆಯಲ್ಲಿ ಭಾರತದ ಚುನಾವಣೆಯ ಎಲ್ಲ ರೋಗಗಳೂ ಶುರುವಾದವು. ಗೌಡರು ಸೋತರು. ನಂತರದ ಐದು ವರ್ಷಗಳ ಅವರ ಕಷ್ಟ, ಬಡತನ, ನಿರಾಶೆಗಳ ವಿವರಗಳು ಅವರ ಡೈರಿಯಲ್ಲಿ ದಾಖಲಾಗಿವೆ. ಮುಂದೆ 1962, 1967ರ ಚುನಾವಣೆಯಲ್ಲಿ ಗೆದ್ದ ಗೌಡರು ಕೊನೆಯವರೆಗೂ ಶಾಸಕರಾಗಿದ್ದರು. 1971ರಲ್ಲಿ ವೀರೇಂದ್ರ ಪಾಟೀಲರ ಮಂತ್ರಿಮಂಡಲ ರಾಜೀನಾಮೆ ಕೊಟ್ಟಾಗ, ಗೋಪಾಲಗೌಡರನ್ನು ಮುಖ್ಯಮಂತ್ರಿ ಮಾಡಿ ಸಂಯುಕ್ತ ಸರ್ಕಾರ ರಚಿಸಲು ವಿರೋಧ ಪಕ್ಷಗಳು ಮುಂದಾದವು. ಗೌಡರು ಮತ್ತವರ ಗೆಳೆಯರು 'ಭೂಸುಧಾರಣೆಯೂ ಸೇರಿದಂತೆ ಮೂರು ಕ್ರಾಂತಿಕಾರಿ ಮಸೂದೆಗಳನ್ನು ಮಂಡಿಸುವುದು; ಅದಕ್ಕೆ ಅಡ್ಡಿಯಾದರೆ, ಅದೇ ಪ್ರಣಾಳಿಕೆಯನ್ನಿಟ್ಟುಕೊಂಡು ಚುನಾವಣೆಗೆ ಹೋಗುವುದು' ಎಂದು ಅಧಿಕಾರದ ಸವಾಲಿಗೆ ಅಣಿಯಾದರು. ಸರ್ಕಾರ ರಚನೆಯಾಗಲಿಲ್ಲ. 1971ರ ಕೊನೆಗೆ ಗೋಪಾಲಗೌಡರ ರಕ್ತದೊತ್ತಡ ಏರಿತು; ಸ್ಟ್ರೋಕ್ ಆಯಿತು; ಮಾತು ನಿಂತಿತು. 2 ಜೂನ್ 1972ರಂದು ಗೋಪಾಲಗೌಡರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ಕರ್ನಾಟಕದ ಶತಮಾನದ ಶ್ರೇಷ್ಠ ರಾಜಕಾರಣಿಗಳ ಪಟ್ಟಿಯಲ್ಲಿ ಗೋಪಾಲಗೌಡರು ಇಂದಿಗೂ ಮುಂಚೂಣಿಯಲ್ಲಿರಲು ಹಲವು ಕಾರಣಗಳಿವೆ. ಗೌಡರು ಚುನಾವಣೆ, ಅಧಿಕಾರಗಳ ನಿತ್ಯದ ಲಾಭ, ನಷ್ಟಗಳ ಬಗ್ಗೆ ಯೋಚಿಸುತ್ತಿದ್ದ ರಾಜಕಾರಣಿಯಾಗಿರಲಿಲ್ಲ. ಅವರ ದೇಶಿ ಸಮಾಜವಾದ ಲೋಹಿಯಾ ಚಿಂತನೆಗಳನ್ನೂ, ಕುವೆಂಪುವಿನ 'ನೇಗಿಲಯೋಗಿ', 'ಕಲ್ಕಿ' ಪದ್ಯಗಳ ಕಾಳಜಿಯನ್ನೂ ಒಳಗೊಂಡಿತ್ತು. ಗೌಡರು ಶಾಸನಸಭೆಯಲ್ಲಿ ಬಳಸುತ್ತಿದ್ದ ಕನ್ನಡ ಭಾಷೆಯ ತಾಜಾತನ, ಸ್ಪಷ್ಟತೆ, ಪ್ರಾಮಾಣಿಕತೆಗಳನ್ನು ಮೆಚ್ಚಿದವರಲ್ಲಿ ಕವಿ ಪು.ತಿ.ನ. ಕೂಡ ಒಬ್ಬರು. ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುತ್ತಿದ್ದ, ಮುಕ್ತ ಮಾತುಕತೆಯ ಗೌಡರು ತಮಾಷೆ, ಮೊನಚು ವ್ಯಂಗ್ಯಗಳನ್ನು ಪರಿಣಾಮಕಾರಿಯಾಗಿ ಬಳಸುತ್ತಿದ್ದರು; ಸಿಟ್ಟಿಗೆದ್ದಾಗ, ಭ್ರಷ್ಟ ಅಧಿಕಾರಿಗಳ ಕೊರಳಪಟ್ಟಿ ಹಿಡಿಯಬಲ್ಲವರಾಗಿದ್ದರು.

ಜಮೀನಿಲ್ಲದ ತಮಗೆ ಜಮೀನು ಕೊಡಲು ಬಂದ ಮಂತ್ರಿಗೆ, 'ಎಲ್ಲರಿಗೂ ಭೂಮಿ ಕೊಟ್ಟ ಮೇಲೆ ನನಗೆ ಕೊಡಿ' ಎಂದು ಗೌಡರು ಹೇಳಿದ್ದರು. ಪ್ರವಾಸಿ ಮಂದಿರವೊಂದರಲ್ಲಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರಿಗೆ ಹಲವು ರೂಮುಗಳು ಬುಕ್ಕಾಗಿದ್ದನ್ನು ಕಂಡು ರೇಗಿ, 'ನೀವು ಅದೆಷ್ಟು ರೂಮಿನಲ್ಲಿ ಮಲಗ್ತೀರ ಸ್ವಾಮಿ' ಎಂದು ಮುಖ್ಯಮಂತ್ರಿಯನ್ನೇ ಕೇಳಿದ್ದರು! ವಿಧಾನಸೌಧದ ಹೊರಗೆ 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ಕೆತ್ತಿಸಿದ್ದ ಕೆಂಗಲ್ ಹನುಮಂತಯ್ಯನವರನ್ನು, 'ದೇವರ ಕೆಲಸ ಎಂದು ಹೇಳುವುದು ತಪ್ಪು; ಅದು ಸಾರ್ವಜನಿಕರ ಕೆಲಸ' ಎಂದು ತಿದ್ದಿದ್ದರು. ಬಡವರಿಗೆ ಭೂಮಿ ಹಂಚುವ ಬಗ್ಗೆ ಸುತ್ತುಬಳಸಿ ಮಾತಾಡುತ್ತಿದ್ದ ಮಂತ್ರಿಗಳಿಗೆ, 'ಓಹೋ! ನೀವು ಮೊದಲು ಆಕಾಶ ಹಂಚಿ, ಆಮೇಲೆ ಭೂಮಿ ಹಂಚೋರು!' ಎಂದು ತಿವಿಯುತ್ತಿದ್ದರು.

ಸಾಹಿತ್ಯಲೋಕದಲ್ಲಿ ಅಪಾರ ಮಿತ್ರರನ್ನುಳ್ಳ ಗೌಡರು, 'ಎನ್ನೆದೆಯ ಬಿಸಿರಕ್ತ ಕುದಿಕುದಿದು ಮಸಿಮಾಡಿ ನಾ ಬರೆಯಬಲ್ಲೆ' ಅಥವಾ 'ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ' ಥರದ ಕವಿಸಾಲುಗಳಿಂದ ಸ್ಫೂರ್ತಿಗೊಳ್ಳುತ್ತಿದ್ದರು. ಸಾಹಿತಿಗಳ ಹುಂಬತನವನ್ನೂ ಟೀಕಿಸುತ್ತಿದ್ದರು. ಬಲಶಾಲಿಯಾಗಿದ್ದ ಕಾಂಗ್ರೆಸ್ಸನ್ನು ಸೋಲಿಸಲು ಲೋಹಿಯಾ ಸಂಘಟಿಸಿದ ವಿರೋಧ ಪಕ್ಷಗಳ ಒಕ್ಕೂಟದಲ್ಲಿ ಜನಸಂಘವನ್ನೂ ಸೇರಿಸಿ ಕೊಂಡಾಗ ಗೌಡರು ವಿರೋಧಿಸಿದರು. ಕರ್ನಾಟಕದ ರಾಜಕಾರಣದಲ್ಲಿ ಮೂಡಿಬಂದಿರುವ ಖಡಕ್ ನಾಯಕರು, ಲಂಕೇಶ್, ತೇಜಸ್ವಿ ಥರದ ನಿಷ್ಠುರ ಲೇಖಕರು ಕರ್ನಾಟಕದಲ್ಲಿ ವೈಚಾರಿಕ ಸಂಸ್ಕೃತಿಯನ್ನು ರೂಪಿಸಿರುವುದರ ಹಿಂದೆ ಗೋಪಾಲಗೌಡರ ವ್ಯಕ್ತಿತ್ವ-ರಾಜಕಾರಣ- ಮಾತುಗಳ ಪಾತ್ರವೂ ಇದೆ.

ಗೌಡರ ನಿರ್ಗಮನಾನಂತರ ಮೈಸೂರು ರಾಜ್ಯ ಕರ್ನಾಟಕವಾಯಿತು. ದೇವರಾಜ ಅರಸರ ಕಾಲದಲ್ಲಿ 'ಉಳುವವನೇ ನೆಲದೊಡೆಯ' ಮಸೂದೆ ಜಾರಿಗೆ ಬಂದು ಲಕ್ಷಾಂತರ ಬಡ ರೈತರು ಅಷ್ಟಿಷ್ಟು ಭೂಮಿ ಪಡೆದರು. ಗೌಡರ ಗರಡಿಯಲ್ಲೇ ಬೆಳೆದ ಜೆ.ಎಚ್. ಪಟೇಲ್, ಎಂ.ನಾಗಪ್ಪ, ಕೋಣಂದೂರು ಲಿಂಗಪ್ಪ, ಅಜೀಜ್ ಸೇಠ್, ಬಂಗಾರಪ್ಪ ಮೊದಲಾದವರು ತಂತಮ್ಮ ಮಿತಿಗಳಲ್ಲಿ ಸಮಾಜವಾದಿ ನೋಟಗಳನ್ನು ಮುಂದುವರಿಸಿದರು. ಸಿದ್ಧರಾಮಯ್ಯನವರ ಸರ್ಕಾರದಲ್ಲಿ ಕಂದಾಯ ಸಚಿವ ಕಾಗೋಡು ತಿಮ್ಮಪ್ಪ ಮಂಡಿಸಿದ 'ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ಮಸೂದೆ-2016' ಕೃಷಿ ಜಮೀನಿನಲ್ಲಿ ವಾಸಿಸುತ್ತಿದ್ದವರು ಅಲ್ಲೇ ನೆಲೆ ನಿಲ್ಲಲು ಅವಕಾಶ ಮಾಡಿಕೊಟ್ಟಿತು.

ಹೀಗೆ ಕಳೆದ ಐವತ್ತು ವರ್ಷಗಳಲ್ಲಿ ಗೋಪಾಲಗೌಡರು ಕರ್ನಾಟಕದಲ್ಲಿ ಮರಳಿ ಹುಟ್ಟುತ್ತಲೇ ಇದ್ದಾರೆ. ಸಾರ್ವಜನಿಕ ವ್ಯಕ್ತಿತ್ವದ ಶುದ್ಧಿಯ ಬಗ್ಗೆ ಕಾಳಜಿಯುಳ್ಳವರಿಗೆ ಮಾದರಿಯಾಗುತ್ತಾ ಬಂದಿದ್ದಾರೆ. ಜಾತಿ-ಧರ್ಮ-ವರ್ಗ-ಲಿಂಗ ಭೇದಗಳನ್ನು ವಿರೋಧಿಸುತ್ತಿದ್ದ ಗೋಪಾಲಗೌಡರ ನಾಡಿನಲ್ಲಿ ಈ ವಿಷಚಕ್ರಗಳನ್ನು ತರುಣ ತರುಣಿಯರಾದರೂ ಧಿಕ್ಕರಿಸಿ, ಜಾತ್ಯತೀತತೆಯನ್ನು ಮೈಗೂಡಿಸಿಕೊಂಡರೆ, ಗೋಪಾಲಗೌಡರು ನಡೆದಾಡಿದ ನೆಲದ ಘನತೆಯನ್ನು ಎತ್ತಿ ಹಿಡಿದಂತಾದೀತು. ಜನರ ಮನಸ್ಸನ್ನು ಒಡೆಯುವ ರಾಜಕಾರಣಿಗಳಿಗೆ, ನಿಗೂಢ ಕಮ್ಯಾಂಡುಗಳು-ಹೈಕಮ್ಯಾಂಡುಗಳ ಕೈಗೊಂಬೆಗಳಾಗಿರುವ ಶಾಸಕರಿಗೆ ಗೋಪಾಲಗೌಡರು ಹದಿನೈದು ವರ್ಷ ಕ್ರಿಯಾಶೀಲವಾಗಿದ್ದ ಶಾಸನಸಭೆಯಲ್ಲಿ ತಾವೂ ಇದ್ದೇವೆ ಎಂಬುದಾದರೂ ನೆನಪಾಗಬೇಕು. ಸದನದಲ್ಲಿ ಬಾಯಿಗೆ ಬಂದದ್ದು ಮಾತಾಡುವ ಶಾಸಕ, ಮಂತ್ರಿಗಳಿಗೆ ಈ ವಿಷಯದಲ್ಲಿ ಗೋಪಾಲಗೌಡರು ಏನು ಹೇಳಿದ್ದಾರೆ ಎಂಬುದನ್ನು ಓದಿ, ಮಾತಾಡುವಂಥ ವಿನಯವಿರಬೇಕು. ಹಣಕ್ಕೆ, ಮಂತ್ರಿಗಿರಿಗೆ ಶಾಸಕತ್ವವನ್ನೇ ಮಾರಿಕೊಳ್ಳುವ ಲಜ್ಜಾಹೀನರು, ಚುನಾವಣಾ ಚೌಕಾಸಿ ಮಾಡಲು ಬಂದ ದಲ್ಲಾಳಿಯೊಬ್ಬನಿಗೆ 'ನನ್ನ ಶೂಸ್ ಬಾಗಿಲ ಹತ್ರ ಇವೆ' ಎಂದು ಉಗಿದು ಕಳಿಸಿದ್ದ ಗೋಪಾಲಗೌಡರ ಸ್ವಾಭಿಮಾನ ಕಂಡಾದರೂ ಲಜ್ಜೆಯಾಗಬೇಕು. ಗೋಪಾಲಗೌಡರ ಕೆಲವು ಗುಣಗಳನ್ನಾದರೂ ಉಳಿಸಿಕೊಂಡ ಉತ್ತಮ ರಾಜಕಾರಣಿಗಳನ್ನು ಶಾಸನಸಭೆಗೆ ಕಳಿಸುವುದು ತಮ್ಮ ಕರ್ತವ್ಯ ಎನ್ನುವುದು ಮತದಾರರಿಗೆ ಮನವರಿಕೆಯಾಗಬೇಕು.

ಮಲೆನಾಡಿನಲ್ಲಿ ಹುಟ್ಟಿ ಬಡವರ ಪರ ಕಾಳಜಿಗಳನ್ನು, ಸಮಾಜಕ್ಕೆ ಬದ್ಧವಾದ ವ್ಯಕ್ತಿತ್ವವನ್ನು ರೂಢಿಸಿಕೊಂಡು, ಸಮಾಜವಾದಿ ಮಾರ್ಗದಲ್ಲಿ ನಡೆದು, ಧೀರ ನಾಯಕರಾಗಿ ಅರಳಿದ ಗೋಪಾಲಗೌಡರು ಕೇವಲ ನಲವತ್ತೊಂಬತ್ತು ವರ್ಷ ಬದುಕಿದ್ದರು. ಅನಂತರದ ಐವತ್ತೊಂದು ವರ್ಷಗಳುದ್ದಕ್ಕೂ ಅವರ ಕಾಳಜಿ-ಸಮಾನತೆಗಳ ರಾಜಕಾರಣದ ಗಂಧ ಕನ್ನಡನಾಡಿನಲ್ಲಿ ಹಬ್ಬುತ್ತಾ ಬಂದಿದೆ. ಶಾಂತವೇರಿ ಶತಮಾನೋತ್ಸವದ ಗಳಿಗೆ ಸಮಾನತೆಯ ಗಂಧವನ್ನು ಎಲ್ಲೆಡೆ ಹಬ್ಬಿಸುವ ಅರ್ಥಪೂರ್ಣ ಕೆಲಸಕ್ಕೆ ರಾಜಕಾರಣಿಗಳನ್ನು, ಸಾಂಸ್ಕೃತಿಕ ನಾಯಕರನ್ನು ಪ್ರೇರೇಪಿಸಲಿ. ಸಮಾನತೆಯ, ಜಾತ್ಯತೀತ ಕರ್ನಾಟಕವನ್ನು ಕಟ್ಟುವ ಗೋಪಾಲಗೌಡರ ಕನಸು, ಕ್ರಿಯೆಗಳನ್ನು ಕನ್ನಡನಾಡು ಸದಾ ಎದೆಯಲ್ಲಿಟ್ಟುಕೊಂಡು ಕಾಪಾಡುತ್ತಿರಲಿ.

(ಲೇಖಕ: 'ಶಾಂತವೇರಿ ಗೋಪಾಲಗೌಡ' (ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ಬೆಂಗಳೂರು) ಜೀವನ ಚರಿತ್ರೆ ಬರೆದವರು)

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಗುಣವಿಶೇಷ ಗುಣಾಕಾರಗಳು

ಇಲ್ಲಿರುವ ಗುಣಾಕಾರಗಳನ್ನು ಗಮನಿಸಿ

ಗುಣ್ಯ ಹಾಗೂ ಗುಣಕಗಳಲ್ಲಿನ ಅಂಕಗಳೇ ಗುಣಲಬ್ದದಲ್ಲಿ ಮತ್ತೆ ಕಾಣಿಸಿಕೊಳ್ಳುತ್ತವೆ.

ಗುಣ್ಯ ಗುಣಕ ಗುಣಲಬ್ದ

3 x 4128 = 12384
6 x 2541 = 15246
8 x 4973 = 39784
9 x 351 = 3159
15 x 93 = 1395
21 x 87 = 1827
65 x 281 = 1865
72 x 936 = 67392
86 x 251 = 21586

ಚಿತ್ರ- ವಿಚಿತ್ರ

[illegible]

ಆಲೋಚನೆಗೆ ಆಹಾರ

1. ABCDEFGHIJKLMNOPQRSTUVWXYZ - ಇಲ್ಲಿ ಯಾವೊಂದು ಅಕ್ಷರವನ್ನು ಸ್ಥಾನಪಲ್ಲಟ ಮಾಡದೇ ನೇರವಾಗಿ ಕಾಣುವ ಒಂದು ಪದ ಇದೆ. ಅದು ಯಾವುದು? (I ಹೊರತುಪಡಿಸಿ)

2. ಮೇಲಿನ ಅಕ್ಷರಗಳಲ್ಲಿ 4 ಅಕ್ಷರ ಆಯ್ಕೆ ಮಾಡಿಕೊಂಡು ಅಜೀರ್ಣಕ್ಕೆ ಸಂಬಂಧಪಟ್ಟ ಬಹಳಷ್ಟು ಜನರಿಗೆ ಕಾಡುವ ಒಂದು ಆರೋಗ್ಯ ಸಮಸ್ಯೆಯ ನಾಲ್ಕಕ್ಷರ ಗುರುತಿಸಿ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಎರಡು ಮೂಲಾಕ್ಷರಗಳಿಗೆ ಸುಳಿವು ಆಧರಿಸಿ ಅದರಂತೆ ಕಾಗುಣಿತ ಸೇರಿಸಿ ಹೊಸ ಪದ ರಚಿಸಿ

	ಕ	ಡ	
1			ಅರಣ್ಯ
2			ಕೆಟ್ಟು
3			ಕಚ್ಚು
4			ಬೆಂಕಿ
5			ಬಹಳ

ಟ್ವೆಂಟಿ – 20 ಮ್ಯಾಚ್

ಸಾಹಿತಿಗಳಿಗೂ ಕೃತಿಗಳಿಗೂ ಹೊಂದಿಸಿ

1	ಗೀತಾ ನಾಗಭೂಷಣ	A	ಸಂಧ್ಯಾರಾಗ
2	ಎಲ್.ಎಸ್. ಶೇಷಗಿರಿ ರಾವ್	B	ಅನ್ನ
3	ಶಾಂತರಸ	C	ಸ್ವಾತಂತ್ರ್ಯದೆಡೆಗೆ
4	ಕಮಲಾ ಹಂಪನಾ	D	ಸಂಸ್ಕಾರ
5	ನೆನಪಿನ ಬುತ್ತಿ	E	ಅಗ್ನಿ ವಿದ್ಯೆ
6	ಯು.ಆರ್. ಅನಂತಮೂರ್ತಿ	F	ಬೆಟ್ಟದಿಂದ ಬಟ್ಟಲವರೆಗೆ
7	ಎಸ್.ಎಲ್. ಬೈರಪ್ಪ	G	ಜಂಗಮ ಜಾತ್ರೆಯಲ್ಲಿ
8	ಚನ್ನವೀರ ಕಣವಿ	H	ಸಂಪ್ರತಿ
9	ಎಚ್.ಎಲ್. ನಾಗೇಗೌಡ	I	ಪಾಟೀಲ ಪುಟ್ಟಪ್ಪ
10	ಶಾಂತಾದೇವಿ ಮಾಳವಾಡ	J	ಜಲಪಾತ
11	ಚದುರಂಗ	K	ಆಕಾಶಬುಟ್ಟಿ
12	ಸಿಂಪಿ ಲಿಂಗಣ್ಣ	L	ತಾವರೆ ಹೂ
13	ಅ.ನ. ಕೃಷ್ಣರಾಯ	M	ಕುಂಕುಮಬಲ
14	ಜಿ.ಎಸ್. ಶಿವರುದ್ರಪ್ಪ	N	ಮೌನ ಸ್ಪಂದನ
15	ಆರ್.ಸಿ. ಹಿರೇಮಠ	O	ರೆಕ್ಕೆ ಮುರಿದಿತ್ತು
16	ಸಿದ್ಧಯ್ಯ ಪುರಾಣಿಕ	P	ಸರ್ವಮಂಗಳ
17	ಹಾ.ಮಾ. ನಾಯಕ	Q	ದಾಟು
18	ಶಂ.ಬಾ. ಜೋಷಿ	R	ಹಡಿಗೆ ಜಾತ್ರೆ
19	ಬಸವರಾಜ ಕಟ್ಟಿಮನಿ	S	ಗೋಡೆ
20	ರಂ.ಶ್ರೀ. ಮುಗಳಿ	T	ಬಯಲುಸೀಮೆಯ ಬಿಸಿಲು

ಡಕ್ಕ ಚಿಕ್ಕ ಕೇಳ್ರಪ್ಪ ಕಥೆಯ

ರತಿ – ಮನ್ಮಥ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಇದೊಂದು ಪೌರಾಣಿಕ ಕಥೆ. ಬ್ರಹ್ಮನಿಂದ ಸೃಷ್ಟಿಯಾದ ತಾರಕಾಸುರ ಮೂರು ಲೋಕಗಳಲ್ಲಿಯೂ ತುಂಬಾ ತೊಂದರೆ ಕೊಡುತ್ತಿದ್ದ. ಅವನ ವಿನಾಶಕ್ಕೆ ದೇವತೆಗಳು ಶಿವನ ಮೊರೆಯಿಟ್ಟರು

ಆದರೆ ಶಿವನು ದಕ್ಷ ಪ್ರಜಾಪತಿಯ ಯಜ್ಞದಲ್ಲಿ ತನ್ನ ಪತ್ನಿ ದಾಕ್ಷಾಯಿಣಿ ಆತ್ಮಾಹುತಿ ಮಾಡಿಕೊಂಡ ದುಃಖದಲ್ಲಿ ತಪೋನಿರತನಾಗಿದ್ದ

ಲೋಕ ಕಲ್ಯಾಣಕ್ಕಾಗಿ ಶಿವನನ್ನು ಎಚ್ಚರಿಸಲು ಕಾಮದೇವತೆಯಾದ ಮನ್ಮಥನು ಪುಷ್ಪ ಬಾಣವನ್ನು ಪ್ರಯೋಗಿಸಿ ತಪೋಭಂಗಗೊಳಿಸಿದ

ತನ್ನ ತಪೋಭಂಗದಿಂದ ಕೋಪಗೊಂಡ ಶಿವನು ತನ್ನ ಮೂರನೇ ಕಣ್ಣನ್ನು ತೆರೆದು ಮನ್ಮಥನನ್ನು ಸುಟ್ಟು ಭಸ್ಮ ಮಾಡಿಬಿಟ್ಟ

ಮನ್ಮಥನ ಸಾವಿನಿಂದ ನೊಂದ ಅವನ ಪತ್ನಿ ರತಿದೇವಿಯು, ತನ್ನ ಗಂಡನನ್ನು ಬದುಕಿಸುವಂತೆ ಪ್ರಾರ್ಥಿಸಿದಳು. ಶಿವನ ಸಿಟ್ಟೂ ಆಗ ಇಳಿದಿತ್ತು



ಹೋಳಿ ಹಬ್ಬದಂದು ರತಿ ಮನ್ಮಥರಿಬ್ಬರೂ ಜೊತೆಯಾಗಿ ಬರುವಂತೆ ಶಿವ ವರ ನೀಡಿದ. ಅದರಂತೆ ಪ್ರತಿ ಹೋಳಿ ಆಚರಣೆಯಲ್ಲಿ ರತಿ ಮನ್ಮಥರರನ್ನು ಪೂಜಿಸಲಾಗುತ್ತದೆ

ಹಳೇ ಹಾಡು

1941ನೇ ಇಸ್ವಿಯಲ್ಲಿ (81 ವರ್ಷಗಳ ಹಿಂದೆ) ಪ್ರಕಟವಾಗಿದ್ದ 1ನೇ ತರಗತಿಯ ಪಠ್ಯಪುಸ್ತಕದಲ್ಲಿನ ಕವನ ಇದಾಗಿದೆ. ಹಾಡಿ ಆನಂದಿಸಿ

ಕೋಲು ಕುದುರೆ ನಮ್ಮದು
ಸಾಲು ಹಿಡಿದು ನಡೆವುದು ||ಪ||

ಜೂಲು ಇಲ್ಲ ಕುದುರೆಗೆ |
ಬಾಲವಿಲ್ಲ ಕುದುರೆಗೆ |
ಕಾಲ್ಗಳಿಲ್ಲ ಕುದುರೆಗೆ |
ನಾಲ್ಗಳಿಲ್ಲ ಕುದುರೆಗೆ ||1|| ಕೋಲು ಕುದುರೆ

ಕರಡಬೇಡ ಕುದುರೆಗೆ |
ಕರಿಕೆ ಬೇಡ ಕುದುರೆಗೆ |
ಹುರುಳಿ ಬೇಡ ಕುದುರೆಗೆ |
ನೀರು ಬೇಡ ಕುದುರೆಗೆ ||2||

ಪುಟಿಸಿ ಪುಟಿಸಿ ನಡೆವುದು|
ಸೆಟೆದು ನಿಂತು ನಡೆವುದು|
ಓಟ ಓಡಿ ದಣಿಯದು |
ಆಟವಾಡಿ ದಣಿಯದು ||3||

ಅಜ್ಜನ್ ಕೈಯೊಳಿರುವುದು|
ಅಜ್ಜಿಗೇಟು ಕೊಡುವುದು|
ಹೆಜ್ಜೆ ಹಾಕಿ ಕುಣಿವುದು|
ಗೆಜ್ಜೆ ಕಟ್ಟಿ ಕುಣಿವುದು || 4||

ಅಪ್ಪನ್ ಕೈಯೊಳಿರುವದು|
ತಪ್ಪಿದರೇಟು ಕೊಡುವದು|
ಭಪ್ಪರೆನಲು ಹಾರ್ವುದು|
ಚಪ್ಪರಿಸಲು ಕುಣಿವುದು ||5||

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ - 20

A. 1-A 2-F 3-H 4-J 5-I 6-G 7-C 8-E 9-B 10-D

B. 1-F 2-D 3-E 4-B 5-G 6-H 7-J 8-I 9-C 10-A

ಜಾಣಪದ ಆಟ

1. ಬಿಳಿ 2. ಬಾಳೆ
3. ಬಳಿ 4. ಬಾಳು
5. ಬೆಳೆ

ಶಬ್ದಗಳೊಡನೆ ಸರಸ

1. ತೋರಣ 2. ಕಾರಣ
3. ಹೂರಣ 4. ಮರಣ
5. ಶರಣ 6. ಹರಣ
7. ಚರಣ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಪ್ರಜನ್ಯಗೌರಿ ಬಿ.ಎಂ., ಜಗಳೂರು (ದಾವಣಗೆರೆ)

ನಿಹಾರಿಕಾ ಪಿ., ಮಂಡ್ಯ

ನಮಿತಾ ಹರದರ, ತಾಳಿಕೋಟೆ (ವಿಜಯಪುರ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:

majakoora@prajavani.co.in

ಚಿನ್ನದ ಜಿಗಿತಕ್ಕೆ ತಯಾರಾದ ಯರೊಸ್ಲೋವ ಮಹುಚಿಕ್ –ಎಎಫ್‌ಪಿ

ಒಳಾಂಗಣ ಅಥ್ಲೆಟಿಕ್ಸ್: ಉಕ್ರೇನ್‌ನ ಹೈಜಂಪ್ ಪಟು ಸಾಧನೆ

ಯುದ್ಧಭೂಮಿಯಿಂದ ಎದ್ದು ಬಂದು ಚಿನ್ನಗೆದ್ದ ಯರೊಸ್ಲೋವ

ಬೆಲ್‌ಗ್ರೇಡ್ (ಎಎಫ್‌ಪಿ): ತವರಿನಲ್ಲಿ ಯುದ್ಧದ ಭೀತಿ ಮಡುಗಟ್ಟಿದ್ದರೆ ಆತಂಕ ಮೀರಿ ಸಾಧನೆಯ ಹಾದಿ ತುಳಿದ ಯರೊಸ್ಲೋವ ಮಹುಚಿಕ್ ಇಲ್ಲಿ ನಡೆಯುತ್ತಿರುವ ಒಳಾಂಗಣ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನಕ್ಕೆ ಮುತ್ತಿಟ್ಟರು.

ರಷ್ಯಾ ಆಕ್ರಮಣ ಆರಂಭಗೊಂಡಾಗಿನಿಂದ ಮನೆಯ ನೆಲಮಹಡಿಯಲ್ಲಿ ದಿನ ಕಳೆದ ಮಹುಚಿಕ್ ನಂತರ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವುದಕ್ಕಾಗಿ 2,000 ಕಿಲೊಮೀಟರ್ ಪ್ರಯಾಣ ಮಾಡಿದ್ದರು.

ಯುರೋಪ್ ಒಳಾಂಗಣ ಹೈಜಂಪ್‌ನ ಹಾಲಿ ಚಾಂಪಿಯನ್ ಆಗಿರುವ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದರು. 2019ರಲ್ಲಿ ದೋಹಾದಲ್ಲಿ ನಡೆದ ವಿಶ್ವ ಒಳಾಂಗಣ ಕೂಟದಲ್ಲಿ ಬೆಳ್ಳಿ ಪದಕ ಗಳಿಸಿದ್ದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ ರಷ್ಯಾದ ಮರಿಯಾ ಲಸಿಸ್ಕೀನ್ ವಿಶ್ವ ಒಳಾಂಗಣ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುತ್ತಿಲ್ಲ. ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವುದರಿಂದ ರಷ್ಯಾ ಮೇಲೆ 'ವಿಶ್ವ ಅಥ್ಲೆಟಿಕ್ಸ್' ನಿಷೇಧ ಹೇರಿದೆ.


ಐದನೇ ಸ್ಥಾನ ಗಳಿಸಿದ ಉಕ್ರೇನ್‌ನ ಐರಿನಾ ಜೆರಾಶೆಂಕೊ

'ಸ್ಪರ್ಧಿಸಲು ಸಾಧ್ಯವಾಗುತ್ತದೆಯೋ ಇಲ್ಲವೋ ಎಂಬ ಸಂದೇಹವಿತ್ತು. ಆದರೆ ಕೋಚ್ ನನ್ನನ್ನು ಹುರಿದುಂಬಿಸಿದರು. ರಷ್ಯಾ ಆಕ್ರಮಣಕ್ಕೂ ಮೊದಲು ಮಾಡಿದ್ದ ಸಾಧನೆಯ ಹಿನ್ನೆಲೆಯಲ್ಲಿ ಕಣಕ್ಕೆ ಇಳಿಯಬೇಕೆಂದೂ ಪದಕ ಗೆಲ್ಲಲು ಪ್ರಯತ್ನಿಸಬೇಕು ಎಂದೂ ಅವರು ಸೂಚಿಸಿದ್ದರು.

ಮೊದಲ ಪ್ರಯತ್ನದಲ್ಲಿ 1.92 ಮೀಟರ್ಸ್ ಜಿಗಿದ ಅವರು ಎರಡನೇ ಪ್ರಯತ್ನದಲ್ಲಿ 2 ಮೀಟರ್ ಜಿಗಿದರು. ಅಂತಿಮ ಪ್ರಯತ್ನದಲ್ಲಿ 2.02 ಮೀಟರ್ ಸಾದನೆಯೊಂದಿಗೆ ಪಕದ ಗಳಿಸಿದರು. ಆಸ್ಟ್ರೇಲಿಯಾದ ಎಲೀನರ್ ಪ್ಯಾಟರ್ಸನ್ 2.04 ಮೀಟರ್ ಜಿಗಿದರು. ಆದರೆ ತಪ್ಪೆಸಗಿದ್ದರಿಂದ ಯರೊಸ್ಲೋವ ಮಹುಚಿಕ್ ಅವರ ಹಾದಿ ಸುಗಮವಾಯಿತು. ಪ್ಯಾಟರ್ಸನ್ 2 ಮೀಟರ್ ಸಾಧನೆಯೊಂದಿಗೆ ಬೆಳ್ಳಿ ಗಳಿಸಿದರೆ ಕಜಕಸ್ತಾನದ ನಡೇಜ್ಡ ಸುಬೊವಿಜ್ಕಯ 1.98 ಮೀಟರ್‌ನೊಂದಿಗೆ ಕಂಚಿನ ಪದಕ ಗಳಿಸಿದರು.

ಯರೊಸ್ಲೋವ ಮಹುಚಿಕ್ ಅವರೊಂದಿಗೆ ಉಕ್ರೇನ್ ರಾಜಧಾನಿ ಕೀವ್‌ನಿಂದ ಪತಿ ಮತ್ತು ನಾಯಿ ಜೊತೆ ಬಂದಿರುವ ಐರಿನಾ ಜೆರಾಶೆಂಕೊ ಐದನೇ ಸ್ಥಾನ ಗಳಿಸಿದರು. ಬಾಂಬ್ ಮತ್ತು ರಾಕೆಟ್ ದಾಳಿಯ ಮಧ್ಯದಿಂದ ಎದ್ದು ಬಂದಿರುವ ಅವರ ಬಳಿ ಈಗ ಅಭ್ಯಾಸದ ಕಿಟ್ ಇಲ್ಲ!

ಯರೊಸ್ಲೋವ ಮಹುಚಿಕ್ ಜೊತೆಯಲ್ಲಿ ಕೋಚ್, ತಾಯಿ, ಸಹೋದರಿ ಮತ್ತು ಎರಡು ವರ್ಷ ವಯಸ್ಸಿನ ಸಹೋದರ ಸಂಬಂಧಿ ಇದ್ದಾರೆ. ಅವರ ತಂದೆ ಯುದ್ಧಪೀಡಿತ ಉಕ್ರೇನ್‌ನಲ್ಲೇ ಇದ್ದಾರೆ.

ಮುಂಬೈ ರೇಸ್

ಕಿಂಗ್ಸ್ ರಾನ್ಸಮ್ ಮತ್ತು ಇಂಪೀರಿಯಲ್ ಪವರ್ ಗೆಲ್ಲುವ ನಿರೀಕ್ಷೆ

ಫೋಬ್ಸ್ ಬ್ರೀಡರ್ಸ್ ಜುವೆನೈಲ್ ಫಿಲ್ಲೀಸ್ ಚಾಂಪಿಯನ್‌ಷಿಪ್ ಮತ್ತು ಶಾಪೂರ್ಜಿ ಪಲ್ಲೋನ್ಜಿ ಬ್ರೀಡರ್ಸ್ ಜುವೆನೈಲ್ ಕೋಲ್ಟ್ಸ್ ಚಾಂಪಿಯನ್‌ಷಿಪ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಗಳಾಗಿದ್ದು ಕಿಂಗ್ಸ್ ರಾನ್ಸಮ್ ಮತ್ತು ಇಂಪೀರಿಯಲ್ ಪವರ್ ಕ್ರಮವಾಗಿ ಈ ರೇಸ್‌ಗಳನ್ನು ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00 ಗಂಟೆಗೆ ಆರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸಿಮ್ ಸಿಮ್ 2, ಸಫ್ದಾರ್ 1, ಹಿಲ್ಮಾಕ್ಲಿಂಟ್ 5
2ನೇ ರೇಸ್: ಸನ್‌ರೈಸ್ ರೂಬಿ 4, ಎಂಡವರ್ 5, ಗೆಜಿನೊ 1
3ನೇ ರೇಸ್: ರಾಸ್ಪುಟಿನ್ 2, ಕಮಾರಿಯಾ 3, ಬೊಟೆರೊ 1
4ನೇ ರೇಸ್: ಸ್ಟಾರ್ಸ್ ಫಾರ್ ಯೂ 1, ರಿದ್ಮ್ ಆಫ್ ನೇಚರ್ 7, ಪವರ್ ಆಫ್ ನೀತ್ 3
5ನೇ ರೇಸ್: ಕಿಂಗ್ಸ್ ರಾನ್ಸಮ್ 4, ಡೇಂಜರಸ್ 1, ಫ್ಯಾಶನ್ ಐಕಾನ್ 3
6ನೇ ರೇಸ್: ಸನ್ ಗೋಲ್ಡ್ 3, ಟ್ರೆಷರ್ ಗೋಲ್ಡ್ 1, ಮ್ಯಾಡ್ ಲವ್ 7
7ನೇ ರೇಸ್: ಇಂಪೀರಿಯಲ್ ಪವರ್ 2, ಡೆಕ್ಸಾ 1, ಸ್ಯಾಡ್ಲರ್ಸ್ ಲೆಗಸಿ 4
8ನೇ ರೇಸ್: ಗೋಲ್ಡಿವಾ 8, ಪ್ರಿನ್ಸ್ ಓ ವಾರ್ 5, ಐರಿಶ್ ಮೋರ್ 4
9ನೇ ರೇಸ್: ಲಾರ್ಡ್ ವೇಡರ್ 2, ದಿಲ್ಬರ್ 1, ಜೂಸ್ಡ್ 8

ಉತ್ತಮ ಬೆಟ್: ಸ್ಟಾರ್ಸ್ ಫಾರ್ ಯೂ

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್
2,3,4,5,6	5,6,7,8,9	3,4,5

3ನೇ ಟ್ರಿಬಲ್	3ನೇ ಟ್ರಿಬಲ್
6,7,8	7,8,9

ವಿಶ್ವ ಐಸ್ ಹಾಕಿ: ರಷ್ಯಾ, ಬೆಲಾರೂಸ್ ಬದಲು ಫ್ರಾನ್ಸ್, ಆಸ್ಟ್ರಿಯಾ ತಂಡಗಳು

ಪ್ಯಾರಿಸ್ (ಎಎಫ್‌ಪಿ): ರಷ್ಯಾ ಮತ್ತು ಬೆಲಾರೂಸ್ ತಂಡಗಳನ್ನು ಮೇ ತಿಂಗಳಲ್ಲಿ ನಡೆಯಲಿರುವ ವಿಶ್ವ ಐಸ್ ಹಾಕಿ ಚಾಂಪಿಯನ್‌ಷಿಪ್‌ನಿಂದ ಹೊರಹಾಕಲಾಗಿದೆ.
ಅವುಗಳ ಬದಲಿಗೆ ಕ್ರಮವಾಗಿ ಫ್ರಾನ್ಸ್ ಮತ್ತು ಆಸ್ಟ್ರಿಯಾ ತಂಡಗಳು ಸ್ಥಾನ ಪಡೆದಿವೆ.

ಹೆಲ್ಸಿಂಕಿಯಲ್ಲಿ ನಡೆಯಲಿರುವ ಸ್ಪರ್ಧೆಯಲ್ಲಿ ಎ ಗುಂಪಿನಲ್ಲಿ ಫ್ರಾನ್ಸ್ ಸ್ಥಾನ ಪಡೆದಿದೆ. ಹಾಲಿ ಚಾಂಪಿಯನ್ ಜರ್ಮನಿ, ಸ್ವಿಟ್ಜರ್‌ಲೆಂಡ್, ಸ್ಲೊವಾಕಿಯಾ, ಡೆನ್ಮಾರ್ಕ್, ಕಜಕಸ್ತಾನ ಮತ್ತು ಇಟಲಿ ಈ ಗುಂಪಿನಲ್ಲಿವೆ. ಬಿ ಗುಂಪಿನಲ್ಲಿ ಆಸ್ಟ್ರಿಯಾ ಇದೆ. ಫಿನ್ಲೆಂಡ್, ಅಮೆರಿಕ, ಜೆಕ್ ಗಣರಾಜ್ಯ, ಸ್ವೀಡನ್, ಲಾಟ್ವಿಯಾ, ನಾರ್ವೆ ಮತ್ತು ಗ್ರೇಟ್ ಬ್ರಿಟನ್ ಈ ಗುಂಪಿನಲ್ಲಿವೆ.

ಕೆಎಸ್‌ಎಲ್‌ಟಿಎ ಎಸ್‌ಕೆಎಂಇ ಐಟಿಎಫ್ ಟೂರ್ನಿ: ಜೂಲಿಯನ್ ಜೊತೆ ಜಯ

ಅರ್ಜುನ್‌ಗೆ 'ಡಬಲ್' ಪ್ರಶಸ್ತಿ ಕನಸು

ಬೆಂಗಳೂರು: ಭಾರತದ ಅರ್ಜುನ್ ಖಾಡೆ ಮತ್ತು ಬ್ರಿಟನ್‌ನ ಜೂಲಿಯನ್ ಕ್ಯಾಶ್ ಜೋಡಿ ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ಎಸ್‌ಕೆಎಂಇ ಐಟಿಎಫ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಶನಿವಾರ ನಡೆದ ಫೈನಲ್‌ನಲ್ಲಿ ಅರ್ಜುನ್ ಮತ್ತು ಜುಲಿಯನ್ 7-6 (5), 3-6, 10-7ರಲ್ಲಿ ಭಾರತದ ಜೋಡಿ ಶಶಿಕುಮಾರ್ ಮುಕುಂದ್ ಮತ್ತು ವಿಷ್ಣುವರ್ಧನ್ ಅವರನ್ನು ಮಣಿಸಿದರು.

ಸಿಂಗಲ್ಸ್ ವಿಭಾಗದ ಫೈನಲ್‌ಗೂ ಅರ್ಜುನ್ ಖಾಡೆ ಲಗ್ಗೆ ಇರಿಸಿದ್ದು ಭಾನುವಾರ ನಡೆಯಲಿರುವ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಸಿದ್ದಾರ್ಥ್ ರಾವತ್ ವಿರುದ್ಧ ಸೆಣಸುವರು. ಅರ್ಜುನ್ ಖಾಡೆ ಟೂರ್ನಿಯಲ್ಲಿ 'ಡಬಲ್' ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ.

ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಅರ್ಜುನ್ ಖಾಡೆ ಪೋಲೆಂಡ್‌ನ ಮಾರ್ಕ್ಸ್ ಕಸ್ನಿಕೊವ್‌ಸ್ಕಿ ವಿರುದ್ಧ 3-6, 6-4, 6-2ರಲ್ಲಿ ಜಯ ಸಾಧಿಸಿದರು. ಸಿದ್ಧಾರ್ಥ್ ರಾವತ್ 6-2, 7-5ರಲ್ಲಿ ಮನೀಷ್ ಸುರೇಶ್ ಕುಮಾರ್ ವಿರುದ್ಧ ಗೆದ್ದರು. ಫೈನಲ್ ಪಂದ್ಯ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಪ್ರಶಸ್ತಿಯೊಂದಿಗೆ ಜೂಲಿಯನ್ ಕ್ಯಾಶ್ ಮತ್ತು ಅರ್ಜುನ್ ಖಾಡೆ –ಪ್ರಜಾವಾಣಿ ಚಿತ್ರ

ಬ್ಯಾಸ್ಕೆಟ್‌ಬಾಲ್: ಬರೋಡಿಯನ್ಸ್‌ಗೆ ಭರ್ಜರಿ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರೋಡಿಯನ್ಸ್ ತಂಡ ಇಲ್ಲಿ ನಡೆಯುತ್ತಿರುವ ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಆಶ್ರಯದ 3x3 ರಾಷ್ಟ್ರೀಯ ಲೀಗ್‌ನ ಮೊದಲ ಆವೃತ್ತಿಯ ಎರಡನೇ ದಿನ ಭರ್ಜರಿ ಜಯ ಗಳಿಸಿತು.

'ಎ' ವಿಭಾಗದ ಸ್ಪ್ಯಾಷ್ ಬ್ರದರ್ಸ್ ಎದುರಿನ ಪಂದ್ಯದಲ್ಲಿ ಬರೋಡಿಯನ್ಸ್ 22-2ರಲ್ಲಿ ಜಯ ಗಳಿಸಿತು. ಡಾರ್ಕ್ ಬೆಂಗಳೂರು ಎದುರಿನ ಪಂದ್ಯದಲ್ಲಿ ತಿಪ್ಪಿ ಬಾಲರ್ಸ್ 22-4ರಲ್ಲಿ ಜಯ ಗಳಿಸಿತು. ಬ್ಯಾಂಕ್ ಆಫ್ ಬರೋಡ, ಐಬಿಬಿಸಿ, ಬಿ.ಸಿ ಬಿ.ಸಿ, ಎಂಇಜಿ ಮುಂತಾದ ತಂಡಗಳು ಕೂಡ ಗೆದ್ದವು.

ಮಹಿಳೆಯರ ವಿಭಾಗದಲ್ಲಿ ಎಂವೈಎಸ್ ಸ್ಪಾರ್ಕರ್ಸ್ 21-6ರಲ್ಲಿ ಬೀಟಲ್ಸ್ ವಿರುದ್ಧ ಜಯ ಗಳಿಸಿತು. ಎಂವೈಎಸ್ ಡಂಕರ್ಸ್, ಟೀಮ್ ರುಚಿತಾ ಕೂಡ ಜಯ ಗಳಿಸಿತು.

ಟ್ರೋಫಿಯೊಂದಿಗೆ ಪಂಕಜ್ ಅಡ್ವಾಣಿ

ಬಿಲಿಯರ್ಡ್ಸ್: ಪಂಕಜ್‌ಗೆ ಪ್ರಶಸ್ತಿ

ದೋಹಾ (ಪಿಟಿಐ): ಭಾರತದ ಪಂಕಜ್ ಅಡ್ವಾಣಿ ಎಂಟನೇ ಬಾರಿ ಏಷ್ಯನ್ ಬಿಲಿಯಡ್ಸ್ ಪ್ರಶಸ್ತಿಗೆದ್ದುಕೊಂಡರು.

ಶನಿವಾರ ಇಲ್ಲಿ ನಡೆದ 19ನೇ ಏಷ್ಯನ್ 100 ಯುಪಿ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಪಂಕಜ್ ತಮ್ಮ ಪ್ರತಿಸ್ಪರ್ಧಿ ಧ್ರುವ ಸಿತ್ವಾಲ್ ವಿರುದ್ಧ ಆರು ಫ್ರೇಮ್‌ಗಳಿಂದ ಜಯಿಸಿದರು.

ಪಂಕಜ್‌ಗೆ ಇದು 24ನೇ ಅಂತರರಾಷ್ಟ್ರೀಯ ಪ್ರಶಸ್ತಿಯಾಗಿದೆ. ಭಾರತದವರೇ ಆದ ಸಿತ್ವಾಲ್ ಎರಡು ಬಾರಿ ಏಷ್ಯನ್ ಬಿಲಿಯರ್ಡ್ಸ್ ಚಾಂಪಿಯನ್ ಆಗಿದ್ದರು.

'ಮುಂಬರುವ ಏಷ್ಯಾಮಟ್ಟದ ಟೂರ್ನಿಗಳಲ್ಲಿ ಆಡಲು ಸದ್ಯದ ಗೆಲುವು ದಿಕ್ಸೂಚಿಯಾಗಿದೆ. ಇಲ್ಲಿಯವರೆಗೆ ಹಲವು ಅನಿರೀಕ್ಷಿತ ತಿರುವುಗಳು ಇದ್ದವು. ಈಗ ಸ್ಪಷ್ಟತೆ ಲಭಿಸಿದೆ. ನನ್ನ ಪ್ರತಿಸ್ಪರ್ಧಿಗಳು ತಮ್ಮೆಲ್ಲ ಸಾಮರ್ಥ್ಯವನ್ನು ವಿನಿಯೋಗಿಸಿ ಆಡಿದ್ದಾರೆ' ಎಂದು ಪಂಕಜ್ ಹೇಳಿದರು.

ಪಿಜಿಟಿಐ–ಟಾಟಾ ಸ್ಟೀಲ್ ಒಪ್ಪಂದ ಮುಂದುವರಿಕೆ

ಕೋಲ್ಕತ್ತ (ಪಿಟಿಐ): ಪ್ರೊಫೆಷನಲ್ ಗಾಲ್ಫ್ ಟೂರ್ ಆಫ್ ಇಂಡಿಯಾದೊಂದಿಗಿನ ಒಪ್ಪಂದವನ್ನು ಟಾಟಾ ಸ್ಟೀಲ್ ಮುಂದಿನ ಮೂರು ವರ್ಷಗಳ ಅವಧಿಗೆ ವಿಸ್ತರಿಸಿಕೊಂಡಿದೆ.

ಟಾಲಿಗಂಜ್ ಕ್ಲಬ್‌ನಲ್ಲಿ ನಡೆದ ಟಾಟಾ ಸ್ಟೀಲ್ ಪಿಜಿಟಿಐ ಪ್ಲೇಯರ್ಸ್ ಚಾಂಪಿಯನ್‌ಷಿಪ್‌ನ ಕೊನೆಯ ದಿನವಾದ ಶನಿವಾರ ಈ ಒಪ್ಪಂದ ಮುಂದುವರಿಸುವ ಕಾರ್ಯಕ್ರಮ ನಡೆಯಿತು.

'ಪ್ರಶಸ್ತಿ ಮೊತ್ತವನ್ನು ಋತುವಿನ ಅಂತ್ಯಕ್ಕೆ ದುಪ್ಪಟ್ಟು ಮಾಡಲಾಗುವುದು. ಮೂರು ಕೋಟಿ ರೂಪಾಯಿಯವರೆಗೂ ಈ ಮೊತ್ತ ಇರಲಿದೆ' ಎಂದು ಉದ್ಯಮ ಲೋಕದ ದಿಗ್ಗಜ ಟಾಟಾ ಸಂಸ್ಥೆ ತಿಳಿಸಿದೆ.

ಕೇರಳ–ಹೈದರಾಬಾದ್ ಮುಖಾಮುಖಿ

ಐಎಸ್‌ಎಲ್ ಫೈನಲ್ ಇಂದು

ಫತೋರ್ಡ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಹೊಸ ಚಾಂಪಿಯನ್ ಯಾರು ಎಂಬ ಕುತೂಹಲಕ್ಕೆ ಭಾನುವಾರ ರಾತ್ರಿ ತೆರೆ ಬೀಳಲಿದೆ.

ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯಲಿರುವ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ದಕ್ಷಿಣ ರಾಜ್ಯಗಳ ಪ್ರಬಲ ತಂಡಗಳಾದ ಕೇರಳ ಬ್ಲಾಸ್ಟರ್ಸ್ ಮತ್ತು ಹೈದರಾಬಾದ್ ಎಫ್‌ಸಿ ಮುಖಾಮುಖಿಯಾಗಲಿವೆ. ಪಂದ್ಯದಲ್ಲಿ ಯಾರು ಗೆದ್ದರೂ ಮೊದಲ ಬಾರಿ ಪ್ರಶಸ್ತಿ ಗಳಿಸಿದ ಸಾಧನೆಯಾಗಲಿದೆ.

ಲೀಗ್ ಉದ್ದಕ್ಕೂ ಅಮೋಘ ಸಾಧನೆ ಮಾಡಿರುವ ಹೈದರಾಬಾದ್ ಎಫ್‌ಸಿ ಇದೇ ಮೊದಲ ಬಾರಿ ಫೈನಲ್ ಪ್ರವೇಶಿಸಿದೆ.

ಲೀಗ್ ಹಂತದ ಪಾಯಿಂಟ್ ಪಟ್ಟಿಯಲ್ಲಿ ತಂಡ 38 ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನ ಗಳಿಸಿತ್ತು. ಲೀಗ್‌ನಲ್ಲಿ ಸಿಹಿ–ಕಹಿ ಅನುಭವಿಸುತ್ತ ಬಂದಿರುವ ಕೇರಳ ಬ್ಲಾಸ್ಟರ್ಸ್ ತಂಡಕ್ಕೆ ಇದು ಮೂರನೇ ಫೈನಲ್.

2014 ಮತ್ತು 2016ರಲ್ಲಿ ಕೇರಳ ಬ್ಲಾಸ್ಟರ್ಸ್ ಫೈನಲ್ ಪ್ರವೇಶಿಸಿತ್ತು. ಎರಡೂ ಸಂದರ್ಭದಲ್ಲಿ ಎಟಿಕೆ ಮೋಹನ್ ಬಾಗನ್ ತಂಡಕ್ಕೆ ಮಣಿದು ರನ್ನರ್ ಅಪ್ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡಿತ್ತು.

ಎರಡು ಲೆಗ್‌ಗಳ ಸೆಮಿಫೈನಲ್‌ನಲ್ಲಿ ಎಟಿಕೆ ಮೋಹನ್ ಬಾಗನ್ ತಂಡವನ್ನು 3-2ರಲ್ಲಿ ಸೋಲಿಸಿ ಹೈದರಾಬಾದ್ ಎಫ್‌ಸಿ ಫೈನಲ್ ಪ್ರವೇಶಿಸಿದೆ.

ಟೂರ್ನಿಯುದ್ದಕ್ಕೂ ಮಿಂಚಿರುವ ಬಾರ್ತೊಲೋಮೆ ಒಗ್ಬೆಚೆ ಸೆಮಿಫೈನಲ್‌ನಲ್ಲೂ ಹೈದರಾಬಾದ್ ಎಫ್‌ಸಿಯ ಕೈ ಹಿಡಿದಿದ್ದರು. ಯಾಸಿರ್ ಮೊಹಮ್ಮದ್ ಮತ್ತು ಜೇವಿಯರ್ ಸಿವೆರಿಯೊ ಕೂಡ ಸೆಮಿಫೈನಲ್‌ನಲ್ಲಿ ಮಿಂಚಿದ್ದಾರೆ. ಫೈನಲ್ ಪಂದ್ಯದಲ್ಲಿಯೂ ಅವರ ಮೇಲೆ ನಿರೀಕ್ಷೆ ಇದೆ.

ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಸ್ಥಾನ ಗಳಿಸಿ ಲೀಗ್ ಟ್ರೋಫಿ ತನ್ನದಾಗಿಸಿಕೊಂಡಿರುವ ಜೆಮ್ಶೆಡ್‌ಪುರ್ ಎಫ್‌ಸಿ ವಿರುದ್ಧ ಸೆಮಿಫೈನಲ್‌ನಲ್ಲಿ ಪಾರಮ್ಯ ಮೆರೆದು ಕೇರಳ ಫೈನಲ್ ಪ್ರವೇಶಿಸಿತ್ತು. ಸಹಲ್ ಅಬ್ದುಲ್ ಸಮದ್ ಅವರು ತಂಡದ ನೆರವಿಗೆ ಬಂದಿದ್ದರು.

ಫೈನಲ್‌ನಲ್ಲಿ ಕೇರಳದ ರಕ್ಷಣಾ ವಿಭಾಗ ಮತ್ತು ಹೈದರಾಬಾದ್‌ನ ಆಕ್ರಮಣ ವಿಭಾಗದ ನಡುವೆ ಜಿದ್ದಾಜಿದ್ದಿಯ ಹೋರಾಟ ನಿರೀಕ್ಷಿಸಲಾಗಿದೆ. ಹೈದರಾಬಾದ್ ಎಫ್‌ಸಿಗೆ ಉತ್ತಮ ಮಿಡ್‌ಫೀಲ್ಡ್ ವಿಭಾಗದ ಬೆಂಬಲವೂ ಇದೆ. ಅನಿಕೇತ್ ಜಾಧವ್, ಹಲಿಚರಣ್ ನಜರೆ, ಸೌವಿಕ್ ಚಕ್ರವರ್ತಿ ಮುಂತಾದವರು ಈ ವಿಭಾಗದ ಆಧಾರಸ್ತಂಭವಾಗಿದ್ದಾರೆ. ಗೋಲ್ ಕೀಪರ್ ಲಕ್ಷ್ಮಿಕಾಂತ್ ಕಟ್ಟಿಮನಿ ಮತ್ತೊಮ್ಮೆ ಕ್ಲೀನ್‌ಶೀಟ್ ಸಾಧನೆ ಮೇಲೆ ಕಣ್ಣಿಟ್ಟಿದ್ದಾರೆ.

ಈ ಬಾರಿ ಅತಿ ಹೆಚ್ಚು ಗೋಲು ಗಳಿಸಿದ ಸಾಧನೆ ಹೈದರಾಬಾದ್ ತಂಡ ಮಾಡಿದೆ. ಒಟ್ಟು 46 ಗೋಲುಗಳು ಆ ತಂಡದ ಖಾತೆಯಲ್ಲಿದ್ದು ಕೇರಳ 36 ಗೋಲು ಗಳಿಸಿದೆ. ಜಾರ್ಜ್ ಪೆರೇರ ಡಯಾಸ್ ಮತ್ತು ಅಲ್ವಾರೊ ವಜ್ಕಿಜ್ ಮಿಂಚಿದರೆ ಫೈನಲ್‌ನಲ್ಲಿ ಕೇರಳದ ಗೋಲು ಗಳಿಕೆಗೆ ಬಲ ತುಂಬಲಿದೆ. ಸಹಲ್ ಅಬ್ದುಲ್ ಸಮದ್ ಗಾಯಗೊಂಡಿದ್ದರೂ ಕಣಕ್ಕೆ ಇಳಿಯುವುದು ಖಚಿತವಾಗಿದೆ.

ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್